ಸಂವಾದ

ಮೇ ೨೦೦೭ ರೂ. ೨೦

ಬುದ್ಧ ಪೂರ್ಣಿಮಾ ವಿಶೇಷ

ದಲಿತರೇಕೆ ಬೌದ್ಧರಾಗಬೇಕು?

ಸಂವಾದ

ಮಾಸ ಪತ್ರಿಕೆ

ಸಂಪುಟ ೫ ಸಂಚಿಕೆ ೭

ಮೇ ೨೦೦೭

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಬಿ.ಯು.ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
✆ ೨೩೨೮೭೯೪೩/೯೪೪೮೦ ೪೮೩೦೬
ಇ-ಮೇಲ್ : samvaada@hotmail.com
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

- ಪತ್ರಗಳು ೦೩
- ಹೊಸ ಪುಸ್ತಕ ೦೪
- ಅಂತರಂಗ ೦೫
- ದಲಿತರಿಗೆ ಯಾವ ಧರ್ಮ? ೦೬
  - ಪ್ರೊ॥ ಕೆ. ಸುಮಿತ್ರ ಬಾಯಿ
- ನಾವೇಕೆ ಬೌದ್ಧರಾಗಬೇಕು? ೦೮
  - ಡಾ॥ ಬಿ.ಆರ್. ಅಂಬೇಡ್ಕರ್
- ಬುದ್ಧನ ಅನನ್ಯತೆ ೧೨
  - ಡಾ॥ ಕೆ.ಎಸ್. ಭಗವಾನ್

- ವರ್ಣಾಶ್ರಮಧರ್ಮ-ಶರಣಧರ್ಮ ೧೬
  - ವಿ. ಚಂದ್ರಶೇಖರ್ ನಂಗಲಿ
- ಸಮ್ಮಿಶ್ರ ಸರ್ಕಾರದ ತೊಳಲಾಟ ೨೦
  - ಸುಜಾತ ಕುಮಟ
- ಕೆ.ಪಿ. ಪೂರ್ಣಚಂದ್ರ ತೇಜಸ್ವಿ: ಈ ಭೂಮಿಯಿಂದ ಆ ಆಕಾಶದವರೆಗೆ ೨೨
  - ಡಿ.ಎಸ್. ನಾಗಭೂಷಣ
- ಅಶ್ಲೀಲ ಅಭಿವೃದ್ಧಿಯ ಅನರ್ಥಗಳು... ೨೬
  - ಶಿವಸುಂದರ್

- ವಿಚಾರವಾದಿಯ ನಿಗೂಢ ಸಾವು ೩೩
  - ಟಿ.ಕೆ. ತ್ಯಾಗರಾಜ್
- ನ್ಯಾಯಾಲಯಗಳ ಹಂಗಿನಲ್ಲಿ ಮೀಸಲಾತಿ ೩೬
  - ಮನೋರಂಜನಿ
- ದಲಿತ್ ಡೈರಿ ೩೮
  - ಚಂದ್ರ ಭಾನ್ ಪ್ರಸಾದ್
- ಬುದ್ಧಾಯಣ ೪೨
  - ಸಿ. ಎಚ್. ರಾಜಶೇಖರ್

ಕವನಗಳು : ❑ ನೋಡಿ ಇಲ್ಲಿದ್ದಾನೆ ೧೧ ❑ 'ಎಲುಬಿನೊಳಗೆ ಹವ್ವಾ' ೨೫

ಮುಖಪುಟ ಕಲೆ: ಬುದ್ಧ, ವಿನ್ಯಾಸ: ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಪತ್ರಾಗಾರ

ಹೋರಾಟಕ್ಕೆ ಪ್ರೇರಣೆ

ಪ್ರೀತಿಯ ಇಂದೂಧರ್ ಸರ್,

ಗ್ರಾಮೀಣ ಪ್ರದೇಶದ ಮತ್ತು ಕೆಳವರ್ಗದವರ ನೋವು ಸಂಕಟಗಳನ್ನು ಸಾಹಿತ್ಯ ಸಮ್ಮೇಳನದ ವೇದಿಕೆಯಲ್ಲಿ ಚರ್ಚಿಸಿದ ಡಾ|| ಅಮರೇಶ ನುಗಡೋಣಿ ಅವರ ಲೇಖನ ಓದಿದೆ.

ಸಾಹಿತ್ಯ ವೇದಿಕೆಯಲ್ಲಿ ಅವರು ಮಾಡಿದ ಭಾಷಣ ನಿಜವಾಗಿಯೂ ನಾಡಿನ ಬಗೆಗೆ ಅವರಿಗಿರುವ ನೈಜ ಕಾಳಜಿಯನ್ನು ತೋರಿಸುತ್ತದೆ. ಬಡತನ, ಅಜ್ಞಾನ, ಅನಕ್ಷರತೆಗಳಿಂದ ಈಗಲೂ ನರಳುತ್ತಿರುವ ನಮ್ಮ ಗ್ರಾಮೀಣ ಜನತೆ ಹಾಗೂ ಕೆಳವರ್ಗದ ಮೇಲೆ ಈಗ ಜಾಗತೀಕರಣದ ಕರಿನೆರಳು ಬಿದ್ದು ಅವರ ಬದುಕೇ ವಿನಾಶದ ಅಂಚಿಗೆ ಬಂದು ನಿಂತಿದೆ. ಇಂಥ ಕರಾಳ ಶೋಷಣೆಗೆ ಜನ ಜಾಗೃತಿ ಮತ್ತು ಹೋರಾಟಗಳ ಮೂಲಕ ಮಾತ್ರ ಉತ್ತರ ನೀಡಬಹುದು.

ಡಿ. ಕಿರಣ್ ಪಾಟೀಲ್, ದಾವಣಗೆರೆ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ
ರೂ.೧೦೦/- ರೂ.೩೦೦/- ರೂ.೫೦೦/-

ನೌಕರರು ಮತ್ತು ವೃತ್ತಿಪರರಿಗೆ
ರೂ.೨೦೦/- ರೂ.೫೦೦/- ರೂ.೮೦೦/-

ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ
ರೂ.೨೫೦/- ರೂ.೬೦೦/- ರೂ.೧೦೦೦

ವಿಶೇಷ ಹಿತೈಷಿ ಚಂದದಾರರಿಗೆ
ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ಪಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಜೀವ ಪರ ವ್ಯವಸ್ಥೆಗೆ ಕನಸು

ಪ್ರೀತಿಯ ಸಂಪಾದಕರೇ

ಬದಲಾಗುತ್ತಿರುವ ಮೌಲ್ಯಗಳ ಉಳುವಿಗಾಗಿ "ತುಡಿಯುವ" 'ಸಂವಾದ'ಕ್ಕೆ ಸಂವಾದವೇ ಸಾಕ್ಷಿ. ದಮನಿತ ಜನಸಮುದಾಯಗಳೊಳಗೆ ಸಂವಾದಿಸುತ್ತಿರುವ ಪತ್ರಿಕೆ ತನ್ನ ನಿರಂತರತೆಯನ್ನು ಕಾಯ್ದುಕೊಂಡು, ಜನರಲ್ಲಿ ಜಾಗೃತಿ ಮೂಡಿಸುತ್ತಿರುವ ನಿಮ್ಮ ಪ್ರಯತ್ನ ಅಭಿನಂದನೀಯ.

ಕಳೆದ ತಿಂಗಳು ಪತ್ರಿಕೆಯಲ್ಲಿ ಪ್ರಕಟವಾದ ಎರಡು ಪತ್ರಗಳು ನನ್ನನ್ನ ತೀವ್ರವಾಗಿ ಕಾಡಿವೆ. ಬೆಳಗಾವಿಯ ಅರವಿಂದ ಮಾನೆ ಮತ್ತು ಚಿಕ್ಕಮಗಳೂರಿನ ಸತೀಶ್ ರಾಜುರವರ ಪತ್ರಗಳಿಗೆ ನನ್ನ ಪ್ರತಿಕೆಯೆ.

ಎರಡು ಪತ್ರಗಳಲ್ಲಿ ಭಿನ್ನ ಧ್ವನಿ ವ್ಯಕ್ತವಾದರೂ ಅವು ಅಂತಿಮವಾಗಿ ಏಕೀಭವಿಸುತ್ತವೆ. 'ನಮ್ಮ ತಪ್ಪುಗಳಿಗೆ ನಾವೇ ಕಾರಣರು' ತಪ್ಪಾಗಿದೆ. ಹೀಗಾಗಿ 'ಆತ್ಮಹತ್ಯೆಯೊಂದೆ ದಾರಿ ನಾವು ಆದಾರಿಯಲ್ಲಿ ನಡೆಯಬೇಕೋ? ಬೇಡವೋ?' ಎಂಬ ಅತ್ಯಂತ ಅಸಹಾಯಕ ಧ್ವನಿಯನ್ನು ಪತ್ರಗಳೆರಡು ಧ್ವನಿಸುತ್ತವೆ. ಇದರೊಂದಿಗೆ ಸಮುದಾಯದ ಬಗ್ಗೆ ಅವರಿಗಿರುವ ಪ್ರಮಾಣಿಕ ತುಡಿತ ಪ್ರಶ್ನಾತೀತ. ಅದೇ ತೀವ್ರತೆಯಲ್ಲಿಯೇ ಪತ್ರಗಳಿಗೆ ಉತ್ತರಿಸುವ ಪ್ರಯತ್ನವನ್ನ ಮಾಡುತ್ತಿರುವೆ.

ಶತಮಾನಗಳಿಂದಲೂ ಜಾತಿಯ ಕಾರಣಕ್ಕೆ ದಲಿತರ ಮೇಲೆ ನಡೆದ, ನಡೆಯುತ್ತಿರುವ ಹತ್ಯೆ, ದಹನ, ದಮನ, ದೌರ್ಜನ್ಯ, ಅತ್ಯಾಚಾರ ಅವಮಾನಗಳ ಯಾವುದೆ ಪ್ರಕರಣಗಳಲ್ಲೂ ನ್ಯಾಯ ಸಿಕ್ಕಿಲ್ಲ. ಸಿಗುವ ಅನುಮಾನಗಳನ್ನು ಈ ವ್ಯವಸ್ಥೆಯಿಂದ ನಿರೀಕ್ಷಿಸುವುದು ನಮ್ಮ ಮೂರ್ಖತನ ಮಾತ್ರವಾಗುತ್ತದೆ.

ಬೆಲ್ಚಿ, ಪಿಪ್ರಾದಿಂದ ಹಿಡಿದು ಚಂಡೂರು, ಕಾರಂಜೇಡು, ನಾಗಲವಲ್ಲ ಖೈರಾಲಾಂಜೆ, ಕಡಕೊಳ ಒಂದೇ ಎರಡೇ ನೂರಾರು. ಕಂಬಾಲಪಲ್ಲಿಯಲ್ಲಿ ದಹನಕ್ಕೊಳಗಾದ ಜನರೆ ಎದ್ದು ಬಂದು "ನಮ್ಮನ್ನ ದಹಿಸಿದ್ದು ಇವರೆ" ಎಂದು ಹೇಳಬೇಕು. ಆಗ ನ್ಯಾಯಾಲಕ್ಕೆ ಸತ್ಯದ ಅರಿವಾಗುತ್ತದೆ. ದಲಿತರ ದಹನದೊಂದಿಗೆ ಆ ಕೇಸು ಕೂಡ ಭೂದಿಯಾಗಿದೆ. ಸಾಕ್ಷಿಗಳೇ ಪ್ರತಿಕೂಲವಾಗುವಂತಹ ದೌರ್ಭಾಗ್ಯದ ವ್ಯವಸ್ಥೆ ನಮ್ಮದು. ಆರೋಪಿಗಳೇ ಬೆಂಬಲಕ್ಕೆ ನಿಲ್ಲುವ ವ್ಯವಸ್ಥೆ. ಸಂವಿಧಾನದ ಆಶಯದಳ ವಿರುದ್ಧ ನಿಲ್ಲುತ್ತದೆ ಎಂದರೆ ನಾವಿನ್ನು ಯಾವ ಸಮಾಜದಲ್ಲಿ ಜೀವಿಸುತ್ತಿರುವೆ.

ಇಂಥ ಸಂಕೀರ್ಣ ಸಮಸ್ಯೆಗಳನ್ನ ಸರಿಯಾಗಿ ಗ್ರಹಿಸಬೇಕು. ಜಾತಿಯ ಪ್ರಶ್ನೆ ದಲಿತರ ಸಮಸ್ಯೆ ಎಂದು ಗ್ರಹಿಸಿದರೆ. ಸಮಾಜದ ಜವಾಬ್ದಾರಿ ಏನು? ನಮ್ಮ ಸಮಸ್ಯೆಗಳಿಗೆ ನಾವೇ ಕಾರಣರೆಂದು ಅವಾಹಿಸಿಕೊಳ್ಳುವುದು ಬಾಲಿಷತನವಾಗುತ್ತದೆ. ದಲಿತರ ಹತ್ಯಾಕಾಂಡಕ್ಕೆ ಸಮಾಜವೇ ಕಾರಣ. ಸಾಮಾಜಿಕ ತಾರತಮ್ಯಗಳನ್ನ ಒಪ್ಪಿಕೊಳ್ಳುವ ವ್ಯವಸ್ಥೆ, ಸಮಸ್ಯೆ ನಿರ್ಮೂಲನೆಗೆ ತಲೆ ಕೆಡಿಸಿಕೊಳ್ಳುವುದಿಲ್ಲ. 'ಅದು ದಸಂಸ ತಪ್ಪು. ದಲಿತರ ತಪ್ಪು ಎಂದು ಅರ್ಥೈಸುವುದು ತಪ್ಪಾಗುತ್ತದೆ. ಸಮಸ್ಯೆಯ ಬಗ್ಗೆ ನಮ್ಮ ಗ್ರಹಿಕೆ ಇಲ್ಲವೆಂದು ಅರ್ಥವಾಗುತ್ತದೆ.

ಜೀವ ವಿರೋಧಿ ಜಾಗತೀಕರಣಕ್ಕೂ ಇದನ್ನ ವಿಸ್ತರಿಸಬಹುದು. ಜನರನ್ನು ಕೊಲ್ಲುವ ಕ್ರೂರ ನೀತಿಗಳ ಮೇಲೆ ನಿಂತಿರುವ ಈ ಪ್ರಕರಣಗಳು ಜನರ ಮಾನವೀಯ ಮೌಲ್ಯಗಳನ್ನು ನಾಶಗೊಳಿಸುವ ಗುರಿಯನ್ನ ಅದು ಹೊಂದಿದೆ. ಹೀಗಾಗಿ ಪರ-ವಿರೋಧದ ಪ್ರಶ್ನೆಯೇ ಇಲ್ಲ. ಜನ ದ್ರೋಹಿ ನೀತಿಗಳ ವಿರುದ್ಧ ಹೋರಾಡುತ್ತಲೇ ಇರಬೇಕು.

ಪರ್ಯಾಯ ಕ್ರಿಯಾತ್ಮಕ ಕೆಲಸದ ದಿಕ್ಕಿಗೂ ನಾವು ಅಡಿ ಇಡಬೇಕು. ಇದು ಯಾರೋ ಮಾಡುವ ಕೆಲಸವಲ್ಲ. ಇಡೀ ವ್ಯವಸ್ಥೆಗೆ ಆಜವಾಬ್ದಾರಿ ಇರುತ್ತದೆ. "ಬೆಕ್ಕಿನ ಕೊರಳಿಗೆ ಗಂಟೆ ಕಟ್ಟದಷ್ಟು ಸುಲಭವಲ್ಲ'

ಕಷ್ಟ ಆದರೂ ಆಘಾತಿ, ಚಾಲಾಕಿತನಗಳನ್ನ ವ್ಯವಸ್ಥೆ (ಸರ್ಕಾರ, ರಾಜಕಾರಣಿಗಳ ಜನ ಚಳುವಳಿಯವರು ಸೇರಿದಂತೆ) ರೂಪಿಸುವ ಕೆಲಸ ಮಾಡಬೇಕು. ಸದ್ಯದ ಮಣ್ಣಿನ ಮೊಮ್ಮಗ, ಡೊಂಗಿ ಸಮಾಜವಾದಿ ಎಂ.ಪಿ. ಪ್ರಕಾಶರಂತ ರಾಜಕಾರಣಿಗಳಿಂದ ಇವೆಲ್ಲವನ್ನ ನಿರೀಕ್ಷಿಸುವುದು ಒಂದೇ "ಹಗಲು ಕಂಡ ಬಾವಿಗೆ ಹಗಲೆ ಬಿದ್ದಂತೆ" ಆಗುತ್ತದೆ.

ಆ ನೆಲೆಯಲ್ಲಿ ಜೀವ ಪರವಾದ ವ್ಯವಸ್ಥೆಗಾಗಿ ಕನಸಿರಬೇಕು. ಕನಸು ನನಸಾಗಿಸುವ ತುಡಿತವಿರಬೇಕು. ಆ ಎಚ್ಚರಿಕೆಯೊಂದಿಗೆ,

ಸಣ್ಣಂಗಿರಾಜ
ರಾಮಜೋಗಿಹಳ್ಳಿ

'ಕ್ಯಾಸ್ಟ್ ಕೆಮಿಸ್ಟ್ರಿ' ಏನಾಯ್ತು?

ಪ್ರೀತಿಯ ಸಂಪಾದಕರೇ,

ಏಪ್ರಿಲ್ ತಿಂಗಳ 'ಸಂವಾದ'ವನ್ನು ನೋಡಿ ನಮಗೆ ತುಂಬಾ ನಿರಾಶೆಯಾಯಿತು. ನಾವೆಲ್ಲ ಪ್ರೀತಿಯಿಂದ ಕಾದು ಓದುತ್ತಿದ್ದ 'ಕ್ಯಾಸ್ಟ್ ಕೆಮಿಸ್ಟ್ರಿ' ಇಲ್ಲದೆ ನಮಗೆಲ್ಲ ನೋವಾಗಿದೆ. ಯಾಕೆ ಹೀಗೆ ಮಾಡಿದಿರಿ? ಯಾರದಾದರೂ ಒತ್ತಡವೇ? ಬೆದರಿಕೆಯೆ? ಅಥವಾ ನೀವೇ ನಿಲ್ಲಿಸಿದಿರೇ? ಅರ್ಥವಾಗುತ್ತಿಲ್ಲ.

ಪತ್ರಿಕೋದ್ಯಮದಲ್ಲಿ ಎಂಥೆಂಥ ಪ್ರತಿರೋಧಗಳನ್ನು ಎದುರಿಸಿ ನಿಂತವರು ನೀವು. ನಿಮ್ಮ ವಿಚಾರಗಳು ಈಗಲೂ ಅಷ್ಟೇ ಹರಿತವಾಗಿವೆ. ಆದರೆ 'ಕ್ಯಾಸ್ಟ್ ಕೆಮಿಸ್ಟ್ರಿ' ಲೇಖನ ಮಾಲೆಯನ್ನು ನಿಲ್ಲಿಸಿದ್ದರಿಂದ ನಮಗೆ ಅನುಮಾನವಾಗುತ್ತಿದೆ. ದಯವಿಟ್ಟು ವಸ್ತುಸ್ಥಿತಿಯನ್ನು ತಿಳಿಸಿ. ಮತ್ತು 'ಕ್ಯಾಸ್ಟ್ ಕೆಮಿಸ್ಟ್ರಿ' ಲೇಖನ ಮಾಲೆಯನ್ನು ಮತ್ತೆ ಆರಂಭಿಸಿ.

ನಾವು ಎಂದೆಂದಿಗೂ ನಿಮ್ಮೊಂದಿಗಿದ್ದೇವೆ.

ಕೆ. ಸಿದ್ಧರಾಜು, ಆರ್. ರವಿಶಂಕರ್, ಟಿ.ಕೆ. ನಾಗಚಂದ್ರ, ಎಂ. ಸತ್ಯಪ್ರೇಮ,
ಮಾಸಗಂಗೋತ್ರಿ, ಮೈಸೂರು.

ಸ್ಪಷ್ಟನೆ

'ಕ್ಯಾಸ್ಟ್ ಕೆಮಿಸ್ಟ್ರಿ' ಲೇಖನ ಮಾಲೆಯನ್ನು ಲೇಖಕರೇ ಸ್ವ ಇಚ್ಛೆಯಿಂದ ನಿಲ್ಲಿಸಿದ್ದಾರೆ. ಈ ವಿಚಾರದಲ್ಲಿ ಯಾವುದೇ ಒತ್ತಡವಾಗಲಿ, ಬೆದರಿಕೆಯಾಗಲಿ ಇಲ್ಲ. ನಿಮ್ಮ ಕಾಳಜಿಗೆ ನಾನು ಕೃತಜ್ಞ. ಲೇಖಕರು ಮತ್ತೆ ಬರೆದುಕೊಟ್ಟರೆ ಖಂಡಿತಾ ಪ್ರಕಟಿಸುತ್ತೇವೆ.

-ಸಂಪಾದಕ.



ಕಾಶ್ಮೀರದ ಹಾಡು
ಲೇ: ಎನ್. ಜಗದೀಶ್ ಕೊಪ್ಪ
ಬೆಲೆ: ರೂ. ೪೦/-

ವೃತ್ತಿಯಲ್ಲಿ ಪತ್ರಕರ್ತರಾದ ಜಗದೀಶ್ ಕೊಪ್ಪ ಅವರ ಎರಡನೇ ಕವನ ಸಂಕಲನ ಇದು. ಕೆಲವು ಸ್ವರಚಿತ ಕವನಗಳೊಂದಿಗೆ ಅನುವಾದಿತ ಕವನಗಳೂ ಇಲ್ಲಿವೆ. ಪತ್ರಕರ್ತರಾಗಿ ವೈವಿಧ್ಯಮಯ ಬದುಕನ್ನು ನೋಡುವಂತೆ ಕಾವ್ಯದಲ್ಲೂ ವೈವಿಧ್ಯಮಯ ಹುಡುಕಾಟ ಇದೆ. ಕವಿಯೆ ಹೇಳಿರುವಂತೆ ಸ್ವರಚಿತ ಕವನಗಳಿಂತ ಅನುವಾದಿತ ಕವನಗಳೇ ಹೆಚ್ಚು ಆಕರ್ಷಕವಾಗಿ ಕಾಣುತ್ತವೆ. ಆದರೂ ಮಾನವ ಸಹಜ ಜೀವನ ಪ್ರೀತಿ ಮತ್ತು ಜನಪರ ಕಾಳಜಿ ಕವಿಯ ಸ್ವರಚನೆಗಳಲ್ಲಿ ಎದ್ದು ಕಾಣುತ್ತದೆ. ಸಮಾಜಮುಖಿ ಚಿಂತನೆ, ಜನಪರ ಹೋರಾಟದ ತುಡಿತ ಇಲ್ಲಿನ ಕವಿತೆಗಳಲ್ಲಿ ಅಂತರ್ಗತವಾಗಿರುವುದು ಕಾಣಿಸುತ್ತದೆ.

ಪ್ರಕಾಶಕರು: 'ಕ್ರಾಂತಿ ಸಿರಿ' ಪ್ರಕಾಶನ ನಾಗರಭಾವಿ, ಬೆಂಗಳೂರು.

ವಕೀಲರೊಬ್ಬರ ವಗ್ಯೆರೆಗಳು
ಲೇ: ಸಿ.ಎಚ್. ಹನುಮಂತರಾಯ
ಬೆಲೆ: ರೂ. ೪೫೦/-

ನಮ್ಮ ನಾಡಿನ ಪ್ರಸಿದ್ಧ ವಕೀಲರುಗಳಲ್ಲಿ ವಕೀಲರಾದ ಹನುಮಂತರಾಯರ ಬಾಲ್ಯ, ಯೌವ್ವನ ಮತ್ತು ವೃತ್ತಿಯ ಅನುಭವಗಳ ನಿರೂಪಣೆ ಈ ಕೃತಿ. ಇದೊಂದು ವಿಶಿಷ್ಟವಾದ ಆತ್ಮಕಥನ. ಬಯಲುಸೀಮೆಯ ಜೀವನ ಕ್ರಮವನ್ನು ದಟ್ಟವಾಗಿ ಕಟ್ಟಿಕೊಡುವ ಆತ್ಮ ಚರಿತ್ರೆ ಇದು. ವಕೀಲರಾದರೂ ಹನುಮಂತರಾಯರಿಗಿರುವ ಜೀವನ ಶ್ರದ್ಧೆ ಸಾಹಿತಿಯೊಬ್ಬನಿಗೆ ಇರಬಹುದಾದ ಕುತೂಹಲ ಈ ಕೃತಿಯಲ್ಲಿ ಮೂಡಿ ಬಂದಿದೆ. ಈಚೀನ ಅತ್ಯುತ್ತಮ ಕೃತಿಗಳಲ್ಲಿ 'ವಗ್ಯೆರೆಗಳು' ಸ್ಥಾನ ಪಡೆದಿದೆ.

ಪ್ರಕಾಶಕರು: ಪತ್ರಿಕೆ ಪ್ರಕಾಶನ, ಬನಶಂಕರಿ, ೩ನೇ ಘಟ್ಟ, ಬೆಂಗಳೂರು



ದಿನಚರಿಯ ಸಾಲುಗಳ ನಡುವೆ
ಲೇ: ವಿ. ಜೆ. ನಾಯಕ
ಬೆಲೆ: ರೂ. ೬೦/-

ಕಳೆದ ನಾಲ್ಕು ದಶಕಗಳ ಸಮಾಜಮುಖಿ ಸಂವೇದನೆ, ಚಟುವಟಿಗಳ ಅಂತಃಸೂತ್ರ ಈ ಕವನ ಸಂಕಲನದ ಹೆಗ್ಗಳಿಕೆ. ಹತ್ತು ಹಲವು ಸಾಂಸ್ಕೃತಿಕ, ಶೈಕ್ಷಣಿಕ, ಸಾಮುದಾಯಿಕ ಆಸಕ್ತಿಗಳ ಮೂಲಕ ಪರಿಸರವನ್ನು ಬೆಚ್ಚಗೆ, ಚಿಂತನಶೀಲವಾಗಿ ನೋಡುವ ಶಕ್ತಿ ಇಲ್ಲಿನ ಕವನಗಳಿಗಿದೆ. ಕವಿಯ ಆತ್ಮಸಾಕ್ಷಿಯ ಸೊಲ್ಲುಗಳಂತೆ ಇಲ್ಲಿನ ಕವನದ ಸಾಲುಗಳಲ್ಲಿ ಸರಳತೆ, ಸ್ಪಷ್ಟತೆ, ಮತ್ತು ಜೀವನ ಪ್ರೀತಿ ಯತಾವತ್ತಾಗಿ ವ್ಯಕ್ತವಾಗಿದೆ. ಚಿಂತನಶೀಲ ಮನಸ್ಸೊಂದರ ಹಾಜರಿ ಇಲ್ಲಿನ ಎಲ್ಲ ಕವಿತೆಗಳಲ್ಲಿ ಎದ್ದು ಕಾಣುತ್ತದೆ.

ಪ್ರಕಾಶಕರು: ಪಟೇಲ ಜೋಗಿ ನಾಯಕ ಸ್ಮಾರಕ ಗ್ರಂಥ ಮಾಲೆ, ಅಂಕೋಲ.

ಜೀವ ಮಿಡಿತದ ಸದ್ದು
ಲೇ: ವಿಭಾ
ಬೆಲೆ: ರೂ. ೫೦/-

ಸಕ್ರಿಯ ಹೋರಾಟದಲ್ಲಿ ತೊಡಗಿಸಿಕೊಂಡು ಕಾವ್ಯದ ಕನಸು ಕಂಡ ವಿಭಾ ಅವರ ಕವನ ಸಂಕಲನ ಇದು. ಹೆರಿಗೆ ಸಂದರ್ಭದಲ್ಲಿ ಆದ ಅನಾರೋಗ್ಯದಿಂದಾಗಿ ಅಸುನೀಗಿದ ವಿಭಾ ಬರೆದ ಪದ್ಯಗಳು ಆತ್ಮೀಯ ಧಾಟಿಯ ಅಪ್ರತಿಮ ಪ್ರತಿಭೆಯ ಪ್ರತೀಕದಂತಿವೆ. ಉರ್ದು ಕಾವ್ಯದ ರಮ್ಯತೆಯ ಗುಂಗು ಇಲ್ಲಿನ ಕವನಗಳಲ್ಲಿ ಎದ್ದು ಕಾಣುತ್ತವೆ. ಕಳಕೊಂಡದ್ದನ್ನು ಹುಡುಕುವ ತುಡಿತದಲ್ಲಿ ನಿಲುಕದ ನಿಗೂಢಕ್ಕೆ ಕೈಚಾಚುವ ಹಾಗೂ ನಿಶ್ಚಲ ನಿರಾಕಾರವನ್ನು ಅನುಭವಿಸುವ ಹಂಬಲ ಹೊತ್ತಿವೆ.

ಪ್ರಕಾಶಕರು: ಸಂಚಯ ಬನಶಂಕರಿ, ಬೆಂಗಳೂರು



ಬಾಳ ಬೆಳಕು
ಲೇ: ಹನುಮಂತಪ್ಪ ಯಂಕಪ್ಪ ವಡ್ಡರ
ಬೆಲೆ: ರೂ. ೩೫/-

ಮಹಿಳಾ ಸಬಲೀಕರಣ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಕವಿ ಹನುಮಂತಪ್ಪ ವಡ್ಡರ ಇಲ್ಲಿನ ಬಹುಪಾಲು ಕವಿತೆಗಳಲ್ಲಿ ಸ್ತ್ರೀಸ್ವಾತಂತ್ರ್ಯ, ಸ್ವಾವಲಂಬನೆ, ಹೋರಾಟಗಳಿಗೆ ವೇದಿಕೆ ಒದಗಿಸಿಕೊಟ್ಟಿದ್ದಾರೆ. ಜೀವನ ಆದರ್ಶ ಇಲ್ಲಿನ ಕವಿತೆಗಳ ಸ್ಥಾಯಿಭಾವ. ವಾಸ್ತವ ಸ್ಥಿತಿಯನ್ನು ಚಿತ್ರಿಸಿ ಬದಲಾವಣೆಯ ಚಿಂತನೆಗೆ ಪ್ರೇರೇಪಿಸುವ ಆಶಯ ಈ ಕವಿತೆಗಳದ್ದು. ಗ್ರಾಮೀಣ ಪರಿಸರದ ನವಸಾಕ್ಷರ ಮಹಿಳೆಯರಲ್ಲಿ ಜಾಗೃತಿಯನ್ನುಂಟು ಮಾಡಿ, ಮಹಿಳಾ ಸಶಕ್ತೀಕರಣಕ್ಕೆ ಪ್ರೇರೇಪಿಸುವುದು ಇಲ್ಲಿನ ಕವಿತೆಗಳ ವಸ್ತು.

ಪ್ರಕಾಶಕರು: ದಲಿತ ಸಾಹಿತ್ಯ ಪರಿಷತ್ತು ರಾಜ್ಯ ಘಟಕ, ಗದಗ

ಹೊಸ ಪುಸ್ತಕ

ಫುಕುವೊಕ ಮತ್ತು ಪಾಲೇಕರ್
ಲೇ: ಬಂದಗದ್ದೆ ರಾಧಕೃಷ್ಣ
ಬೆಲೆ: ರೂ. ೩೫/-

ನೈಸರ್ಗಿಕ ಕೃಷಿಯ ಇಬ್ಬರು ಸಾಧಕರ ಕೃಷಿ ಪದ್ಧತಿ ಕುರಿತ ವಿವರಣಾತ್ಮಕ ವಿಶ್ಲೇಷಣೆ ಈ ಕೃತಿ. ಕೃಷಿಗೆ ಹೊಸ ದಿಕ್ಕು ತೋರಿದ ಈ ಇಬ್ಬರ ವಿಚಾರಗಳನ್ನು ತುಲನೆ ಮಾಡಿ ಲೇಖಕರು ಇಲ್ಲಿ ಓದುಗರ ಮುಂದೆ ಇಟ್ಟಿದ್ದಾರೆ. ಇಬ್ಬರ ನಡುವಿನ ಸಾಮ್ಯತೆ, ಹೊಸ ವಿಷಯ ಹಾಗೂ ಅವುಗಳನ್ನು ಅಧ್ಯಯನ ಮಾಡಿದಾಗ ಲೇಖಕರ ಮನದಲ್ಲುಂಟಾದ ವಿಚಾರ ಲಹರಿ ಈ ಕೃತಿಯಲ್ಲಿ ಮೂಡಿ ಬಂದಿದೆ. ರಾಸಾಯನಿಕ ಕೃಷಿಗೆ ಹೊರತಾದ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ ರೈತನ ಜೀವನಾಡಿ ಆಗಬಲ್ಲದು ಎಂಬುದು ಕೃತಿಯಲ್ಲಿ ಸ್ಪಷ್ಟ.

ಪ್ರಕಾಶಕರು: "ಹಸಿರು ಹೊನ್ನು" ಕೆಳ ಸೇತುವೆ ರಸ್ತೆ, ದಾವಣಗೆರೆ

ಸಂಪಾದಕೀಯ

ಅಂತರಂಗ

ಬುದ್ಧನೆಡೆಗೆ, ಮರಳಿ ಮನೆಗೆ...

'ಬುದ್ಧನೆಡೆಗೆ ಮರಳಿ ಮನೆಗೆ' ಚಳವಳಿ ಆರಂಭಗೊಂಡಿದೆ.

'ಹಿಂದೂ ಧರ್ಮವು ಬ್ರಾಹ್ಮಣ ಹಾಗೂ ನಿಮ್ನ ವರ್ಗದ ಜನರ ಮನಸ್ಸನ್ನು ಸಂಕುಚಿತಗೊಳಿಸಿಬಿಟ್ಟಿದೆ' ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ೧೯೫೬ರ ಅಕ್ಟೋಬರ್ ೧೪ರಂದು ಬೌದ್ಧಧರ್ಮ ಸ್ವೀಕರಿಸುವ ಸಂದರ್ಭದಲ್ಲಿ ಆಡಿದ ಮಾತಿದು. ಅಂದರೆ ಹಿಂದೂ ಧರ್ಮವೆಂದು ಈಗ ಕರೆಯಲ್ಪಡುತ್ತಿರುವ 'ಸನಾತನ ಪದ್ಧತಿ'ಯೊಂದು ಬ್ರಾಹ್ಮಣರಿಂದ ಹಿಡಿದು ಅಸ್ಪೃಶ್ಯವರೆಗೆ ಎಲ್ಲರನ್ನೂ ಕ್ಷುದ್ರರನ್ನಾಗಿ ಮಾಡಿದೆ. ಶ್ರೇಷ್ಠ-ಕನಿಷ್ಠರೆಂಬ ವಿಂಗಡಣೆಯೇ ಈ ಪದ್ಧತಿಯ ಅಂತರಾಳ. ತಾನು ಮೇಲಿನವನೆಂದು ತಿಳಿದುಕೊಂಡವನನ್ನು ಇದು ಅಧಮನನ್ನಾಗಿ ಮಾಡಿದೆ. ಅಧಮನೆಂದು ತಿಳಿದುಕೊಂಡವನನ್ನು ತುಳಿದೇ ಹಾಕಿದೆ.

ಹೀಗೆ ಹೇಳಿದ ತಕ್ಷಣ ಸನಾತನಿಗಳ ಸಿಟ್ಟು ನೆತ್ತಿಗೇರುತ್ತದೆ. ಯಾಕೆಂದರೆ ಅವರೆಲ್ಲ ಈ ಕ್ಷುದ್ರ ಪದ್ಧತಿಯ ವಾರಸುದಾರರಾಗಿದ್ದಾರೆ. ವಿವೇಚನೆ ಮತ್ತು ಚಿಂತನಾಶಕ್ತಿಗಳನ್ನೇ ನಾಶ ಮಾಡಿಬಿಡುವ ವಿಧ್ವಂಸಕ ಶಕ್ತಿ ಈ ಸನಾತನ ಧರ್ಮ ಪದ್ಧತಿಗೆ ಇದೆ. ಮಾನವ ಸಹಜ ಪ್ರೀತಿ, ವಿಶ್ವಾಸ, ಕಾರುಣ್ಯಗಳಿಗೆ ಇಲ್ಲಿ ಅವಕಾಶವೇ ಇಲ್ಲ. ಹಾಗಾಗಿಯೇ ಸಮಾನತೆ ಮತ್ತು ಸ್ವಾತಂತ್ರ್ಯಕ್ಕಾಗಿ ಹಂಬಲಿಸಿದ ಎಲ್ಲ ವ್ಯಕ್ತಿ, ಶಕ್ತಿ, ವಿಚಾರಗಳನ್ನು ಇದು ಧ್ವಂಸ ಮಾಡುತ್ತಲೇ ಬಂದಿದೆ.

ಹಿಂಸೆ, ಶೋಷಣೆ ಮತ್ತು ಜನಾಂಗವಾದವೇ ಪ್ರಾಧ್ಯಾನ್ಯವಾಗಿದ್ದ ಈ ಸನಾತನ ಧರ್ಮ ಪದ್ಧತಿ ತನ್ನೊಳಗಿನ ಅನೈತಿಕತೆ ಮತ್ತು ಅಂತಃಕಲಹದ ಪರಿಣಾಮವಾಗಿ ಸರ್ವನಾಶದ ಹಾದಿ ಹಿಡಿದಾಗ ಜನರೇ ಅದನ್ನು ತಿರಸ್ಕರಿಸಿ ಶಾಂತಿ, ಪ್ರೀತಿ ಮತ್ತು ಕಾರುಣ್ಯಗಳ ಮಾರ್ಗವನ್ನು ಬೋಧಿಸುವ ಬೌದ್ಧಧರ್ಮವನ್ನು ಸ್ವೀಕರಿಸಿದರು. ಬುದ್ಧ ಮತ್ತು ಬುದ್ಧನ ನಂತರ ಇಡೀ ಭಾರತವೇ ಬೌದ್ಧಮಯವಾಗಿತ್ತು. ಜ್ಞಾನ ಮತ್ತು ವಿಜ್ಞಾನದ ಅತ್ಯುನ್ನತ ಹಿರಿಮೆ ಭಾರತದ ಪಾಲಾಗಿತ್ತು.

ನಂತರ ಬಂದ ಶಂಕರಾಚಾರ್ಯ ಮುಂತಾದ ಸನಾತನಿಗಳು ಬೌದ್ಧ ಧರ್ಮದ ವಿರುದ್ಧ ಬಂಡೆದ್ದರು. ಅದ್ವೈತ ತತ್ವದ ಪ್ರತಿಪಾದಕರಾಗಿದ್ದ ಶಂಕರಚಾರ್ಯರು ಸನಾತನ ಧರ್ಮ ಪದ್ಧತಿಯನ್ನು ಪುನರ್‌ಸ್ಥಾಪಿಸಿ ಸ್ವಾತಂತ್ರ್ಯ ಮತ್ತು ಸಮಾನತೆಯ ಬೌದ್ಧ ಧರ್ಮದ ಪ್ರಭಾವವನ್ನು ತಗ್ಗಿಸುವಲ್ಲಿ ಯಶಸ್ವಿಯಾದರು. ಮತ್ತೆ ಭಾರತ ಸಮಾಜದಲ್ಲಿ ಸನಾತನ ಧರ್ಮ ಪದ್ಧತಿ ತನ್ನ ಮೇಲುಗೈ ಪಡೆಯಿತು. ಈ ಸ್ಥಿತ್ಯಂತರದ ಸಮಯದಲ್ಲಿ ಸನಾತನಿಗಳು ಮತ್ತು ಬೌದ್ಧರ ನಡುವೆ ತೀವ್ರ ಹೋರಾಟವೇ ನಡೆಯಿತು. ಸನಾತನಿಗಳ ಹಿಂಸೆ ಕ್ರೌರ್ಯವನ್ನು ಸಹಿಸದೆ ಶರಣಾದ ಜನವರ್ಗಗಳನ್ನು ಅವಮಾನಿಸಿ ತಮ್ಮ ಸೇವಕರನ್ನಾಗಿ ಬಳಸತೊಡಗಿದರು. ಎಷ್ಟೇ ದೌರ್ಜನ್ಯ ನಡೆಸಿದರೂ ಶರಣಾಗದೇ, ಹೋರಾಡುತ್ತಲೇ ಬಂದ ಬೌದ್ಧರು ಹೊರಗೇ ಉಳಿಯಬೇಕಾಯಿತು. ಶರಣಾಗದ ಕಾರಣಕ್ಕಾಗಿ ಅವರನ್ನು ಅಸ್ಪೃಶ್ಯರೆಂದು ಕರೆದ ಸನಾತನಿಗಳು ಹೊಲೆ-ಮಾದಿಗರೆಂದು ಅವಮಾನಿಸಿ ಸಮಾಜದಿಂದ ಹೊರಗಿಟ್ಟರು. ಹಾಗಾಗಿಯೇ ಇಂದೂ ಸಹ ಅಸ್ಪೃಶ್ಯರು(ಬೌದ್ಧರು) ಊರಿನ ಒಂದು ಭಾಗವಾಗದೇ ಹೊರಗೇ ವಾಸಿಸುತ್ತಿದ್ದಾರೆ.

ಅಂದರೆ ದಲಿತರು ಹಿಂದೂಗಳಲ್ಲವೇ? ಎಂದು ನೀವು ಕೇಳಬಹುದು. ಹೌದು, ದಲಿತರು ಹಿಂದೂಗಳಲ್ಲ. ಹಿಂದೂಧರ್ಮವೆಂದು ಈಚೆಗೆ ಕರೆಯಲಾಗುತ್ತಿರುವ ಸನಾತನ ಧರ್ಮದಲ್ಲಿ ದಲಿತರಿಗೆ ಜಾಗವೇ ಇಲ್ಲ. ಇದು ಬಹಳ ಹಳೆಯ ವಿಚಾರ. ಹಿಂದೂ ಧರ್ಮ ನಿಂತಿರುವುದೇ ವರ್ಣಾಶ್ರಮ ಧರ್ಮದ ಆಧಾರದ ಮೇಲೆ. ವರ್ಣಾಶ್ರಮ ಧರ್ಮದಲ್ಲಿ ಇರುವ ನಾಲ್ಕು ವರ್ಣಗಳಲ್ಲಿ ದಲಿತರಿಗೆ ಜಾಗವೇ ಇಲ್ಲ. ಅಂದರೆ ದಲಿತರು ಹೇಗೆ ತಾನೆ ಹಿಂದೂ ಧರ್ಮದ ಭಾಗವಾಗಲು ಸಾಧ್ಯ? ಈ ವಾದ ಹಳೆಯದಾದರೂ, ದಲಿತರನ್ನು ಬಲವಂತವಾಗಿ ಸನಾತನ (ಹಿಂದೂ) ಧರ್ಮದ ಚೌಕಟ್ಟಿನಲ್ಲಿ ಕೂಡಿ ಹಾಕಲು ಪ್ರಯತ್ನಿಸುತ್ತಿರುವುದರಿಂದ ಅದನ್ನಿಲ್ಲಿ ಒತ್ತಿ ಹೇಳಬೇಕಾಗಿದೆ.

ಅಸ್ಪೃಶ್ಯತೆ ಹಿಂದೂಗಳ ಸಮಸ್ಯೆಯೆ? ಅಥವಾ ದಲಿತರ ಸಮಸ್ಯೆಯೇ? ಎಂಬ ಬಗ್ಗೆ ಬಹಳಷ್ಟು ಜಿಜ್ಞಾಸೆಗಳು ನಡೆದಿವೆ. ಮೇಲು ನೋಟಕ್ಕೆ ಅದು ದಲಿತರ ಸಮಸ್ಯೆ ಅನ್ನಿಸಿದರೂ, ಅದರ ಮೂಲ ಇರುವುದು ಹಿಂದೂ ಧರ್ಮ ಪದ್ಧತಿಯಲ್ಲೆ. ಅಸಮಾನತೆಯೇ ಮೂಲ ಆಶಯವಾಗಿರುವ ಹಿಂದೂ ಧರ್ಮ ಅಸ್ಪೃಶ್ಯತೆ ಇಲ್ಲದೆ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತದೆ. ಹಾಗಾಗಿ ಹಿಂದೂ ಚೌಕಟ್ಟಿನಲ್ಲಿರುವವರೆಗೆ, ದಲಿತರು ಅಸ್ಪೃಶ್ಯತೆಯಿಂದ ಹೊರಬರಲು ಸಾಧ್ಯವೇ ಇಲ್ಲ. ಅಸ್ಪೃಶ್ಯತೆ ದಲಿತನ ಕಾಲುಗಳನ್ನು ಕಟ್ಟಿ ಹಾಕಿರುವ ಕರಾಳ ಸರಪಳಿ. ಆ ಸರಪಳಿಯನ್ನು ಕಡಿದು ಎಸೆಯದೆ ಆತ ಮುಕ್ತನಾಗಲಾರ. ಮುಕ್ತನಾಗದೆ ಸಮಾಜದಲ್ಲಿ ಎಲ್ಲರಂತೆ ಬದುಕಲಾರ. ಅಸ್ಪೃಶ್ಯತೆಯಿಂದ ದಲಿತನೊಬ್ಬ ಹೊರಬರಬೇಕೆಂದರೆ ಇರುವ ಏಕೈಕ ಮಾರ್ಗ ಹಿಂದೂ ಧರ್ಮವನ್ನು ತೊರೆಯುವುದು.

ಅಂಬೇಡ್ಕರ್ ಅವರು ತಮ್ಮೆಲ್ಲ ಹೋರಾಟಗಳಿಂದ ಕಂಡುಕೊಂಡ ಸತ್ಯ ಇದು. ಹಿಂದೂ ಧರ್ಮ ತೊರೆಯಲು ನಿರ್ಧರಿಸಿದ ೨೧ ವರ್ಷಗಳನಂತರ ಅವರು ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಭಾರತೀಯ ದಲಿತರಿಗೆ ಯಾವ ಧರ್ಮ ಸೂಕ್ತ ಎಂದು ನಿರ್ಧರಿಸಲು ಅಂಬೇಡ್ಕರ್ ಇಪ್ಪತ್ತು ವರ್ಷಗಳ ಕಾಲ ದೀರ್ಘ ಅಧ್ಯಯನ ಮಾಡಿದರು. ಮೂಲದಲ್ಲಿ ಬೌದ್ಧರೇ ಆಗಿದ್ದ ದಲಿತರಿಗೆ ಅದೇ ಧರ್ಮ ಸೂಕ್ತವೆಂಬುದು ಅವರ ತೀರ್ಮಾನವಾಗಿತ್ತು. 'ಇಂದಿನ ಧರ್ಮ ಸ್ವೀಕಾರದಿಂದ ನಾನು ತುಂಬಾ ಸಂತುಷ್ಟಗೊಂಡಿರುವೆ. ನನ್ನಲ್ಲಿ ನವೀನ ಪ್ರಫುಲ್ಲತೆ ಮೂಡಿದೆ. ನರಕದಿಂದ ಮುಕ್ತನಾದ ಭಾವನೆ ನನ್ನದಾಗಿದೆ.' ಧರ್ಮ ಸ್ವೀಕರಿಸಿದ ನಂತರ ಅಂಬೇಡ್ಕರ್ ಆಡಿದ ಈ ಮಾತಿನ ಹಿಂದಿರುವ ಯಾತನೆ ಅರ್ಥ ಮಾಡಿಕೊಂಡರೆ 'ಮರಳಿ ಮನೆಗೆ' ಚಳವಳಿಯ ಅನಿವಾರ್ಯತೆ ಮನದಟ್ಟಾಗುತ್ತದೆ.

'ದಲಿತರು ಬೌದ್ಧರಾದರೆ ಅವರ ಸಮಸ್ಯೆಗಳೆಲ್ಲ ಪರಿಹಾರವಾಗುತ್ತವೆಯೆ?' ಎಂದು ವ್ಯಂಗ್ಯವಾಡುವವರಿದ್ದಾರೆ. ಇವರು ಯಥಾಸ್ಥಿತಿ ವಾದಿಗಳು. ಸನಾತನಿಗಳ ವಕ್ತಾರರಂತೆ ಇವರು ವಾದಿಸುತ್ತಾರೆ. ಬೌದ್ಧರಾಗುವುದರಿಂದ ದಲಿತರ ಸಮಸ್ಯೆಗಳೆಲ್ಲ ಪರಿಹಾರವಾಗದೇ ಇರಬಹುದು. ಆದರೆ ಸ್ವಾಭಿಮಾನ-ಸಮಾನತೆಗಳು ಸಿಕ್ಕುತ್ತವೆ. ಇವು ಬೇರೆಲ್ಲ ಲೌಕಿಕ ಸವಲತ್ತುಗಳಿಗಿಂತ ದೊಡ್ಡವು. ಸ್ವಾಭಿಮಾನ ಮತ್ತು ಸಮಾನತೆ ಸಿಕ್ಕಿದರೆ ಸಮಾಜದ ಎಲ್ಲರಂತೆ ಬದುಕುವ ಹಾಗೂ ಎಲ್ಲ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಅವಕಾಶ ದಲಿತರದ್ದಾಗುತ್ತದೆ. ಜಾತಿ, ಒಳಜಾತಿ, ಅಸ್ಪೃಶ್ಯತೆಗಳ ಕರಾಳ ಬಂಧನದಿಂದ ಮುಕ್ತಿ ದೊರೆಯುತ್ತದೆ. ಅದು ಬೇರೆಲ್ಲದಕ್ಕಿಂತ ದೊಡ್ಡದು.

'ಬುದ್ಧನೆಡೆಗೆ ಮರಳಿ ಮನೆಗೆ' ಹೊರಟಿರುವ ಎಲ್ಲರಿಗೂ ಶುಭಾಶಯಗಳು.

○ ಇಂದೂಧರ ಹೊನ್ನಾಪುರ

ದಲಿತರಿಗೆ ಯಾವ ಧರ್ಮ?

ಚೀನಾ ದಾರ್ಶನಿಕ ಕಾನ್‌ಫ್ಯೂಷಿಯಸ್ ಕಾಡು ಬೆಳೆಸಲು ಒಂದು ನೂರು ವರ್ಷದ ಯೋಜನೆಯನ್ನು ಹಾಕು ಆದರೆ ಮಾನವ ನಿರ್ಮಾಣ ಕಾರ್ಯದ ಬಗ್ಗೆ ಚಿಂತಿಸುವುದಾದರೆ ಒಂದು ಸಾವಿರ ವರ್ಷಗಳ ಯೋಜನೆಯನ್ನು ಹಾಕು ಎಂದಿದ್ದಾನೆ. ಈ ನಿಟ್ಟಿನಲ್ಲಿ ಡಾ॥ ಅಂಬೇಡ್ಕರ್ ಯಾಕಾಗಿ ಬೌದ್ಧಧರ್ಮ ಸ್ವೀಕಾರ ಮಾಡಿದರು ಎಂಬುದು ದಲಿತರಿಗೆ ವೇದ್ಯವಾಗಲು ಶುರುವಾಗಿದೆ. ಮಹಾ ಮಾನವತಾವಾದಿ ಡಾ॥ ಬಿ.ಆರ್. ಅಂಬೇಡ್ಕರ್‌ರವರಲ್ಲಿ (ಚೀನಾದಾರ್ಶನಿಕ ಸೂಚಿಸಿರುವಂತೆ) ಭಾರತೀಯ ಸಮಾಜವನ್ನು ಗುಣ-ಶೀಲ ಸಂಪನ್ನರನ್ನುಳ್ಳ ಮಾನವೀಯ ಸಂಬಂಧಗಳನ್ನುಳ್ಳ ಉತ್ತಮ ಪ್ರಜೆಗಳಿಂದ ಕೂಡಿದ ಒಂದು ಆದರ್ಶ ಸಮಾಜದ ದೂರದರ್ಶಿತ್ವವನ್ನು ಗುರುತಿಸಬಹುದಾಗಿದೆ.

ಪ್ರೊ॥ ಕೆ. ಸುಮಿತ್ರಾ ಬಾಯಿ

ಮತಾಂತರ/ಧರ್ಮಾಂತರ/ಜಾತ್ಯಾಂತರದ ಪ್ರಕ್ರಿಯೆಗಳು ಭಾರತ ದೇಶದ ಉದ್ದಗಲಕ್ಕೂ ನೂರಾರು ವರ್ಷಗಳಿಂದ ನಡೆಯುತ್ತಲೇ ಬಂದಿರುವ ಸಂಗತಿಯಾಗಿದೆ. ಕಾರಣಗಳು ಹಲವಾರು. ಪರಕೀಯರ ಧಾಳಿ ಮತ್ತು ಕೆಲವು ಪರಕೀಯರಿಂದ ಆಳಲ್ಪಟ್ಟಿರುವ ಭಾರತೀಯರು, ಆಯಾಧರ್ಮೀಯರ ಧರ್ಮಕ್ಕೆ ಮತಾಂತರಗೊಂಡಿರುವ ಐತಿಹಾಸಿಕ ಸತ್ಯವನ್ನು ಅಲ್ಲಗಳೆಯಲಾಗದು. ಹೀಗೆ ಕ್ರೈಸ್ತರಾಗಿ, ಮುಸಲ್ಮಾನರಾಗಿ, ಸಿಖ್ಖರಾಗಿ ಮತಾಂತರವಾದವರು, ಹಾಗೆಯೇ ಜೈನರಾಗಿ, ಬಸವಣ್ಣನ ಕಾಲದಲ್ಲಿ ಲಿಂಗಾಯತರಾಗಿ ಮತ್ತು ರಾಮನುಜಾಚಾರ್ಯರ ಕಾಲದಲ್ಲಿ ವೈಷ್ಣವರಾಗಿ ಶೂದ್ರಾದಿಗಳು (ನಿಮ್ಮ ವರ್ಗದವರನ್ನೂ ಒಳಗೊಂಡಂತೆ) ಜಾತ್ಯಾಂತರವಾಗಿದ್ದಾರೆ. ಇವರ ಸಂತತಿಯವರೆಲ್ಲರೂ ಇಂದು ಅಸ್ಪೃಶ್ಯರಿಗಿಂತ ಉತ್ತಮ ಸಾಮಾಜಿಕ ಸ್ಥಾನವನ್ನು ಪಡೆದುಕೊಂಡಿರುವುದು ನಿರ್ವಿವಾದವಾಗಿದೆ. ಯಾಕೆಂದರೆ ಮತಾಂತರವಾದರು/ಜಾತ್ಯಾಂತರವಾಗಿರುವವರು ಆಯಾ ಧರ್ಮದ (ಜಾತಿಯ) ಮುಖ್ಯವಾಹಿನಿಯಲ್ಲಿ ಸೇರ್ಪಡೆಯಾಗಿದ್ದು, ಇವರು ಅಸ್ಪೃಶ್ಯತೆ ಎಂಬ ಕರಾಳ ಆಚರಣೆಯಿಂದ ಮುಕ್ತರಾಗಿದ್ದಾರೆ. ಆದ್ದರಿಂದ ಹುಟ್ಟಿನಿಂದ ಅಸ್ಪೃಶ್ಯರೆನಿಸಿಕೊಂಡವನು, ಮತಾಂತರದಿಂದ ಅಸ್ಪೃಶ್ಯತೆಯಿಂದ ಬಿಡುಗಡೆ ಹೊಂದಬಹುದಾಗಿದೆ.

ಈ ದೇಶದ ಚರಿತ್ರೆಯಲ್ಲಿ ಆಗಿಹೋಗಿರುವ ಸಮಾನತಾ ಆಂದೋಲನಗಳಿಗೆ ಲೆಕ್ಕವಿಲ್ಲ- ಬುದ್ಧ, ಬಸವ, ಅಂಬೇಡ್ಕರ್, ಪೆರಿಯಾರ್ ಮುಂತಾದ ಚಳವಳಿಗಳು ಇಪ್ಪತ್ತನೇ ಶತಮಾನದ ಮಧ್ಯಭಾಗದವರೆಗೂ ಹಿಂದೂ ಧರ್ಮಾಚರಣೆಯಲ್ಲಿರುವ ಮೌಢ್ಯಗಳಿಂದ ಮುಕ್ತವಾಗಲು ಮಾಡಿದ ಪ್ರಯತ್ನಗಳಾಗಿವೆ. ಸ್ವಾತಂತ್ರ್ಯಾನಂತರ ಡಾ॥ ಬಿ.ಆರ್. ಅಂಬೇಡ್ಕರ್‌ರಂತಹ ಮಹಾಮೇಧಾವಿಯ ಮಾನವೀಯ ಸಂವೇದನೆ ಮತ್ತು ದೂರದರ್ಶಿತ್ವ ಪ್ರಯುಕ್ತ, ಮೀಸಲಾತಿಯನ್ನು ಸಂವಿಧಾನಾತ್ಮಕವಾಗಿ ಜಾರಿಗೊಳಿಸಿದರು. ಆದ್ದರಿಂದ ಮೀಸಲಾತಿಯು ಮಾನವೀಯ ಸಂಸ್ಕೃತಿಯನ್ನು ಸಾಮಾನ್ಯ ಜನ ಸಮುದಾಯದಲ್ಲಿ ಬೆಳೆಸಲು ಬಂದಂತಹ ಒಂದು ಸೂಕ್ತ ವ್ಯವಸ್ಥೆಯಾಗಿದೆ.

ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ತಮ್ಮ ಮಾನವೀಯ ಚಿಂತನೆಗಳನ್ನು ದಲಿತರಿಗೆ ಮಾತ್ರ ಸಿಮಿತಗೊಳಿಸದೆ, ಈ ದೇಶದ ಶೋಷಿತರೆಲ್ಲರ ಒಳಿತಿಗಾಗಿ ಸಂವಿಧಾನವನ್ನು ರಚಿಸಿದರು. ಶೋಷಿತರೆಲ್ಲರೂ ಶಿಕ್ಷಣವನ್ನು ಪಡೆಯಬೇಕೆಂದು ಆಗ್ರಹಿಸಿದರು. ತಮ್ಮ ಅಸ್ತಿತ್ವದ ಅರಿವಿಗಾಗಿ, ತಾವು ಬದುಕುತ್ತಿರುವ ಸ್ಥಿತಿಯನ್ನರಿಯಲು, ಶತಮಾನಗಳಿಂದ ತಮಗಾಗಿರುವ ಅನ್ಯಾಯಗಳನ್ನು ಮನಗಾಣಲು, ಸಮಾನತೆಯ ಅರಿವಿಗಾಗಿ, ನ್ಯಾಯ ಬದ್ಧ ಚಿಂತನೆಗಾಗಿ ಮತ್ತು ಮನುಷ್ಯ-ಮನುಷ್ಯರ ಸಂಬಂಧಗಳನ್ನು ಸೂಕ್ತವಾಗಿ ರೂಪಿಸಲು, ಶಿಕ್ಷಣ ವಂಚಿತ ಸಮುದಾಯಗಳು ಶಿಕ್ಷಣ ಪಡೆದು ಸುಶಿಕ್ಷಿತರಾಗಬೇಕೆಂಬ ಆಶಯ ಅವರದಾಗಿತ್ತು.

ನಮ್ಮ ಪ್ರಜಾಪ್ರಭುತ್ವ ರಾಷ್ಟ್ರದ ಸಂವಿಧಾನವು ಅಸ್ಪೃಶ್ಯತಾ ಆಚರಣೆ ಸಂವಿಧಾನ ಬಾಹಿರವೆಂದು ಕಾನೂನು ಜಾರಿಗೊಳಿಸಿ ಐವತ್ತೇಳು ವರ್ಷಗಳು ಕಳೆದು ಹೋದನಂತರ ದಲಿತರ ಪರಿಸ್ಥಿತಿ ಏನಾಗಿದೆ? ಆಯಾ ವ್ಯಕ್ತಿಯ ಜಾತಿಯನ್ನು ಹಾಗೇ ಉಳಿಸಿ, ಉಳಿದೆಲ್ಲ ಬದಲಾವಣೆಗಳು ಆಗಿವೆ/ಆಗುತ್ತಿವೆ ಅಷ್ಟೆ. ಅಂದರೆ ಶಿಕ್ಷಿತ-ದಲಿತನೊಬ್ಬನ ಆರ್ಥಿಕ ಸ್ಥಿತಿ ಸುಧಾರಿಸಿ ಅವನ ನಡೆ-ನುಡಿ ಉತ್ತಮಗೊಂಡಿರುತ್ತದೆಯೇ ಹೊರತು, ಇವನಿಗೆ ಹುಟ್ಟಿನಿಂದ ಅಂಟಿಕೊಂಡು ಬಂದ ಜಾತಿಯ ಕಳಂಕವನ್ನು ತೊಡೆದುಕೊಳ್ಳಲಾರದಾಗಿದ್ದಾನೆ. ಇಂದಿಗೂ ಒಳ್ಳೆಯ ಹುದ್ದೆಯಲ್ಲಿರುವ ದಲಿತರಿಗೆ ಬಾಡಿಗೆ ಮನೆ (ಮೈಸೂರು ಬೆಂಗಳೂರಿನಲ್ಲಂತು ಹೈಟೆಕ್‌ನಗರದಲ್ಲೂ ಒಳ್ಳೆಯ ಮೊಹಲ್ಲಾಗಳಲ್ಲಿ)



ಸಿಗುವುದು ಕಷ್ಟವಾಗಿದೆ. ಜಾತೀಯತೆಯ ಬೇರುಗಳು ಎಷ್ಟು ಆಳವಾಗಿ ಬೇರೂರಿವೆ ಎಂದರೆ, ಈಗಲೂ ದಲಿತೇತರರು ಜಾತಿ ಬಿಟ್ಟು ಬದುಕಲಾರದವರಾಗಿದ್ದಾರೆ. ಇಂತಹ ದುಃಸ್ಥಿತಿಯಲ್ಲಿ ಬದುಕಬೇಕಾಗಿರುವ ದಲಿತರು ಮಾನವೀಯತೆಯನ್ನುಳ್ಳ ಸಂಸ್ಕೃತಿಯನ್ನು ಕಟ್ಟುವುದು ಹೇಗೆ?

ಚೀನಾದಾರ್ಶನಿಕ ಕಾನ್‌ಫ್ಯೂಷಿಯಸ್‌ನ ಚಿಂತನೆಯನ್ನಿಲ್ಲಿ ನೆನಪು ಮಾಡಿಕೊಳ್ಳಬಹುದು ಕಾಡು ಬೆಳೆಸಲು ಒಂದು ನೂರು ವರ್ಷದ ಯೋಜನೆಯನ್ನು ಹಾಕು ಆದರೆ ಮಾನವ ನಿರ್ಮಾಣ ಕಾರ್ಯದ ಬಗ್ಗೆ ಚಿಂತಿಸುವುದಾದರೆ ಒಂದು ಸಾವಿರ ವರ್ಷಗಳ ಯೋಜನೆಯನ್ನು ಹಾಕು ಎಂದಿದ್ದಾನೆ. ಈ ನಿಟ್ಟಿನಲ್ಲಿ ಡಾ॥ ಅಂಬೇಡ್ಕರ್ ಯಾಕಾಗಿ ಬೌದ್ಧಧರ್ಮ ಸ್ವೀಕಾರ ಮಾಡಿದರು ಎಂಬುದು ದಲಿತರಿಗೆ ವೇದ್ಯಯವಾಗಲು ಶುರುವಾಗಿದೆ. ಮಹಾ ಮಾನವತಾವಾದಿ ಡಾ॥ ಬಿ.ಆರ್. ಅಂಬೇಡ್ಕರ್‌ರವರಲ್ಲಿ (ಚೀನಾದಾರ್ಶನಿಕ ಸೂಚಿಸಿರುವಂತೆ) ಭಾರತೀಯ ಸಮಾಜವನ್ನು ಗುಣ-ಶೀಲ ಸಂಪನ್ನರನ್ನುಳ್ಳ ಮಾನವೀಯ ಸಂಬಂಧಗಳನ್ನುಳ್ಳ ಉತ್ತಮ ಪ್ರಜೆಗಳಿಂದ ಕೂಡಿದ ಒಂದು ಆದರ್ಶ ಸಮಾಜದ ದೂರದರ್ಶಿತ್ವವನ್ನು ಗುರುತಿಸಬಹುದಾಗಿದೆ.

ದಲಿತೇತರರಲ್ಲಿ Attitudinal problem ಇದೆ ಎಂದು ನನಗನ್ನಿಸಿದೆ. ಕೆಲವು ಘಟನೆಗಳನ್ನಿಲ್ಲಿ ಉದಹರಿಸಬಹುದು. ೧. ವಿಜ್ಞಾನದ ವಿದ್ಯಾರ್ಥಿನಿಯೊಬ್ಬಳಿಗೆ ಪ್ರಯೋಗಾಲಯದ ಪರೀಕ್ಷೆ ನಡೆಯುವ ಸಂದರ್ಭದಲ್ಲಿ, ಮೇಷ್ಟ್ರು ಜವಾನನಿಗೆ ಲೋ ಆ SCಗೆ ತರಲು ಹೇಳೋ ೩೫ ಕೊಟ್ರು ಪಾಸ್ ಮಾಡ್ತೀನಿ? ಅಂದ್ರೆ Value ಸರಿಯಾಗಿದ್ರೂ ಪೆದ್ದು ಅಂತ ಸುಳ್ಳು ಹೇಳೋದು ಪೂರ್ತಿ ಮಾರ್ಕ್ಸ್ ಕೊಡದಿರಲು ಈ Trick ೨. ಏನ್ರೀ... x, ಯಾಕ್ರಿ ನೀವು ಪರೀಕ್ಷೆಗೆ ಬರಲಿಲ್ಲವೆಂದು ಸವರ್ಣೀಯ ಮೇಷ್ಟ್ರು, ಸವರ್ಣೀಯ ವಿದ್ಯಾರ್ಥಿನಿಯನ್ನು ಕೇಳಿದಾಗ- ಅಯ್ಯೋ ಸಾರ್ ಏನೂ ಓದಿರಲಿಲ್ಲ... ಅದಕ್ಕೇನು ಚಿಂತೆ ಬರಬೇಕಾಗಿತ್ತು ನಾವು ನೋಡ್ಕೋತಿದ್ವಿ ಎಂದರಂತೆ!! ೩. ಸವರ್ಣೀಯ ಮೇಡಂ ಒಬ್ಬರು... ಯಾರದ್ರೀ ಈ ಸ್ಕೂಟರ್... ಏನೂ ಆ SCದಾ ಎಂದು ಉದ್ಗಾರ ತೆಗೆದರಂತೆ!! ಇಂತಹ ಮನಸ್ಸುಳ್ಳವರಿಂದ ದಲಿತರು ಮಾನಸಿಕ ಹಿಂಸೆಗೆ ಒಳಗಾಗುತ್ತಿದ್ದಾರೆ.

ಹಿಂದೆ ಒಮ್ಮೆ ನಾನು ಜಾಗತೀಕರಣದ ಬಗ್ಗೆ ಮಾತನಾಡುತ್ತಾ.. ಜಾತೀಯ ಕಂದರಗಳನ್ನು ದಾಟಲು ಜಾಗತೀಕರಣ ಸಹಕಾರಿಯಾಗುತ್ತದೆ. ಎಂದು ಭ್ರಮಿಸಿ ಹೇಳಿದೆನು. ಆದರೆ ಜಾಗತೀಕರಣ ಕೂಡ ಜಾತೀಯ ಮನೋಭಾವವನ್ನೇ ಪೋಷಿಸುತ್ತಿರುವುದು ವಿಷಾದನೀಯ ಸಂಗತಿಯಾಗಿದೆ. ಜಾಗತೀಕರಣ ಕೂಡ ಜಾತೀಯತೆಯನ್ನು ನಿಷ್ಕ್ರಿಯಗೊಳಿಸಲಾರದಾಗಿದೆ. ಜಾಗೃತಿಗೊಂಡಿರುವ ದಲಿತ ಪ್ರತಿ ಹೆಜ್ಜೆಯಲ್ಲೂ ಜಾತೀಯತೆಯನ್ನು ಹಿಂಸೆ ಅನುಭವಿಸುತ್ತಾ ಬದುಕು ದೂಡುವಂತಾಗಿದೆ.

ಒಬ್ಬ ದಲಿತನು ವಾಸಿಸುವ, ಉದ್ಯೋಗ ಮಾಡುವ, ಸಣ್ಣಪುಟ್ಟ ಕೆಲಸ ಮಾಡುವ ಕ್ಷೇತ್ರಗಳೆಲ್ಲೆಲ್ಲ, ಸವರ್ಣೀಯರ ಅಸಹಕಾರ ಮನೋಭಾವವನ್ನು ಎದುರಿಸುತ್ತಾ, ಮಾನಸಿಕವಾಗಿ ಘಾಸಿಗೊಳ್ಳುತ್ತಿರುತ್ತಾನೆ. ನಮಗೆ ಸ್ವಾತಂತ್ರ್ಯ ಬಂದು ಇನ್ನೇನು ಅರವತ್ತು ವರ್ಷಗಳು ತುಂಬುತ್ತಿರುವ ಸಂದರ್ಭದಲ್ಲಿ ಭಾರತವು ಹೈಟೆಕ್ ಸಮಾಜದ ಕಡೆ ಹೆಜ್ಜೆ ಇಡುತ್ತಿದೆ, ಈ ೨೧ನೇ ಶತಮಾನವನ್ನು ಜ್ಞಾನ ಯುಗವೆಂದು ಕರೆಯಲಾಗುತ್ತಿದೆ, ಆದರೂ ದಲಿತರಿಗೆ ಅಸ್ಪೃಶ್ಯತೆಯಿಂದ ಬಿಡುಗಡೆ ಸಿಗದಾಗಿದೆ. ಈ ದೇಶದಲ್ಲಿರುವ ಯಾವುದೇ ಕಾನೂನು ಕೂಡ ಅಸ್ಪೃಶ್ಯತೆಯನ್ನು ತೊಡೆದು ಹಾಕಲಾರದೆಂದು ದಲಿತರಿಗೆ ಮನವರಿಕೆಯಾಗಿದೆ. ಇಂತಹ ದುಃಸ್ಥಿತಿಯಿಂದಾಗಿ ದಲಿತರ ಮನಸ್ಸು ಮತಾಂತರವಾಗುವ ತುಡಿತಕ್ಕೆ ಒಳಗಾಗುತ್ತಿದ್ದಾರೆ. ಇದೊಂದು ಶುಭ ಸೂಚನೆಯಾಗಿದೆ. ಸವರ್ಣೀಯ ದಲಿತರು ಮತಾಂತರವಾಗುವುದನ್ನು ಏಕೆ ವಿರೋಧಿಸುತ್ತಾರೆ?

ಇಪ್ಪತ್ತೊಂದನೆಯ ಶತಮಾನದಲ್ಲಿ ಕಾಲಿರಿಸಿರುವ ದಲಿತರು ಅಸ್ಪೃಶ್ಯತೆ, ಜಾತೀಯತೆಯ ದೌರ್ಜನ್ಯ ಹಿಂಸೆ, ಅವಮಾನಗಳಿಂದ ಮುಕ್ತಿ ಪಡೆಯಲು ಮತಾಂತರವೇ ಒಂದು ಪ್ರಬಲ ಅಸ್ತ್ರವೆಂದು ಚಿಂತಿಸಿದ್ದಾರೆ. ಇದು ನಿಜವಾಗಿಯೂ ಒಂದು ಮುಕ್ತಿ ಮಾರ್ಗವಾಗಿದೆ. ಸಂವಿಧಾನವು ಈ ದೇಶದ ಪ್ರತಿಯೊಬ್ಬ ಪ್ರಜೆಯೂ ಯಾವುದೇ ಧರ್ಮವನ್ನನುಸರಿಸುವುದು ಅವನ ಮೂಲಭೂತ ಹಕ್ಕೆಂದು ಹೇಳುತ್ತದೆ. ಆದಕಾರಣ, ದಲಿತರು, ಕ್ರೈಸ್ತ, ಇಸ್ಲಾಂ ಲಿಂಗಾಯತ, ಸಿಖ್ಖ್, ಜೈನ ಮತ್ತು ಬೌದ್ಧ ಧರ್ಮಗಳಲ್ಲಿ ತಮಗಿಷ್ಟವಾದ ಧರ್ಮಕ್ಕೆ ಮತಾಂತರವಾಗಬಹುದಾಗಿದೆ. ಇಲ್ಲಿ ನನ್ನ ಉದ್ದೇಶ ಏನೆಂದರೆ, ಹಿಂದೂ ಸಮುದಾಯದಲ್ಲಿ ಅಸ್ಪೃಶ್ಯ ಸಮುದಾಯ ಸಂಪೂರ್ಣ ವಾಗಿ ಇಲ್ಲವಾಗಬೇಕು ಅಷ್ಟೆ. ವಿಶ್ವ ಕಂಡ ಶ್ರೇಷ್ಠ ವಿಜ್ಞಾನಿ ರಾಬರ್ಟ್ ಐನ್‌ಸ್ಟೀನ್ ರವರು ಆಧುನಿಕ ವಿಜ್ಞಾನದೊಟ್ಟಿಗೆ ಹೊಂದಿಕೊಳ್ಳಬಹುದಾದ ಧರ್ಮ ಎಂದರೆ ಬೌದ್ಧಧಮ್ಮ ಎಂದಿದ್ದಾರೆ. ಇಂತಹ ಶ್ರೇಷ್ಠವಾದ ಬೌದ್ಧ ಧರ್ಮವನ್ನು ದಲಿತರು ಸ್ವೀಕರಿ ಸುವುದರಿಂದ, ಡಾ॥ ಬಿ.ಆರ್. ಅಂಬೇಡ್ಕರ್ ರವರು ನೆನೆಸಿರುವ... ಮಾನವೀಯತೆಯನ್ನು ಪೋಷಿಸುವ, ಸಹಬಾಳ್ವೆ ಯನ್ನು ಬೋಧಿಸುವ ಒಂದು ಸುಸಂಸ್ಕೃತ ಸಮಾಜವನ್ನು ನಿರ್ಮಾಣ ಮಾಡುವತ್ತ ಹೆಜ್ಜೆ ಹಾಕಿದಂತಾಗುತ್ತದೆ.

ಇದರಿಂದ ಸಂವಿಧಾನ ನಮಗೆಲ್ಲ ನೀಡಿರುವ ಮೂಲಭೂತ ಹಕ್ಕನ್ನು ಚ್ಯುತಿಗೊಳಿಸಿದಂತಾಗುವುದಿಲ್ಲವೇ? ಸವರ್ಣೀಯರೇನು ಮಾಡಬೇಕು? ೧. ಸವರ್ಣೀಯ ಹಿಂದೂಗಳು, ದಲಿತರು ಮತಾಂತರವಾಗುವುದನ್ನು ತಡೆಯುವುದಕ್ಕೆ ಬದಲು, ತಮ್ಮ ತಮ್ಮ ಊರುಗಳಲ್ಲಿರುವ ಕೆರೆ, ಕಟ್ಟೆ, ಭಾವಿಗಳನ್ನು ಎಲ್ಲಾ ಜಾತಿ/ಧರ್ಮೀಯರಿಗೂ ಮುಕ್ತವಾಗಿರಿಸಲು ಚಳುವಳಿ ಮಾಡಿದರೆ ಅದೊಂದು ಉತ್ತಮ ಆಂದೋಲನವಾಗಬಲ್ಲದು. ೨. ದಲಿತರ ಗುಡಿಸಲಿಗೆ ಬೆಂಕಿ, ದಲಿತರಿಗೆ ಬಹಿಷ್ಕಾರ, ದಲಿತರ ಮೇಲೆ ಸವರ್ಣೀಯರ ದೌರ್ಜನ್ಯಗಳು ಘಟಿಸಿದಾಗ, ಇತರೇ ಸವರ್ಣೀಯರು ಮತ್ತು ಸವರ್ಣೀಯ ಜನನಾಯಕರು, ಅಂತಹ ಸ್ಥಳಗಳಿಗೆ ತೆರಳಿ ಪ್ರತಿಭಟಿಸಿ, ಸತ್ಯಾಗ್ರಹ ಮಾಡುವಂತಾಗಬೇಕು. ೩. ನಮ್ಮ ದೇಶ ಬಹುಧರ್ಮೀಯರ ನಾಡು, ಹಿಂದೂಗಳೆಲ್ಲ ಒಂದು ಎನ್ನುವುದಾದರೆ, ಉಳಿದ ಧರ್ಮೀಯರು ಎಲ್ಲಿಗೆ ಹೋಗಬೇಕು? ಈ ದೇಶದಲ್ಲಿರುವ ಅನ್ಯಧರ್ಮೀರೆಲ್ಲರೂ (ಈಗಾಗಲೆ ತಿಳಿಸಿರುವಂತೆ) ಒಂದು ಕಾಲದಲ್ಲಿ ಹಿಂದೂ ಧರ್ಮದಲ್ಲಿ ಜನಿಸಿ ಮತಾಂತರವಾದವರ ಸಂತತಿಯವರು ತಾನೆ? ಆದ್ದರಿಂದ ಸಹ ಬಾಳ್ವೆಯೇ ನಮ್ಮ ಧರ್ಮವಾಗಬೇಕು ಇದನ್ನು ಬೋಧಿಸುವ ಧರ್ಮವೇ ಶ್ರೇಷ್ಠವಾದ ಧರ್ಮ.

ದಲಿತರ ಮತಾಂತರ ಯಾವ ಧರ್ಮಕ್ಕೆ?

ಇಪ್ಪತ್ತೊಂದನೆಯ ಶತಮಾನದಲ್ಲಿ ಕಾಲಿರಿಸಿರುವ ದಲಿತರು ಅಸ್ಪೃಶ್ಯತೆ, ಜಾತೀಯತೆಯ ದೌರ್ಜನ್ಯ ಹಿಂಸೆ, ಅವಮಾನಗಳಿಂದ ಮುಕ್ತಿ ಪಡೆಯಲು ಮತಾಂತರವೇ ಒಂದು ಪ್ರಬಲ ಅಸ್ತ್ರವೆಂದು ಚಿಂತಿಸಿದ್ದಾರೆ. ಇದು ನಿಜವಾಗಿಯೂ ಒಂದು ಮುಕ್ತಿ ಮಾರ್ಗವಾಗಿದೆ. ಸಂವಿಧಾನವು ಈ ದೇಶದ ಪ್ರತಿಯೊಬ್ಬ ಪ್ರಜೆಯೂ ಯಾವುದೇ ಧರ್ಮವನ್ನನುಸರಿಸುವುದು ಅವನ ಮೂಲಭೂತ ಹಕ್ಕೆಂದು ಹೇಳುತ್ತದೆ. ಆದ ಕಾರಣ, ದಲಿತರು, ಕ್ರೈಸ್ತ, ಇಸ್ಲಾಂ ಲಿಂಗಾಯತ, ಸಿಖ್ಖ್, ಜೈನ ಮತ್ತು ಬೌದ್ಧ ಧರ್ಮಗಳಲ್ಲಿ ತಮಗಿಷ್ಟವಾದ ಧರ್ಮಕ್ಕೆ ಮತಾಂತರವಾಗಬಹುದಾಗಿದೆ. ಇಲ್ಲಿ ನನ್ನ ಉದ್ದೇಶ ಏನೆಂದರೆ, ಹಿಂದೂ ಸಮುದಾಯ ದಲ್ಲಿ ಅಸ್ಪೃಶ್ಯ ಸಮುದಾಯ ಸಂಪೂರ್ಣವಾಗಿ ಇಲ್ಲ ವಾಗಬೇಕು ಅಷ್ಟೆ

ವಿಶ್ವ ಕಂಡ ಶ್ರೇಷ್ಠ ವಿಜ್ಞಾನಿ ರಾಬರ್ಟ್ ಐನ್‌ಸ್ಟೀನ್‌ರವರು ಆಧುನಿಕ ವಿಜ್ಞಾನದೊಟ್ಟಿಗೆ ಹೊಂದಿಕೊಳ್ಳಬಹುದಾದ ಧರ್ಮ ಎಂದರೆ ಬೌದ್ಧಧಮ್ಮ ಎಂದಿದ್ದಾರೆ. ಇಂತಹ ಶ್ರೇಷ್ಠವಾದ ಬೌದ್ಧಧರ್ಮವನ್ನು ದಲಿತರು ಸ್ವೀಕರಿಸುವುದರಿಂದ, ಡಾ॥ ಬಿ.ಆರ್. ಅಂಬೇಡ್ಕರ್‌ರವರು ನೆನೆಸಿರುವ... ಮಾನವೀಯತೆಯನ್ನು ಪೋಷಿಸುವ, ಸಹಬಾಳ್ವೆಯನ್ನು ಬೋಧಿಸುವ ಒಂದು ಸುಸಂಸ್ಕೃತ ಸಮಾಜವನ್ನು ನಿರ್ಮಾಣ ಮಾಡುವತ್ತ ಹೆಜ್ಜೆ ಹಾಕಿದಂತಾಗುತ್ತದೆ. ದಲಿತರು ಬೌದ್ಧರಾಗಲು ಹೊರಟಿರುವ ಈ ಸಂದರ್ಭದಲ್ಲಿ ಯಾವ ಧರ್ಮೀಯರನ್ನು ನಿಂದಿಸದೆ ಸಂಯಮಿಗಳಾಗಿ ಬುದ್ಧ ನೆಡೆಗೆ-ಮರಳಿ ಮನೆಗೆ ಹೆಜ್ಜೆ ಹಾಕೋಣ ಬನ್ನಿ. □

ನಾವೇಕೆ ಬೌದ್ಧರಾಗಬೇಕು?

ಡಾ॥ ಬಿ.ಆರ್. ಅಂಬೇಡ್ಕರ್

ಬೌದ್ಧ ಧರ್ಮದ ದೃಷ್ಟಿಯಿಂದ ಹೇಳುವುದಾದರೆ ಭಾರತ ಒಂದು ಕಾಡಿನಂತಿದೆ. ನಾಗರಿಕ ಜೀವನ ನಡೆಸಲು ಸಾಧ್ಯವಾಗುವಂತೆ ಭಾರತವನ್ನು ಬದಲಾಯಿಸಬೇಕಾಗಿದೆ. ಆದ್ದರಿಂದ ನೀವು ಒಪ್ಪಿಕೊಂಡಿರುವಂತೆ, ಬೌದ್ಧ ಧರ್ಮವನ್ನು ಉತ್ತಮ ರೀತಿಯಲ್ಲಿ ಅನುಸರಿಸುವ ಪ್ರತಿಜ್ಞೆ ಮಾಡಿ. ಇಲ್ಲದೇ ಹೋದರೆ ನಿಮ್ಮಿಂದ ಧರ್ಮ ಪರಿವರ್ತನೆಗೆ ಅಪಚಾರವಾಗುತ್ತದೆ. ನೀವೆಲ್ಲರೂ ಬೌದ್ಧರು; ನಮ್ಮ ದೇಶದ ಹಾಗೂ ಸಮಗ್ರ ವಿಶ್ವದ ಉನ್ನತಿಗೆ ಶ್ರಮಿಸುವುದಾಗಿ ಇಂದು ಪ್ರತಿಜ್ಞೆ ಕೈಗೊಳ್ಳಿ. ವಿಶ್ವದ ಉನ್ನತಿ ಬೌದ್ಧ ಧರ್ಮದಿಂದ ಮಾತ್ರ ಸಾಧ್ಯ. ನ್ಯಾಯಕ್ಕೆ ಅವಕಾಶ ಸಿಕ್ಕುವವರೆಗೆ ವಿಶ್ವದಲ್ಲಿ ಶಾಂತಿ ನೆಲೆಸಲು ಸಾಧ್ಯವಿಲ್ಲ.

ಬೌದ್ಧ ಧರ್ಮಾನುಯಾಯಿಗಳೇ,

ಬೌದ್ಧ ಧರ್ಮದ ಪುನರುದ್ಧಾರ ಹಾಗೂ ಪ್ರಚಾರದಂಥ ಮಹಾಕಾರ್ಯವನ್ನು ನಾನು ವಹಿಸಿಕೊಂಡಿದ್ದೇಕೆ ಎಂಬ ಬಗ್ಗೆ ಇಂದು ನನ್ನ ಭಾಷಣದಲ್ಲಿ ಪ್ರಾಸ್ತಾಪಿಸಲಿದ್ದೇನೆ.

ಈ ಮಹಾ ಸಮಾರಂಭವನ್ನು ನಡೆಸಲು ನಾಗಪುರವನ್ನೇ ಆಯ್ಕೆ ಮಾಡಿಕೊಳ್ಳಲು ಕಾರಣವೇನು? ಎಂದು ಬಹು ಜನರು ಪ್ರಶ್ನಿಸಿದ್ದಾರೆ. ಇದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಭದ್ರಕೋಟೆಯಾದ ಕಾರಣ, ಏನಾದರೊಂದನ್ನು ಮಾಡಿ ತೋರಿಸುವ ಇಚ್ಛೆಯಿಂದ ನಾನು ಈ ಸ್ಥಳವನ್ನು ಈ ಸಮಾರಂಭಕ್ಕಾಗಿ ಆಯ್ಕೆ ಮಾಡಿಕೊಂಡಿದ್ದೇನೆಂದೂ ಕೆಲವರು ತಿಳಿದಿದ್ದಾರೆ. ಇದು ನಿಜವಲ್ಲ. ಇಂಥ ನಿರರ್ಥಕ ವಿಚಾರ ಮಾಡಲು ನನ್ನ ಬಳಿ ಸಮಯವಿಲ್ಲ. ಈ ಸಮಾರಂಭಕ್ಕಾಗಿ ಈ ಸ್ಥಳವನ್ನು ಆಯ್ಕೆ ಮಾಡಿಕೊಳ್ಳುವ ಹಂತದಲ್ಲಿ ಅಪ್ಪಿತಪ್ಪಿಯೂ ನನ್ನ ಮನಸ್ಸಿನಲ್ಲಿ ಆರ್.ಎಸ್.ಎಸ್. ಕುರಿತ ವಿಚಾರ ಬಂದಿಲ್ಲ.

ಬೌದ್ಧ ಧರ್ಮವನ್ನು ಪ್ರಚಾರ ಮಾಡುವಲ್ಲಿ ಹೆಚ್ಚಿನ ಶ್ರೇಯಸ್ಸು ನಾಗ ಜಾತಿ ಜನರಿಗೆ ಸಲ್ಲಬೇಕು. ಬೌದ್ಧ ಧರ್ಮಕ್ಕೆ ಸಂಬಂಧಿಸಿದಂತೆ. ಪ್ರಾಚೀನ ಕಾಲದ ಇತಿಹಾಸವನ್ನು ಅಭ್ಯಾಸ ಮಾಡಿದವರಿಗೆ ಈ ಅಂಶ ಚೆನ್ನಾಗಿ ಗೊತ್ತು. ನಾಗರು ಆರ್ಯರ ಕಡು ವಿರೋಧಿಗಳು. ಆರ್ಯ–ಅನಾರ್ಯರಲ್ಲಿ ಬಹುದೊಡ್ಡ ಯುದ್ಧಗಳು ನಡೆದಿವೆ. ನಾಗ ಜನರನ್ನು ನಿರ್ಮೂಲಗೊಳಿಸುವ ಗುರಿಯನ್ನು ಆರ್ಯರು ಹೊಂದಿದ್ದರು. ಈ ವಿಷಯಕ್ಕೆ ಸಂಬಂಧಪಟ್ಟಂತೆ ಅನೇಕ ವಿಚಾರಗಳು ಪುರಾಣಗಳಲ್ಲಿ ಸಿಗುತ್ತವೆ. ಅರ್ಜುನನು ನಾಗರನ್ನು ಸುಟ್ಟುಹಾಕಿದ್ದ. ಅಗಸ್ತ್ಯ ಮುನಿ ನಾಗರನ್ನು ರಕ್ಷಿಸಿದ್ದ. ಬಲಾತ್ಕಾರ ಮತ್ತು ಮೋಸದಿಂದ ನಾಗರನ್ನು ಪತಿತರನ್ನಾಗಿಸಲಾಯಿತು. ಈ ನಾಗರನ್ನು ಎತ್ತಲು ಒಬ್ಬ ಮಹಾಪುರುಷನಾಗಿ ಮೂಡಿ ಬಂದ. ಸಮಗ್ರ ಭಾರತದಲ್ಲಿ ಬೌದ್ಧ ಧರ್ಮವನ್ನು ಪ್ರಚಾರ ಮಾಡಿದ್ದು ನಾಗ ಜನರೇ. ನಾವೆಲ್ಲ ಅದೇ ನಾಗರ ಸಂತಾನ. ವೀರ ನಾಗರು ಮುಖ್ಯವಾಗಿ ನೆಲೆಸಿದ್ದು ನಾಗಪುರದಲ್ಲಿ ಇದರಿಂದಾಗಿಯೇ ಈ ನಗರಕ್ಕೆ ನಾಗಪುರ ಎಂಬ ಹೆಸರು ಬಂದಿದ್ದು. ಈ ನಾಗಪುರಕ್ಕೆ ೨೭ ಕಿ.ಮೀ. ದೂರದಲ್ಲಿ ಹರಿಯುತ್ತಿರುವ ನದಿಯ ಹೆಸರೂ ನಾಗ ಎಂದೇ ಇದೆ. ಈ ನದಿಯ ಎರಡೂ ಕಡೆಗಳಲ್ಲಿ ನಾಗ ಜನ ವಾಸಿಸುತ್ತಿದ್ದರು. ಇಂದು ನಡೆಯುತ್ತಿರುವ ಇಂಥ ಮಹಾ ಸಮಾರಂಭಕ್ಕೆ ಈ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ಕಾರಣ ಇದು. ಆರ್.ಎಸ್.ಎಸ್. ವಿರೋಧಿಸಲು ಬೇರೆ ಹಲವು ಕಾರಣಗಳಿವೆ; ಆದರೆ ಅವರಲ್ಲಿ ಈರ್ಷ್ಯೆ ಹುಟ್ಟಿಸಲು ಈ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಎಂಬ ವಾದದಲ್ಲಿ ಮಾತ್ರ ಸತ್ಯಾಂಶವಿಲ್ಲ.



ನಾನು ಪ್ರಾರಂಭಿಸಿರುವ ಮಹಾಕಾರ್ಯವನ್ನು ತಾವುಗಳೆಲ್ಲಾ ಸ್ವೀಕರಿಸಿದ್ದೀರಿ; ಆದರೂ ಈ ಸಂಬಂಧದಲ್ಲಿ ಪತ್ರಿಕೆಗಳಲ್ಲಿ ಅತಿ ಕಟುವಾದ ಟೀಕೆ–ಟಿಪ್ಪಣಿಗಳು ಪ್ರಕಟವಾಗಿವೆ. ನಾನು ನಿಮ್ಮನ್ನು "ತಪ್ಪು ಮಾರ್ಗದಲ್ಲಿ ಕರೆದೊಯ್ಯುತ್ತಿರುವುದಾಗಿ, ಧರ್ಮಾಂತರದ ಬಳಿಕವೂ ನಾವು ಅಸ್ಪೃಶ್ಯರಾಗೇ ಉಳಿಯುತ್ತೇವೆಂದು, ಧರ್ಮಾಂತರದಿಂದ ಏನೂ ಒಳ್ಳೆಯದಾಗುವುದಿಲ್ಲ ಎಂದು ಟೀಕೆ ಮಾಡಲಾಗಿದೆ. ಈಗ ನಮಗೆ ದೊರಕಿರುವ ರಾಜಕೀಯ ಹಕ್ಕುಗಳು ಧರ್ಮಾಂತರದಿಂದ ಕೊನೆಗೊಂಡು ಬಿಡುತ್ತವೆ ಎಂದೂ ಪ್ರಚಾರ ಮಾಡಲಾಗಿದೆ. ನಾವು ಹೊಸ ಮಾರ್ಗ ಹಿಡಿಯುವುದು ಈ ಪತ್ರಿಕೆಗಳಿಗೆ ಬೇಕಿಲ್ಲ; ಹಳೇ ಮಾರ್ಗವನ್ನು ಅಥವಾ ಅದರದೇ ಒಂದು ತುಣುಕನ್ನು ನಾವು ಹಿಡಿಯಬೇಕೆಂದು ಇವುಗಳು ಅಪೇಕ್ಷಿಸುತ್ತವೆ. ಈ ಪತ್ರಿಕೆಗಳ ಪ್ರಚಾರವು ನಮ್ಮಲ್ಲಿ ಕೆಲವೊಂದು ಹಿರಿಯರ ಹಾಗೂ ಯುವಜನರ ಮೇಲೆ ಕೊಂಚ ಪರಿಣಾಮ ಬೀರುವ ಸಾಧ್ಯತೆಯಿದೆ. ಆದ್ದರಿಂದ ಈ ಬಗ್ಗೆ ನಾನು ಪ್ರತಿಕ್ರಿಯಿಸಬೇಕಾಗಿದೆ. ಸಂದೇಹವನ್ನು ದೂರ ಮಾಡದ ಹೊರತು, ನಮ್ಮ ಆಂದೋಲನಕ್ಕೆ ಬಲ ಬರುವುದಿಲ್ಲ.

ಮಹಾರರು ಮತ್ತು ಚಮ್ಮಾರರು ಸತ್ತ ಪ್ರಾಣಿಗಳನ್ನು ಎತ್ತಿಹಾಕುವುದನ್ನು ಹಾಗೂ ಸತ್ತ ಪ್ರಾಣಿಗಳ ಮಾಂಸ ತಿನ್ನುವುದನ್ನು ಬಿಟ್ಟು ಬಿಡಬೇಕು ಎಂಬ ಮಾತನ್ನು ನಾನು ಕಳೆದ ಮೂವತ್ತು ವರ್ಷಗಳಿಂದ ಹೇಳುತ್ತಾ ಬಂದಿದ್ದೇನೆ. ಇದನ್ನು ನಾನು ಆಗ ಆಡಿದಾಗ ಹಿಂದೂ ಸವರ್ಣೀಯರಿಗೆ ಅಪಘಾತವಾಗಿತ್ತು. ನಾನು ಅಂದು ಕೇಳಿದ್ದೆ. "ಹಸು–ಎಮ್ಮೆಗಳ ಹಾಲು ಕುಡಿಯುವವರು ನೀವು; ಅವುಗಳು ಸತ್ತಾಗ ಅವುಗಳನ್ನು ಎತ್ತಿ ಹಾಕಲು ಮಾತ್ರ ನಾವು ಬರಬೇಕು? ಹಿಂದೂ ಸವರ್ಣೀಯರು ತಮ್ಮ ತಾಯಿ ಸತ್ತಾಗ ತಾವೇ ಎತ್ತಿಹಾಕುತ್ತಾರಾದರೆ, ತಮ್ಮ ಹಸು–ಎಮ್ಮೆ ಎತ್ತುಗಳನ್ನೂ ತಾವೇ ಏಕೆ ಎತ್ತಿ ಹಾಕಬಾರದು?" ಆಗ ಇನ್ನೂ ಮುಂದುವರೆದು ನಾನು ಹೇಳಿದ್ದೆ: 'ನಿಮ್ಮ ತಾಯಿ ಸತ್ತಾಗ ಆ ಶವವನ್ನೂ ಎತ್ತಲು ನಮ್ಮನ್ನು ಕರೆಯುವುದಾದರೆ, ನಾವು ನಿಮ್ಮ ಹಸು–ಎಮ್ಮೆ–ಎತ್ತುಗಳು ಸತ್ತಾಗಲೂ ಬಂದು ಅವುಗಳ ಶವಗಳನ್ನು ಎತ್ತಿ ಒಯ್ಯುತ್ತೇವೆ'. ಇದರಿಂದ ಹಿಂದೂ ಸವರ್ಣೀಯ ಸಮಾಜ ವಿಹ್ವಲಗೊಂಡಿತ್ತು. ನನ್ನ ಮಾತುಗಳಿಗೆ ಉತ್ತರವೆಂಬಂತೆ (ಬ್ರಾಹ್ಮಣರ ಮುಖವಾಣಿಯಂತಿದ್ದ) 'ಕೇಸರಿ' ಪತ್ರಿಕೆಯಲ್ಲಿ ಒಬ್ಬ ಲೇಖಕ, ಸತ್ತ ಹಸು–ಎಮ್ಮೆ–ಎತ್ತುಗಳನ್ನು ಎತ್ತಿ ಹಾಕುವುದನ್ನು ಕೈಬಿಟ್ಟರೆ ಮಹಾರ–ಚಮ್ಮಾರರಿಗೆ

ಎಷ್ಟೊಂದು ನಷ್ಟವಾಗುತ್ತದೆ ಎಂಬ ಬಗ್ಗೆ ಕೆಲವೊಂದು ಅಂಕಿ ಅಂಶಗಳನ್ನು ನೀಡಿದ. 'ಒಂದು ಸತ್ತ ಹಸು-ಎಮ್ಮೆ ಎತ್ತನ್ನು ಒಯ್ದು ಹಲ್ಲು, ಕೋಡು, ಪಕ್ಕೆಲುಬು ಮುಂತಾದವುಗಳನ್ನು ಮಾರುವುದರಿಂದ ಒಬ್ಬ ಮಹಾರ-ಚಮ್ಮರ ಸುಮಾರು ೫೦೦ ರಿಂದ ೬೦೦ ವಾರ್ಷಿಕ ಲಾಭ ಗಳಿಸಬಹುದೆಂದು' ಆ ಲೇಖನದಲ್ಲಿ ವಾದಿಸಲಾಗಿತ್ತು. ನನ್ನ ಮಾತುಗಳನ್ನು ಕೇಳುವುದರಿಂದ ಮಹಾರ-ಚಮ್ಮಾರನಿಗೆ ಆರ್ಥಿಕ ನಷ್ಟವಾಗುತ್ತದೆಂದು, ಆ ಕಾರಣ ಅವರು ನನ್ನ ಮಾತು ಕೇಳಬಾರದೆಂದು ಅಲ್ಲಿ ವಾದ ಮಂಡಿಸಲಾಗಿತ್ತು.

ನಂತರ ನಾನು ಒಮ್ಮೆ ಸಂಗಮ ನೇರಕ್ಕೆ ಹೋಗಿದ್ದಾಗ, ಈ ಲೇಖಕನ ಭೇಟಿ ಆಯ್ತು. ಆತ ನನ್ನ ಮುಂದೆ ಅದೇ ವಾದ ಮಂಡಿಸಿದ. ಅಂದಿನ ಬಹಿರಂಗ ಸಭೆಯಲ್ಲಿ ಮಾತಾಡುವಾಗ ಈ ವಿಚಾರವನ್ನು ನಾನು ಎತ್ತಿಕೊಂಡೆ. "ಮಹಾರ-ಚಮ್ಮಾರರಿಗೆ ಊಟವಿಲ್ಲ; ಈ ಮಹಿಳೆಯರಿಗೆ ಮೈ ಮುಚ್ಚಿಕೊಳ್ಳಲು ಬಟ್ಟೆಯಿಲ್ಲ; ವಾಸಿಸಲು ಮನೆಯಿಲ್ಲ; ಉಳಲು ಭೂಮಿಯಿಲ್ಲ. ಹಾಗಾಗಿ ಅವರು ದಲಿತರಾಗಿದ್ದಾರೆ. ಅವರು ಮಹಾದುಃಖಿಗಳಾಗಿದ್ದಾರೆ. ಇದಕ್ಕೆ ಕಾರಣ ವೇನು?" ಬಹಿರಂಗ ಸಭೆಯಲ್ಲಿ ಯಾರೊಬ್ಬರೂ ನನ್ನ ಪ್ರಶ್ನೆಗೆ ಉತ್ತರಿಸಲಿಲ್ಲ. ಆಗ ನಾನು ಸಭೆಯಲ್ಲಿ ಹೇಳಿದೆ: "ನಮ್ಮ ಜನರ ಬಗ್ಗೆ ನಾನು ಯೋಚಿಸುತ್ತೇವೆ. ನಮ್ಮ ಜನರಿಗೆ ಲಾಭವಾಗುವ ಬಗ್ಗೆ ನಿವೇನೂ ಚಿಂತಿಸಬೇಕಿಲ್ಲ. ಸತ್ತ ಹಸು-ಎಮ್ಮೆ-ಎತ್ತುಗಳನ್ನು ಒಯ್ದು, ಅವುಗಳ ಹಲ್ಲು, ಮೂಳೆ, ಕೋಡುಗಳನ್ನು ಮಾರಿ ಹಣಗಳಿಸುವ ವಿಚಾರವನ್ನು ನೀವು ನಿಮ್ಮ ಜನರಿಗೆ ಹೇಳಿ. ನಿಮ್ಮ ಜಾತಿಯವರು ಭಾರತದ ಪ್ರತಿಯೊಂದು ಹಳ್ಳಿಹಳ್ಳಿಗೂ ಹೋಗಿ ನೆಲೆಸಿ, ಅಲ್ಲಿ ಸಾಯುವ ಹಸು-ಎಮ್ಮೆ-ಎತ್ತುಗಳನ್ನು ಒಯ್ದು, ಅವುಗಳ ಹಲ್ಲು, ಕೋಡು, ಎಲುಬುಗಳನ್ನು ಮಾರಿ ಹಣ ಸಂಪಾದನೆ ಮಾಡಿಕೊಂಡು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಿ. ಒಂದು ವೇಳೆ ಹೀಗೆ ಮಾಡಲು ನೀವು ಮುಂದೆ ಬಂದಿದ್ದೇ ಆದರೆ, ಪ್ರತಿಯೊಂದು ಕುಟುಂಬಕ್ಕೆ ಪ್ರತಿ ವರ್ಷ ೫೦೦ ರೂ. ಹಣವನ್ನು ನಾನೇ ಕೊಡುತ್ತೇನೆ. ಇದರಿಂದ ನಿಮಗೆ ಎರಡು ಪಟ್ಟು ಲಾಭವಾಗುತ್ತದೆ. ನಮ್ಮ ಜನರಿಗೆ ನಷ್ಟವಾದರೂ ಅಡ್ಡಿಯಿಲ್ಲ; ನಿಮಗೆ ಲಾಭವಾಗುತ್ತದಲ್ಲ? ಅದೂ ಎರಡು ಪಟ್ಟು? ಈ ಅವಕಾಶವನ್ನು ಯಾವ ಹಿಂದೂ ಸವರ್ಣೀಯರೂ ಕಳೆದುಕೊಳ್ಳಬಾರದು" ಎಂದು ನಾನು ಬಹಿರಂಗ ಸಭೆಯಲ್ಲಿ ಕರೆ ನೀಡಿದೆ. ಆದರೆ ಇದುವರೆಗೆ ಒಬ್ಬನೇ ಒಬ್ಬ ಸವರ್ಣೀಯ ಹಿಂದೂ ಕೂಡ ಸತ್ತ ಪ್ರಾಣಿಯನ್ನು ಒಯ್ದು ಹಾಕಲು ಮುಂದೆ ಬಂದಿಲ್ಲ.

ಇದೇ ರೀತಿ, ವಿಧಾನ ಸಬೆಗಳಲ್ಲಿ ನಮಗೆ ಕೆಲವೊಂದು ಸ್ಥಾನಗಳು ಸಿಕ್ಕಲೇಬೇಕು ಎಂದು ನಾನು ಹೇಳಿದಾಗ, ಬ್ರಾಹ್ಮಣ-ರಜಪೂತರು ತಾವೇನು ಮಾಡಬೇಕು ಎಂಬ ಮಾತುಗಳನ್ನು ಆಡಿದ್ದಾರೆ. ಅವರಿಗೆ ನಾನು ಹೇಳಿದ್ದೇನೆ. "ನೀವು ಮಹಾರ-ಚಮ್ಮಾರ-ಭಂಗಿಗಳು ಮಾಡುವ ಕೆಲಸಗಳಿಗೂ ಬನ್ನಿರಿ; ಆ ಕೆಲಸ ಮಾಡಿರಿ". ಆದರೆ ಇದರುವರೆಗೆ ಯಾರೊಬ್ಬರೂ ಮುಂದೆ ಬಂದಿಲ್ಲ.

ಒಟ್ಟಾರೆ ಒಂದು ಮಾತಂತೂ ಸತ್ಯ. ಅದೆಂದರೆ ಪ್ರತಿಯೊಬ್ಬರಿಗೆ ಸ್ಥಾನಮಾನ, ಆತ್ಮಗೌರವ ಸ್ವಾಭಿಮಾನಗಳು ಮುಖ್ಯ; ಇವುಗಳನ್ನು ಪಡೆಯಲಿಕ್ಕೇ ಮೊದಲ ಆದ್ಯತೆ. (ಲಾಭಕ್ಕೆ ಏನಿದ್ದರೂ ಎರಡನೇ ಸ್ಥಾನ). ಆದ್ದರಿಂದಲೇ ನಾವು ಇವುಗಳನ್ನು ಪಡೆಯಲು ಸಂಘರ್ಷದ ದಾರಿ ಹಿಡಿದಿದ್ದೇವೆ.

ಹಿಂದೂ ಧರ್ಮವನ್ನು ತೊರೆಯಬೇಕೆಂಬ ಬಗ್ಗೆ ನಾನು ಆಂದೋಲನ ಪ್ರಾರಂಭಿಸಿದ್ದು ೧೯೩೫ರಲ್ಲಿ. ಆಗ ನಾಸಿಕ ಜಿಲ್ಲೆಯ ಯೆವಲಾದಲ್ಲಿ ದೊಡ್ಡ ಸಮಾವೇಶವೊಂದು ನಡೆಯಿತು. ಅಲ್ಲೇ ನಾನು ಘೋಷಿಸಿದ್ದು: 'ಹಿಂದೂ ಆಗಿ ಹುಟ್ಟಿರುವೆ; ಆದರೂ ಹಿಂದೂ ಆಗಿ ಸಾಯುವುದಿಲ್ಲ" ಇದು ಸುಮಾರು ೨೧ ವರ್ಷಗಳ ಹಿಂದಿನ ಮಾತು. ಇಂದು ನಾನು ಅದನ್ನು ಪೂರ್ಣಗೊಳಿಸುತ್ತಿದ್ದೇನೆ. ಇಂದಿನ ಧರ್ಮಾಂತರದಿಂದ ನಾನು ತುಂಬಾ ಸಂತುಷ್ಟಗೊಂಡಿರುವೆ; ನನ್ನಲ್ಲಿ ನವೀನ ಪ್ರಫುಲ್ಲತೆ ಮೂಡಿದೆ. ನರಕದಿಂದ ಮುಕ್ತನಾದ ಭಾವನೆ ನನ್ನದಾಗಿದೆ.

ಗೌರವದ ಬದುಕು ನಡೆಸಲು ಪ್ರತಿಯೊಬ್ಬ ವ್ಯಕ್ತಿಗೂ ಹಕ್ಕಿದೆ. ಈ ಹಕ್ಕು ಪಡೆಯಲು ನಾವು ತ್ಯಾಗಕ್ಕೂ ಸಿದ್ಧ. ಬೌದ್ಧರಾಗುವುದರಿಂದ ನಾವು ಹೊಸ ಮನುಷ್ಯರಾಗುತ್ತೇವೆ. ನಾನು ಕೆಲವೊಂದು ಹಕ್ಕುಗಳನ್ನು ನಿಮ್ಮ ವರ್ಗಕ್ಕೆ ಕೊಡಿಸಿದ್ದೇನೆ. ಅವರಿಗೆ ಹೊಸ ಬದುಕು ದಕ್ಕುವಂತೆಯೂ ನೋಡಿಕೊಳ್ಳುವ ಭರವಸೆಯನ್ನು ನಾನು ಕೊಡುತ್ತೇವೆ. ನನ್ನಲ್ಲಿ ನಂಬಿಕೆ ಇಡಿ. ವಿರೋಧಿಗಳು ತಮ್ಮ ಹಿತಾಸಕ್ತಿ ನೋಡಿಕೊಳ್ಳುತ್ತಿದ್ದಾರೆ; ಅವರ ಪ್ರಚಾರಕ್ಕೆ ಕಿವಿಗೊಡಬೇಡಿ.

ಇಂದು ನಾವಿಲ್ಲಿ ನಡೆಸುತ್ತಿರುವ ಮಹಾಸಮಾವೇಶಕ್ಕೆ ಸಂಬಂಧಿಸಿದಂತೆ ಹಲವಾರು ಕಡೆ ಚರ್ಚೆಗಳು ನಡೆಯುತ್ತಿವೆ. ಆದರೆ ಇದುವರೆಗೂ ಯಾರೊಬ್ಬರೂ ನನ್ನನ್ನು "ನೀವು ಬೌದ್ಧ ಧರ್ಮ ಸ್ವೀಕರಿಸಿದ್ದೇಕೆ? ಬೌದ್ಧ ಧರ್ಮವನ್ನೇ ಆಯ್ಕೆ ಮಾಡಿಕೊಂಡಿದ್ದೇಕೆ"? ಎಂದು ಕೇಳಿಲ್ಲ. ಧರ್ಮಾಂತರ ಎಂಬ ಆಂದೋಲನದಲ್ಲಿ ಇಂಥವು ಪ್ರಮುಖ ಪ್ರಶ್ನೆಗಳಾಗುತ್ತವೆ. ಯಾವ ಧರ್ಮವನ್ನು ಯಾಕಾಗಿ ನಾವು ಆಯ್ಕೆ ಮಾಡಿಕೊಳ್ಳಬೇಕೆಂಬ ಬಗ್ಗೆ ನಮಗೆ ಸ್ಪಷ್ಟತೆ ಇರಬೇಕಾಗುತ್ತದೆ. ಹಿಂದೂ ಧರ್ಮವನ್ನು ತೊರೆಯಬೇಕೆಂಬ ಬಗ್ಗೆ ನಾನು ಆಂದೋಲನ ಪ್ರಾರಂಭಿಸಿದ್ದು ೧೯೩೫ರಲ್ಲಿ. ಆಗ ನಾಸಿಕ ಜಿಲ್ಲೆಯ ಯೆವಲಾದಲ್ಲಿ ದೊಡ್ಡ ಸಮಾವೇಶವೊಂದು ನಡೆಯಿತು. ಅಲ್ಲೇ ನಾನು ಘೋಷಿಸಿದ್ದು: 'ಹಿಂದೂ ಆಗಿ ಹುಟ್ಟಿರುವೆ; ಆದರೂ ಹಿಂದೂ ಆಗಿ ಸಾಯುವುದಿಲ್ಲ" ಇದು ಸುಮಾರು ೨೧ ವರ್ಷಗಳ ಹಿಂದಿನ ಮಾತು. ಇಂದು ನಾನು ಅದನ್ನು ಪೂರ್ಣಗೊಳಿಸುತ್ತಿದ್ದೇನೆ. ಇಂದಿನ ಧರ್ಮಾಂತರದಿಂದ ನಾನು ತುಂಬಾ ಸಂತುಷ್ಟಗೊಂಡಿರುವೆ; ನನ್ನಲ್ಲಿ ನವೀನ ಪ್ರಫುಲ್ಲತೆ ಮೂಡಿದೆ. ನರಕದಿಂದ ಮುಕ್ತನಾದ ಭಾವನೆ ನನ್ನದಾಗಿದೆ. ನನ್ನನ್ನು ಯಾರೇ ಆಗಲಿ ಕುರುಡಾಗಿ ಅನುಸರಿಸುವುದು ಬೇಕಿಲ್ಲ; ಬೌದ್ಧ ಧರ್ಮ ಸ್ವೀಕರಿಸುವುದಾದರೆ ಸಾರಾಸಾರ ವಿಚಾರ ಮಾಡಿ ಸ್ವೀಕರಿಸುವುದು ಒಳಿತು; ಏಕೆಂದರೆ ಬಂದವರು ಸ್ಥಿರವಾಗಿ ಈ ಧರ್ಮದಲ್ಲಿ ಉಳಿಯುವುದೂ ಅಷ್ಟೇ ಮುಖ್ಯ.

ಮನುಷ್ಯನ ಉನ್ನತಿಗೆ ಧರ್ಮ ಅವಶ್ಯಕ. "ಧರ್ಮದಲ್ಲಿ ಏನು ಇಲ್ಲ; ಧರ್ಮಕ್ಕೆ ಯಾವ ಮಹತ್ವವೂ ಇಲ್ಲ" ಎಂಬುದು ಕಾರ್ಲ್‌ಮಾರ್ಕ್ಸ್ ಪ್ರಣೀತ ಸಿದ್ಧಾಂತ. ಇದನ್ನು ನಾನು ಬಲ್ಲೆ. ಅವರ ಪ್ರಕಾರ ಮನುಷ್ಯನಿಗೆ ಬೆಳಿಗ್ಗೆ ಬೆಣ್ಣೆ ಹಚ್ಚಿದ ಟೋಸ್ಟ್, ಮಧ್ಯಾಹ್ನ ಊಟ, ಮಲಗಲು ಒಳ್ಳೇ ಹಾಸಿಗೆ-ಮಂಚ, ನೋಡಲು ಸಿನೆಮಾ, ರಾತ್ರಿ ಊಟ, ಇವಿಷ್ಟೇ ಅವಶ್ಯಕತೆಗಳು. ಈ ಸಿದ್ಧಾಂತ ನನಗೆ ಒಪ್ಪಿಗೆಯಿಲ್ಲ. ಬಡತನವನ್ನು ನಾನು ಅನುಭವಿಸಿ ಬಲ್ಲೆ. ಆರ್ಥಿಕ ಸ್ವಾವಲಂಬನೆ ಅತ್ಯಗತ್ಯ ಎಂಬುದನ್ನು ನಾನು ಒಪ್ಪುವೆ; ಆದರೆ ಮನುಷ್ಯನ ಬದುಕು ಕೇವಲ ಆರ್ಥಿಕ ಅವಶ್ಯಕತೆಗಳ ಪೂರೈಕೆಯಿಂದ ಪರಿಪೂರ್ಣವಾಗುವುದಿಲ್ಲ ಎಂಬುದೂ ನನ್ನ ಬಲವಾದ ನಂಬಿಕೆ.

ಪಶು ಮತ್ತು ಮನುಷ್ಯರಲ್ಲಿ ಅಂತರವಿದೆ. ಮೇವು ಸಿಕ್ಕು ಬಿಟ್ಟರೆ ಪಶುಗಳಿಗೆ ಇನ್ನೇನೂ ಬೇಕಾಗಿಲ್ಲ. ಆದರೆ ಮನುಷ್ಯನಿಗೆ ಹಾಗಲ್ಲ; ಊಟ ಸಿಕ್ಕ ಬಳಿಕವೂ ಅವನ ಬದುಕು ಪರಿಪೂರ್ಣವಾಗದು; ಏಕೆಂದರೆ ಮನುಷ್ಯನಿಗೆ ಮನಸ್ಸು ಎಂಬುದೊಂದಿದೆ. ಮನಸಿನ ವಿಕಾಸವಾಗಬೇಕಾದುದೂ ಅತ್ಯವಶ್ಯ. ಮನುಷ್ಯನನ್ನು ಪಸುಗಳ ಮಟ್ಟಕ್ಕೆ ಇಳಿಸುವ ಸಿದ್ಧಾಂತವನ್ನು ಒಪ್ಪಿಕೊಳ್ಳುವ ದೇಶಗಳಿಂದ ನಾವು ಕಲಿಯಬೇಕಾದೇನೂ ಇಲ್ಲ. ಶರೀರ ನಿರೋಗಿಯಾಗಿರಬೇಕು ಎಂದು ಇಷ್ಟಪಡುವ ಹಾಗೆಯೇ ಶರೀರವನ್ನು ಸಧೃಡವಾಗಿಡಲು ಮನುಸು ಸುಸಂಸ್ಕೃತವಾಗಿ ಇರಬೇಕು ಎಂಬುದೂ ಅಪೇಕ್ಷಣೀಯ. ಶಾರೀರಕ ಮತ್ತು ಮಾನಸಿಕ ಎರಡೂ ಸ್ತರಗಳಲ್ಲಿ ಉನ್ನತಿ ಸಾಧಿಸುವುದೇ ಮನುಷ್ಯನ ಧ್ಯೇಯ.

ಶರೀರಕ್ಕೆ ರೋಗ ಬಂದಾಗ ಮನಸ್ಸು ಪ್ರಫುಲ್ಲವಾಗಿರಲು ಸಾಧ್ಯವಿಲ್ಲ. ಪ್ರಫುಲ್ಲತೆ ಬಾರದೇ ಉನ್ನತಿ ಸಾಧ್ಯವಿಲ್ಲ. ಉತ್ಸಾಹ ನಿರ್ಮಾಣವಾಗಬೇಕೆಂದರೆ ಪ್ರಫುಲ್ಲತೆ ಇರಲೇ ಬೇಕು. ಚಮ್ಮಾರನ ಮಗ ಪ್ರಥಮ ದರ್ಜೆಯಲ್ಲಿ ಬರಬೇಕೇಕೆ? ಎಂಬ ಪ್ರಶ್ನೆಯನ್ನು ಹಾಕುವ ಉಪಾಧ್ಯಾಯ ಇರುವಾಗ ಚಮ್ಮಾರ ಮಕ್ಕಳಲ್ಲಿ ಅಭ್ಯಾಸ ಮಾಡಬೇಕುಂಬುತ್ಸಾಹ ಮೂಡುವುದಾದರೂ ಹೇಗೆ?

ಒಟ್ಟಾರೆ, ಶರೀರ ಹಾಗೂ ಮನಸ್ಸು ಎರಡೂ ಸದೃಢವಾಗಲೇ ಧೈರ್ಯ ಬರಲು ಸಾಧ್ಯ; ಹೊಸತನ್ನು ಸಾಧಿಸಲು ಸಾಧ್ಯ. ಇಂಥವರು ಎಂಥ ಆಪತ್ತುಗಳನ್ನಾದರೂ ಎದುರಿಸಲಬಲ್ಲರು.

ಮನಸ್ಸು ಪ್ರಫುಲ್ಲಗೊಂಡಾಗ ಮಾತ್ರ ಮನುಷ್ಯನ ಉತ್ಸಾಹ ಮೂಡಲು ಸಾಧ್ಯ. ನಾನು ಘೋರ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿ ಶಿಕ್ಷಣವನ್ನು ಪಡೆದೆ. ಶಾಲೆಯಲ್ಲಿ ನನಗೆ ಕುಡಿಯಲು ನೀರನ್ನೂ ಕೊಡುತ್ತಿರಲಿಲ್ಲ. ಮುಂಬಯಿ ನಗರದ ಎಲ್ಫಿನ್‌ಸ್ಟನ್ ಕಾಲೇಜಿನಲ್ಲೂ ನಾನು ಇಂಥದೇ ಪರಿಸ್ಥಿತಿ ಎದುರಿಸಿದೆ. ಆದಾಗ್ಯೂ ಮನಸ್ಸನ್ನು ವಿಕಾಸಗೊಳಿಸಿಕೊಳ್ಳುವ ಧ್ಯೇಯ ಹೊಂದಿ ನಾನು ಆಂದೋಲನವನ್ನು ನಡೆಸಿಕೊಂಡು ಬರುತ್ತಿದ್ದೇನೆ.

ಈ ದೇಶದಲ್ಲಿ ಶತಮಾನಗಳಿಂದಲೂ, ನಿರುತ್ಸಾಹ ಮೂಡಿಸುವ ವಾತಾವರಣೇ ಇದೆ. ನಾವು ಅನ್ಯಾಯ ಮತ್ತು ಅಸಮಾನತೆ ಆಧಾರಿತವಾದ ಹಿಂದೂ (ಬ್ರಾಹ್ಮಣ) ಧರ್ಮದಲ್ಲಿರುವವರೆಗೆ ನಮ್ಮಲ್ಲಿ ಉತ್ಸಾಹ ಮೂಡಲು ಸಾಧ್ಯವಿಲ್ಲ. ಮನುಸ್ಮೃತಿಯಲ್ಲಿನ ಚಾತುರ್ವರ್ಣ ವ್ಯವಸ್ಥೆಯು ಮನುಷ್ಯನ ಉನ್ನತಿಗೆ ಮಹಾಘಾತುಕವಾದುದು. ಇದರ ಪ್ರಕಾರ ಶೂದ್ರ ಜೀವನವಿಡೀ ಸೇವೆ ಮಾಡಿಕೊಂಡಿರಬೇಕು. ಇವರಿಗೆ ಶಿಕ್ಷಣಾವಕಾಶವಿಲ್ಲ. ಶೂದ್ರರು ಗುಲಾಮ

ರಾಗಿರುವುದರಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಅನುಕೂಲವಿದೆ; ಲಾಭವಿದೆ. ಶೂದ್ರರ ಬಳಿ ಗುಲಾಮಗಿರಿಯ ಹೊರತು ಇನ್ನೇನಿದೆ. ಚಾತುರ್ವರ್ಣ ಪದ್ಧತಿ ಕೇವಲ ರೂಢಿಯಾಗಿಲ್ಲ; ಬದಲಾಗಿ ಅದುವೇ ಧರ್ಮವಾಗಿ ಬಿಟ್ಟಿದೆ.

ಹಿಂದೂ ಧರ್ಮದಲ್ಲಿ ಸಮಾನತೆ ಎಂಬುದೇ ಇಲ್ಲ. "ನೀವು ನಂಬುವ ಚಾತುರ್ವರ್ಣ ವ್ಯವಸ್ಥೆ ಯಾವುದು? ಅದು ಹೇಗಿದೆ? ಅದರ ಆದಿ ಮತ್ತು ಅಂತ್ಯ ಎಲ್ಲಿ? ಅದು ಸಹಜವಾಗಿದೆಯೇ ಅಥವಾ ಒಂದರ ಮೇಲೊಂದಿದೆ? ಎಂಬ ನನ್ನ ಪ್ರಶ್ನೆಗಳಿಗೆ ಗಾಂಧಿ ಬಳಿ ಉತ್ತರವಿಲ್ಲ ನಮ್ಮನ್ನು ಗುಲಾಮರನ್ನಾಗಿಸಿದ ಜನರ ಧರ್ಮವೇ ಅನ್ಯಾಯದ್ದು. ಹಿಂದೂ ಧರ್ಮದಿಂದ ಯಾರ ಅಭ್ಯುದಯವೂ ಸಾಧ್ಯವಿಲ್ಲ. ಇದೊಂದು ಪಾಪಮಯಿ ಧರ್ಮ. ಇದರಲ್ಲಿ ಯಾವ ಜೀವವೂ ಉಳಿದಿಲ್ಲ.

ನಮ್ಮ ದೇಶ ಎಷ್ಟೊಂದು ಬಾರಿ ಗುಲಾಮಗಿರಿಯಲ್ಲಿ ಸಿಲುಕಿಕೊಂಡಿತು. ನನ್ನ ಜನರಿಗೆ ಯುದ್ಧ ಮಾಡುವ ಅಧಿಕಾರ ಇದ್ದಿದ್ದರೆ, ಈ ಮಹಾನ್ ರಾಷ್ಟ್ರ ಎಂದೂ ಗುಲಾಮಗಿರಿಗೆ ಸಿಲುಕುತ್ತಿರಲಿಲ್ಲ; ಯಾರೂ ಈ ದೇಶದ ಮೇಲೆ ಆಕ್ರಮಣ ಮಾಡುವ ಧೈರ್ಯ ತೋರುತ್ತಿರಲಿಲ್ಲ.

ಹಿಂದೂ ಧರ್ಮ ಮನಸ್ಸುಗಳನ್ನೇ ಮಲಿನಗೊಳಿಸಿದೆ. ಬ್ರಾಹ್ಮಣ ಹೆಂಗಸೊಬ್ಬಳು ಗರ್ಭ ಧರಿಸುತ್ತಲೇ ಆ ಮಗುವಿಗೆ ಯಾವುದಾದರೂ ಉನ್ನತ ಸ್ಥಳದಲ್ಲಿ ಅವಕಾಶ ಕಲ್ಪಿಸುವ ಬಗ್ಗೆ ಚಿಂತಿಸಲಾಗುತ್ತದೆ" ಅದೇ ನಮ್ಮ ಹೆಂಗಸೊಬ್ಬಳು ಗರ್ಭ ಧರಿಸಿದಾಗ, ಆ ಮಗುವಿಗೆ ಎಲ್ಲಾದರೂ ಕಸ ಗುಡಿಸುವ ಕೆಲಸ, ಜೀತದ ಕೆಲಸ ಸಿಗುತ್ತದೆಯೇ ಎಂಬ ಚಿಂತೆಯನ್ನು ಮಾಡಲಾಗುತ್ತದೆ. ಹಿಂದೂ ಧರ್ಮವು ಬ್ರಾಹ್ಮಣ ಹಾಗೂ ನಿಮ್ಮ ವರ್ಗದ ಜನರ ಮನಸ್ಸನ್ನು ಇಷ್ಟೊಂದು ಸಂಕುಚಿತಗೊಳಿಸಿಬಿಟ್ಟಿದೆ. ಇಂಥ ಧರ್ಮದಲ್ಲಿ ಉಳಿದಲ್ಲಿ ನಮ್ಮ ಉನ್ನತಿ ಸಾಧ್ಯವೇ ಇಲ್ಲ. ನಮ್ಮ ಉನ್ನತಿಗೆ ಸೂಕ್ತವಾದ ಧರ್ಮವೆಂದರೆ ಬೌದ್ಧ ಧರ್ಮವೇ.

ಬೌದ್ಧ ಧರ್ಮವನ್ನು ಬ್ರಾಹ್ಮಣರೂ ಸ್ವೀಕರಿಸಿದ್ದಾರೆ; ಶೂದ್ರರೂ ಸ್ವೀಕರಿಸಿದ್ದಾರೆ. ಇಂಥ ಎಲ್ಲಾ ಭಿಕ್ಷುಗಳನ್ನು ಉದ್ದೇಶಿಸಿ ಬುದ್ಧ ಹೇಳಿದ್ದೇನೆಂದರೆ, "ಹೇ ಭಿಕ್ಷುಗಳೇ, ನೀವುಗಳು ಅನೇಕ ದೇಶಗಳಿಂದ ಹಾಗೂ ಜಾತಿಗಳಿಂದ ಬಂದವರು; ನೀವೆಲ್ಲಾ ನದಿಗಳಂತೆ. ನದಿಗಳು ಸಾಗರವನ್ನು ಸೇರಿದಾಗ ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಕಳೆದುಕೊಳ್ಳುವ ಹಾಗೆ, ನೀವು ಬೌದ್ಧ ಸಂಘವೆಂಬ ಸಾಗರವನ್ನು ಸೇರಿದ ಬಳಿಕ, ನಿಮ್ಮ ಹಳೆಯ ಅಸ್ತಿತ್ವವನ್ನು ಕಳೆದುಕೊಂಡಿರುತ್ತೀರಿ. ಈ ಸಂಘದಲ್ಲಿ ಎಲ್ಲರೂ ಸಮಾನರು; ಸಮುದ್ರದ ನೀರಿನಲ್ಲಿ ಯಾವುದು ಗಂಗೆ ಯಾವುದು ಯಮುನೆ ಎಂದು ಹೇಳಲಾಗದಷ್ಟೇ".

ಧರ್ಮಾಂತರ ಮಾಡಲು ಇನ್ನೊಂದು ಸಮಯವನ್ನು ನೀವು ಯಾಕೆ ತೆಗೆದುಕೊಂಡಿರಿ ಎಂದು ಕೆಲವರು ನನ್ನನ್ನು ಪ್ರಶ್ನಿಸಿದ್ದಾರೆ. ಇದೂ ಕೂಡ ಮಹತ್ವಪೂರ್ಣ ಪ್ರಶ್ನೆ. ಧರ್ಮದ ತತ್ವಗಳನ್ನು ಇನ್ನೊಬ್ಬರಿಗೆ ಮನದಟ್ಟು ಮಾಡಿಕೊಡುವುದು ಸುಲಭವಾದ ಕಾರ್ಯವಲ್ಲ. ಅದಾಗ್ಯೂ ನಾನು ಈ ಜವಾಬ್ದಾರಿಯನ್ನು ವಹಿಸಿಕೊಂಡಿದ್ದೇನೆ. ನಾನು ಇನ್ನೂ ಕೆಲವರ್ಷ ಜೀವಿಸಿದ್ದಲ್ಲಿ, ಈ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುತ್ತೇನೆ.

(ಬಾಬಾ ಸಾಹೇಬ್ ಅಂಬೇಡ್ಕರ್ ಜಿಂದಾಬಾದ್ ಎಂಬ ಘೋಷಣೆಗಳು ಕೇಳಿ ಬರುತ್ತವೆ)

ಉಳ್ಳವರಿಗೆ ಧರ್ಮದ ಅವಶ್ಯಕತೆಯಿಲ್ಲ. ದುಃಖಿತರಿಗೆ, ಪೀಡಿತರಿಗೆ ಧರ್ಮ ಬೇಕು. ಏಕೆಂದರೆ ಧರ್ಮದಿಂದ ಮನುಷ್ಯನಲ್ಲಿ ಆಶಾಭಾವನೆ ಮೊಳಕೆಯೊಡೆಯುತ್ತದೆ. "ಭಯ ಪಡಬೇಡಿ; ನಿರಾಶರಾಗಬೇಡಿ; ನಿಮ್ಮ ಬದುಕೂ ಕೂಡ ಸುಖಮಯವಾಗಲಿದೆ" ಎಂಬ ಆಶಾಭಾವನೆಯನ್ನು ಮನುಷ್ಯನು ಬೆಳೆಸಿಕೊಳ್ಳುವುದು ಧರ್ಮವನ್ನು ಆಶ್ರಯಿಸಿದಾಗಲೇ. ಕೆಲವರು, "ಅಸ್ಪೃಶ್ಯರು ಬೌದ್ಧರಾದರೆ ಏನಾಗುತ್ತದೆ? ಅವರು ಅಸ್ಪೃಶ್ಯರೆ ತಾನೇ?" ಎಂಬ ಪ್ರಶ್ನೆ ಎತ್ತಿದ್ದಾರೆ. ಇದು ಅತ್ಯಂತ ಧೂರ್ತ ಹಾಗೂ ಧಾರ್ಷ್ಟ್ಯದ ಪ್ರಶ್ನೆ. ಸ್ವಹಿತಾಸಕ್ತಿ ಶಕ್ತಿಗಳು ಮಾತ್ರ ಇಂಥ ಪ್ರಶ್ನೆ ಹಾಕಲು ಸಾಧ್ಯ.

ಯುರೋಪಿನಲ್ಲಿ ಕ್ರೈಸ್ತ ಧರ್ಮ ಪ್ರಸಾರವಾಗಲಾರಂಭಿಸಿದಾಗ, ರೋಂ ಸುತ್ತಮುತ್ತಲ ದೇಶಗಳಲ್ಲಿ ತೀವ್ರ ಆರ್ಥಿಕ ಅಭದ್ರತೆಯಿತ್ತು. ಅಲ್ಲಿ ಜನ ಊಟಕ್ಕೂ ಪರದಾಡುತ್ತಿದ್ದರು. ಆಗ ಆ ಧರ್ಮವನ್ನು ಬಹುಜನ ದುಃಖಿತರು ಸೇರಿದಾಗ, ಗಿಬನ್ ಎಂಬಾತ, ಕ್ರೈಸ್ತ ಧರ್ಮವೊಂದು ಭಿಕಾರಿಗಳ ಧರ್ಮ ಎಂದು ವ್ಯಂಗ್ಯವಾಡಿದ್ದ. ಆದರೆ

ಮುಸಲ್ಮಾನರ ಆಕ್ರಮಣದಿಂದಾಗಿ ಬೌದ್ಧ ಧರ್ಮ ನಾಶಹೊಂದಿತು. ಆಕ್ರಮಣ ಕಾಲದಲ್ಲಿ ಸಹಸ್ರಾರು ಮೂರ್ತಿಗಳು ಪುಡಿ ಪುಡಿಯಾದವು. ಭಿಕ್ಷುಗಳು ಕೊಲೆಯಾದರು. ಭಯಭೀತರಾದ ಭಿಕ್ಷುಗಳು ಟಿಬೆಟ್, ಚೀನಾ ಮುಂತಾದ ಅನ್ಯ ದೇಶಗಳಿಗೆ ಪಲಾಯನಗೈದರು. ಪರಿಣಾಮವಾಗಿ ಇಲ್ಲಿ ಭಿಕ್ಷುಗಳ ಕೊರತೆ ಉಂಟಾಯಿತು. ಆಗ ವಾಯುವ್ಯ ಪ್ರಾಂತದಲ್ಲಿ ಚಕ್ರವರ್ತಿಯಾಗಿದ್ದ ಮಿನಾಂಡರ್ (ಮಿಲಿಂದ್) ದೊರೆಗೆ ಧರ್ಮ ಜಿಜ್ಞಾಸೆಯಲ್ಲಿ ವಿಪರೀತ ಆಸಕ್ತಿ ಇತ್ತು. ಅವನು ಹಿಂದೂ ಧರ್ಮಶಾಸ್ತ್ರಜ್ಞರ ಜೊತೆ ಹಲವರು ಬಾರಿ ಚರ್ಚೆ ನಡೆಸಿ, ಅವರನ್ನು ಸೋಲಿಸಿದ್ದ. ಹಲವರನ್ನು ನಿರುತ್ತರರನ್ನಾಗಿಸಿದ್ದ. ಈ ದೊರೆ ಬೌದ್ಧ ಧರ್ಮಶಾಸ್ತ್ರಜ್ಞರೊಂದಿಗೆ ಚರ್ಚೆ ನಡೆಸಬಯಸಿದ. ಸ್ಥಳೀಯ ಬೌದ್ಧ ಧರ್ಮೀಯರು, ಮಹಾ ಬೌದ್ಧ ಶಾಸ್ತ್ರಜ್ಞ, ಭಿಕ್ಷು ನಾಗಸೇನ ಅವರನ್ನು ಭೇಟಿಯಾಗಿ, ದೊರೆ ಮಿನಾಂಡರ್ ಮತ್ತು ಭಿಕ್ಷು ನಾಗಸೇನರ ನಡುವೆ ಚರ್ಚೆ ನಡೆಯಿತು.

ಇಂದು ಆ ಧರ್ಮ ಇಡೀ ಯುರೋಪಿನ ಧರ್ಮವಾಗಿದೆ. ಗಿಬನ್ ಇಂದು ಬದುಕಿದ್ದರೆ, ಆತನ ವ್ಯಂಗ್ಯವೇ ಆತನಿಗೆ ಮುಖಕ್ಕೆ ರಾಚುತ್ತಿತ್ತು.

ಬೌದ್ಧ ಧರ್ಮವು ಭಂಗಿ-ಚಮ್ಮಾರರದ್ದು ಎಂದು ಕೆಲವರು ಕುಹಕ ಮಾಡಬಹುದು; ಆದರೆ ಸತ್ಯವೇನು? ಇಂದು ವಿದೇಶಗಳಲ್ಲೂ ಅತಿಪ್ರಸಿದ್ಧ ಪೂಜನೀಯ ಬುದ್ಧ, ರಾಮ-ಕೃಷ್ಣರಲ್ಲ; ರಾಮ-ಕೃಷ್ಣರ ಮೂರ್ತಿಗಳಿಗೆ ಒಬ್ಬರೂ ಆಕರ್ಷಿತರಾಗುವುದಿಲ್ಲ; ಅಲ್ಲಿ ಅದೇ ಬುದ್ಧನ ಮೂರ್ತಿಗಳಿಗೆ ಮನಸೋಲುವವರು ಅಸಂಖ್ಯ

ನಾವು ಈಗ ನಮ್ಮ ಮಾರ್ಗವನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಇದು ನಮಗೆ ಶ್ರೇಷ್ಠ ಮಾರ್ಗ. ಇದು ನಮ್ಮಲ್ಲಿ ಆಶಾಭಾವನೆಯನ್ನು ಚಿಗುರಿಸಿದೆ. ಈ ಧರ್ಮವನ್ನು ನಾವು ಎಲ್ಲಿಂದಲೋ ತಂದಿಲ್ಲ. ಇದು ಇಲ್ಲಿನದೇ. ಈ ದೇಶದಲ್ಲಿ ೨೦೦೦ ವರ್ಷಕ್ಕಿಂತ ಮುಂಚೆ ಬೌದ್ಧ ಧರ್ಮ ಇತ್ತು. ಮೊದಲೇ ಈ ಮಾರ್ಗದತ್ತ ಒಲಿಯದಿರುವ ಬಗ್ಗೆ ನಮಗೆ ಈಗ ದುಃಖವೆನಿಸುತ್ತಿದೆ. ಇದು ಸ್ಥಾವರ ಧರ್ಮವಲ್ಲ. ಸಮಯಾನುಸಾರ ಪರಿವರ್ತನೆಗೆ ಒಳಪಡಬಲ್ಲ ಅಂತಃಶಕ್ತಿ ಈ ಧರ್ಮಕ್ಕಿದೆ. ಇದನ್ನು ಬುದ್ಧನೇ ಸಾರಿದ್ದಾನೆ. ಇದರಷ್ಟು ಉದಾರ ಧರ್ಮ ವಿಶ್ವದಲ್ಲಿ ಇನ್ನೊಂದಿಲ್ಲ.

ಮುಸಲ್ಮಾನರ ಆಕ್ರಮಣದಿಂದಾಗಿ ಬೌದ್ಧ ಧರ್ಮ ನಾಶಹೊಂದಿತು. ಆಕ್ರಮಣ ಕಾಲದಲ್ಲಿ ಸಹಸ್ರಾರು ಮೂರ್ತಿಗಳು ಪುಡಿ ಪುಡಿಯಾದವು. ಭಿಕ್ಷುಗಳು ಕೊಲೆಯಾದರು. ಭಯಭೀತರಾದ ಭಿಕ್ಷುಗಳು ಟಿಬೆಟ್, ಚೀನಾ ಮುಂತಾದ ಅನ್ಯ ದೇಶಗಳಿಗೆ ಪಲಾಯನಗೈದರು. ಪರಿಣಾಮವಾಗಿ ಇಲ್ಲಿ ಭಿಕ್ಷುಗಳ ಕೊರತೆ ಉಂಟಾಯಿತು. ಆಗ ವಾಯುವ್ಯ ಪ್ರಾಂತದಲ್ಲಿ ಚಕ್ರವರ್ತಿಯಾಗಿದ್ದ ಮಿನಾಂಡರ್ (ಮಿಲಿಂದ್) ದೊರೆಗೆ ಧರ್ಮ ಜಿಜ್ಞಾಸೆಯಲ್ಲಿ ವಿಪರೀತ ಆಸಕ್ತಿ ಇತ್ತು. ಅವನು ಹಿಂದೂ ಧರ್ಮಶಾಸ್ತ್ರಜ್ಞರ ಜೊತೆ ಹಲವರು ಬಾರಿ ಚರ್ಚೆ ನಡೆಸಿ, ಅವರನ್ನು ಸೋಲಿಸಿದ್ದ. ಹಲವರನ್ನು ನಿರುತ್ತರರನ್ನಾಗಿಸಿದ್ದ. ಈ ದೊರೆ ಬೌದ್ಧ ಧರ್ಮಶಾಸ್ತ್ರಜ್ಞರೊಂದಿಗೆ ಚರ್ಚೆ ನಡೆಸಬಯಸಿದ. ಸ್ಥಳೀಯ ಬೌದ್ಧ ಧರ್ಮೀಯರು, ಮಹಾ ಬೌದ್ಧ ಶಾಸ್ತ್ರಜ್ಞ ಭಿಕ್ಷು ನಾಗಸೇನ ಅವರನ್ನು ಭೇಟಿಯಾಗಿ, ದೊರೆ ಮಿನಾಂಡರ್ ಮತ್ತು ಭಿಕ್ಷು ನಾಗಸೇನರ ನಡುವೆ ಚರ್ಚೆ ನಡೆಯಿತು. ಆ ಸಂದರ್ಭದಲ್ಲಿ ಮಿನಾಂಡರ್ ಕೇಳಿದ ಪ್ರಶ್ನೆ "ಧರ್ಮವೊಂದು ನಶಿಸುವುದು ಏಕೆ"? ಇದಕ್ಕೆ ಭಿಕ್ಷು ನಾಗಸೇನ ಉತ್ತರಿಸಿದ್ದು: "ಧರ್ಮವೊಂದು ನಶಿಸುವುದಕ್ಕೆ ಮೂರು ಮುಖ್ಯ ಕಾರಣಗಳಿವೆ. ಒಂದನೇ ಕಾರಣ, ಮೂಲಾಶಯ ಗಟ್ಟಿಯಿಲ್ಲದ ಧರ್ಮ ಚಿರಕಾಲ ಉಳಿಯದು; ಅದಕ್ಕೆ ಕಾಲಧರ್ಮ ಎಂದು ಮಾತ್ರ ಹೇಳಬಹುದು. ಅದು ಕಾಲ ಕಳೆದಂತೆ ಕರಗಿ ಹೋಗುತ್ತದೆ. ಎರಡನೇ ಕಾರಣ, ಧರ್ಮವೊಂದನ್ನು ಪ್ರಸಾರ ಮಾಡುವ ಜ್ಞಾನಿಗಳ ಕೊರತೆ ತಲೆದೋರಿದಾಗ ಅದು ಮರೆಯಾಗುತ್ತದೆ. ಜಿಜ್ಞಾಸೆಗಳು ಧರ್ಮ ಜ್ಞಾನ ನಡೆಸುತ್ತಿರಬೇಕು; ವಿರೋಧಿಗಳ ವಾದಕ್ಕೆ ಉತ್ತರವನ್ನು ನಿಡುತ್ತಿರಬೇಕು.

ಮೂರನೇ ಕಾರಣ, ಧರ್ಮಜಿಜ್ಞಾಸೆ ಜ್ಞಾನಿಗಳಿಗೆ ಪ್ರಿಯವಾಗಬಹುದು; ಆದರೆ ಸಾಮಾನ್ಯರಿಗೆ ಆ ಧರ್ಮದ ತತ್ವಗಳಿಂದ ಆತ್ಮಗೌರವ, ಪ್ರಫುಲ್ಲತೆ ಹಾಗೂ ಉತ್ಸಾಹಗಳು ದೊರಕದೇ ಹೋದರೆ, ಅಂಥ ಧರ್ಮ ಬಹುಕಾಲ ಉಳಿಯದು".

ಈ ಕಾಲಕ್ಕೆ ಮಾತ್ರ ಬೌದ್ಧ ಧರ್ಮವನ್ನು ಆಶ್ರಯಿಸ

ಬೇಡಿ. ೨೫೦೦ ವರ್ಷಗಳ ಬಳಿಕವೂ ಬೌದ್ಧ ಧರ್ಮದ ತತ್ವಗಳನ್ನು ವಿಶ್ವಾದ್ಯಂತ ಮನ್ನಿಸಲಾಗುತ್ತಿದೆ ಎಂಬುದನ್ನು ಮರೆಯಬೇಡಿ.

ಅಮೇರಿಕಾದಲ್ಲಿ ಬೌದ್ಧ ಧರ್ಮಾನುಯಾಯಿಗಳು ಸುಮಾರು ೨೦೦೦ ಸಂಸ್ಥೆಗಳನ್ನು ಮಾಡಿಕೊಂಡಿದ್ದಾರೆ. ಲಕ್ಷಾಂತರ ರೂ. ವೆಚ್ಚದಲ್ಲಿ ವಿಹಾರಗಳನ್ನು ಅಲ್ಲಿ ಕಟ್ಟಿಸಲಾಗಿದೆ. ಜರ್ಮನಿಯಲ್ಲಿ ೩-೪ ಸಾವಿರ ಬೌದ್ಧ ಸಂಸ್ಥೆಗಳಿವೆ. ಬುದ್ಧನ ಬೋಧನೆ ಅಜರಾಮರ. ಆದಾಗ್ಯೂ ಬುದ್ಧನು ತನ್ನ ತತ್ವಗಳು ಚಿರಕಾಲ ಎಂದು ಪ್ರತಿಪಾದಿಸಲಿಲ್ಲ. ತನ್ನ ಧರ್ಮ ಈಶ್ವರನ ಕೊಡುಗೆ ಎಂದು ಬುದ್ಧ ಹೇಳಿಲ್ಲ. "ನಾನು ಸಾಮಾನ್ಯ. ನನಗೆ ಸರಿ ತೋರಿದ್ದನ್ನು ನಾನು ಬೋಧಿಸಿರುವೆ. ನಿಮಗೆ ಒಪ್ಪಿಗೆಯಾಗುವುದನ್ನು ನೀವು ಸ್ವೀಕರಸಿ" ಎಂದು ಮಾತ್ರ ಬುದ್ಧ ಹೇಳಿದ್ದಾನೆ. ಈ ಔದಾರ್ಯ ಇನ್ನಾವ ಧರ್ಮದಲ್ಲೂ ನಮಗೆ ಕಾಣದು.

ಬೌದ್ಧ ಧರ್ಮ ಮತ್ತು ಇತರ ಧರ್ಮಗಳ ನಡುವೆ ಅಪಾರ ಅಂತರವಿದೆ. ಇತರ ಧರ್ಮಗಳು ಮನುಷ್ಯ ಮತ್ತು ಈಶ್ವರನ ನಡುವಣ ಸಂಬಂಧಕ್ಕೆ ಹೆಚ್ಚು ಒತ್ತನ್ನು ಕೊಡುತ್ತವೆ. ಬೌದ್ಧ ಧರ್ಮ ಹೊಂದಿರುವಂಥ ಮೂಲಾಶಯವನ್ನು ಇತರ ಯಾವ ಧರ್ಮಗಳೂ ಹೊಂದಿಲ್ಲ. "ವಿಶ್ವವು ದೇವರಿಂದ ನಿರ್ಮಿತವಾಯಿತು; ಆಕಾಶ, ವಾಯು, ಚಂದ್ರ, ಸೂರ್ಯ ಮತ್ತು ಎಲ್ಲವೂ ಅವನಿಂದ ಸೃಷ್ಟಿಯಾದವು; ದೇವರು ನಮಗಾಗಿ ಇವೆಲ್ಲವನ್ನು ನಿರ್ಮಿಸಿದ್ದಾನೆ. ಆದ್ದರಿಂದ ನಾವು ದೇವರನ್ನು ನಿತ್ಯವೂ ಸುತ್ತಿಸುತ್ತಿರಬೇಕು" ಎಂದು ಇತರ ಧರ್ಮಗಳು ಹೆಳುತ್ತವೆ. ಆದರೆ ಬೌದ್ಧ ಧರ್ಮದಲ್ಲಿ ದೇವರಿಗೆ ಮತ್ತು ಆತ್ಮಕ್ಕೆ ಅವಕಾಶವಿಲ್ಲ. ಪ್ರಪಂಚದಲ್ಲಿ ದುಃಖ ತುಂಬಿದೆ; ಮಾನವ ದುಃಖ ಪೀಡಿತನಾಗಿದ್ದಾನೆ. ಇಂಥ ಪೀಡಿತರ ಉನ್ನತಿಯೇ ಬೌದ್ಧ ಧರ್ಮದ ಧ್ಯೇಯವಾಗಿದೆ. ಬುದ್ಧನಿಗಿಂತ ಯಾವ ಹೆಚ್ಚಿನದನ್ನೂ ಕಾರ್ಲ್‌ಮಾರ್ಕ್ಸ್ ಹೇಳಿಲ್ಲ. "ಈ ಧರ್ಮ ಬಹುಜನ ಹಿತಾಯ ಬಹುಜನ ಸುಖಾಯ, ಜನಾನುಕಂಪಾಯ ಆದಿ, ಮಧ್ಯೆ ಮತ್ತು ಅಂತ್ಯದಲ್ಲಿ ಕಲ್ಯಾಣಕರ". ಬುದ್ಧನ ಈ ಬೋಧನೆ ಸರಳ ಹಾಗೂ ನೇರವಾದುದಾಗಿದೆ.

ಸೋದರ-ಸೋದರಿಯರೆ, 'ಈಗ ಹೇಳಬೇಕಾಗಿದ್ದೆಲ್ಲವನ್ನೂ ನಾನು ಹೇಳಿದ್ದೇನೆ. ಬೌದ್ಧ ಧರ್ಮ ಒಳ್ಳೆಯ ಧರ್ಮವಾಗಿದೆ. ಇದರಲ್ಲಿ ಯಾವ ದೋಷವೂ ಇಲ್ಲ. ಹಿಂದೂ ಧರ್ಮದಲ್ಲಿದ್ದ ನಮ್ಮನ್ನು ವಿದ್ವಾಂಸರಾಗುವ ಅವಕಾಶಗಳಿಂದ ವಂಚಿಸಲಾಯಿತು. ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರು ನಮ್ಮ ತಲೆ ಮೇಲೆ ದೊಡ್ಡ ಬೆಟ್ಟವೊಂದನ್ನು ಇಟ್ಟು ಬಿಟ್ಟಿದ್ದಾರೆ. ಇದನ್ನು ಕೆಳಗೆ ಉರುಳಿಸುವುದು ಹೇಗೆ ಅಥವಾ ಇದನ್ನು ಒಡೆದು ಚೂರು ಚೂರು ಮಾಡುವುದು ಹೇಗೆ ಎಂಬ ಜ್ಞಾನವನ್ನು ನಾನು ನಿಮಗೆ ನೀಡಬಯಸುತ್ತೇನೆ. ಇದು ನನ್ನ ಕರ್ತವ್ಯವೂ ಹೌದು. ಇದನ್ನು ನೀವೆಲ್ಲರೂ ಸ್ವೀಕರಿಸಿ.

ಇಂದಿನಿಂದ ನಿಮ್ಮೆಲ್ಲರ ಮೇಲೆ ಗುರುತರವಾದ ಜವಾಬ್ದಾರಿ ಬಿದ್ದಿದೆ. ಎಲ್ಲರೂ ನಿಮ್ಮನ್ನು ಗೌರವಿಸುವಂತೆ ಜೀವನ ನಡೆಸಿ. ಬೌದ್ಧ ಧರ್ಮದ ದೃಷ್ಟಿಯಿಂದ ಹೇಳುವುದಾದರೆ ಭಾರತ ಒಂದು ಕಾಡಿನಂತಿದೆ. ನಾಗರಿಕ ಜೀವನ ನಡೆಸಲು ಸಾಧ್ಯವಾಗುವಂತೆ ಭಾರತವನ್ನು ಬದಲಾಯಿಸಬೇಕಾಗಿದೆ. ಆದ್ದರಿಂದ ನೀವು ಒಪ್ಪಿಕೊಂಡಿರುವಂತೆ, ಬೌದ್ಧ ಧರ್ಮವನ್ನು ಉತ್ತಮ ರೀತಿಯಲ್ಲಿ ಅನುಸರಿಸುವ ಪ್ರತಿಜ್ಞೆ ಮಾಡಿ. ಇಲ್ಲದೇ ಹೋದರೆ ನಿಮ್ಮಿಂದ ಧರ್ಮ ಪರಿವರ್ತನೆಗೆ ಅಪಾಚಾರವಾಗುತ್ತದೆ. ನೀವೆಲ್ಲರೂ ಬೌದ್ಧರು; ನಮ್ಮ ದೇಶದ ಹಾಗೂ ಸಮಗ್ರ ವಿಶ್ವದ ಉನ್ನತಿಗೆ ಶ್ರಮಿಸುವುದಾಗಿ ಇಂದು ಪ್ರತಿಜ್ಞೆ ಕೈಗೊಳ್ಳಿ. ವಿಶ್ವದ ಉನ್ನತಿ ಬೌದ್ಧ ಧರ್ಮದಿಂದ ಮಾತ್ರ ಸಾಧ್ಯ. ನ್ಯಾಯಕ್ಕೆ ಅವಕಾಶ ಸಿಕ್ಕುವವರೆಗೆ ವಿಶ್ವದಲ್ಲಿ ಶಾಂತಿ ನೆಲೆಸಲು ಸಾಧ್ಯವಿಲ್ಲ.

ಈ ಕೆಲಸ ಬಹು ಜವಾಬ್ದಾರಿಯುತವಾದುದು. ಇದನ್ನು ಸಮರ್ಥವಾಗಿ ನಿಭಾಯಿಸಲು ನೀವು ಸಂಕಲ್ಪ ಕೈಗೊಳ್ಳಬೇಕಾಗಿದೆ. ವೈಯಕ್ತಿಕ ಜೀವನದಲ್ಲೇ ಮುಳುಗಿ ಹೋಗಬೇಡಿ. ಧರ್ಮ ಪ್ರಚಾರದಂಥ ಪವಿತ್ರ ಕಾರ್ಯಕ್ಕೆ ನಿಮ್ಮ ಸಮಯ ಹಾಗೂ ಆದಾಯದ ಶೇಕಡಾ ೨೦ ರಷ್ಟನ್ನಾದರೂ ದಾನ ಮಾಡಿ. ನಿಮ್ಮೆಲ್ಲರನ್ನೂ ನಾನು ನನ್ನ ಜೊತೆ ಕರೆದೊಯ್ಯಬೇಕಾಗಿದೆ. ತಥಾಗತನೂ ಮೊಟ್ಟ ಮೊದಲ ಬಾರಿಗೆ ಕೆಲವೇ ಕೆಲವು ಜನರಿಗೆ ಧರ್ಮದೀಕ್ಷೆ ಕೊಟ್ಟಿದ್ದ; ಅವರನ್ನು ಧರ್ಮ ಪ್ರಚಾರಕ್ಕೆ ತೊಡಗಿಸಿದ. ಬುದ್ಧನು ಕಾಲ, ದೇಶಗಳನ್ನು ಪರಿಗಣಿಸಿ, ಧರ್ಮ ಪ್ರಚಾರ ಕಾರ್ಯವನ್ನು ಕೈಗೊಂಡ; ನಾವು ಹಾಗೇ ಮಾಡಬೇಕು.

ಭಾರತದಲ್ಲಿ ಇಂದು ಬಹಳ ಜನ ಭಿಕ್ಷುಗಳು ಇಲ್ಲ. ಧರ್ಮ ಪರಿವರ್ತನೆಗೆ ಭಿಕ್ಷುಗಳು ಬೇಕೇ ಬೇಕು ಎಂದೇನೂ ಇಲ್ಲ. ಬೌದ್ಧ ಧರ್ಮ ಸ್ವೀಕರಿಸಿದ ಪ್ರತಿಯೊಬ್ಬರೂ ಭಿಕ್ಷುಕಾರ್ಯವನ್ನು ಕೈಗೊಳ್ಳಬಹುದೆಂದು ನಾನು ಘೋಷಿಸುತ್ತೇನೆ. ಇನ್ನೊಬ್ಬರಿಗೆ ತ್ರಿಶರಣ, ಪಂಚಶೀಲ, ಅಷ್ಟಾಂಗಮಾರ್ಗ ಮತ್ತು ಇಪ್ಪತ್ತೆರಡು ಪ್ರತಿಜ್ಞೆಗಳನ್ನು ಬೋಧಿಸುವುದರೊಂದಿಗೆ, ಬೌದ್ಧ ಧರ್ಮ ದೀಕ್ಷೆಯನ್ನು ನೀಡಬಹುದಾಗಿದೆ.

(೧೯೫೬ ರ ಅಕ್ಟೋಬರ್ ೧೪ ರಂದು ನಾಗಪುರದ ದೀಕ್ಷಾಭೂಮಿಯಲ್ಲಿ ಬಾಬಾ ಸಾಹೇಬರು ಮಾಡಿದ ಭಾಷಣ) □

ನೋಡಿ ಇಲ್ಲಿದ್ದಾನೆ!

೧

ಪುಡಿಪುಡಿಯಾಗಿ ಹೋದ
ಕಾಲದ ಹಾರಿನ ಬುದ್ಧ
ತಾಲಿಬಾನಿನ ಗುಂಡು ಫಿರಂಗಿಗಳಿಗೆ;
ಕರಗಿಯೇ ಹೋದ
ಲೋಹದ ಬುದ್ಧ
ಬೆಂಕಿಯುರಿಟ್ಟಲ್ಲಿ
ಸುಟ್ಟು ಕರಿಕಾದಂತೆ ಮರದ ಬುದ್ಧ,

೨

ನೋಡಿ ಇಲ್ಲಿದ್ದಾನೆ
ನಿಜವಾದ ಬುದ್ಧ
ಈಗತಾನೇ ಈದ ಕುರಿಯಮರಿ
ಹೆಗಲಲ್ಲಿ ಹೊತ್ತು
ನುಡಿನುಡಿಸುತಪ್ಪಾಂಗ ವೀಣೆ

೩

ಮಡದಿ ಮಗು ರಾಜ್ಯಗಳ ಬಿಟ್ಟು ಬಂದವನಿಗೆ
ಸ್ವರ್ಗದಾಸೆಯೆ ಮತ್ತೆ?
ಗೋಗರೆಯುತ್ತಿದ್ದರೂ ದೇವೇಂದ್ರ
ತಿರುಗಿ ನೋಡದೆ ಅತು
ಇವನು ಹೊರಟಿದ್ದಾನೆ
ಹುಡುಹುಡುಕಿ ಅಂಗುಲಿಮಾಲರನು
ಆಮ್ರಪಾಲಿಗಳನ್ನು

ಪ್ರೊ॥ ಜಿ.ಎಸ್. ಸಿದ್ಧಲಿಂಗಯ್ಯ



ಬುದ್ಧನ ಅನನ್ಯತೆ

ಪ್ರತಿಯೊಂದು ಧರ್ಮವೂ ಬೇರೆ ಮತದವರನ್ನು ತಮ್ಮ ಸಮಾನರಲ್ಲ, ತಮ್ಮಂಥ ಮನುಷ್ಯರಲ್ಲ ಎಂಬ ಭಾವನೆಯನ್ನು ತಮ್ಮ ಅನುಯಾಯಿಗಳ ಮನಸ್ಸಿನಲ್ಲಿ ಬಿತ್ತಿವೆ ಎಂದು ತಿಳಿದು ಬರುತ್ತದೆ. ಕ್ರೈಸ್ತ ಮತ ಕ್ರಿಸ್ತೀಯರಲ್ಲದವರನ್ನು 'ಪೇಗನಂ' ಎನ್ನುತ್ತದೆ. ಇಸ್ಲಾಂ ತನ್ನಲ್ಲಿ ನಂಬಿಕೆ ಇಡದವರನ್ನು 'ಕಾಫಿರ್' ಎಂದು ಕರೆಯುತ್ತದೆ; ಬ್ರಾಹ್ಮಣ ಧರ್ಮ ಅರ್ಥಾತ್ ಹಿಂದೂ ಧರ್ಮ ಚಾತುರ್‌ವರ್ಣವನ್ನು ಒಪ್ಪದ ಜನರನ್ನು ಪಾಖಂಡಿ ಅಥವಾ ಪಾಷಂಡಿ ಎಂದು ಹೇಳುತ್ತದೆ. ಈ ಎಲ್ಲ ಶಬ್ದಗಳ ಅರ್ಥ ಹೆಚ್ಚು ಕಡಿಮೆ ಒಂದೇ ಆಗಿದೆ. ಅಂದರೆ ಎಲ್ಲ ಧರ್ಮಗಳೂ ಮನುಷ್ಯ ವಿರೋಧಿಗಳಾಗಿವೆ. ಆದರೆ ಬುದ್ಧ ಧಮ್ಮ ಈ ಅಸಹಜ ಭಾವನೆಯನ್ನು ತಾಳದೆ ಎಲ್ಲರೂ ಒಂದು ಎಂದು ಭಾವಿಸಿ ಆಚರಿಸುತ್ತಿದೆ.

ಡಾ|| ಕೆ.ಎಸ್. ಭಗವಾನ್

ಬುದ್ಧ ಹುಟ್ಟಿ (ಕ್ರಿ. ಪೂ. ೫೬೦-೪೮೦) ಇಲ್ಲಿಗೆ ಎರಡೂವರೆ ಸಾವಿರದ ಅರವತ್ತು ವರ್ಷಗಳ ಮೇಲಾಗಿದೆ. ಈ ದೀರ್ಘ ಅವಧಿಯಲ್ಲಿ ಅವನು ಪ್ರವೇಶಿಸದ ದೇಶವಿಲ್ಲ. ಪ್ರಭಾವಿಸದ ಮನಸ್ಸಿಲ್ಲ. ಪ್ರಪಂಚದ ಸಾಹಿತ್ಯ ಕಲಾ ವಿಜ್ಞಾನಗಳೆಲ್ಲ ಅವನ ಬೆಳಕಿನಿಂದ ಪಲ್ಲವಿಸಿವೆ. ಈ ಶತಮಾನ ಕಂಡ ಮಹಾಮೇಧಾವಿಗಳಾದ ತತ್ವಜ್ಞಾನಿ ಬರ್ಟ್ರಂಡ್ ರಸೆಲ್ ಮತ್ತು ಮಹಾ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಅವರುಗಳು "ಬುದ್ಧ ಧಮ್ಮವೇ ನಾಳಿನ ಮಾನವ ಜನಾಂಗದ ಧರ್ಮವಾಗುತ್ತದೆ" ಎಂದು ಪ್ರವಾದಿಗಳಂತೆ ನುಡಿದಿದ್ದಾರೆ. ಅವರ ಈ ಮಾತುಗಳಲ್ಲಿ, ಅವರು ಬೇರೆ ದೇಶದವರೂ ಅನ್ಯಧರ್ಮಿಯರೇ ಆದರೂ, ಬುದ್ಧ ಧಮ್ಮದ ದೊಡ್ಡತನವನ್ನು ಗುರುತಿಸಬಹುದು. ಪರಿಪಕ್ವ ಮನಸ್ಸು ಜಾತಿಮತಾತೀತವಾದ ಕಾಲಾದೇಶಾತೀತ ನೆಲೆಯಲ್ಲಿ ಚಿಂತಿಸುತ್ತದೆ.

ಸಾಮಾನ್ಯವಾಗಿ ಪ್ರತಿಯೊಂದು ಧರ್ಮವೂ ಬೇರೆ ಮತದವರನ್ನು ತಮ್ಮ ಸಮಾನರಲ್ಲ, ತಮ್ಮಂಥ ಮನುಷ್ಯರಲ್ಲ ಎಂಬ ಭಾವನೆಯನ್ನು ತಮ್ಮ ಅನುಯಾಯಿಗಳ ಮನಸ್ಸಿನಲ್ಲಿ ಬಿತ್ತಿವೆ ಎಂದು ತಿಳಿದು ಬರುತ್ತದೆ. ಕ್ರೈಸ್ತ ಮತ ಕ್ರಿಸ್ತಿಯನ್‌ರಲ್ಲದವರನ್ನು 'ಪೇಗನಂ' ಎನ್ನುತ್ತದೆ. ಇಸ್ಲಾಂ ತನ್ನಲ್ಲಿ ನಂಬಿಕೆ ಇಡದವರನ್ನು 'ಕಾಫಿರ್' ಎಂದು ಕರೆಯುತ್ತದೆ; ಬ್ರಾಹ್ಮಣ ಧರ್ಮ ಅರ್ಥಾತ್ ಹಿಂದೂ ಧರ್ಮ ಚಾತುರ್‌ವರ್ಣವನ್ನು ಒಪ್ಪದ ಜನರನ್ನು ಪಾಖಂಡಿ ಅಥವಾ ಪಾಷಂಡಿ ಎಂದು ಹೇಳುತ್ತದೆ. ಈ ಎಲ್ಲ ಶಬ್ದಗಳ ಅರ್ಥ ಹೆಚ್ಚು ಕಡಿಮೆ ಒಂದೇ ಆಗಿದೆ. ಅಂದರೆ ಎಲ್ಲ ಧರ್ಮಗಳೂ ಮನುಷ್ಯ ವಿರೋಧಿಗಳಾಗಿವೆ. ಆದರೆ ಬುದ್ಧ ಧಮ್ಮ ಈ ಅಸಹಜ ಭಾವನೆಯನ್ನು ತಾಳದೆ ಎಲ್ಲರೂ ಒಂದು ಎಂದು ಭಾವಿಸಿ ಆಚರಿಸುತ್ತಿದೆ.

ಒಮ್ಮೆ ಭಗವಾನ್ ಬುದ್ಧದೇವ ತನ್ನ ಅನುಯಾಯಿಗಳಾದ ಭಿಕ್ಕುಗಳನ್ನೆಲ್ಲ ಒಂದೆಡೆ ಕೂಡಿಸಿ ಹೀಗೆ ಹೇಳಿದ: "ನೋಡಿ, ಸೋದರರೇ, ನೀವೆಲ್ಲ ಸಂಘವನ್ನು ಸೇರಿದ್ದೀರಿ. ನೀವೆಲ್ಲ ಒಂದು. ಹೇಗೆ? ಸಮುದ್ರಕ್ಕೆ ಬೇರೆ ಬೇರೆ ನದಿಗಳು ಹರಿದು ಬರುತ್ತವೆ. ಅವುಗಳಿಗೆ ಪ್ರತ್ಯೇಕ ಹೆಸರು, ಆಕಾರ ಇರುತ್ತವೆ. ಗಂಗಾ, ಯಮುನಾ, ಬ್ರಹ್ಮಪುತ್ರ, ಸರಸ್ವತಿ ಅಚಿರಾವತಿ, ಇತ್ಯಾದಿ. ಅವುಗಳೆಲ್ಲ ಸಮುದ್ರ ಸೇರಿದ ಮೇಲೆ ತಮ್ಮ ಹೆಸರು ರೂಪ ಆಕಾರ ಎಲ್ಲವನ್ನೂ ಕಳೆದುಕೊಂಡು ಒಂದೇ ಆಗಿ ಬಿಡುತ್ತವೆ. ಹಾಗೆ ನೀವೆಲ್ಲ ಒಂದು" ಎಂದು ಮನಕರಗುವಂಥ ಮಾತುಗಳನ್ನು ಆಡಿದ್ದಾನೆ. 'ನನಗೆ ತಿಳಿದಂತೆ, ಮಾನವ ಜನಾಂಗವೆಲ್ಲ ಒಂದು' ಎಂಬ ಅದ್ಭುತ ಕಲ್ಪನೆಯನ್ನು ಪ್ರಪಂಚದ ಇತಿಹಾಸದಲ್ಲಿ ಮೊಟ್ಟ ಮೊದಲಿಗೆ ಕೊಟ್ಟವನು ಬುದ್ಧದೇವ. ಅಂಥ ಅಪೂರ್ವ ವಿಚಾರಕ್ಕೆ ಭರತಖಂಡ ಮಾತೃಭೂಮಿಯಾಗಿದೆ ಎಂಬುದು ಹೆಮ್ಮೆಯ ಅಂಶ. ಆದರೆ ಇದಕ್ಕೆ ವಿರುದ್ಧವಾಗಿಯೇ ಇಲ್ಲ ಕಗ್ಗಲಿಮುಳ್ಳಿನಂತೆ ಬೆಳೆಯಿತು ಎಂಬುದು ಅಷ್ಟೇ ಖೇದಕರ ಸಂಗತಿ.

ದೇವರ ಬಗ್ಗೆ ಬುದ್ಧ ಏನೂ ಹೇಳಲಿಲ್ಲ ಎನ್ನುವುದು ಗೊತ್ತಿರುವ ವಿಚಾರ. ಮನುಷ್ಯ ಈ ಗ್ರಹದ ಮೇಲೆ ಉಗಮವಾಗಿ ಆಲೋಚನೆ ಆರಂಭಿಸಿದಾಗಿನಿಂದಲೇ ಅವನನ್ನು ಕಾಡುತ್ತಾ ಬಂದಿರುವ ವಿಷಯ ದೇವರು. ಈ ಬಗ್ಗೆ ಉಂಟು, ಇಲ್ಲ ಎಂಬ ಪರ ವಿರೋಧದ ವಾದ ವಿವಾದಗಳು ಜಗತ್ತಿನ ಉದ್ದಗಲಕ್ಕೂ ಹರಡಿಕೊಂಡಿವೆ. ಇದು ಎಷ್ಟೆಂದರೂ ವೈಯಕ್ತಿಕ ನೆಲೆಯ ನಂಬಿಕೆ ಅಪನಂಬಿಕೆಗಳ ಸಂಗತಿಯಾಗುತ್ತದೆ. ಇದು ವೈಜ್ಞಾನಿಕವಾದ ವಸ್ತುನಿಷ್ಠ ವಿಷಯ ಎನ್ನಿಸುವುದಿಲ್ಲ. ದೇವರು ಸಾರ್ವತ್ರಿಕ ಎಂದರೂ ಅವನು ಎಲ್ಲ ಕಡೆಯೂ ಎಲ್ಲ ಜನರಲ್ಲೂ ಒಂದೇ ರೀತಿ ಮತ್ತು ರೂಪದಲ್ಲಿ ಇಲ್ಲ. ಎಲ್ಲಾ ಕಡೆ ನೀರು ಒಂದೇ, ಬೆಂಕಿ ಒಂದೇ, ಸೂರ್ಯ ಒಂದೇ, ಚಂದ್ರ ಒಂದೇ ಬೇರೆ ಬೇರೆ ಆದರೆ ಅವು ಅವುಗಳಾಗಿ ಇರುವುದಿಲ್ಲ. ಹೀಗಿರುವುದರಿಂದ ಬುದ್ಧ ಈ ಬಗ್ಗೆ ಏನೂ ಹೇಳಲು ಇಚ್ಛಿಸಲಿಲ್ಲ. "ನಮ್ಮ ಸುತ್ತ ಮುತ್ತ ಕಷ್ಟವಿದೆ; ಜನರು ನರಳುತ್ತಿದ್ದಾರೆ; ಅವರ ದುಃಖವನ್ನು ಶಮಗೊಳಿಸಲು ನಾನು ಪ್ರಯತ್ನಿಸುತ್ತಿದ್ದೇನೆ, ಎಂದು ಹೇಳಿದ ಬುದ್ಧನ ಮಾತು ಭಾರಿ ಅರ್ಥಗರ್ಭಿತವಾಗಿದೆ. ಬೇರೆ ಯಾರಾದರೂ ಆಗಿದ್ದರೆ ಕೇಳುಗನನ್ನು ತಬ್ಬಿಬ್ಬು ಮಾಡುವಂತೆ ಮಾತನಾಡಿ ತನ್ನ ಚಾಣಾಕ್ಷತೆಯನ್ನು ತೋರಿಸುತ್ತಿದ್ದ.

ಆದರೆ ಬುದ್ಧ, ತನ್ನ ಮೇಲೆ ಜನರಿಗೆ ಅಪಾರ ಪ್ರೀತಿ ವಿಶ್ವಾಸ ಭಕ್ತಿ ಗೌರವಗಳಿದ್ದರೂ, ಅದನ್ನು ದುರುಪಯೋಗಪಡಿಸಿಕೊಳ್ಳದೆ ಅತ್ಯಂತ ಪ್ರಾಮಾಣಿಕವಾಗಿ ಮಾತಾಡಿದ್ದನೆನ್ನಬಹುದು ಕಾಣದ ಶಕ್ತಿ ಅಥವಾ ವ್ಯಕ್ತಿಯ ಬಗ್ಗೆ ಮಾತನಾಡುವುದಕ್ಕಿಂತ ಸಹಮಾನವನ ಕಷ್ಟದಲ್ಲಿ ಭಾಗಿಯಾಗುವುದು ಹೆಚ್ಚು ಶ್ರೇಯಸ್ಕರ ಎಂಬುದನ್ನು ಬುದ್ಧ

ಅತ್ಯಂತ ಮನನೀಯವಾಗಿ ಆಚರಣೀಯವಾಗಿ ಹೇಳಿದ್ದಾನೆಂದು ತಿಳಿಯಬೇಕಾಗಿದೆ. ಏಕೆಂದರೆ ಇದುವರೆಗಿನ ಇತಿಹಾಸದಲ್ಲಿ ದೇವರನ್ನು ಕುರಿತು ನಡೆದಿರುವುದೆಲ್ಲ ಕೇವಲ ಕಲ್ಪನೆ, ವೈಯಕ್ತಿಕ ನಂಬಿಕೆ ಆಗಿದೆ; ಅದಕ್ಕೆ ಯಾವುದೇ ಸಾರ್ವತ್ರಿಕ ಆಧಾರವಿಲ್ಲ. ಮನುಷ್ಯ ತಾನು ಮೊದಲಿಂದ ಕೇಳಿಕೊಂಡು ಭಾವಿಸಿಕೊಂಡು ಬಂದ ರೂಪವೇ ಅವನಿಗೆ ದೇವರಾಗಿ ಕಾಣುತ್ತದೆ ಅಷ್ಟೆ ಪ್ರೇಮಿಗಳಿಗೆ ತೀವ್ರಾಕಾಂಕ್ಷೆಯಲ್ಲಿ ತಮ್ಮ ಪ್ರೀತಿಪಾತ್ರರೇ ಕಣ್ಣೆದುರು ಕಾಣುವಂತೆ. ಇದಕ್ಕಿಂತ ಭಿನ್ನ ಬಗೆಯ ವಿವರಣೆ ಮಾನಸಿಕ ವಸ್ತುಸ್ಥಿತಿಯಾಗಲಾರದು.

ದೇವರ ವಿಷಯದಲ್ಲಿ ರಷ್ಯದ ಮಹಾನ್ ನಾಯಕ ಮತ್ತು ವಿಶ್ವದ ಧೀಮಂತರಲ್ಲಿ ಒಬ್ಬನಾದ ಲೆನಿನ್ ಆಡುವ ನುಡಿಗಳು ದಾರಿದೀಪವಾಗಿವೆ. ಒಮ್ಮೆ ಅವನನ್ನು ನೋಡಲು ಒಬ್ಬ ಹಳ್ಳಿಯ ಮುದುಕ ಬಂದ. ಅವನು ಹೆಗಲ ಮೇಲೆ ಕಂಬಳಿ ಹಾಕಿಕೊಂಡು ಕೈಯಲ್ಲಿ ಊರುದೊಣ್ಣೆ ಹಿಡಿದಿದ್ದ. ಆತ ೧೯೧೭ರ ಅಕ್ಟೋಬರ್ ಮಹಾಕ್ರಾಂತಿಯ ಕಾಲದಲ್ಲಿ ಲೆನಿನ್ ಜೊತೆ ಕ್ರಿಯಾಶೀಲನಾಗಿದ್ದ ಎಂದು ಪ್ರತೀತಿ. ಲೆನಿನ್‌ಗೆ ಹಳ್ಳಿಗರೆಂದರೆ ಅಪೂರ್ವ ಆತ್ಮೀಯತೆ, ಮಾತನಾಡುತ್ತಿದ್ದಾಗ ಆತ, "ನೋಡಪ್ಪ, ಲೆನಿನ್, ನಾವೇನೊ ದೇವರಿಲ್ಲ ಅಂತ ಹೇಳಿ ಜನರನ್ನು ನಂಬಿಸಿ ಕ್ರಾಂತಿಯನ್ನು ತಂದುಬಿಟ್ಟಿದ್ದೀವಿ. ಈಗ ನೀನು ನಾನು ಇಬ್ಬರೇ ಇದೀವಿ. ನಿಜ ಹೇಳು. ನಿನಗೇನು ಅನ್ನಿಸುತ್ತೆ? ದೇವರು ಇದ್ದಾನೋ ಇಲ್ಲವೋ?" ಎಂದು ಕೇಳಿದ. ತೀರಾ ಮನಮುಟ್ಟುವ ಸಂದರ್ಭ. ಬೇರೆ ಯಾರೇ ಆಗಿದ್ದರೂ ಬಹುಶಃ ಎಚ್ಚರ ತಪ್ಪುತ್ತಿದ್ದರು. ಆದರೆ ಲೆನಿನ್ ಸದಾ ಜಾಗೃತ ಚೇತನ. ಅವನು ಹೇಳಿದ ಮಾತು ಸರ್ವಮಾನ್ಯವಾಗಿದೆ: 'ನೋಡಿ, ದೇವರ ವಿಷಯದಲ್ಲಿ ವಿಜ್ಞಾನ ಇವತ್ತಲ್ಲ ನಾಳೆ ಒಂದು ತೀರ್ಮಾನಕ್ಕೆ ಬಂದೇ ಬರುತ್ತದೆ. ಆಗ ವಿಜ್ಞಾನ ದೇವರಿದ್ದಾನೆ ಅಂದರೆ ಇದ್ದಾನೆ ಎನ್ನೋಣ; ಇಲ್ಲ ಎಂದರೆ ಇಲ್ಲ ಎನ್ನೋಣ. ಅಲ್ಲಿಯವರೆಗೆ ಈಗ ನಾವು ಏನು ಹೇಳುತ್ತಿದ್ದೇವೆಯೋ, ಅದು ಸರಿ ಅಂತ ಕೆಲಸ ಮಾಡೋಣ'. ಈ ಮಾತುಗಳು ಯಾವುದೇ ವಿಷಯದ ಬಗ್ಗೆ ತೆರೆದ ಮನಸ್ಸಿನ ಅವಶ್ಯಕತೆಯನ್ನು ಸೂಚಿಸುತ್ತವೆ. ತೆರೆದ ಮನಸ್ಸು ನಿರಂತರ ಅನ್ವೇಷಣೆಗೆ ದಾರಿ.

ಬುದ್ಧ ಯಾವತ್ತೂ ಪ್ರಾಯೋಗಿಕ ಮನಸ್ಸಿನವನಾಗಿದ್ದನು. ಅದರಲ್ಲಿ ಯಾವ ಗೊಂದಲಗಳಿರಲಿಲ್ಲ, ಅಸ್ಪಷ್ಟತೆ ಇರಲಿಲ್ಲ. ಅದು ಅತ್ಯಂತ ತಿಳಿಯಾದ ಮನಸ್ಸು, ಬೆಳ್ಳಂಬೆಳಕಾಗಿದ್ದ ಮನಸ್ಸು. ಅನುಷ್ಠಾನವೇ ಅನ್ವೇಷಣೆ ಮತ್ತು ಅನುಭಾವ ಎಂದು ಬುದ್ಧ ಬಲ್ಲವನಾಗಿದ್ದನು. ಒಮ್ಮೆ ಐದು ಜನ ಬ್ರಾಹ್ಮಣ ಯುವಕರು ಬುದ್ಧನ ಬಳಿ ಬಂದರು. ಅವನಿಂದ ಸತ್ಯಮಾರ್ಗವನ್ನು ಅರಿಯಲು ಅವರು ಅಪೇಕ್ಷಿಸಿದರು. ಅವರಲ್ಲಿ ಒಬ್ಬ, "ನಮ್ಮ ಜನರು ಇದನ್ನು ಹೇಳುತ್ತಾರೆ. ಇದೇ ಸರಿಯಾದ ಮಾರ್ಗ" ಎಂದನು, ಇನ್ನೊಬ್ಬ "ಇದನ್ನು ನನಗೆ ಹೇಳಿದ್ದಾರೆ. ಇದೇ ಸತ್ಯಕ್ಕೆ ದಾರಿ" ಎಂದು ಹೇಳಿದನು. "ಇದರಿಂದ ನಮಗೆ ಗೊಂದಲವಾಗಿದೆ. ಸರಿಯಾದ ದಾರಿ ಯಾವುದು, ಭಗವಾನ್" ಎಂದು ಅವರು ಕೇಳಿದರು. "ನೋಡಿ ನಿಮ್ಮ ಜನ 'ಇದೇ ದೇವರಿಗೆ ದಾರಿ" ಎಂದು ನಿಮಗೆ ಹೇಳಿ ಕೊಟ್ಟಿದ್ದಾರೆ. ಅಲ್ಲವೇ?" ಎಂದು ಬುದ್ಧ ಹೇಳಿದನು.

'ಹೌದು'. ಎಂದು ಅವರೆಲ್ಲರೂ ಉತ್ತರಿಸಿದರು.

'ಆದರೆ ನೀವು ದೇವರನ್ನು ನೋಡಿದ್ದೀರಾ?'

ಬುದ್ಧ, ತನ್ನ ಮೇಲೆ ಜನರಿಗೆ ಅಪಾರ ಪ್ರೀತಿ ವಿಶ್ವಾಸ ಭಕ್ತಿ ಗೌರವಗಳಿದ್ದರೂ, ಅದನ್ನು ದುರುಪಯೋಗಪಡಿಸಿಕೊಳ್ಳದೆ ಅತ್ಯಂತ ಪ್ರಾಮಾಣಿಕವಾಗಿ ಮಾತಾಡಿದ್ದನೆನ್ನಬಹುದು ಕಾಣದ ಶಕ್ತಿ ಅಥವಾ ವ್ಯಕ್ತಿಯ ಬಗ್ಗೆ ಮಾತನಾಡುವುದಕ್ಕಿಂತ ಸಹಮಾನವನ ಕಷ್ಟದಲ್ಲಿ ಭಾಗಿಯಾಗುವುದು ಹೆಚ್ಚು ಶ್ರೇಯಸ್ಕರ ಎಂಬುದನ್ನು ಬುದ್ಧ ಅತ್ಯಂತ ಮನನೀಯವಾಗಿ ಆಚರಣೀಯವಾಗಿ ಹೇಳಿದ್ದಾನೆಂದು ತೀಳಿಯಬೇಕಾಗಿದೆ. ಏಕೆಂದರೆ ಇದುವರೆಗಿನ ಇತಿಹಾಸದಲ್ಲಿ ದೇವರನ್ನು ಕುರಿತು ನಡೆದಿರುವುದೆಲ್ಲ ಕೇವಲ ಕಲ್ಪನೆ, ವೈಯಕ್ತಿಕ ನಂಬಿಕೆ ಆಗಿದೆ; ಅದಕ್ಕೆ ಯಾವುದೇ ಸಾರ್ವತ್ರಿಕ ಆಧಾರವಿಲ್ಲ. ಮನುಷ್ಯ ತಾನು ಮೊದಲಿಂದ ಕೇಳಿಕೊಂಡು ಭಾವಿಸಿಕೊಂಡು ಬಂದ ರೂಪವೇ ಅವನಿಗೆ ದೇವರಾಗಿ ಕಾಣುತ್ತದೆ ಅಷ್ಟೆ.

'ಇಲ್ಲ, ಭಗವಾನ್'

'ನಿಮ್ಮ ತಂದೆತಾಯಿಗಳೂ?'

'ಇಲ್ಲ ಸ್ವಾಮಿ'

'ನಿಮ್ಮ ತಾತ ಮುತ್ತಾತಂದಿರು?'

'ಇಲ್ಲ, ಸ್ವಾಮಿ'

'ಅವರ‍್ಯಾರೂ ದೇವರನ್ನು ಕಾಣಲಿಲ್ಲವೆ?'

'ಇಲ್ಲ, ಸ್ವಾಮಿ'

'ಸರಿ, ನಿಮ್ಮ ಗುರುಗಳು ಆಚಾರ್ಯರು ಯಾರೂ ದೇವರನ್ನು ಕಾಣಲಿಲ್ಲವೆ?'

'ಯಾರೂ ಇಲ್ಲ, ಸ್ವಾಮಿ'

ಈ ಪ್ರಶ್ನೆಗಳನ್ನು ಬುದ್ಧ ಐವರು ಯುವಕರಿಗೂ ಕೇಳಿದನು. ಅವರೆಲ್ಲರೂ ತಾವು ದೇವರನ್ನು ನೋಡಿಲ್ಲ ಎಂದು ಘೋಷಿಸಿದರು. ಆಮೇಲೆ ಬುದ್ಧ ಹೀಗೆ ಹೇಳಿದ:

'ಒಂದು ಹಳ್ಳಿಗೆ ಒಬ್ಬ ಹುಡುಗ ಬಂದ. ಅವನು ಒಂದೇ ಸಮನೆ ಅಳುತ್ತಿದ್ದ. 'ಓ! ನಾನು ಅವಳನ್ನು ತುಂಬ ಪ್ರೀತಿಸುತ್ತಿದ್ದೇನೆ, ಎಂದು ಒರಲುತ್ತಿದ್ದ. ಆಗ ಹಳ್ಳಿಯವರೆಲ್ಲ ಬಂದು 'ಅವಳು ಯಾರು? ಎಲ್ಲಿದ್ದಾಳೆ? ಹೇಗಿದ್ದಾಳೆ?' ಎಂದು ಪ್ರಶ್ನಿಸಿದರು. 'ಓ!ಓ! ನನಗೆ ಗೊತ್ತಿಲ್ಲ. ಆದರೆ ಅವಳನ್ನು ನಾನು ತುಂಬ ಪ್ರೀತಿಸುತ್ತಿದ್ದೇನೆ' ಎಂದು ಹುಡುಗ ಬಿಕ್ಕಿ ಬಿಕ್ಕಿ ಅಳತೊಡಗಿದನು ಈ ಹುಡುಗನನ್ನು ನೀವು ಏನೆಂದು ಕರೆಯುತ್ತೀರಿ?' ಎಂದು ಬುದ್ಧ ಆ ಯುವಕರನ್ನು ಕೇಳಿದನು.

'ಓ! ಬಿಡಿ, ಸ್ವಾಮಿ ಅವನೊಬ್ಬ ಹುಚ್ಚ! ಅವನೊಬ್ಬ ಮೂರ್ಖ!' ಎಂದು ಆ ತರುಣರೆಲ್ಲ ಖಚಿತಪಡಿಸಿದರು.

'ನೀವೂ ಅವನ ಹಾಗೇ ಅಲ್ಲವೇ? ನಿಮ್ಮ ತಂದೆ ತಾತ ಮುತ್ತಾತ ಆಚಾರ್ಯ ಯಾರೂ ಕಾಣದ ದೇವರ ಬಗ್ಗೆ ನೀವು ವಾದಿಸುತ್ತಿದ್ದೀರಿ ನೀವೂ, ನಿಮ್ಮ ಪೂರ್ವಿಕರು ಯಾರೂ ನೋಡದೆ ಇರುವುದರ ಬಗ್ಗೆ ನೀವು ಜಗಳವಾಡುತ್ತಿದ್ದೀರಿ. ಒಬ್ಬರೊಬ್ಬರ ಕುತ್ತಿಗೆಯನ್ನು ಕತ್ತರಿಸುವ ಮಟ್ಟಕ್ಕೆ ನೀವು ಇಳಿದಿದ್ದೀರಲ್ಲ'. ಬುದ್ಧ ಮರುಕ ಪಟ್ಟ.

'ಹಾಗಾದರೆ ನಾವು ಏನು ಮಾಡಬೇಕು ಹೇಳಿ, ಭಗವಾನ್' ಯುವಕರು ಏಕ ಕಂಠದಿಂದ ಬುದ್ಧ ದೇವನನ್ನು ಒತ್ತಾಯಿಸಿದರು.

'ಈಗ ಹೇಳಿ, ನಿಮ್ಮ ತಂದೆ ತಾತಂದಿರು ಎಂದಾದರೂ ದೇವರು ಕೋಪಿಷ್ಠ ಎಂದು ನಿಮಗೆ ತಿಳಿಸಿದ್ದಾರೆಯೆ?'

'ಇಲ್ಲ, ಗುರುವೆ'

'ದೇವರು ದುಷ್ಟ ಎಂದು ಅವರು ನಿಮಗೆಂದಾದರೂ ಹೇಳಿದ್ದಾರೆಯೆ? ನಿಮ್ಮ ಧರ್ಮಗ್ರಂಥಗಳು ಹಾಗೆ ಬೋಧಿಸುತ್ತವೆಯೆ?'

'ಇಲ್ಲ, ಸ್ವಾಮಿ ದೇವರು ಯಾವಾಗಲೂ ಪರಿಶುದ್ಧ, ಪರಮ ಪವಿತ್ರ'

'ಹಾಗಾದರೆ ನೀವು ಪರಿಶುದ್ಧರೂ ಒಳ್ಳೆಯವರೂ ಆದರೆ ನೀವು ಆ ದೇವರ ಸನಿಹಕ್ಕೆ ಬರಲು ಸಾಧ್ಯವಾಗುತ್ತದೆ. ಹೀಗೆಲ್ಲ ವಾದಿಸುವುದರಿಂದ ಅದು ಸಾಧ್ಯವಾಗುವುದಿಲ್ಲ. ಆದ್ದರಿಂದ ಪರಿಶುದ್ಧರಾಗಿ ಒಳ್ಳೆಯವರಾಗಿ, ಎಲ್ಲರನ್ನೂ ಪ್ರೀತಿಸಿ', ಎಂದು ಆತ್ಮೀಯತೆಯಿಂದ ಬುದ್ಧ ಆದೇಶಿಸಿದ. ದೇವರಿಲ್ಲ ಎಂದ ನಕಾರಾತ್ಮಕವಾಗಿ ಹೇಳಿ, ಮನುಷ್ಯನನ್ನೇ ದೇವರನ್ನಾಗಿ ಬೆಳೆಸುವ ಸಕಾರಾತ್ಮಕ ಪ್ರಕ್ರಿಯೆ ಬುದ್ಧದೇವನದಾಗಿತ್ತು. ಅದು ಅವನಿಗೆ ಸ್ವಾನುಭವದಿಂದ ಸಿದ್ಧಿಸಿತ್ತು. ಇದು ಬುದ್ಧನ ಜೀವನ ಮತ್ತು ಉಪದೇಶಗಳ ಸಾರ ಎನ್ನಬಹುದು. ದೇವರೆಂಬುವ ವ್ಯಕ್ತಿ ಅಥವಾ ವಸ್ತು ಇಲ್ಲ. ಪಾವಿತ್ರ್ಯವೇ ದೇವರು. ಪರಿ ಶುದ್ಧತೆಯೇ ದೇವರು ಎಂದು ಈ ಸಂವಾದ ಸೂಚಿ ಸುತ್ತದೆ. ಹಾಗೂ ಕಾಣದ ದೇವರ ಬಗ್ಗೆ ನೂರಾರು ಬಗೆ ಯಲ್ಲಿ ಜಗಳ ಮಾಡುವ ಮೂರ್ಖತನವನ್ನೂ ಇದು ಗೇಲಿ ಮಾಡುತ್ತದೆ. ಇಷ್ಟಾದರೂ ಬುದ್ಧನಿಗೆ ಸ್ವಂತ ಉದ್ದೇಶ ಯಾವುದೂ ಇರಲಿಲ್ಲ.

ಎಲ್ಲವೂ ಲೋಕಕಾರುಣ್ಯ ಮತ್ತು ಲೋಕಹಿತಕ್ಕಾಗಿ ಪ್ರೇರೇಪಿತವಾಗಿತ್ತು. ಒಮ್ಮೆ ರಾಜನ ಯಾಗಕ್ಕಾಗಿ ತೆಗೆದುಕೊಂಡು ಹೋಗುತ್ತಿದ್ದ ಕುರಿಮಂದೆಯನ್ನು ನೋಡಿದಾಗ, 'ಕುರಿಯನ್ನು ಬಲಿಕೊಡುವುದರಿಂದ ನೀವು ಸ್ವರ್ಗಕ್ಕೆ ಹೋಗಲು ಸಾಧ್ಯವಾಗುವುದಾದರೆ, ಮನುಷ್ಯನನ್ನು ಬಲಿ ಕೊಡುವುದು ಇನ್ನೂ ಉತ್ತಮ, ನನ್ನನ್ನೇ ಯಜ್ಞಕ್ಕೆ ಅರ್ಪಿಸಿ', ಎಂದು ಬುದ್ಧ ಮುಂದಾದನು. ಆಶ್ಚರ್ಯಚಕಿತನಾದ. ಹೀಗೆ ಪಶು ಪಕ್ಷಿಗಳ ಮೇಲೆಲ್ಲ ಬುದ್ಧನಿಗೆ ಅಪಾರ ಮೈತ್ರಿಯಿತ್ತು. ಸಮಾನ ಪ್ರೀತಿಯಿತ್ತು. ಎಲ್ಲಿಯೂ ತಾರತಮ್ಯವಿರಲಿಲ್ಲ. ಜಗತು ಕಂಡ ಸಮಾನತಾ ತತ್ವಬೋಧಕರಲ್ಲಿ ಬುದ್ಧ ಮೊಟ್ಟ ಮೊದಲಿಗ. ಮಹೋನ್ನತ ದಾರ್ಶನಿಕ.

ಬುದ್ಧ ಬದುಕಿ ಉಪದೇಶ ನೀಡುತ್ತಿದ್ದ ವೇಳೆಗಾಗಲೇ ಸಂಸ್ಕೃತದ ಬಳಕೆ ತಪ್ಪಿಹೋಗಿತ್ತು. ಅವನ ಕೆಲವು ಬ್ರಾಹ್ಮಣ ಶಿಷ್ಯರು ಅವನ ಬೋಧನೆಯನ್ನು ಸಂಸ್ಕೃತ ಭಾಷೆಗೆ ತರ್ಜುಮೆ ಮಾಡಲು ಅವನ ಅನುಮತಿಯನ್ನು ಕೋರಿದರು. ಅದಕ್ಕೆ ಬುದ್ಧ, ಬೇಡಿ, ನಾನು ಬಡವರಿಗಾಗಿ ಇದ್ದೇನೆ. ಸಾಮಾನ್ಯ ಜನತೆಗಾಗಿ ಇದ್ದೇನೆ. ಜನಸಾಮಾನ್ಯರ ಭಾಷೆಯಲ್ಲಿ ನಾನು ಮಾತನಾಡುತ್ತೇನೆ',

ಎಂದು ಸ್ಪಷ್ಟವಾಗಿ ಹೇಳಿದ. ಆದ್ದರಿಂದ ಇವತ್ತಿಗೂ ಅವನ ಬೋಧನೆಯ ಭಾಗ [illegible] 'ತ್ರಿಪಿಟಕ'ಗಳಲ್ಲಿ ಜನಭಾಷೆಯಾದ ಪಾಳಿಯಲ್ಲೇ ಇದೆ.

ಸಾರ್ವತ್ರಿಕವಾಗಿ ಮೆಚ್ಚುಗೆಗೆ ಯೋಗ್ಯವಾಗುವಂಥ ಗುಣಗಳೇ ಬುದ್ಧನ ಬದುಕಿನುದ್ದಕ್ಕೂ ಹರಡಿಕೊಂಡಿವೆ. ಅವನು ರಾತ್ರೋರಾತ್ರಿ ಎಲ್ಲರನ್ನೂ ತೊರೆದು ಓಡಿ ಹೋದನೆಂದು ಅದು ದೋಷ ಎನ್ನುವುದಾದರೆ ಆಕ್ಷೇಪಿಸಬಹುದ. ಉಳಿದಂತೆ ಅವನು ಪ್ರಪಂಚದ ಎಲ್ಲಾ ಮಹಾಪುರುಷರಿಗೂ ಮಾದರಿಯಾಗಿ ಇದ್ದಾನೆನ್ನಿಸುತ್ತದೆ ರಾಮ, ಕೃಷ್ಣ, ಕ್ರಿಸ್ತ, ಮಹಮ್ಮದ್ (ಕಿ.ಶ. ೫೭೦–೬೩೨) ಮುಂತಾದವರೆಲ್ಲ ಬುದ್ಧನ ನಂತರ ಬಂದಿದ್ದರೂ ಬುದ್ಧನನ್ನು ಮೀರಿಸುವಂಥ ಗುಣಗಳು ಅವರಲ್ಲಿ ಕಾಣುವುದಿಲ್ಲ ಎಂದರೆ ಅತಿಶಯೋಕ್ತಿಯಾಗುವುದಿಲ್ಲ ಅವತಾರಿ ಎನ್ನಲಾದ ಶ್ರೀರಾಮ ಮರೆಯಲ್ಲಿ ನಿಂತು (ಅದಕ್ಕೆ ಏನೇ ಸಬೂಬು ಇರಲಿ) ವಾಲಿಯನ್ನು ಕೊಲ್ಲುವುದು ಅವನಿಗೆ ತಕ್ಕುದಾಗಿರಲಿಲ್ಲ.

ಆಮೇಲೆ ಸೀತೆಯನ್ನು ಭೂದೇವಿ ತನ್ನ ಗರ್ಭದೊಳಕ್ಕೆ ಸೆಳೆದುಕೊಂಡಾಗ ಅವನು ಬಾಳಿನ ಕೊನೆಯಲ್ಲಿ ಹತಾಶನಾಗಿ ಸರಯೂ ನದಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಎಗುತ್ತೊಬ್ಬ ಅವತಾರಿ ಶ್ರೀಕೃಷ್ಣ ತನ್ನ ಜನರಾದ ಯಾದವರು ತಮ್ಮ ತಮ್ಮಲ್ಲೇ ಕಚ್ಚಾಡಿ ಹೊಡೆದಾಡಿ ನಾಶವಾದುದನ್ನು ಕಂಡು, ಬೇಸರ ಜಿಗುಪ್ಸೆಗಳಿಂದ ಪ್ರತಿಹತನಾಗಿ ಕಾಡಿಗೆ ಹೋಗುತ್ತಾನೆ ಅಲ್ಲಿ ಮರದ ಕೆಳಗೆ ಮಲಗಿದ್ದಾಗ ಬೇಡನೊಬ್ಬ ಅವನನ್ನು ಮೃಗವೆಂದು ತಪ್ಪಾಗಿ ತಿಳಿದು ಬಾಣ ಹೊಡೆದು ಕೊಲ್ಲುತ್ತನೆ. "ನಾನು ಮತ್ತು ನನ್ನ ತಂದೆ ಬಂದು" ಎಂದು ಏಸುಕ್ರಿಸ್ತ ಹೇಳುವಲ್ಲಿ ತಾನೆ ದೇವರು ಎಂಬ ಇಂಗಿತವಿದೆ. ಆತ ತನ್ನ ಬದುಕಿನ ಅಂತ್ಯದಲ್ಲಿ ವಿಫಲತೆಯನ್ನು ಅನುಭವಿಸಿದಂತೆ ಕಾಣುತ್ತದೆ. ಅವನನ್ನು ಶಿಲುಬೆಗೆ ಏರಿಸಿ ಮೊಳೆ ಬಡಿದು ನೇಣು ಹಾಕಿದಾಗ ಅತ್ಯಂತ ಅರ್ತನಾಗಿ 'ಓ ತಂದೆಯೇ, ನನ್ನನ್ನೇಕೆ ಕೈಬಿಟ್ಟೆ?' ಎಂದು ಮೊರೆಯಿಡುತ್ತಾನೆ. ಮತ್ತೆ ಕೂಡಲೇ ಆತ 'ಅವರನ್ನು ಕ್ಷಮಿಸು; ಅವರು ಏನು ಮಾಡುತ್ತಿದ್ದಾರೆಂದು ಅವರಿಗೆ ಗೊತ್ತಿಲ್ಲ' ಎಂದು ಆಡಿದನೆಂಬ ಮಾತಿನಲ್ಲಿ ದೊಡ್ಡತನ ಇರುವುದರ ಜೊತೆಗೆ ಅಹಂಕಾರವೂ ಇದೆ ಎನಿಸುತ್ತದೆ. ನನಗೆ ಗೊತ್ತು, ಅವರಿಗೆ ಗೊತ್ತಿಲ್ಲ ಎಂದು ಸೂಚಿತವಾಗುವುದರಿಂದ ಮಹಮ್ಮದನ ಕೊನೆಗಾಲ ಸಹ ದುಃಖಮಯವಾಗಿದೆ. ಪ್ರಪಂಚದ ಎಲ್ಲಾ ಮಹಾಪುರುಷರೂ ತಾವು ದೇವರ ಅವತಾರ ಅಥವಾ ಅಂಶವೇ ಆಗಿದ್ದೇವೆ ಎಂಬ ನಂಬಿಕೆಯುಳ್ಳವರಾಗಿದ್ದಾರೆ. ಶ್ರೀರಾಮ ಮತ್ತು ಶ್ರೀಕೃಷ್ಣ ದೇವರೆಂದೇ ಪೂಜೆಗೊಳ್ಳುತ್ತಿದ್ದಾರೆ.

ಶ್ರೀಕೃಷ್ಣ 'ಎಲ್ಲವನ್ನೂ ಬಿಟ್ಟು ನನ್ನಲ್ಲಿ ಶರಣು ಹೋಗು. ನಿನ್ನನ್ನು ಎಲ್ಲ ಪಾಪಗಳಿಂದಲೂ ನಾನು ಬಿಡುಗಡೆ ಮಾಡುತ್ತೇನೆ ಶೋಕಿಸಬೇಡ–ಸರ್ವ ಧರ್ಮಾನ್ ಪರಿತ್ಯಜ್ಯ ಮಾಂಏಕಂ ಶರಣಂ ವ್ರಜ, ಅಹಂ ತ್ವಾನ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ 'ಎಂದು ಭಗವದ್ಗೀತೆಯಲ್ಲಿ (೧೮–೬೬) ಘೋಷಿಸಿದ್ದಾನೆ. ಇಸ್ಲಾಮಿನ ಸಂಸ್ಥಾಪಕನಾದ ಪ್ರವಾದಿ ಮಹಮ್ಮದ್, 'ದಾರಿ ತೋರಲು ದೇವರು ಪ್ರಪಂಚಕ್ಕೆ ಆಗಾಗ್ಗೆ ಪ್ರವಾದಿಗಳನ್ನು ಕಳುಹಿಸುತ್ತಾನೆ. ಅವರಲ್ಲಿ ನಾನೇ ಕೊನೆಯ ಪ್ರವಾದಿ ಎಂದು ಕುರಾನ್‌ನಲ್ಲಿ ಹೇಳುತ್ತಾನೆ. ಅಂದರೆ 'ನನ್ನ ಮಾತೇ ಕೊನೆ' ಎಂದು ಆದೇಶಿಸುವುದರ ಅಪರಿಪೂರ್ಣತೆ ಮತ್ತು ಅಹಂಕಾರದ ಲಕ್ಷಣವಾಗುತ್ತದೆ. ಆದರೆ ಬುದ್ಧ ದೇವತ್ವದ ಈ ಯಾವುದನ್ನೂ ಆರೋಪಿಸಿಕೊಳ್ಳದಿರುವುದು ಅವನ ವೈಶಿಷ್ಟ್ಯ. ಬುದ್ಧ ಮನುಷ್ಯನಾಗಿ ಹುಟ್ಟಿ 'ದೇವತ್ವ' ಸಂಪಾದಿಸಿ 'ದೇವರೇ ಆದರೂ ಅದನ್ನು ಕಡೆಗಣಿಸಿ ಮನುಷ್ಯನಂತೆ ನಡೆದುಕೊಂಡ ಏಕೆ ಮಾನವ ನಾನು ನಿಮ್ಮ ಹಾಗೆ ಹುಟ್ಟಿದ ಮನುಷ್ಯ. ಈ ದಾರಿಯಲ್ಲಿ ನಾನು ನಡೆದು ಈ ಸತ್ಯಗಳನ್ನು ಕಂಡುಕೊಂಡಿದ್ದೇನೆ. ನೀವು ಈ ದಾರಿಯಲ್ಲಿ ಹೋಗಿ ನೋಡಿ. ಇವು ಸತ್ಯವೆಂದು ಗೊತ್ತಾದರೆ ಇವುಗಳನ್ನು ಒಪ್ಪಿಕೊಳ್ಳಿ, ಇಲ್ಲದಿದ್ದರೆ ತಿರಸ್ಕರಿಸಿ' ಎಂದು ಕರೆಕೊಟ್ಟಿರುವುದು ಅವನ ಜಿಜ್ಞಾಸೆಯ ಮನೋಭಾವವನ್ನು ತೋರಿಸುತ್ತದೆ. ಜಿಜ್ಞಾಸೆಯ ಜ್ಞಾನದ ಮೂಲ ಶೂಲ. ನಾನು ಹೇಳಿದ್ದೇ ಕೊನೆಯ ಮಾತು ಎಂಬ ಧೋರಣೆಯನ್ನು ಬುದ್ಧ ಎಂದೂ ತಾಳಲಿಲ್ಲ. ಆದ್ದರಿಂದ ಬುದ್ಧ ಧಮ್ಮ ಮೂಲಭೂತವಾದವಾಗಲು ಮತ್ತು ಅದರ ಅನುಯಾಯಿಗಳು ಮೂಲಭೂತವಾದಿಗಳಾಗಲು ಸಾಧ್ಯವಿಲ್ಲ. ಏಕೆಂದರೆ ಸಂಪೂರ್ಣ. ಸ್ವತಂತ್ರ ಮನಸ್ಸು ಸಂಕುಚಿತವಾದಕ್ಕೆ ಸಿಡಿಲಿನ ಸಿಡಿಮದ್ದು'.

ಪ್ರಪಂಚದ ಮಹಾಪುರುಷರು ಮತ್ತು ಧರ್ಮ ಸಂಸ್ಥಾಪಕರನ್ನು ನೋಡಿದರೆ ಅವರೆಲ್ಲ ತಮ್ಮ ಕೊನೆಗಾಲದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಹತಾಶರಾಗಿರುವುದು ಮತ್ತು ಶೋಕಭರಿತರಾಗಿರುವುದು ಕಂಡು ಬರುತ್ತದೆ. ಆದರೆ ಬುದ್ಧನ ಅವಸಾನ ಅತ್ಯಂತ ಆನಂದಕರವಾಗಿದೆ. ಚುಂದನೆಂಬ 'ಅಸ್ಪೃಶ್ಯ' ಅವನನ್ನು ತನ್ನ ಮನೆಗೆ ಕರೆದು ಹಂದಿ ಮಾಂಸವನ್ನು ಬಡಿಸಿದಾಗ ಬುದ್ಧ ಸಂತೋಷದಿಂದ ಊಟ ಮಾಡಿದ. ಆದರೆ ಮುಪ್ಪಿನಿಂದಾಗಿ ಅದನ್ನು ಜೀರ್ಣಿಸಿಕೊಳ್ಳಲು ಆಗದೆ ಆಮಶಂಕೆಗೆ ಗುರಿಯಾದ. ಸ್ವಲ್ಪ ಚೇತರಿಸಿಕೊಂಡರೂ ಅವನ ಆರೋಗ್ಯ ಕೆಟ್ಟಿತ್ತು ಕೊನೆಯ ಗಳಿಗೆಯಲ್ಲಿ ಚುಂದ ಹೋಗಿ ಅಳುತ್ತಾ ನಿಂತಿದ್ದಾಗ ಬುದ್ಧ ಅವನನ್ನು ತನ್ನ ಬಳಿಗೆ ಕರೆದು ಮೈದಡವಿ 'ಅಳಬೇಡ, ತಥಾಗತನಿಗೆ ಕೊನೆಯ ಊಟ ನೀಡಿದ ಪುಣ್ಯಾತ್ಮ ನೀನು' ಎಂದು ಸಾಂತ್ವನದ ನುಡಿಗಳನ್ನು ಆಡಿದ ತನ್ನ ಜೀವನದ ಉದ್ದಕ್ಕೂ ಸಮಾನತೆಯನ್ನು ಬೋಧಿಸಿ ಚಳಿಸುತ್ತಿದ್ದ ಬುದ್ಧ ತನ್ನ ಅಂತ್ಯದಲ್ಲಿ ಅದನ್ನು ಅತಿಶಯವಾಗಿ ಅನುಷ್ಠಾನ ಮಾಡಿದ್ದಾನೆ. ಆಗಿನ ಧರ್ಮ ಮತ್ತು ಸಮಾಜದಲ್ಲಿ ಪಾಪಿಗಳು 'ಕೆಳ ಜಾತಿಯಲ್ಲಿ ಹುಟ್ಟುತ್ತಾರೆಂಬ ಭಾವನೆ ಮತ್ತು ಸಿದ್ಧಾಂತ ಪಾಚಿಗಟ್ಟಿತ್ತು ಅದನ್ನು ಬುದ್ಧ ಕೇವಲ ಸಾಧಾರಣವಾಗಿ ತೋರುವ ಒಂದು ಮಾತಿನಿಂದ–'ನೀನು ಪುಣ್ಯಾತ್ಮ' ಎನ್ನುವುದರಿಂದ ತೊಡೆದು ಹಾಕಿದ್ದಾನೆ. ಅವನು ಕಾಲದ ಇತಿಹಾಸ ಮತ್ತು ಜನರ ಮನೋಭಾವನೆಯನ್ನು ಗಮನಿಸಿದರೆ ಬುದ್ಧನ ಮಾತು ತೀರಾ ಕ್ರಾಂತಿಕಾರಕವಾಗಿದೆ.

ಬುದ್ಧನ ಬದುಕೆಲ್ಲ ಕ್ರಾಂತಿ ಮಾಡುತ್ತೇನೆಂದು ಹೇಳಿಕೊಳ್ಳದೆ ಅಭೂತಪೂರ್ವ ಕ್ರಾಂತಿ ಮಾಡಿದ ಸಾಮಾನ್ಯ ಚಳುವಳಿಯಾಗಿದೆ; ಘರ್ಷಣೆ ಇಲ್ಲದೆ ನಯವಾಗಿ ಅರಿವಳಿಕೆ ನೀಡಿ ಮಾಡಿದ ಅಪರೂಪದ ಶಸ್ತ್ರಚಿಕಿತ್ಸೆಯಾಗಿದೆ. ಆಗಿನ ರಾಜಕೀಯ ವ್ಯವಸ್ಥೆ ಮತ್ತು ಆಡಳಿತದ ಪದ್ಧತಿಯ ಬಗ್ಗೆ ಬುದ್ಧನಿಗೆ ಯಾವ ವಿರೋಧವೂ ಇದ್ದಂತೆ ಕಾಣುವುದಿಲ್ಲ. ಅದನ್ನು ಅವನು ಬಹುವಾಗಿ ಒಪ್ಪಿಕೊಂಡಿರುವಂತೆ ತೋರುತ್ತದೆ. ಅಲ್ಲದಿದ್ದರೆ ಅಂದಿನ ರಾಜಮಹಾರಾಜರುಗಳು ಅವನ ಬರುವಿಕೆಗೆ ಹಾತೊರೆದು ಅವನಿಗೆ ನಡೆಮಡಿ ಹಾಸುತ್ತಿರಲಿಲ್ಲ ಬುದ್ಧನದೆಲ್ಲ ಬುದ್ಧಿಯ ಬದಲಾವಣೆ ಬಾವದಲ್ಲಿ ಬದಲಾವಣೆ ಆದಾಗ ಮಾತ್ರ ಭವದಲ್ಲಿ ಬದಲಾವಣೆ ಸಾಧ್ಯ ಆದ್ದರಿಂದ ಬುದ್ಧಿ ಬದಲಾದರೆ ಎಲ್ಲವೂ ಬದಲಾಗುತ್ತದೆಂದು. ಅವನು ಸ್ವಾನುಭವದಿಂದ ಕಂಡುಕೊಂಡಿದ್ದನು. ಇಹವನ್ನು ಮೇಲು ಕೀಳಿಲ್ಲದೆ ಎಲ್ಲರೂ ಸುಖವಾಗಿ ಬಾಳುವ ನಡೆಸುವ ನೆಲೆಯನ್ನಾಗಿ ಮಾಡುವ ತವಕ ಅವನದಾಗಿತ್ತು. ಅದನ್ನು ಅವನು ತನ್ನ ಸಂಘ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ಕೈಗೂಡಿಸಿಕೊಂಡು ಕೃತಾರ್ಥನಾಗಿದ್ದನು.

ಬುದ್ಧ ಧಮ್ಮದಲ್ಲಿ ಮೂರು ಮುಖ್ಯ ಅಂಶಗಳಿವೆ; ಬುದ್ಧ, ಧಮ್ಮ ಮತ್ತು ಸಂಘ (ಬುದ್ಧಂ...ಧಮ್ಮಂ.. ಸಂಘಂ...ಶರಣಂ ಗಚ್ಛಾಮಿ') ಶರಣಂ ಎಂಬುದಕ್ಕೆ ಅರ್ಪಿಸಿಕೊಳ್ಳುವುದು ಅಡಿಯಾಳಾಗುವುದು, ಅಧೀನನಾಗುವುದು ಎಂದು ಸಾಧಾರಣವಾಗಿ ಅರ್ಥಮಾಡಿಕೊಂಡರೆ ಬುದ್ಧನಿಗೆ ದೊಡ್ಡ ಅಪಚಾರ ಎಸಗಿದಂತಾಗುತ್ತದೆ. ಬುದ್ಧ ಎಂದರೆ ಒಂದು ವ್ಯಕ್ತಿಯಲ್ಲ. ಅದು ಜ್ಞಾನದ ತುತ್ತ ತುದಿ: ಸಂಕೇತ ಬುದ್ಧ ಮತ್ತು ಆತನ ಧಮ್ಮವನ್ನು ನಿಖರವಾಗಿ ಅರ್ಥ ಮಾಡಿಕೊಂಡರೆ, ಆ ದಾರಿಯಲ್ಲಿ ನಡೆದರೆ ಅದೇ ಸರಿ ಎಂದು ಅನುಭವವಾಗಿ ಅದನ್ನು ಒಪ್ಪಿಕೊಳ್ಳುವುದು ಎಂದು ಅರ್ಥ. ಅರ್ಥವಾಗದೆ. ಅನುಭಾವವಾಗದೆ ಅಂಗೀಕರಿಸುವುದು ಮೌಢ್ಯ ವಾಗುತ್ತದೆ. ಹಾಗೆ ಮಾಡಿದರೆ ಬುದ್ಧ

ಬುದ್ಧ ದೇವತ್ವದ ಯಾವುದನ್ನೂ ಆರೋಪಿಸಿಕೊಳ್ಳದಿರುವುದು ಅವನ ವೈಶಿಷ್ಟ್ಯ. ಬುದ್ಧ ಮನುಷ್ಯನಾಗಿ ಹುಟ್ಟಿ 'ದೇವತ್ವ' ಸಂಪಾದಿಸಿ 'ದೇವರೇ' ಆದರೂ ಅದನ್ನು ಕಡೆಗಣಿಸಿ ಮನುಷ್ಯನಂತೆ ನಡೆದುಕೊಂಡ ಏಕೈಕ ಮಾನವ. ನಾನು ನಿಮ್ಮ ಹಾಗೆ ಹುಟ್ಟಿದ ಮನುಷ್ಯ. ಈ ದಾರಿಯಲ್ಲಿ ನಾನು ನಡೆದು ಈ ಸತ್ಯಗಳನ್ನು ಕಂಡುಕೊಂಡಿದ್ದೇನೆ. ನೀವು ಈ ದಾರಿಯಲ್ಲಿ ಹೋಗಿ ನೋಡಿ. ಇವು ಸತ್ಯವೆಂದು ಗೊತ್ತಾದರೆ ಇವುಗಳನ್ನು ಒಪ್ಪಿಕೊಳ್ಳಿ. ಇಲ್ಲದಿದ್ದರೆ ತಿರಸ್ಕರಿಸಿ' ಎಂದು ಕರೆಕೊಟ್ಟಿರುವುದು ಅವನ ಜಿಜ್ಞಾಸೆಯ ಮನೋಭಾವವನ್ನು ತೋರಿಸುತ್ತದೆ. ಜಿಜ್ಞಾಸೆಯು ಜ್ಞಾನದ ಮೂಲ ಶೂಲ. ನಾನು ಹೇಳಿದ್ದೇ ಕೊನೆಯ ಮಾತು ಎಂಬ ಧೋರಣೆಯನ್ನು ಬುದ್ಧ ಎಂದೂ ತಾಳಲಿಲ್ಲ. ಆದ್ದರಿಂದ ಬುದ್ಧ ಧಮ್ಮ ಮೂಲಭೂತವಾದವಾಗಲು ಮತ್ತು ಅದರ ಅನುಯಾಯಿಗಳು ಮೂಲಭೂತವಾದಿಗಳಾಗಲು ಸಾಧ್ಯವಿಲ್ಲ. ಏಕೆಂದರೆ ಸಂಪೂರ್ಣ ಸ್ವತಂತ್ರ ಮನಸ್ಸು ಅದು. ಸಂಕುಚಿತವಾದಕ್ಕೆ ಸಿಡಿಮದ್ದು.

> **ಬುದ್ಧ ಧಮ್ಮದಲ್ಲಿ ಮೂರು ಮುಖ್ಯ ಅಂಶಗಳಿವೆ; ಬುದ್ಧ, ಧಮ್ಮ ಮತ್ತು ಸಂಘ (ಬುದ್ಧಂ...ಧಮ್ಮಂ.. ಸಂಘಂ...ಶರಣಂ ಗಚ್ಛಾಮಿ') ಶರಣಂ ಎಂಬುದಕ್ಕೆ ಅರ್ಪಿಸಿಕೊಳ್ಳುವುದು ಅಡಿಯಾಳಾಗುವುದು, ಅದೀನನಾಗುವುದು ಎಂದು ಸಾಧಾರಣವಾಗಿ ಅರ್ಥಮಾಡಿಕೊಂಡರೆ ಬುದ್ಧನಿಗೆ ದೊಡ್ಡ ಅಪಚಾರ ಎಸಗಿದಂತಾಗುತ್ತದೆ. ಬುದ್ಧ ಎಂದರೆ ಒಂದು ವ್ಯಕ್ತಿಯಲ್ಲ. ಅದು ಜ್ಞಾನದ ತುತ್ತತುದಿ: ಸಂಕೇತ. ಬುದ್ಧ ಮತ್ತು ಆತನ ಧಮ್ಮ ವನ್ನು ನಿಖರವಾಗಿ ಅರ್ಥಮಾಡಿಕೊಂಡರೆ, ಆ ದಾರಿಯಲ್ಲಿ ನಡೆದರೆ ಅದೇ ಸರಿ ಎಂದು ಅನುಭವವಾಗಿ ಅದನ್ನು ಒಪ್ಪಿಕೊಳ್ಳುವುದು ಎಂದು ಅರ್ಥ. ಅರ್ಥವಾಗದೆ. ಅನುಭಾವವಾಗದೆ ಅಂಗೀಕರಿಸುವುದು ಮೌಢ್ಯವಾಗುತ್ತದೆ. ಹಾಗೆ ಮಾಡಿದರೆ ಬುದ್ಧ ಧಮ್ಮಕ್ಕೆ ಭಾರಿ ಹಾನಿಮಾಡಿದಂತೆಯೆ ಹೌದು. ಸರಿಯಾದುದನ್ನು ಅರಿತವನು ಬುದ್ಧ. ಅದನ್ನು ಆತ ಬದುಕಿ ತೋರಿಸಿದುದರಿಂದ ಅದು ಧಮ್ಮವಾಯಿತು. ಅದನ್ನು ಹರಡುವುದಕ್ಕಾಗಿ ಆತ ಕಟ್ಟಿದ ವ್ಯವಸ್ಥೆಯ ಸಂಘ ಬುದ್ಧಧರ್ಮ ಮನೋ ವಾಕ್ಕಾಯಗಳ ತ್ರಿಕರಣ/ಪೂರ್ವಕ ಸಾಧನೆಯ ಸಮೀಕರಣ; ಸಾಕ್ಷಾತ್ಕಾರ. ಬುದ್ಧ ತನ್ನ ನಲವತ್ತು ಜನ ಶಿಷ್ಯರನ್ನು ಆರಿಸಿ ಅವರನ್ನು ಪ್ರಪಂಚದೆಡೆ ಕಳುಹಿಸುವಾಗ ಹೇಳಿದ ಮಾತು ದೊಡ್ಡದು; 'ನೀವು ಹೋಗಿ ಎಲ್ಲ ಜನಾಂಗಗಳು ಮತ್ತು ಎಲ್ಲ ರಾಷ್ಟ್ರಗಳ ಜೊತೆ ಬೆರೆಯಿರಿ'. ಕಾಲ ದೇಶ ಜಾತಿ ಮತ ಎಲ್ಲವನ್ನೂ ಮೀರಿ ಬುದ್ಧ ಧಮ್ಮ ಪ್ರಪಂಚದ ಹೃದ ಯವನ್ನು ಹೊಕ್ಕಿತ್ತು.**

ಧಮ್ಮಕ್ಕೆ ಭಾರಿ ಹಾನಿಮಾಡಿದಂತೆಯೆ ಹೌದು. ಸರಿಯಾದುದನ್ನು ಅರಿತವನು ಬುದ್ಧ. ಅದನ್ನು ಆತ ಬದುಕಿ ತೋರಿಸಿದುದರಿಂದ ಅದು ಧಮ್ಮವಾಯಿತು. ಅದನ್ನು ಹರಡುವುದಕ್ಕಾಗಿ ಆತ ಕಟ್ಟಿದ ವ್ಯವಸ್ಥೆಯ ಸಂಘ ಬುದ್ಧ ಧರ್ಮ ಮನೋವಾಕ್ಕಾಯಗಳ ತ್ರಿಕರಣ/ಪೂರ್ವಕ ಸಾಧನೆಯ ಸಮೀಕರಣ; ಸಾಕ್ಷಾತ್ಕಾರ.

ಬುದ್ಧ ತನ್ನ ನಲವತ್ತು ಜನ ಶಿಷ್ಯರನ್ನು ಆರಿಸಿ ಅವರನ್ನು ಪ್ರಪಂಚದೆಡೆ ಕಳುಹಿಸುವಾಗ ಹೇಳಿದ ಮಾತು ದೊಡ್ಡದು; 'ನೀವು ಹೋಗಿ ಎಲ್ಲ ಜನಾಂಗಗಳು ಮತ್ತು ಎಲ್ಲ ರಾಷ್ಟ್ರಗಳ ಜೊತೆ ಬೆರೆಯಿರಿ'. ಕಾಲ ದೇಶ ಜಾತಿ ಮತ ಎಲ್ಲವನ್ನೂ ಮೀರಿ ಬುದ್ಧ ಧಮ್ಮ ಪ್ರಪಂಚದ ಹೃದಯವನ್ನು ಹೊಕ್ಕಿತ್ತು.

ಬುದ್ಧನ ಸ್ಮರಣೀಯ ಮಾತುಗಳು ಇವು 'ಪ್ರಾಚೀನ ಗ್ರಂಥವನ್ನು ತೋರಿಸಿ ಇದು ಪ್ರಮಾಣವೆಂದು ಹೇಳಿದರೆ ನಂಬಬೇಡಿ. ಎಲ್ಲವನ್ನೂ ಪರೀಕ್ಷಿಸಿ. ಎಲ್ಲವನ್ನೂ ಪ್ರಯತ್ನಿಸಿ. ಅದರಲ್ಲಿ ಬಹು ಜನ ಹಿತ, ಬಹು ಜನ ಸುಖ ಕಂಡರೆ ಅದನ್ನು ಎಲ್ಲರಿಗೂ ನೀಡಿ' ಎಂದು ಹೇಳಿ ಬುದ್ಧದೇವ ಮಹಾ ಪರಿನಿರ್ವಾಣಕ್ಕೆ ಸಂದನು.

ಬುದ್ಧನ ಮಾನಸಿಕ ಸ್ವಾಸ್ಥ್ಯ ಅಪೂರ್ವವಾದುದು. ಅಲ್ಲಿ ದೇವರು, ದೇವತೆಗಳು, ದೇವದೂತರು, ಭೂತಗಣಗಳೂ ಯಾವುದಕ್ಕೂ ಜಾಗವಿಲ್ಲ ಅವನದು ಸ್ವಚ್ಛ ಮನಸ್ಸು, ಪರಿಪೂರ್ಣವಾದ ಮನಸ್ಸು. ಸಾವಿರ ಗಳಿಗೆಯಲ್ಲೂ ಅವನ ಮಿದುಳಿನ ಪ್ರತಿಯೊಂದು ಜೀವಕೋಶವೂ ಸಂಪೂರ್ಣವಾಗಿ ಆರೋಗ್ಯಕರವಾಗಿತ್ತು. ಬುದ್ಧ ಪ್ರಪಂಚ ಕಂಡ ಅತ್ಯಂತ ಸ್ವಸ್ಥ ಉಪದೇಶಕ, ದೊಡ್ಡ ಧರ್ಮಗುರು.

ಬುದ್ಧ ಮಹಾ ಪರಿನಿರ್ವಾಣ ಹೊಂದುವ ಸಮಯದಲ್ಲಿ ಆತನ ಶಿಷ್ಯರು ಗುರುವಿಗೆ ಹೀಗೆ ಭಿನ್ನವಿಸಿದರು: 'ನಿಮ್ಮ ನಿರ್ವಾಣಾನಂತರ ನಾವು ಏನು ಮಾಡಬೇಕು? ತಿಳಿಸಿ'.

'ಏನೂ ಇಲ್ಲ'.

'ನಿಮಗೆ ನಾವೇನು ಸ್ಮಾರಕ ನಿರ್ಮಿಸೋಣ?' ಬುದ್ಧತ್ವ ವಿಗ್ರಹತ್ವದಿಂದ ಸಿದ್ಧಿಸುವುದೆ? ಭೌತಿಕ ಕೆಲಸ, ಬೌದ್ಧಿಕ ಕ್ರಿಯೆಗಿಂತ ಸುಲಭ, ನಿಜ.

'ನಿಮಗೆ ಇಷ್ಟವಿದ್ದರೆ ನನ್ನನ್ನು ಮಣ್ಣಿನಲ್ಲಿ ಮುಚ್ಚಿಬಿಡಿ, ಇಲ್ಲದಿದ್ದರೆ ಏನನ್ನೂ ಮಾಡಬೇಡಿ' ಎಂದು ಬುದ್ಧ ಹೇಳಿದರೂ ಅವನಿಗಾಗಿ ಅಸಂಖ್ಯಾತ ಮಂದಿರಗಳು ನಿರ್ಮಾಣವಾದವು.

ತನ್ನ ಶಿಷ್ಯರಿಗೆ ಬುದ್ಧ ಹೇಳಿದ: 'ಈ ಮರದ ಕೆಳಗೆ ಏನಾದರೂ ಹಾಸಿ. ನನ್ನ ಕೊನೆಗಾಲ ಸಮೀಪಿಸುತ್ತಿದೆ ಎಂದು ನನಗನ್ನಿಸುತ್ತಿದೆ'. ಬುದ್ಧ ಕುಳಿತುಕೊಳ್ಳಲು ಆಗದೆ ಕೆಳಗೆ ಮಲಗಿದ. ಅವನು ಕೂಡಲೇ ಹೇಳಿದ ಮೊದಲ ಕೆಲಸ: 'ಹೋಗಿ ಚುಂದನಿಗೆ ತಿಳಿಸಿ. ಆತ ನನ್ನ ಅತ್ಯುತ್ತಮ ದಾನಿಗಳಲ್ಲಿ ಒಬ್ಬ. ಅತ ಕೊಟ್ಟ ಊಟದಿಂದ ನಾನು ನಿರ್ವಾಣ ಪಡೆಯುತ್ತಿದ್ದಾನೆ. ಈ ದೇಹದಿಂದ ಬಿಡುಗಡೆ ಹೊಂದುತ್ತಿದ್ದೇನೆ'.

ಆಗ ಅನೇಕರು ಗುರುವಿನಿಂದ ಉಪದೇಶ ಪಡೆಯಲು ಬಂದರು. ಒಬ್ಬ ಭಿಕ್ಷು, 'ಈಗ ಹತ್ತಿರ ಹೋಗಬೇಡಿ ಗುರುದೇವ ನಿರ್ವಾಣ ಹೊಂದುತ್ತಿದ್ದಾರೆ', ಎಂದ. ಅದನ್ನು ಕೇಳಿಸಿಕೊಂಡ ಗುರುದೇವ 'ಅವರನ್ನು ನನ್ನ ಬಳೀ ಬಿಡಿ' ಎಂದನು ಆಮೇಲೆ ಇನ್ಯಾರೊ ಬಂದರು. ಆಗ ಸಾಯುವ ಸ್ಥಿತಿಯಲ್ಲಿದ್ದ ಗುರು ಹೇಳಿದ: 'ಓ ಆನಂದ! ನಾನು ಗತಿಸುತ್ತಿದ್ದೇನೆ. ನನಗಾಗಿ ಅಳಬೇಡಿ. ನನ್ನನ್ನು ಹಚ್ಚಿಕೊಳ್ಳಬೇಡಿ. ನನ್ನ ಬದುಕು ಮುಗಿಯಿತು. ನಿಮ್ಮ ಬಿಡುಗಡೆಯನ್ನು ನೀವೇ ಎಚ್ಚರಿಕೆಯಿಂದ ಕಂಡುಕೊಳ್ಳಿ, ನಿಮ್ಮಲ್ಲಿ ಪ್ರತಿಯೊಬ್ಬರೂ ನನ್ನ ಹಾಗೇ ಇದ್ದೀರಿ ನಿಮ್ಮಲ್ಲಿ ನಾನು ಒಬ್ಬ ಅಷ್ಟೇ, ಮತ್ತೇನೂ ಅಲ್ಲ. ಇವೊತ್ತು ನಾನು ಏನಾಗಿದ್ದೇನೆಯೊ ಅದು ನಾನು ನನ್ನನ್ನೆ ರೂಪಿಸಿಕೊಂಡಿದ್ದರ ಫಲ. ನೀವು ಶ್ರದ್ಧೆಯಿಂದ ಶ್ರಮಿಸಿ. ನಾನು ಏನಾಗಿದ್ದೇನೆಯೋ ಅದು ನೀವಾಗಬೇಕು'.

ಪೂಜೆ, ಯಜ್ಞ, ವಿಧಿ ವಿಧಾನಗಳು ಧರ್ಮವಲ್ಲ. ಧರ್ಮವೆಂದರೆ ಒಂದು ಗಳಿಗೆ ಪ್ರಾರ್ಥನೆ ಸಲ್ಲಿಸಿ, ನಂತರ ದಿನವೆಲ್ಲ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವುದಲ್ಲ. ಇಡೀ ಬದುಕೇ ಪ್ರಾರ್ಥನೆಯ ಹಾಗೆ ಪವಿತ್ರವಾಗಿ ಇರಬೇಕು ಎಂದು ಬಾಳಿ ತೋರಿಸಿದ ಮಹಾನುಭಾವ ಬುದ್ಧ. ಇದರಿಂದಾಗಿ ದೇವತೆಗಳು ತೀರಾ ಅಸಂತುಷ್ಟರಾದರು ಎಂಬ ಒಂದು ಕತೆ ಇದೆ: 'ಇವನು ಇದ್ದರೆ ನಮಗೆ ಉಳಿಗಾಲವಿಲ್ಲ. ಇವನಿಂದಾಗಿ ನಮಗೆ ಅರ್ಪಿತವಾಗುತ್ತಿದ್ದ ನೈವೇದ್ಯವೆಲ್ಲ ತಪ್ಪಿತು. ಏಕೆಂದರೆ ಇವನನ್ನು ನೋಡಿದರೇ ಜನರು ಪಾವನರಾಗುತ್ತಾರೆ.

ಇವನನ್ನು ಏನಾದರೂ ಮಾಡಿ ಮುಗಿಸಬೇಕು' ಎಂದು ದೇವತೆಗಳೆಲ್ಲ ಸೇರಿ ಸಂಚು ಹೂಡಿದರು. ಅವರೆಲ್ಲ ವೇಷ ಮರೆಸಿಕೊಂಡು ಬಂದು ಬುದ್ಧನನ್ನು ಬೇಡಿದರು: 'ಭಗವಾನ್, ನಾನು ದೊಡ್ಡ ಯಾಗ ಮಾಡಬೇಕೆಂದಿದ್ದೇವೆ. ಅದಕ್ಕಾಗಿ ಸೂಕ್ತ ಸ್ಥಳವನ್ನು ಹುಡುಕುತ್ತಿದ್ದೇವೆ. ಎಲ್ಲಿಯೂ ಯೋಗ್ಯ ಸ್ಥಳ ಸಿಗಲಿಲ್ಲ. ತಾವು ಅಪ್ಪಣೆ ಕೊಡಿಸುವುದಾದರೆ ಅದನ್ನು ಅರಹುತ್ತೇವೆ' ಎಂದರು. 'ಆಗಲಿ ಹೇಳಿ' ಎಂದು ಬುದ್ಧ ತಿಳಿಸಿದ. 'ನಾವು ಮಾಡಬೇಕಾದ ಯಜ್ಞಕ್ಕೆ ಬಹಳ ಪ್ರಶಸ್ತ ಜಾಗ ತಮ್ಮ ಎದೆ' ಎಂದರು. ಬುದ್ಧ ಹಿಂದೆ ಮುಂದೆ ನೋಡದೆ, 'ಆಗಲಿ, ನಿಮ್ಮ ಮಾಡಿ' ಎಂದು ಅಂಗಾತ ನೆಲದ ಮೇಲೆ ಮಲಗಿಬಿಟ್ಟನು.

ದೇವತೆಗಳು ಬಹಳ ಸಂತೋಷದಿಂದ ಅವನ ಎದೆಯ ಮೇಲೆ ಯಜ್ಞಕುಂಡವನ್ನು ರಚಿಸಿ ಬೆಂಕಿ ಹಾಕಿ ಬಹಳ ಹೊತ್ತು ಯಾಗ ಮಾಡಿ, ಯಜ್ಞಕುಂಡದ ಕೆಳಗಡೆ ಇದ್ದ ಬುದ್ಧನನ್ನು ತಾರಾಮಾರ ಜಜ್ಜಿ ಹೊಡೆದು ಎದ್ದರು. 'ನಮ್ಮ ವೈರಿಯಾದ ಇವನನ್ನು ನಾವು ತೀರಿಸಿದೆವು. ಇನ್ನು ಮೇಲೆ ನಾವು ನಿರಾತಂಕವಾಗಿರಬಹುದು ಎಂದು ಮಾತಾಡಿಕೊಂಡರು. ಸ್ವಲ್ಪ ಹೊತ್ತಿನ ನಂತರ ಬುದ್ಧ ಮೇಲೆದ್ದು, 'ನಿಮ್ಮ ಯಾಗ ಕ್ರಿಯೆ ಮುಗಿಯಿತೆ? ನಿಮಗೆಲ್ಲ ಆನಂದವಾಯಿತೇ?' ಎಂದು ಕೇಳಿದನು. ದೇವತೇಗಳು ತಮಗಾದ ಆಶ್ಚರ್ಯ ಮತ್ತು ದಿಗ್ಭ್ರಮೆಗಳನ್ನು ಮುಚ್ಚಿಕೊಳ್ಳುತ್ತಾ, 'ನಾವು ಹೆದರಿಬಿಟ್ಟಿದ್ದೆವು ನಿಮಗೆ ಏನಾಯಿತೋ ಎಂದು' ಎಂದರು. ಅದಕ್ಕೆ ಬುದ್ಧ ನಸುನಗುತ್ತಾ, 'ಪಾವಿತ್ರ್ಯವನ್ನು ನಾಶಮಾಡಲು ಸಾಧ್ಯವೆ? ಪಾವಿತ್ರ್ಯ ಹೋದರೆ ಜೀವನವಿಲ್ಲ, ಲೋಕವಿಲ್ಲ' ಎಂದು ದೇವತೆಗಳಿಗೆ ತಿಳುವಳಿಕೆ ನೀಡಿದನು.

ಬುದ್ಧ ಪರಮ ಪಾವನ ಮೂರ್ತಿಯಾಗಿದ್ದನು ಎಂಬುದನ್ನು ಈ ಕಥೆ ಧ್ವನಿಸುತ್ತದೆ. ಇಂಥ ಅದ್ಭುತ ರೂಪಕವನ್ನು ಕಟ್ಟಿದವರು ಬುದ್ಧನ ಅನುಯಾಯಿಗಳಲ್ಲ, ಅವನ ಕಡುವಿರೋಧಿಗಳು ಎಂಬುದನ್ನು ತಿಳಿದರೆ ಬುದ್ಧನ ಮಹತ್ತು ಚೆನ್ನಾಗಿ ಮನವರಿಕೆಯಾಗುತ್ತದೆ. 'ದೇವರ ಬಗ್ಗೆ ನಿಮ್ಮ ನೂರಾರು ವಾದವಿವಾದಗಳೆಲ್ಲ ನನಗೆ ಬೇಕಿಲ್ಲ. ಒಳ್ಳೆಯವರಾಗಿರಿ, ಒಳ್ಳೆಯದು ಮಾಡಿ', ಎನ್ನುವುದೇ ಬುದ್ಧನ ಉಪದೇಶದ ಸಾರಸರ್ವಸ್ವ ಎಂದು ಹೇಳಬಹುದು ಬುದ್ಧ ಒಳಿತಿನ ಅಪರಾವತಾರವಾಗಿದ್ದನು. ಒಳ್ಳೆಯತನ ಅಥವಾ ನೈತಿಕತೆಯನ್ನು ಧರ್ಮದ ಜೀವಾಳವನ್ನಾಗಿ ಮಾಡಿದ ಕೀರ್ತಿ ಬುದ್ಧನದು. ಅದುವರೆಗೆ ನೀತಿಗೆ ಬೆಲೆ ಇಲ್ಲದೆ ನಿಷೇಧಗಳ ಶಾಸ್ತ್ರಗಳ ಕಂತೆಯಾಗಿತ್ತು ಧರ್ಮ, ಅದು ಮಾನವೀಯತೆಯ ಊಟಎಂದು ಜಗತ್ತಿಗೆ ಮೊಟ್ಟಮೊದಲಿಗೆ ತೋರಿಸಿದವನು, ಮಾನವರಲ್ಲಿ ಮಾನವನಾದ ಬುದ್ಧ. ಅವನಷ್ಟು ಮಾನವೀಯಾಂತಃಕರಣವುಳ್ಳ ಮೇಧಾವಿಯನ್ನು ಪ್ರಪಂಚ ಕಂಡಿಲ್ಲವೆನಿಸುತ್ತದೆ. □

ವರ್ಣಾಶ್ರಮಧರ್ಮ–ಶರಣಧರ್ಮ ಮುಖಾಮುಖಿ ನೆಲೆಗಳು

ಬಿ. ಚಂದ್ರಶೇಖರ್ ನಂಗಲಿ

ನಮ್ಮ ದೇಶ 'ಬಹುರೂಪಿ' ಭಾರತ. ಬಹುತ್ವವೇ ಈ ನೆಲದ ಉಸಿರು. ಬಹುಭಾಷೆ, ಬಹುಧರ್ಮ, ಬಹುಕೃಷಿ, ಬಹು ಶಿಕ್ಷಣ, ಬಹುಸಂಸ್ಕೃತಿ–ಹೀಗೆ ಬದುಕಿನ ಪ್ರತಿಯೊಂದು ಕ್ಷೇತ್ರದಲ್ಲಿ ಬಹುತ್ವವೇ ಭಾರತವನ್ನು ಜೀವಂತವಾಗಿ ಮುನ್ನಡೆಸುತ್ತಿದೆ. ಏಕ ದೃಷ್ಟಿಯ ಸತ್ಯವನ್ನು ವಿಪ್ರರು ಬಹುವಿಧವಾಗಿ ಹೇಳುವರು ಎಂಬ ಸಂಸ್ಕೃತ ಸುಭಾಷಿತವೊಂದರ (= ಏಕಂ ಸತ್ ವಿಪ್ರ ಬಹುಧಾ ವದಂತಿ) ಅಭಿಪ್ರಾಯದಲ್ಲಿರುವ ಬಹುವಿಧವದಂತಿಗಳನ್ನು 'ಬಹು ಗೊಂದಲಕಾರಕ'ವೆಂಬಂತೆ ನೋಡಬೇಕು. ನಮ್ಮ ದೇಶದಲ್ಲಿ ಒಂದು ನಿರ್ದಿಷ್ಟ ವಿಚಾರವನ್ನು ಉದ್ದೇಶ ಪೂರ್ವಕವಾಗಿ ಒಂದು ಮಾತಿನಲ್ಲಿ ಹೇಳುವುದಕ್ಕೆ ಬದಲಾಗಿ, ಬಹುವಿಧವದಂತಿಗಳನ್ನು ಸೃಷ್ಟಿಸುತ್ತಾ ಬರಲಾಗಿದೆ. ಒಂದೇ ಒಂದು ಮನುಷ್ಯಜಾತಿಗೆ ಬದಲಾಗಿ ಅತ್ಯಂತ ಗೋಜಲಾದ ಜಾತಿ ಪದ್ಧತಿಯ ಬಹುವಿಧ ನರಕವನ್ನು ನಿರ್ಮಿಸಿದ್ದಕ್ಕೆ ಇದನ್ನು ಹೋಲಿಸಬಹುದು. ವರ್ಣಾಶ್ರಮಧರ್ಮ ಮತ್ತು ಶರಣ ಧರ್ಮಕ್ಕೆ ಸಂಬಂಧ ಪಟ್ಟಂತೆ ಚಾಲ್ತಿಯಲ್ಲಿರುವ ಬಹುವಿಧ ವದಂತಿಗಳ ಪಟ್ಟಿಯಿದು!

ವರ್ಣಾಶ್ರಮಧರ್ಮ	ಶರಣಧರ್ಮ
ವೈದಿಕ ಧರ್ಮ	ವಚನಧರ್ಮ
ಹಿಂದೂ ಧರ್ಮ	ವೀರಶೈವಧರ್ಮ
ಸನಾತನಧರ್ಮ	ಲಿಂಗಾಯತಧರ್ಮ

ಮೇಲಿನ ಬಹುವಿಧ ಪರಿಭಾಷೆಗಳನ್ನು ಗೊಂದಲ ಹುಟ್ಟಿಸು ವುದಕ್ಕಾಗಿಯೇ ಬಳಸಲಾಗಿದೆ. ಇದೊಂದು ರೀತಿಯಲ್ಲಿ ಶಬ್ದಗಳ ಮುಸುಕು ಯುದ್ಧ. ಒಂದೇ ಒಂದು ವಿಚಾರವನ್ನು ಹಲವು ಪರಿ ಭಾಷೆಗಳ ಮೂಲಕ ಹೇಳುತ್ತಾ ಸರಳವಾದುದನ್ನು ಸಂಕೀರ್ಣ ಮಾಡುವ ಹುನ್ನಾರವೆಂದೂ ಹೇಳಬಹುದು. ಇಂಥ ಬಹುವಿಧ ಪರಿ ಭಾಷೆಗಳಿಂದ ಸತ್ಯದರ್ಶನಕ್ಕೆ ಬದಲಾಗಿ ಸತ್ಯದೂರವಾಗುವ ಸಾಧ್ಯ ತೆಯೇ ಹೆಚ್ಚು! ಈ ಬಹುವಿಧ ಪರಿಭಾಷೆಗಳಲ್ಲಿ ನಮ್ಮ ಶತ್ರು ಯಾರು? ಎಂಬುದು ಬಗೆ ಹರಿಯುವುದಿಲ್ಲ.

'ವರ್ಣಾಶ್ರಮಧರ್ಮ'ವನ್ನು ಶತ್ರುವೆಂಬಂತೆ ನೋಡುವವರು' ಶರಣಧರ್ಮ'ದಲ್ಲಿರುವ ಶತ್ರುವನ್ನು ಮರೆತುಬಿಡುತ್ತಾರೆ. ನಮ್ಮ ಶತ್ರು ಎರಡೂ ಕಡೆಗಳಲ್ಲಿದ್ದಾನೆಂಬುದನ್ನು ಮರೆಯಬಾರದು. ಈ ಶತ್ರು ವನ್ನು ಮೇಲಿನ ಬಹುವಿಧ ಪರಿಭಾಷೆಗಳು ಸರಿಯಾಗಿ ಗುರುತಿಸ ಲಾರವು. ಗುರಿಯನ್ನು ಸರಿಯಾಗಿ ಹಿಡಿಯದಿದ್ದರೆ, ವಿಫಲವಾಗು ವಂತೆಯೇ ಶತ್ರುವನ್ನು ನಿರ್ದಿಷ್ಟವಾಗಿ ಕಂಡುಕೊಳ್ಳದಿದ್ದರೆ ವೈಚಾರಿಕ ವಾಗಿ ಸೋತು ಹೋಗುತ್ತೇವೆ. ಆದ್ದರಿಂದ, ವರ್ಣಾಶ್ರಮ ಧರ್ಮ ಮತ್ತು ಶರಣಧರ್ಮಕ್ಕೆ ಬದಲಾಗಿ, 'ವೈದಿಕ ಪುರೋಹಿತಶಾಹಿ' ಮತ್ತು ವೀರಶೈವ ಪುರೋಹಿತಶಾಹಿ'–ಎಂಬ ಮಾತುಗಳನ್ನು ಬಳಸು ವುದು ಹೆಚ್ಚು ಉಚಿತವಾಗಿ ಕಾಣುತ್ತದೆ. ವೈದಿಕ ಪುರೋಹಿತಶಾಹಿಗೆ' ಆಚಾರ್ಯತ್ರಯ'ರನ್ನು ಗುರುತಿಸುವಂತೆ ವೀರಶೈವ ಪುರೋಹಿತ ಶಾಹಿಯು ಬಸವಣ್ಣನನ್ನು ನಾಲ್ಕನೇ ಆಚಾರ್ಯನೆಂದು ಕರೆಯುತ್ತದೆ. ನಮ್ಮ ದೇಶದ ಬಹುಸಂಖ್ಯಾತ ಶ್ರಮ ಜೀವಿಗಳ ಪಾಲಿಗೆ 'ಆಚಾರ್ಯ ತ್ರಯರು' ಉದ್ದವಾಗಿ ಎಳೆದ ಮೂರುನಾಮಗಳಾಗಿದ್ದರೆ, 'ವೀರಶೈವ ಪುರೋಹಿತಶಾಹಿ'ಯು ಅಡ್ಡವಾಗಿ ಎಳೆದ ಮೂರುನಾಮವಾಗಿದೆ. ಶ್ರಮಜೀವಿಗಳಾದ ಬಹುಜನ ಸಮುದಾಯಗಳಿಗೆ ಪುರೋಹಿತ ಶಾಹಿಯು ನಾಮ ಹಾಕುತ್ತಲೇ ಬಂದಿರುವುದನ್ನು ಭಾರತದ ಇತಿ ಹಾಸದಲ್ಲಿ ಸ್ಪಷ್ಟವಾಗಿ ಮನಗಾಣಬಹುದು.

ವರ್ಣಾಶ್ರಮಧರ್ಮ ಮತ್ತು ಶರಣ ಧರ್ಮವನ್ನು ತೌಲನಿಕ ವಾಗಿ ಅಧ್ಯಯನ ಮಾಡಿರುವವರು ಸಮರಸ ಚಿಂತನೆಯೊಂದಿಗೆ ವಿರಸದ ಚಿಂತನೆಯನ್ನೂ ನಡೆಸಿದ್ದಾರೆ. ಇದಕ್ಕೆ ಉದಾಹರಣೆಯಾಗಿ ನನ್ನ ಗಮನಕ್ಕೆ ಬಂದ ಕೆಲವು ಅಧ್ಯಯನಗಳನ್ನಿಲ್ಲಿ ಉಲ್ಲೇಖಿಸಲಾಗಿದೆ.

೧. **ಸಮರಸದ ಚಿಂತನೆಗೆ:** ಹಿಂದೂಧರ್ಮ ಮತ್ತು ಶರಣ ಧರ್ಮದ ನಡುವೆ ಸಾಮರಸ್ಯವನ್ನು ಗುರುತಿಸಿದವರ ಬಹುದೊಡ್ಡ ಪಡೆಯೇ ಇದೆ. ಶರಣಧರ್ಮವನ್ನು ಹಿಂದೂಧರ್ಮದ ಒಂದು ಅಂಗವೆಂಬಂತೆ ಪರಿಗಣಿಸುವ ಮನೋಧರ್ಮವನ್ನಿಲ್ಲಿ ಗುರುತಿಸ ಬಹುದು:





'ವರ್ಣಾಶ್ರಮಧರ್ಮ'ವನ್ನು ಶತ್ರುವೆಂಬಂತೆ ನೋಡುವವರು 'ಶರಣಧರ್ಮ'ದಲ್ಲಿರುವ ಶತ್ರುವನ್ನು ಮರೆತುಬಿಡುತ್ತಾರೆ. ನಮ್ಮ ಶತ್ರು ಎರಡೂ ಕಡೆಗಳಲ್ಲಿದ್ದಾನೆಂಬುದನ್ನು ಮರೆಯಬಾರದು. ಈ ಶತ್ರುವನ್ನು ಮೇಲಿನ ಬಹುವಿಧ ಪರಿಭಾಷೆಗಳು ಸರಿಯಾಗಿ ಗುರುತಿಸಲಾರವು. ಗುರಿಯನ್ನು ಸರಿಯಾಗಿ ಹಿಡಿಯದಿದ್ದರೆ, ವಿಫಲವಾಗುವಂತೆಯೇ ಶತ್ರುವನ್ನು ನಿರ್ದಿಷ್ಟವಾಗಿ ಕಂಡುಕೊಳ್ಳದಿದ್ದರೆ ವೈಚಾರಿಕವಾಗಿ ಸೋತು ಹೋಗುತ್ತೇವೆ. ಆದ್ದರಿಂದ, ವರ್ಣಾಶ್ರಮ ಧರ್ಮ ಮತ್ತು ಶರಣ ಧರ್ಮಕ್ಕೆ ಬದಲಾಗಿ, 'ವೈದಿಕ ಪುರೋಹಿತ ಶಾಹಿ' ಮತ್ತು 'ವೀರಶೈವ ಪುರೋಹಿತಶಾಹಿ'-ಎಂಬ ಮಾತುಗಳನ್ನು ಬಳಸುವುದು ಹೆಚ್ಚು ಉಚಿತವಾಗಿ ಕಾಣುತ್ತದೆ. ವೈದಿಕ ಪುರೋಹಿತಶಾಹಿಗೆ 'ಆಚಾರ್ಯತ್ರಯ'ರನ್ನು ಗುರುತಿಸುವಂತೆ ವೀರ ಶೈವ ಪುರೋಹಿತ ಶಾಹಿಯು ಬಸವಣ್ಣನನ್ನು 'ನಾಲ್ಕನೇ ಆಚಾರ್ಯ'ನೆಂದು ಕರೆಯುತ್ತದೆ.

ಉಪನಿಷತ್ತುಗಳು:	ವಚನಗಳು
ಋಷಿವಾಣಿ	ಶರಣರ ಸೂಳ್ನುಡಿ
ಶಾಂಡಿಲಿ, ಗಾರ್ಗಿ	ಮುಕ್ತಾಯಕ್ಕ, ಅಕ್ಕಮಹಾದೇವಿ
ಚತುರ್ವೇದಗಳು	ನಡೆ-ನುಡಿಯ ವೇದ

ಸನಾತನಧರ್ಮ ಮತ್ತು ಶರಣಧರ್ಮಗಳನ್ನು ಉಭಯ ಸಂವಾದಿಗಳೆಂಬಂತೆ ನೋಡುವವರನ್ನು 'ಇತ್ತುಗಳ ಧ್ವಜವನ್ನು ಹಿಡಿದೆತ್ತಿ ನಿಲ್ಲುವವರು' ಎನ್ನಬಹುದು:

೧. ವಚನಧರ್ಮದ ಉದಯ-ಎಂ.ಆರ್. ಶ್ರೀನಿವಾಸಮೂರ್ತಿ 'ವಚನಧರ್ಮಸಾರ'ದಿಂದ.

೨. 'ವೈದಿಕಧರ್ಮ' ಕುರಿತು- ಎಂ. ಜಿ. ನಾಗರಾಜ್ 'ಶರಣಶ್ರೀ' ಸ್ಮರಣ ಸಂಚಿಕೆಯಿಂದ

೩. **ವಿರಸದ ಚಿಂತನೆಗೆ:** ಹಿಂದೂಧರ್ಮ ಮತ್ತು ಶರಣಧರ್ಮದ ನಡುವೆ ವಿರಸವನ್ನು ಗುರುತಿಸಿದ ಬಹುಸಂಖ್ಯಾತರಿದ್ದಾರೆ. ಇಲ್ಲಿ ಹಿಂದೂ ಧರ್ಮ ಮತ್ತು ಶರಣಧರ್ಮಗಳನ್ನು ವಿರುದ್ಧ ಧ್ರುವಗಳು ಎಂಬಂತೆ ವಿವರಿಸಲಾಗಿದೆ. ಇಂಥವರನ್ನು 'ಇದೆಯ ಹೃದಯ ದ್ರಾವ ಉಳ್ಳವರು' ಎಂದು ಕರೆಯಬಹುದು!

೧. ವೀರಶೈವತ್ವ ಹಾಗೂ ಹಿಂದುತ್ವ -ಪಿ.ಎಸ್. ಪಾಟೀಲ 'ಬಸವ ಚಳುವಳಿಯ ಭೌತಿಕವಾದಿ ಅಧ್ಯಯನ'ದಿಂದ.

೨. ಸ್ಟ್ರಕ್ಚರ್ - ಆಂಟಿ ಸ್ಟ್ರಕ್ಚರ್ – ಎ.ಕೆ. ರಾಮಾನುಜನ್ 'ಸ್ಪೀಕಿಂಗ್ ಆಫ್‌ಶಿವ'ದಿಂದ.

ಮೇಲಿನ ಉದಾಹರಣೆಗಳನ್ನು ನನ್ನ ಅಧ್ಯಯನದ ಮಿತಿಯಲ್ಲಿ ಕಂಡ ಉಲ್ಲೇಖಗಳೆಂದು ತಿಳಿಯಬೇಕು. ಪ್ರಾಜ್ಞರಾದ ಸಹೃದಯರು ತಮ್ಮ ಶಕ್ತ್ಯಾನುಸಾರ ಉದಾಹರಣೆಗಳನ್ನು ಅಳವಡಿಸಿಕೊಳ್ಳಬಹುದು

೨

ವರ್ಣಾಶ್ರಮಧರ್ಮ ಮತ್ತು ಶರಣಧರ್ಮದ ಮುಖಾಮುಖಿ ನೆಲೆಗಳನ್ನು ಹಲವು ದೃಷ್ಟಿಗಳಿಂದ ವಿವೇಚಿಸಬಹುದು. ಇವುಗಳಲ್ಲಿ ಭಾಷೆ ಮತ್ತು ಬರೆಹದ ನೆಲೆ ಪ್ರಮುಖವಾದುದು.

I ಭಾಷೆ ಮತ್ತು ಬರೆಹದ ಮುಖಾಮುಖಿ

ಭಾಷೆ	ಅಭಿವ್ಯಕ್ತಿ	ಬರೆಹ	ದಾಖಲೆ
	ಕಾಲದೇಶಬದ್ಧ		ಕಾಲದೇಶಾತೀತ
	ಸ್ವಯಂಚಾಲಿತ		ಔಪಚಾರಿಕ

ಭಾಷೆ ಮತ್ತು ಬರೆಹಗಳ ಸ್ವರೂಪ, ಪ್ರಮುಖ ಲಕ್ಷಣಗಳನ್ನಿಲ್ಲಿ ವಿವರಿಸಲಾಗಿದೆ. ಶರಣರು ಆರಿಸಿಕೊಂಡದ್ದು ಸ್ವಯಂಚಾಲಿತ ಭಾಷಾಬಳಕೆಯನ್ನೇ ಹೊರತು ಔಪಚಾರಿಕ ಭಾಷಾಬಳಕೆಯನ್ನಲ್ಲ. ಇದು ಸ್ಪಷ್ಟವಾಗಿ 'ಅನುಭವ' ಮಾರ್ಗದ ಮೌಖಿಕ ಪರಂಪರೆಗೂ 'ಅಕ್ಷರ' ಮಾರ್ಗದ ಗ್ರಾಂಥಿಕ ಪರಂಪರೆಗೂ ನಡುವಣ ವ್ಯತ್ಯಾಸವೆಂದು ಹೇಳಬಹುದು. ಶರಣರು ಗಮನ ನೀಡಿದ್ದು ವಿಶಿಷ್ಟವಾದ ಅನುಭವಕ್ಕೆ ಹೊರತು (ಅ) ಸಾಮಾನ್ಯವಾದ 'ಅಕ್ಷರಕ್ಕೆ ಅಲ್ಲ! ಅಕ್ಷರದ ಪರಂಪರೆಯ ಅನಾಹುತಗಳನ್ನು ಚೆನ್ನಾಗಿ ಮನಗಂಡಿದ್ದ ಶರಣರ ಅಕ್ಷರಗಳಿಗೆ ವಿದಾಯ ಹೇಳಿ ಅನುಭವಕ್ಕೆ ತಮ್ಮನ್ನು ಒಡ್ಡಿಕೊಂಡಿದ್ದಾರೆ:

"ಅಕ್ಷರವ ಬಲ್ಲೆವೆಂದು
ಅಹಂಕಾರವೆಡೆಗೊಂಡು ಲೆಕ್ಕಗೊಳ್ಳರಯ್ಯ
ಗುರುಹಿರಿಯರು ತೋರಿದ ಉಪದೇಶದಿಂದ
ಬಾಗದ್ವೈತವ ಕಲಿತು ವಾದಿಪರಲ್ಲದೆ
ಆಗು ಹೋಗೆಂಬುದನರಿಯರು
ಭಕ್ತಿಯನರಿಯರು, ಯುಕ್ತಿಯನರಿಯರು, ಮುಕ್ತಿಯನರಿಯರು
ಮತ್ತೂ ವಾದಿಗೆಳಸುವರು
ಹೋದರು ಗುಹೇಶ್ವರ ಸಲೆಕೊಂಡ ಮಾರಿಂಗೆ"
-೪೭

ಸ್ವಯಂಚಾಲಿತ ಭಾಷಾ ಬಳಕೆ ಅಥವಾ ಮೌಖಿಕ ಪರಂಪರೆಯ ಎಷ್ಟೋ ವಿಚಾರಗಳು ಅಕ್ಷರಕ್ಕೆ ಅಥವಾ ಗ್ರಾಂಥಿಕ ಪರಂಪರೆಗೆ ಬರುತ್ತಿದ್ದಂತೆಯೇ ಜಾತೀಯ ಮತ್ತು ವರ್ಗೀಯ ಹಿತಾಸಕ್ತಿಗಳಿಗೆ ಒಳಪಟ್ಟು ತಿರುಚಲ್ಪಡುತ್ತವೆ ಅಥವಾ ಭ್ರಷ್ಟಗೊಳ್ಳುತ್ತವೆಯೆಂಬುದನ್ನು 'ಭಾರತೀಯ ತತ್ವಜ್ಞಾನಿ' ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಎಸ್.ಜಿ. ಸರ್ದೇಸಾಯಿ ಮತ್ತು ದೇವಿಪ್ರಸಾದ ಚಟ್ಟೋಪಾಧ್ಯಾಯ ಅವರು ಸುಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ. ಅಕ್ಷರದ ಕುಯುಕ್ತಿಗಳನ್ನು ತಿಳಿದಿದ್ದ ಶರಣರು ಬರೆಹಕ್ಕೆ ಬೆನ್ನಾಗಿ, ಅನುಭವಕ್ಕೆ ಮುಖಾಮುಖಿಯಾಗಿದ್ದರು. ಹನ್ನೆರಡನೇ ಶತಮಾನದ ಶರಣರ ವಚನಗಳು ಬರೆಹಕ್ಕೆ ಬಂದದ್ದು ಸಂಕಲನ ಯುಗದಲ್ಲಿ. ಅಂದರೆ ನೂರೈವತ್ತು-ಇನ್ನೂರು ವರ್ಷಗಳ ನಂತರ 'ವಚನಗಳು' ದಾಖಲದವು ಎಂಬುದನ್ನು ಮರೆಯಬಾರದು. .

ಸ್ವಯಂಚಾಲಿತ ಭಾಷಾಬಳಕೆ ಅಥವಾ ಮೌಖಿಕ ಪರಂಪರೆಯ ಎಷ್ಟೋ ವಿಚಾರಗಳು ಅಕ್ಷರಕ್ಕೆ ಅಥವಾ ಗ್ರಾಂಥಿಕ ಪರಂಪರೆಗೆ ಬರುತ್ತಿದ್ದಂತೆಯೇ ಜಾತೀಯ ಮತ್ತು ವರ್ಗೀಯ ಹಿತಾಸಕ್ತಿಗಳಿಗೆ ಒಳಪಟ್ಟು ತಿರುಚಲ್ಪಡುತ್ತವೆ ಅಥವಾ ಭ್ರಷ್ಟಗೊಳ್ಳುತ್ತವೆಯೆಂಬುದನ್ನು 'ಭಾರತೀಯ ತತ್ವಜ್ಞಾನಿ' ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಎಸ್.ಜಿ. ಸರ್ದೇಸಾಯಿ ಮತ್ತು ದೇವಿಪ್ರಸಾದ ಚಟ್ಟೋಪಾಧ್ಯಾಯ ಅವರು ಸುಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ. ಅಕ್ಷರದ ಕುಯುಕ್ತಿಗಳನ್ನು ತಿಳಿದಿದ್ದ ಶರಣರು ಬರೆಹಕ್ಕೆ ಬೆನ್ನಾಗಿ, ಅನುಭವಕ್ಕೆ ಮುಖಾ ಮುಖಿಯಾಗಿದ್ದರು. ಹನ್ನೆರಡನೇ ಶತಮಾನದ ಶರಣರ ವಚನಗಳು ಬರೆಹಕ್ಕೆ ಬಂದದ್ದು ಸಂಕಲನ ಯುಗದಲ್ಲಿ. ಅಂದರೆ ನೂರೈವತ್ತು-ಇನ್ನೂರು ವರ್ಷಗಳ ನಂತರ 'ವಚನಗಳು' ದಾಖಲದವು ಎಂಬುದನ್ನು ಮರೆಯಬಾರದು. ಮೌಖಿಕ ಸಂಪ್ರದಾಯಕ್ಕೆ ಸೇರಿದ್ದ ವಚನಗಳನ್ನು ಕಾಲಕ್ರಮೇಣ ತಾಳೆಗರಿಗಳಲ್ಲಿ, ಮುದ್ರಣರೂಪದಲ್ಲಿ, ಕ್ಯಾಸೆಟ್ಟುಗಳಲ್ಲಿ, ಸಿ.ಡಿ. ಡಿ.ವಿ.ಡಿಗಳಲ್ಲಿ ದಾಖಲಿಸುತ್ತಾ ಬಂದಿದ್ದೇವೆಂಬುದನ್ನು ಇಲ್ಲಿ ವಿಶೇಷವಾಗಿ ಸ್ಮರಿಸಬೇಕು. ಮೌಖಿಕ ಸಂಪ್ರದಾಯದ ಶಕ್ತಿ ಮತ್ತು ಕಾಂತಿಗಳು ದಾಖಲಾಗುತ್ತಾ ಬಂದಂತೆಲ್ಲ ಲುಪ್ತವಾಗುತ್ತ ಬಂದುದನ್ನು ಮನಗಾಣಬಹುದು. ಇದಕ್ಕೆ ನಿದರ್ಶನವಾಗಿ ಬಸವಣ್ಣನ ಸುಪ್ರಸಿದ್ಧ ವಚನವೊಂದನ್ನು ಪರಿಶೀಲಿಸೋಣ. ಈ ವಚವನ್ನು ನಾನು ಪ್ರಶ್ನೆಗಳನ್ನಾಗಿ ಓದಿಕೊಂಡಿದ್ದೇನೆ. ಏಕೆಂದರೆ, ಇಡೀ ಕನ್ನಡ ಸಾಹಿತ್ಯದಲ್ಲಿ ಅತ್ಯಧಿಕ ಪ್ರಮಾಣದಲ್ಲಿ 'ಪ್ರಶ್ನೆಗಳು ಇರುವ ಸಾಹಿತ್ಯವೆಂದರೆ ವಚನ ಸಾಹಿತ್ಯವೇ ಆಗಿದೆ. ವಚನ ಸಾಹಿತ್ಯವು ಪ್ರಶ್ನೆ ಸಂಸ್ಕೃತಿಯ ಲೋಕವಾಗಿದೆ.

ಕೊಲುವವನೇ ಮಾದಿಗ?
ಹೊಲಸು ತಿಂಬವನೇ ಹೊಲೆಯ?
ಕುಲವೇನೊ? ಅವದಿರ ಕುಲವೇನೊ?
ಸಕಲ ಜೀವಾತ್ಮರಿಗೆ ಲೇಸನೆ ಬಯಸುವ
ಕೂಡಲಸಂಗನ ಶರಣರೆ ಕುಲಜರು! – ೩೩೩

ಭಾಷೆಯ ಸ್ವಯಂಚಾಲಿತ ಬಳಕೆಯಲ್ಲಿ ಅಥವಾ ಮೌಖಿಕ ಪರಂಪರೆಯಲ್ಲಿ ಪ್ರಶ್ನಾರ್ಥಕ ಧಾಟಿಯಲ್ಲಿದ್ದ ಈ ವಚನವನ್ನು 'ಗ್ರಂಥ ಸಂಪಾದನೆ' ಮಾಡುವಾಗ ಪಾದಾನುಕ್ರಮದ ವ್ಯವಸ್ಥೆ ಮತ್ತು ಆಧುನಿಕ ಲಿಪಿ ಚಿಹ್ನೆಗಳೊಡನೆ ನಿರ್ಧಾರಾತ್ಮಕ ಧಾಟಿಯಲ್ಲಿ ಮಂಡಿಸಲಾಯ್ತು. ಕೊಲ್ಲುವವನು ಮಾದಿಗನೆಂದೂ ಹೊಲಸು ತಿಂಬುವನು ಹೊಲೆಯನೆಂದೂ ಪ್ರತಿಪಾದಿಸಲಾಯ್ತು. ವಚನ ಚಳವಳಿಯನ್ನು ಪ್ರಾರಂಭಿಸಿದಲ್ಲಿ ಈ ಬಗ್ಗೆ ನಿಜದುದಯ ಸಾಧ್ಯವಾಗುತ್ತದೆ. 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಮಾಲಿಕೆಯಲ್ಲಿ 'ವಚನ ಸಾಹಿತ್ಯ'ವೆಂಬ ಪುಸ್ತಕವನ್ನು ಬರೆದಿರುವ ಡಾ॥ ಎಂ. ಚಿದಾನಂದಮೂರ್ತಿಯವರು ವಚನಕಾರರಲ್ಲಿ ಮಾಂಸಾಹಾರವು ನಿಷಿದ್ಧವಾಗಿರಲಿಲ್ಲವೆಂದು ತಿಳಿಸಿದ್ದಾರೆ. ಎಲ್ಲಕ್ಕಿಂಥ ಮುಖ್ಯವಾಗಿ ಪ್ರಶ್ನೆಗಳಿಂದ ಆರಂಭವಾಗುವ ವಚನಗಳ ಸಂವಿಧಾನವನ್ನು ಗಮನಿಸಿದರೆ, ವಚನಗಳಲ್ಲಿರುವ ತರ್ಕವನ್ನು 'ಅನುಗಮನ ವಿಧಾನ' (Inductive Method) ವೆಂದು ಹೇಳಬಹುದು. ನಿರ್ಧಾರಗಳಿಂದ ಆರಂಭವಾಗುವ ತರ್ಕವನ್ನು 'ನಿಗಮನ ವಿಧಾನ' (Deductive Method) ಎನ್ನುತ್ತಾರೆ. ವಚನ ಸಾಹಿತ್ಯವೆಲ್ಲ ಆಗಲೇ ತಿಳಿಸಿದಂತೆ ಪ್ರಶ್ನೆಮಯ. ಈ ಹಿನ್ನೆಲೆಯಲ್ಲಿ ನೋಡಿದರೆ ಕೊಲುವವನೇ ಮಾದಿಗ? ಹೊಲಸು ತಿಂಬವನೇ ಹೊಲೆಯ? ಎಂಬ ವಾಕ್ಯಗಳು ಪ್ರಶ್ನೆಗಳೆಂಬುದು ಅರಿವಾಗುತ್ತದೆ. ಆದರೆ, ಗ್ರಂಥ ಸಂಪಾದನೆಯ ಕಾಲಕ್ಕೆ ಸವರ್ಣೀಯ ಮನಸ್ಸುಗಳ ನಂಬಿಕೆ ಮತ್ತು ಆಲೋಚನೆಗಳು ಬರೆಹದಲ್ಲಿ ನುಸುಳಿದ್ದಲ್ಲದೆ ವಚನದ ನೈಜ ಭಾವನೆಗಳನ್ನು ತಿರುಚಲಾಗಿದೆ.

ಹನ್ನೆರಡನೆ ಶತಮಾನದ ಬಸವಣ್ಣನು ತಾನು ಮೇಲು ಜಾತಿಗೆ ಸೇರಿದವನಾಗಿದ್ದರೂ, ಕೆಳಜಾತಿ ಮತ್ತು ಕೆಳವರ್ಗಗಳ ಮೇಲೆ ತನ್ನ ಜಾತೀಯ ಮತ್ತು ವರ್ಗೀಯ ಹಿತಾಸಕ್ತಿಗಳನ್ನು ಹೇರಲು ಹೋದವನಲ್ಲ. ಆದರೆ, ಗ್ರಂಥ ಸಂಪಾದನೆಯ ಬಲದಿಂದ ಬಸವಣ್ಣನ ವಚನವನ್ನು ಜಾತೀಯ ಮತ್ತು ವರ್ಗೀಯ ಹಿತಾಸಕ್ತಿಗಳಿಗೆ ಒಳಪಡಿಸಲಾಯ್ತು. ಮೌಖಿಕ ಪರಂಪರೆಯ ಸತ್ಯಗಳನ್ನು ಗ್ರಾಂಥಿಕ ಪರಂಪರೆಯ ಘನ ಸಮಾಧಿಯಲ್ಲಿ ಹೇಗೆ ಮುಚ್ಚಿ ಹಾಕುವರೆಂಬುದನ್ನು ಬಸವಣ್ಣನ ವಚನದ ನಿದರ್ಶನದಿಂದ ಅರಿತುಕೊಳ್ಳಬಹುದು. ಇದು ಅನುಭವಕ್ಕೂ ಅಕ್ಷರಕ್ಕೂ ಇರುವ ಮಹಾನ್ ವೈದೃಶ್ಯವೆಂದರೂ ಸಲ್ಲುತ್ತದೆ. ವರ್ಣಾಶ್ರಮಧರ್ಮದಲ್ಲಿ ಬೇರೂರಿದ್ದ ಗ್ರಾಂಥಿಕ ಪರಂಪರೆಯ ತಳತಂತ್ರಗಳನ್ನು ಅರಿತಿದ್ದ ಶರಣರು 'ಅಕ್ಷರ' ಲೋಕಕ್ಕೆ ಬದಲಾಗಿ, 'ಅನುಭವ' ಮಂಟಪಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ.

'ಅನುಭವ ಮಂಟಪ ' ಎಂದೊಡನೆ ಅದೊಂದು

ಛಿದ್ರವಾದ ಅಲ್ಲಮನ, ರಾಜಸಭೆಯನ್ನು ನಾಚಿಸುವಂಥ [illegible] ಲಿಂಗ, ಅತ್ಯಂತ ಎತ್ತರದಲ್ಲಿ ಪ್ರತಿಷ್ಠಾಪಿತವಾಗಿರುವ ಶೂನ್ಯಸಿಂಹಾಸನ, ಶೂನ್ಯಪೀಠದ ಮೇಲೆ ವಿರಾಜಮಾನನಾಗಿರುವ ಅಲ್ಲಮ ಪ್ರಭು- ಇಂಥ ವಿವರಗಳನ್ನುಳ್ಳ ಚಿತ್ರಪಟಗಳನ್ನು ನೀವು ನೋಡಿರಬಹುದು. ಇವೆಲ್ಲ ಹುಸಿ ನುಸುಳು, 'ಅನುಭವ' ಮಂಟಪವು ನಾಲ್ಕು ಗೋಡೆಗಳ ನಡುವಣ ನಿಕೇತನವೇ ಆಗಬೇಕಿಲ್ಲ. ಅದು ಹಾದಿ-ಬೀದಿಯ ಅನಿಕೇತನವೂ ಆಗಬಹುದು:

"ಗುಹೇಶ್ವರ! ಘನಮತವ ಸುಟ್ಟು ಬೀದಿಗರುವಾದ" ಎಂಬ ಅಲ್ಲಮನ ವಚನದಲ್ಲಿ ಅನುಭವ ಮಂಟಪದ ನಿಜದುದಯವಿದೆ.

II ಕೀಳು ಮತ್ತು ಮೇಲು-ಮುಖಾಮುಖಿ:

ಕೀಳು — ಅಭೇದಭಾವ / ಜನ್ಮ-ಲಿಂಗಾಧಾರಿತ ಸಮಾನತೆ / ಕೆಳಮುಖಿ ಚಲನೆ

ಮೇಲು — ಭೇದಭಾವ / ಜನ್ಮ-ಲಿಂಗಧಾರಿತ ಅಸಮಾನತೆ / ಮೇಲ್ಮುಖಿ ಚಲನೆ

'ಕೀಳು' ಮತ್ತು 'ಮೇಲು' ಎಂಬುವು ಸಮಾಜೋ-ಸಾಂಸ್ಕೃತಿಕ ಪರಿಭಾಷೆಗಳು. ಜಾತಿ, ಲಿಂಗ, ಧಾರ್ಮಿಕ, ಆರ್ಥಿಕ, ರಾಜಕೀಯ ಮುಂತಾದ ನೆಲೆಗಳಲ್ಲಿ ತಾರ-ತಮ್ಯ ಮತ್ತು ಶ್ರೇಣೀಕರಣವುಳ್ಳ ಸಮಾಜಗಳಲ್ಲಿ ಕೀಳು-ಮೇಲುಗಳನ್ನು ಸಂಕೀರ್ಣವಾಗಿ ಗ್ರಹಿಸಬೇಕು. 'ಕೀಳು' ಕೀಳರಿಮೆಯನ್ನೂ 'ಮೇಲು' ಮೇಲರಿಮೆಯನ್ನು ಹುಟ್ಟು ಹಾಕುವ ಮನೋವೈಜ್ಞಾನಿಕ ಪರಿಭಾಷೆಯೂ ಹೌದು! ಇದೆಲ್ಲವನ್ನು ಒಟ್ಟಿಗೆ ಗ್ರಹಿಸಿದಾಗ 'ಕೀಳು' ತಿರಸ್ಕಾರಕ್ಕೊಳಗಾದರೆ 'ಮೇಲು' ಪುರಸ್ಕಾರಗೊಳ್ಳುವುದು ಕಂಡು ಬರುತ್ತದೆ. ಆದರೆ, ಶರಣರು 'ಕೀಳು' ದೃಷ್ಟಿ ಮತ್ತು ಧೋರಣೆಗಳನ್ನು ಉದ್ದೇಶ ಪೂರ್ವಕವಾಗಿ ಎತ್ತಿ ಹಿಡಿದವರು. ಸಮಾಜವೊಂದರ ಮೇಲು ರಚನೆ ಮತ್ತು ತಳ ರಚನೆಗಳ ಸಂಘರ್ಷದಲ್ಲಿ ಶರಣರು ತಳರಚನೆಯನ್ನು ಆಯ್ದುಕೊಂಡವರು!

ಮೇಲಾಗಲೊಲ್ಲೆ ಕೀಳಾಗಲೊಲ್ಲದೆ
ಕೀಳಿಂಗಲ್ಲದೆ ಹಯನು ಕರೆವುದೆ?
ಮೇಲಾಗಿ ನರಕದಲೋಲಾಡಲಾರೆನು!
ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು
ಮಹಾದಾನಿ ಕೂಡಲ ಸಂಗಮದೇವ- ೨೨೧

ಕಾಗೆ ಬಿಪ್ಪಿಸುವ ಹೊನ್ನ ಕಳಶವಹುದರಿಂದ,
ಒಡೆಯರು ಜೋಗೈಸುವ ಚಮ್ಮಾವುಗೆಯ
ಮಾಡಯ್ಯ.
ಅಯ್ಯ, ನಿಮ್ಮ ಶರಣರ ಪಾದಕ್ಕೆ
ಚಮ್ಮಾವುಗೆಯ ಮಾಡಯ್ಯ
.... - ೨೨೨

ಈ ವಚನಗಳನ್ನು ಓದುತ್ತಿದ್ದರೆ, ಅಯೋಧ್ಯೆಯ ಸಿಂಹಾಸನವನ್ನು ತಿರಸ್ಕರಿಸಿ, ಗಿರಿವನ ಪ್ರಿಯರಾಮನ ಪಾದುಕೆಗಳನ್ನು ಸ್ವೀಕರಿಸಿ ತನ್ನ ತಲೆಯ ಮೇಲಿಟ್ಟು ಕೊಂಡು ಭರತನ ನೆನಪಾಗುತ್ತದೆ. ಶ್ರೀ ಕುವೆಂಪು ಅವರ ಸಮಗ್ರ ಸಾಹಿತ್ಯದ 'ವಸ್ತು' ಕೂಡ ಸಮಾಜದ ತಳರಚನೆಗೆ ಸೇರಿದ 'ಹೀರೆಯ ಹೂಗಳು' ಎಂಬುದನ್ನು ಮರೆಯಬಾರದು. ಕುವೆಂಪು ಬರೆದಿರುವ ಕತೆಗಳೂ-ಪ್ರಬಂಧಗಳು-ಕಾದಂಬರಿಗಳು-ನಾಟಕಗಳು-ಮಹಾಕಾವ್ಯ ಎಲ್ಲದರಲ್ಲೂ ಹೀರೆಯ ಹೂಗಳೇ ಪ್ರಧಾನ ಭೂಮಿಕೆಯಲ್ಲಿದೆ. ಯಾರೂ ಅರಿಯದ ವೀರ ಲಿಂಗ, ಕತೆಗಾರ ಮಂಜಣ್ಣ, ನಾಯಿಗುತ್ತಿ-ತಿಮ್ಮ ಐತ-ಪೀಂಚಲು, ದೈತ್ಯಮಟ್ಟಣ್ಣ, ಕಿಲಿಸ್ತರ ಜಾಕಿ, ಜಲಗಾರ, ಶೂದ್ರತಪಸ್ವಿ, ಏಕಲವ್ಯ, ಮಂಥರೆ-ಮುಂತಾದವರೆಲ್ಲ ಹೀಗೆಯ ಹೂಗಳಿದ್ದಂತೆ ಯಾರೊಬ್ಬರ ಕಣ್ಣಿಗೂ ಬೀಳದವರು. ಇಂಥ ಕೀಳನ್ನು ಕೈ ಹಿಡಿದ ಕುವೆಂಪು ನಿಜವಾಗಿಯೂ ರಾಷ್ಟ್ರ ಕವಿಯಾಗಿದ್ದಾರೆ. ಹನ್ನೆರಡನೆ ಶತಮಾನದಲ್ಲಿ ಶರಣರು ತಳೆದ ದೃಷ್ಟಿ-ಧೋರಣೆಗಳು ಇವೇ ಆಗಿದ್ದಾವೆ. ಕೀಳು ಡೋಹರ ಕಕ್ಕ, ಕೀಳು ಮಾದರ ಚೆನ್ನ, ಕೀಳು ಉದ್ಭಟಯ್ಯ, ಕೀಳು ಓಹಿಲದೇವಿ-ಇವರೊಡನೆ ಗುರುತಿಸಿಕೊಂಡ ಬಸವಣ್ಣ ತುಂಬು ಸ್ವಾಭಿಮಾನದಿಂದ ಹೇಳಿರುವ ನುಡಿಯಿದು!

"ಆನು ಹಾರುವನೆಂದರೆ ಕೂಡಲಸಂಗಯ್ಯ ನಗುವನಯ್ಯ" ಬಸವಣ್ಣನ 'ಅಪವರ್ಗೀಕರಣ'ದ ವಚನಗಳೂ ಈ ದೃಷ್ಟಿಯಿಂದ ಬಹುಮುಖ್ಯವಾಗಿವೆ. ಯಾವುದೇ ಭೇದ ಭಾವ, ಜನ್ಮಾಧಾರಿತ ಮತ್ತು ಲಿಂಗಾಧಾರಿತ ಅಸಮಾನತೆಯನ್ನು ನಿರಾಕರಿಸುತ್ತಲೇ ಕೆಳಮುಖಿ ಚಲನೆಗೆ ಕೊಟ್ಟಿರುವ ಆದ್ಯತೆ ನಮ್ಮ ದೇಶಕ್ಕೆ ಇಂದಿಗೂ ಪ್ರಸ್ತುತವಾಗಿದೆ.

ಲಿಂಗವ ಪೂಜಿಸಿದ ಬಳಿಕ ಜಂಗಮಕ್ಕಂಜಲೇ
ಬೇಕು
ದಕ್ಕ ನುಂಗಿದಂತೆ ಬೆರೆದುಕೊಂಡಿರಬೇಡ
ಬೀಗಿ ಬೆಳೆದ ಗೊನೆವಾಳೆಯಂತೆ ಬಾಗಿಕೊಂಡಿದ್ದರ
ಬೇಡಿದ ಪದವಿಯ ನೀವ ಕೂಡಲ ಸಂಗಮದೇವ
- ೧೨೭

'ದಕ್ಕ ನುಂಗಿದಂತೆ ಬೆರೆದುಕೊಂಡಿರಬೇಡ' ಎಂದರೆ ಗೂಟವನ್ನು ನುಂಗಿದಂತೆ ಸೆಟೆದುಕೊಂಡಿರಬೇಡವೆಂದು ಅರ್ಥ. ಮನುಷ್ಯನ ವ್ಯಕ್ತಿತ್ವ, ಜೀವನಶೈಲಿ, ಸಕಲ ಜ್ಞಾನಶಾಖೆಗಳು, ಅಭಿವೃದ್ಧಿ ಯೋಜನೆಗಳು, ನಾಗರಿಕತೆಗಳ ಒಟ್ಟು ವಿನ್ಯಾಸ ಕ್ರಮ ಬೀಗಿ ಬೆಳೆದ ಬಾಳೆಯಂತೆ' ವರ್ಟಿಕಲ್ ಮೂವ್‌ಮೆಂಟ್'ಗೆ ಒಳಗಾಗಬಾರದು. ಮನುಷ್ಯ ನಿರ್ಮಿತವಾದ ಎಲ್ಲಬಗೆಯ ಮೇಲು ರಚನೆಗಳು ಬೀಗಿ ಬೆಳೆದ ಗೊನೆಬಾಳೆಯಂತೆ 'ಹಾರಿಜಾಂಟಲ್' ಆಗಿ ತಳರಚನೆಯ ಕಡೆ ಬಾಗಬೇಕು. ಕೆಳಮುಖಿ ಚಲನೆಯಿಲ್ಲದ ಮನುಷ್ಯನ ವ್ಯಕ್ತಿತ್ವ ಮತ್ತು ದೇಶದ ನಾಗರಿಕತೆಗಳನ್ನು ನಿಷ್ಫಲವೆಂದೇ ಕರೆಯಬೇಕು. ವರ್ಣಾಶ್ರಮ ಧರ್ಮವು ಮೇಲ್ಮುಖಿ ಚಲನೆಯನ್ನು ಪ್ರತಿಪಾದಿಸುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಸಕಲವಿಧವಾದ ಭೇದಭಾವಗಳೆಂಬ ಅಡಿಪಾಯದ ಮೇಲೆ ವರ್ಣಾಶ್ರಮ ಧರ್ಮದ ತಾತ್ವಿಕತೆಯ ಕಟ್ಟಡವು ಗಗನಚುಂಬಿಯಾಗಿ ಚಾಚಿಕೊಂಡಿದೆ. ಆದರೆ, ಶರಣಧರ್ಮವು ಯಾವುದೇ ವಿಧವಾದ ಭೇದಭಾವಗಳಿಲ್ಲದ ಅಡಿಪಾಯದ ಮೇಲೆ ನೆಲಕ್ಕೆ ಅಂಟಿಕೊಂಡ ತಾತ್ವಿಕತೆಯ 'ಮಹಾಮನೆ'ಯನ್ನು ವಿಸ್ತರಿಸಿ ಕೊಂಡಿದೆ. ಆಚಾರ್ಯತ್ರಯರ ಪ್ರತಿಪಾದನೆಗಳಾದ ದ್ವೈತ-ಅದ್ವೈತ-ವಿಶಿಷ್ಟಾದ್ವೈತ ಮಾರ್ಗಗಳು ಆಳದಲ್ಲಿ ಭೇದ ಭಾವದ ಸೂಕ್ಷ್ಮಗಳನ್ನು ಒಳಗೊಂಡಿದ್ದರಿಂದಲೇ, ಅಲ್ಲಮ ಪ್ರಭು ಇವರೆಲ್ಲರ ಚಿಂತನಾಕ್ರಮವನ್ನು 'ವಾಗದ್ವೈತ'ವೆಂಬ (=ಮಾತಿನಲ್ಲಿ ಮಾತ್ರ ಅದ್ವೈತ, ಕಾರ್ಯದಲ್ಲಿ ದ್ವೈತ) ಖಚಿತ ಪರಿಭಾಷೆಯಲ್ಲಿ ತೀವ್ರವಾಗಿ ವಿಡಂಬಿಸಿದ್ದಾನೆ. ಗ್ರಾಂಥಿಕ ಪರಂಪರೆಯ ಓದುಗಳು, ಆಚರಣೆಯಲ್ಲಿ ಕೃತಾರ್ಥವಾಗುವುದಿಲ್ಲವೆಂಬುದನ್ನು ಬಸವಣ್ಣನೂ ಸ್ಪಷ್ಟವಾಗಿ ಗುರುತಿಸಿದ್ದಾನೆ:

ದ್ವೈತಾ ದ್ವೈತವನೋದಿ ಏನ ಮಾಡುವಿರಯ್ಯ?
ನಮ್ಮ ಶರಣರಿಗೆ ಉರಿಗರಗಾಗಿ ಕರಗದನ್ನಕ?
ಸ್ಥಾವರ ಜಂಗಮ ಒಂದೆಂದು ನಂಬದನ್ನಕ?
ಕೂಡಲ ಸಂಗಮದೇವ,
ಬರಿಯ ಮಾತಿನ ಮಾಲೆಯಲೇನಬಹುದು? -
೧೨೮

ಗ್ರಂಥಸ್ಥವಾದ ಬರಿಯ ಮಾತಿನ ಮಾಲೆಯನ್ನೇ ಸೂಕ್ತಿಗಳು, ಸುಭಾಷಿತಗಳು ಎನ್ನುತ್ತಾರೆ. ಇವನ್ನು ಉದ್ಧರಿಸಿ ಜ್ಞಾನಿಗಳೆಂದು ಬೀಗಬಹುದೆ ಹೊರತು, ಇದರಿಂದಲೇ ಉದ್ಧಾರ ಸಾಧ್ಯವಿಲ್ಲ. ಅಲ್ಲಮನ ವಚನವೊಂದು ಅಕ್ಷರ ಜಗತ್ತಿನ ಕಪಟ ಬುದ್ಧಿಯನ್ನು ನಿಷ್ಠುರವಾಗಿ ಅನಾವರಣಗೊಳಿಸಿದೆ:

ವೇದವೆಂಬುದು ಓದಿನ ಮಾತು
ಶಾಸ್ತ್ರವೆಂಬುದು ಸಂತೆಯ ಸುದ್ದಿ

'ದಕ್ಕ ನುಂಗಿದಂತೆ ಬೆರೆದುಕೊಂಡಿರಬೇಡ' ಎಂದರೆ ಗೂಟವನ್ನು ನುಂಗಿದಂತೆ ಸೆಟೆದುಕೊಂಡಿರಬೇಡವೆಂದು ಅರ್ಥ. ಮನುಷ್ಯನ ವ್ಯಕ್ತಿತ್ವ, ಜೀವನಶೈಲಿ, ಸಕಲ ಜ್ಞಾನಶಾಖೆಗಳು, ಅಭಿವೃದ್ಧಿ ಯೋಜನೆಗಳು, ನಾಗರಿಕತೆಗಳ ಒಟ್ಟು ವಿನ್ಯಾಸ ಕ್ರಮ ಬೀಗಿ ಬೆಳೆದ ಬಾಳೆಯಂತೆ 'ವರ್ಟಿಕಲ್ ಮೂವ್‌ಮೆಂಟ್'ಗೆ ಒಳಗಾಗಬಾರದು. ಮನುಷ್ಯ ನಿರ್ಮಿತವಾದ ಎಲ್ಲ ಬಗೆಯ ಮೇಲು ರಚನೆಗಳು ಬೀಗಿ ಬೆಳೆದ ಗೊನೆಬಾಳೆಯಂತೆ 'ಹಾರಿಜಾಂಟಲ್' ಆಗಿ ತಳರಚನೆಯ ಕಡೆ ಬಾಗಬೇಕು. ಕೆಳಮುಖಿ ಚಲನೆಯಿಲ್ಲದ ಮನುಷ್ಯನ ವ್ಯಕ್ತಿತ್ವ ಮತ್ತು ದೇಶದ ನಾಗರಿಕತೆಗಳನ್ನು ನಿಷ್ಫಲವೆಂದೇ ಕರೆಯಬೇಕು. ವರ್ಣಾಶ್ರಮ ಧರ್ಮವು ಮೇಲ್ಮುಖಿ ಚಲನೆಯನ್ನು ಪ್ರತಿಪಾದಿಸುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಸಕಲವಿಧ ವಾದ ಭೇದಭಾವಗಳೆಂಬ ಅಡಿಪಾಯದ ಮೇಲೆ ವರ್ಣಾಶ್ರಮ ಧರ್ಮದ ತಾತ್ವಿಕತೆಯ ಕಟ್ಟಡವು ಗಗನಚುಂಬಿಯಾಗಿ ಚಾಚಿಕೊಂಡಿದೆ. ಆದರೆ, ಶರಣಧರ್ಮವು ಯಾವುದೇ ವಿಧ ವಾದ ಭೇದಭಾವಗಳಿಲ್ಲದ ಅಡಿಪಾಯದ ಮೇಲೆ ನೆಲಕ್ಕೆ ಅಂಟಿಕೊಂಡ ತಾತ್ವಿಕತೆಯ 'ಮಹಾಮನೆ'ಯನ್ನು ವಿಸ್ತರಿಸಿ ಕೊಂಡಿದೆ.

ಪುರಾಣವೆಂಬುದು ಪುಂಡರ ಗೋಷ್ಠಿ
ತರ್ಕವೆಂಬುದು ಟಗರ ಹೋರಾಟ
ಭಕ್ತಿಯೆಂಬುದು ತೋರುಂಬ ಲಾಭ
ಗುಹೇಶ್ವರನೆಂಬುದು ಮೀರಿದ ಘನವು.

ಶರಣರ ಗಾಢವಾದ ಪ್ರಭಾವಕ್ಕೆ ಒಳಗಾಗಿದ್ದ ಕೈವಾರದ ತಾತಯ್ಯನವರು ದ್ವೈತಭಾವದ ಚಿಂತನಾಕ್ರಮವನ್ನು ಕತ್ತಲೆಗೆ ಹೋಲಿಸುತ್ತಾ ದ್ವೈತಾಂಧಕಾರದಲ್ಲಿ ಕಣ್ಣು ಕಾಣೂವುದಿಲ್ಲವೆಂದೂ, ನಮ್ಮ ಮನಸ ಕೃಷ್ಣ ಪಕ್ಷದ ಚಂದ್ರನಂತೆ ಕುಗ್ಗುತ್ತಾ ಗಾಢಾಂಧಕಾರದಲ್ಲಿ ಮುಳುಗಿ ಹೋಗುವುದೆಂದೂ ಹೇಳಿದ್ದಾರೆ. ಇದಕ್ಕೆ ವಿರುದ್ಧವಾಗಿ ಅದ್ವೈತ ಭಾವದ ಸುವಿಚಾರ ಸರಣಿಯನ್ನು ಬೆಳದಿಂಗಳಿಗೆ ಹೋಲಿಸುತ್ತಾ ಅದ್ವೈತ ಪೂರ್ಣಿಮೆಯಲ್ಲಿ ಕಣ್ಣು ಚೆನ್ನಾಗಿ ಕಾಣುವುದಲ್ಲದೆ, ನಮ್ಮ ಮನಸ್ಸು ಶುಕ್ಲ ಪಕ್ಷದ ಚಂದ್ರನಂತೆ ಹಿಗ್ಗುತ್ತಾ ತಂಪಾಗಿ ಬೆಳಗುವುದೆಂದು ನುಡಿದಿದ್ದಾರೆ. ಭೇದ ಭಾವ ಮಾಡುವವರನ್ನು 'ಬಾಧಗುರುವುಲು' ಎಂದೂ ಅಭೇದಭಾವದವರನ್ನು 'ಬೋಧ ಗುರುವುಲು' ಎಂದೂ ಕರೆದಿದ್ದಾರೆ. ತಾತಯ್ಯನವರ ಪ್ರಕಾರ ಭೇದಭಾವವು ಹಿಂಸ ಮಾರ್ಗ-ಮತಿ ಅಭೇದಭಾವವು 'ಹಂಸ ಮಾರ್ಗವು' ಆಗಿದೆ. ಇದೆಲ್ಲವೂ ಶರಣಧರ್ಮದ ಚಲನಶೀಲತೆಯ ಆಯಾಮಗಳಾಗಿವೆ.

III ಗಣಸಮಾಜ-ಕರ್ಮಸಿದ್ಧಾಂತ ಮುಖಾಮುಖಿ:

ಗಣಸಮಾಜ – ಕಾಯಕ / ದಾಸೋಹ / ಅನುಭವ ಮಂಟಪ
ಕರ್ಮಸಿದ್ಧಾಂತ – ವಿಧಿವಾದ / ಪುನರ್ಜನ್ಮ / ವಾಗದ್ವೈತ

'ಬಸವ ಚಳುವಳಿಯ ಭೌತಿಕವಾದಿ ಅಧ್ಯಯನ' ನಡೆಸಿರುವ ನ್ಯಾಯವಾದಿಗಳಾಗಿರುವ ಪಿ.ಎಸ್. ಪಾಟೀಲರು ಆದಿಮ ಸಮಾಜಗಳಲ್ಲಿ ಬಳಕೆಯಲ್ಲಿರುವ 'ಆದಿಮ ಸಮತಾವಾದ'ದ ದೃಷ್ಟಿ-ಧೋರಣೆಗಳನ್ನು ಶರಣಧರ್ಮದಲ್ಲಿ ಮನಗಂಡಿದ್ದಾರೆ. ಶರಣರ ಗೋಷ್ಠಿಗಳು ಅಥವಾ ಅನುಭಾವಸಂಗವನ್ನು 'ಗಣಮೇಳಾಪ'ವೆಂದು ಶರಣರೇ ಕರೆದಿರುವುದನ್ನು ಪ್ರಸ್ತಾಪಿಸಿರುವ ಪಿ.ಎಸ್. ಪಾಟೀಲರು ಗಣಂಗಳು, ಗಣಭಾಷಿತಗಳು, ಗಣೇಶ್ವರ ಮುಂತಾದ ಪ್ರಯೋಗಗಳನ್ನು ಉದಾಹರಿಸಿ, ಆದಿಮ ಗಣ ಸಮಾಜದ ದೃಷ್ಟಿ ಧೋರಣೆಗಳನ್ನು ಶರಣರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆಂಬುದನ್ನು ದೀರ್ಘವಾಗಿ ವಿವರಿಸಿದ್ದಾರೆ. ಇಂಥ ಅಳವಡಿಕೆಯ ಭಾಗವಾಗಿಯೇ ಕಾಯಕ-ದಾಸೋಹ-ಅನುಭವಿಮಂಟಪಗಳನ್ನು ಅರ್ಥಮಾಡಿಕೊಳ್ಳಬೇಕೆಂಬ ಪಿ.ಎಸ್. ಪಾಟೀಲರ ಅಧ್ಯಯನವು ಬುಡಕಟ್ಟು ಸಮಾಜಗಳಲ್ಲಿ ಇಂದಿಗೂ ಚಾಲ್ತಿಯಲ್ಲಿರುವ' ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು" ಎಂಬ ಆದಿಮ ಸಮತಾವಾದದಿಂದ ಪ್ರೇರಿತವಾಗಿದೆ.

ಆದರೆ, ವರ್ಣಾಶ್ರಮಧರ್ಮದ ಸಮಾಜೋ-ಆರ್ಥಿಕ ರಚನೆ ಆದಿಮ ಗಣಸಮಾಜಕ್ಕೆ ತದ್ವಿರುದ್ಧವಾದುದು. ಕರ್ಮಸಿದ್ಧಾಂತ ವಿಧಿವಾದ-ಪುನರ್ಜನ್ಮಗಳೆಂಬ ಸುಪ್ರಸಿದ್ಧ ಐಕ್ಯತ್ರಯಗಳ ನೆರವಿನಿಂದ ಉಳ್ಳವರು ಮತ್ತು ಬಡವರ ಅಂತರವನ್ನು ರಕ್ಷಿಸಿಕೊಂಡು ಬರಲಾಗದೆ. ಸಮಾನತೆಗೆ ಬದಲಾಗಿ ಸಂಗ್ರಹಕ್ಕೆ ಪ್ರಾಶಸ್ತ್ಯವಿರುವ ಸ್ವಾರ್ಥಪೂರಿತ ಸಮಾಜದ ರಚನೆಯನ್ನು ವರ್ಣಾಶ್ರಮ ಧರ್ಮ ಬೆಂಬಲಿಸುತ್ತದೆ. ಆದ್ದರಿಂದಲೇ ಶರಣರು ಕರ್ಮಸಿದ್ಧಾಂತ-ವಿಧಿವಾದ- ಪುನರ್ಜನ್ಮಗಳನ್ನು ಸುಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಎದೆಯಲ್ಲಿ ಭೇದಭಾವವನ್ನು ಇಟ್ಟುಕೊಂಡು ಬಾಯಿಮಾತಿನಲ್ಲಿ ಅಭೇದವನ್ನು ಬೋಧಿಸುವ ವರ್ಣಾಶ್ರಮ ಧರ್ಮೀಯರನ್ನು ದೃಷ್ಟಿಯಲ್ಲಿಟ್ಟುಕೊಂಡೇ ಅಲ್ಲಮ ಪ್ರಭುಗಳು "ವಾಗದ್ವೈತ"ವೆಂದು ತೀವ್ರವಾಗಿ ವಿಡಂಬಿಸಿದ್ದಾರೆ.

ಅಡವಿಯೊಳಗೆ ಕಳ್ಳರು
ಕಡವಸದ ಸ್ವಾಮಿಯನು ಹುಡುಕಿ ಹುಡುಕಿ
ಅರಸುತ್ತೈದಾರೆ!
ಸೊಡರು ನಂದಿ ಕಾಣದೆ
ಅನ್ನಪಾನದ ಹಿರಿಯರೆಲ್ಲರೂ ತಮ್ಮ ತಾವರಿಯದೆ
ಅದರ ಪಾವನನುಂಡು ತೇಗಿ
ಸುರಾಪಾನವ ಬೇಡುತ್ತೈದಾರೆ.
ಅಳಿದ ಹಾರುವನೊಬ್ಬನು
ಅರಿದ ತಲೆಯ ಹಿಡಿದುಕೊಂಡು
ಅಧ್ಯಾತ್ಮವಿಕಾರದ ನೆತ್ತರ ಕುಡಿದನು
ನೋಡಾ ಗುಹೇಶ್ವರ! – ೧೮

ಅಲ್ಲಮನ ಈ ವಚನವನ್ನು ನಿರ್ದಿಷ್ಟ (Particular) ಮತ್ತು ಸಾಧಾರಣ (General) ದೃಷ್ಟಿಕೋನಗಳಿಂದ ವಿವರಿಸಬಹುದು. 'ಅಡವಿಯೊಳಗೆ ಕಳ್ಳರು' – ಎಂಬುದು ಇಡೀ ವಾನಾಪ್ರಸ್ಥಾಶ್ರಮಕ್ಕೆ ಬರೆದ ಭಾಷ್ಯವಾಗಿದೆ. ದೇವರು-ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಹಗಲು ದರೋಡೆಯನ್ನು ಅನ್ನಪಾನ, ಅಧರಪಾನ, ಸುರಾಪಾನ ವೆಂಬ ನುಡಿಗಳು ಕನ್ನಡಿಸುತ್ತಿವೆ. "ಅಳಿದ ಹಾರುವನೊಬ್ಬನು ಅರಿದ ತಲೆಯ ಹಿಡಿದುಕೊಂಡ ಅಧ್ಯಾತ್ಮ ವಿಕಾರದ ನೆತ್ತರ ಕುಡಿದನು"- ಎಂಬ ಸಾಲುಗಳು ಪುರೋಹಿತಶಾಹಿಯ ಕುಯುಕ್ತಿ, ನಯವಂಚನೆ ಮತ್ತು ಪಥಭ್ರಷ್ಟತೆಗಳನ್ನು ಹೇಳುತ್ತಿದ್ದು ಇದೇ ಅಂದು-ಇಂದು-ಮುಂದಿನ ಭಾರತೀಯ ಇತಿಹಾಸವಾಗಿದೆ. "ನಿರ್ದಿಷ್ಟವಾಗಿ ಹೇಳುವುದಾದರೆ, ಕ್ರಿ.ಶ. ಎಂಟನೆ ಶತಮಾನದಲ್ಲಿದ್ದ ಅಲ್ಲಮನು" ಅಳಿದ ಹಾರುವನೊಬ್ಬನು ಅರಿದ ತಲೆಯ ಹಿಡಿದುಕೊಂಡು ಅಧ್ಯಾತ್ಮ ವಿಕಾರದ ನೆತ್ತರ ಕುಡಿದನ ನೋಡಾ"- ಎಂದು ಉಗ್ರವಾಗಿ ಖಂಡಿಸಿದ್ದಾನೆ." ಅಧ್ಯಾತ್ಮ ವಿಕಾರದ ನೆತ್ತರು ಎಂಬ ನುಡಿಯಲ್ಲಿ ಹೋಮ ವಾದಿ ರಾಜಕಾರಣದ ಹಿಂಸೆ ಮತ್ತು ರಕ್ತಪಾತಗಳು ಧ್ವನಿ ಪೂರ್ಣವಾಗಿ ಮೂಡಿಬಂದಿದೆ.

ಕಲಿತವರನ್ನು ವಿದ್ಯಾವಂತರು, ಜ್ಞಾನಿಗಳು ಎಂದು ಕರೆಯುವುದು ವಾಡಿಕೆ. ಬಗೆ ಬಗೆಯ ಶಾಸ್ತ್ರಗಳನ್ನು, ದೊಡ್ಡ ದೊಡ್ಡ ಗ್ರಂಥಗಳನ್ನು ತಿರುವಿ ಹಾಕಿದವರನ್ನು ಭಯ ಮಿಶ್ರಿತ ಗೌರವದಿಂದ ಕಾಣುವುದು ಇಂದಿಗೂ ಚಾಲ್ತಿಯಲ್ಲಿದೆ. ಅಲ್ಲಮ ಪ್ರಭುಗಳು ಕಲಿತವ ಅಜ್ಞಾನ ಮತ್ತು ಭ್ರಾಂತಿಗಳನ್ನು ಸಹಜವಾಗಿ ಅಭಿವ್ಯಕ್ತಗೊಳಿಸಿದ್ದಾರೆ. 'ಶಾಸ್ತ್ರ' ಮತ್ತು 'ಶಾಸ್ತ್ರ'ಗಳು ಈ ದೃಷ್ಟಿಯಿಂದ ಜ್ಞಾತಿ ಶಬ್ದಗಳೆಂದು ಹೇಳಬಹುದು. ಸಕಲ ವಿಧವಾದ 'ಶಾಸ್ತ್ರ'ಗಳು ಕ್ರಮೇಣ 'ಶಸ್ತ್ರ'ಗಳಾಗಿ ಪರಿಣಮಿಸಿ ಬಡಜನತೆಯನ್ನು ಮತ್ತಷ್ಟು, ಇನ್ನಷ್ಟು ಕುಸಿಯುವಂತೆ ಮಾಡುವಲ್ಲಿ ಯಶಸ್ವಿಯಾಗಿವೆ. ಇದರ ಅಭಿವ್ಯಕ್ತಿ ಇಲ್ಲಿದೆ:

ಅಜ್ಞಾನವೆಂಬ ತೊಟ್ಟಿಲೊಳಗೆ
ಜ್ಞಾನವೆಂಬ ಶಿಶುವ ಮಲಗಿಸಿ
ಸಕಲವೇದ ಶಾಸ್ತ್ರವೆಂಬ ನೇಣ ಕಟ್ಟಿ
ಹಿಡಿದು ತೂಗಿ ಜೋಗುಳವಾಡುತ್ತಿದ್ದಾಳೆ
ಭ್ರಾಂತಿಯೆಂಬ ತಾಯಿ!
ತೊಟ್ಟಿಲು ಮುರಿದು, ನೇಣು ಹರಿದು
ಜೋಗುಳ ನಿಂದಲದೆ
ಗುಹೇಶ್ವರ ಲಿಂಗವ ಕಾಣಬಾರದು – ೨೨೬

ಗ್ರಾಂಥಿಕ ಪರಂಪರೆಗೆ ಬೇಡವಾದವನು ಮತ್ತು ಮೌಖಿಕ ಪರಂಪರೆಗೆ ಬೇಕಾದವನು ಆದ ಅಲ್ಲಮ ಪ್ರಭುವಿನ ವಚನಗಳು ಸರಳ ಸುಂದರವಾಗಿವೆ. ಶರಣರಲ್ಲೆ ಅತ್ಯಧಿಕ ಪ್ರಮಾಣದಲ್ಲಿ ಕನ್ನಡದ ದೇಶ್ಯ ಶಬ್ದಗಳನ್ನು ಬಳಸಿದವನೆಂದರೆ ಅಲ್ಲಮ ಪ್ರಭು. ಕನ್ನಡಕ್ಕೆ ವಿಶಿಷ್ಟವಾದ ದೇಶ್ಯ ಪದಕೋಶದ ಅರಿವಿಲ್ಲದ ಅಕ್ಷರಸ್ಥರಿಗೆ ಅಲ್ಲಮನ ವಚನಗಳು ಕಠಿಣವಾಗಿ ತೋರಬಹುದೇ ಹೊರತು ತಳ ಸಮುದಾಯಗಳೊಂದಿಗೆ ಬೆರೆತು ಹೋಗಿರುವ ಸಹೃದಯರಿಗೆ ಅಲ್ಲಮನ ವಚನಗಳು ಸುಲಭ ಗ್ರಾಹ್ಯವಾಗಿವೆ. 'ಮೌಖಿಕ ಪರಂಪರೆ ಎಂದರೆ ವಿಶಿಷ್ಟ ಅನುಭವಗಳ ಜಗತ್ತು; ಸದಾ ಆಗುತ್ತಿರುವ ಸಹಜಯೋಗ. 'ಗ್ರಾಂಥಿಕ ಪರಂಪರೆ' ಎಂದರೆ ಹಲವಾರು ಬಗೆಯ ISM ಗಳ ಜನ್ಮಭೂಮಿ; ನಾನು-ನೀನೆಂಬ ವ್ಯಾಯೋಗ. ಇದರ ಅರಿವು ಸ್ಪಷ್ಟವಾಗಿದ್ದರಿಂದಲೇ ಶರಣರು ತಮ್ಮ ಚಿಂತನೆಗಳನ್ನು 'ಬರೆಹ'ದಲ್ಲಿ ದಾಖಲು ಮಾಡದೆ, 'ಭಾಷೆ'ಯಲ್ಲಿ ಬದುಕಿ, ಸಂಸ್ಕೃತಿಯಲ್ಲೂ ಬದುಕಿದ್ದಾರೆ.

ನಾನಿಮ್ಮೊಳಗು: ವಿ. ಚಂದ್ರಶೇಖರ ನಂಗಲಿ, ಪು ೪೯, ಲೋಹಿಯಾ ಪ್ರಕಾಶನ ಬಳ್ಳಾರಿ.

(೧೮-೩-೨೦೦೭ ರಂದು ರಾಯಚೂರಿನ ಎಲ್.ವಿ.ಡಿ. ಕಾಲೇಜಿನಲ್ಲಿ ಸ್ಥಳೀಯ ಸಂಘಟನೆಗಳಾದ ಶ್ರೀ ಗಳಂಗಳಪ್ಪ ಪಾಟೀಲ, ಬಸವಾದಿ ಶರಣ ಸಾಹಿತ್ಯ ಕೇಂದ್ರ ಮತ್ತು ತಾರಾನಾಥ ಶಿಕ್ಷಣ ಸಂಸ್ಥೆಗಳ ಸಹ ಯೋಗದಲ್ಲಿ, ಗುಲ್ಬರ್ಗಾ ವಿಶ್ವ ವಿದ್ಯಾಲಯವು ಆಯೋಜಿಸಿದ್ದ 'ಶರಣರು ಹಾಗೂ ಸೌಹಾರ್ದತೆ'-ವಿಷಯ ಕುರಿತ ವಿಚಾರ ಸಂಕಿರ್ಣದಲ್ಲಿ, ಡಾ॥ ಬಸವರಾಜ ಸಬರದ ಅವರು ನೀಡಿದ ಶೀರ್ಷಿಕೆಗೆ ಅನುಗುಣವಾಗಿ ಮಾಡಿದ ಭಾಷಣವನ್ನಾಧರಿಸಿದ ಲೇಖನ.) □

ಗ್ರಾಂಥಿಕ ಪರಂಪರೆಗೆ ಬೇಡವಾದವನು ಮತ್ತು ಮೌಖಿಕ ಪರಂಪರೆಗೆ ಬೇಕಾದವನು ಆದ ಅಲ್ಲಮ ಪ್ರಭುವಿನ ವಚನಗಳು ಸರಳ ಸುಂದರವಾಗಿವೆ. ಶರಣರಲ್ಲೆ ಅತ್ಯಧಿಕ ಪ್ರಮಾಣದಲ್ಲಿ ಕನ್ನಡದ ದೇಶ್ಯ ಶಬ್ದಗಳನ್ನು ಬಳಸಿದವನೆಂದರೆ ಅಲ್ಲಮ ಪ್ರಭು. ಕನ್ನಡಕ್ಕೆ ವಿಶಿಷ್ಟವಾದ ದೇಶ್ಯ ಪದಕೋಶದ ಅರಿವಿಲ್ಲದ ಅಕ್ಷರಸ್ಥರಿಗೆ ಅಲ್ಲಮನ ವಚನಗಳು ಕಠಿಣವಾಗಿ ತೋರಬಹುದೇ ಹೊರತು ತಳಸಮುದಾಯಗಳೊಂದಿಗೆ ಬೆರೆತು ಹೋಗಿರುವ ಸಹೃದಯರಿಗೆ ಅಲ್ಲಮನ ವಚನಗಳು ಸುಲಭ ಗ್ರಾಹ್ಯವಾಗಿವೆ. 'ಮೌಖಿಕ ಪರಂಪರೆ ಎಂದರೆ ವಿಶಿಷ್ಟ ಅನುಭವಗಳ ಜಗತ್ತು; ಸದಾ ಆಗುತ್ತಿರುವ ಸಹಜ ಯೋಗ. 'ಗ್ರಾಂಥಿಕ ಪರಂಪರೆ' ಎಂದರೆ ಹಲವಾರು ಬಗೆಯ ISMಗಳ ಜನ್ಮ ಭೂಮಿ; ನಾನು-ನೀನೆಂಬ ವ್ಯಾಯೋಗ.

ಸಮ್ಮಿಶ್ರ ಸರ್ಕಾರದ ತೊಳಲಾಟ

ಸುಜಾತ ಕುಮಟಾ

ಯಾರಿಗೆ ಯಾರು ಉತ್ತರದಾಯಿತ್ವ ಹೊಂದಿದ್ದಾರೆ? "Who is answerable to whom" ಇದೊಂದು ಥೌಸೆಂಡ್ ಡಾಲರ್ ಪ್ರಶ್ನೆ. ಲೋಹಿಯಾರವರು ತಮ್ಮ ಕೊನೆ ಉಸಿರಿರುವವರೆಗೂ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರುವ ಅಧಿಕಾರಿಶಾಹಿಗಳ ಬಗ್ಗೆ ರಾಜಕಾರಣಿಗಳಿಗೆ ಮತ್ತೆ ಮತ್ತೆ ಎಚ್ಚರಿಕೆ ನೀಡುತ್ತಾ "ಸರ್ಕಾರದ ವ್ಯವಸ್ಥೆಯಲ್ಲಿ ಬಹುಮುಖ್ಯ ಪಾತ್ರ ವಹಿಸುವ ಅಧಿಕಾರಿಶಾಹಿವರ್ಗದ ಬಗ್ಗೆ ಹೇಳುವಾಗ ಒಬ್ಬ ರಾಜಕಾರಣಿ ಮಂತ್ರಿ ಆಗುವುದಕ್ಕಿಂತ ಮುಖ್ಯವಾಗಿ ಒಬ್ಬ ಒಳ್ಳೆಯ State's man ಆಗುವುದರ ಅಗತ್ಯದ ಬಗ್ಗೆ ಹೇಳುತ್ತಲೇ ಬಂದಿದ್ದರು. ರಾಜಕಾರಣಿಗಳು ಆಡಳಿತದ ಸೂತ್ರ ಹಿಡಿಯುವ ಮೊದಲು ಆಡಳಿತ ಯಂತ್ರದ ಸಂಧಿಗೊಂದಿಗಳನ್ನು ಅಗತ್ಯವಾಗಿ ತಿಳಿದುಕೊಳ್ಳಲೇಬೇಕು. ಆಡಳಿತ ಯಂತ್ರಕ್ಕೆ ಬಿಕ್ಕಟ್ಟು ನೀಡುವ ಈ ಆಡಳಿತಶಾಹಿಗಳು ಸರ್ಕಾರವನ್ನು ದಾರಿತಪ್ಪಿಸುವ ಅಥವಾ ತಮಗೆ ಬೇಕಾದ ಹಾಗೆ ಕಾನೂನು ಹಾಗು ವ್ಯವಸ್ಥೆಯನ್ನು ತಿರುಚುವ ಸಂದರ್ಭದಲ್ಲಿ ರಾಜಕಾರಣಿಗಳು ಬಾಚಿ ಹಿಡಿದುಕೊಂಡು ಆ ವ್ಯವಸ್ಥೆಯನ್ನು ಸರಿದಾರಿಯಲ್ಲಿ ನಡೆಸಿಕೊಂಡು ಹೋಗಬೇಕು. ಆದರೆ ಈಗ ಏನಾಗಿದೆ? ರಾಜಕಾರಣಿಗಳದು ಒಂದು ದಿಕ್ಕಾದರೆ ಅಧಿಕಾರಿಶಾಹಿಗಳದು ಮತ್ತೊಂದು ದಿಕ್ಕು.

ಸ್ವಾರ್ಥ ಹಾಗೂ ಜಾತಿ, ಕೋಮು ಲೆಕ್ಕಾಚಾರದಲ್ಲಿ ಮುಂಬರುವ ಚುನಾವಣೆಯನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡಿರುವ ರಾಜಕಾರಣಿಗಳು ಸಾಮಾನ್ಯ ಜನರ ಬವಣೆಗೆ ಸ್ಪಂದಿಸದೆ ತಮ್ಮ ಲೆಕ್ಕಾಚಾರಗಳಲ್ಲೇ ಮುಳುಗಿ ಹೋಗಿದ್ದಾರೆ, ಭ್ರಷ್ಟ ಅಧಿಕಾರಿಗಳು ರಾಜರೋಶವಾಗಿ ತಮ್ಮ ಮರಿಮಕ್ಕಳವರೆಗೂ ಆಸ್ತಿ ಪಾಸ್ತಿ ಮಾಡಿಕೊಂಡು ರಾಜಗಾಂಭೀರದಲ್ಲಿ ಮೆರೆಯುತ್ತಿದ್ದಾರೆ. ಇವರಿಬ್ಬರನ್ನೂ ವಿರೋಧಿಸುವ ಜನಸಾಮಾನ್ಯರ ಘೋಷಣೆಗಳು ಹಾಗು ಚಳುವಳಿಗಳು ಆರ್ತನಾದವಾಗುತ್ತಿದೆ. ಇದಕ್ಕೆ ಜವಾಬ್ದಾರರಾದರು ಯಾರು? ರಾಜ್ಯಕ್ಕೆ ಒಳ್ಳೆಯ ಬಜೆಟ್ ಕೊಟ್ಟಿದ್ದೇನೆಂದು ಬೀಗುವ ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಅವರ ಪಕ್ಷ ಈಗಾಗಲೇ ಮುಂಬರುವ ಮಧ್ಯಂತರ ಚುನಾವಣೆಗೆ ಸೆಡ್ಡು ಹೊಡೆದು ತಯಾರಾಗಿದೆ. ಇನ್ನು ಜೆಡಿಎಸ್ ಇಡೀ ಕರ್ನಾಟಕ ರಾಜ್ಯದಲ್ಲಿ ಇನ್ನಿಲ್ಲದ ಜಾತಿ ರಾಜಕಾರಣದ ಪರಾಕಾಷ್ಠೆಯಲ್ಲಿ ತನ್ನನ್ನು ತಾನೇ ಮರೆತಿದೆ. "ಜಾತ್ಯತೀತ" ರಾಜಕಾರಣದ ಹೆಸರಿನಲ್ಲಿ ಕೋಮುವಾದಿ ಪಕ್ಷದೊಂದಿಗೆ ಕೈ ಜೋಡಿಸಿರುವ ಈ ಪಕ್ಷದಿಂದ ಸ್ವಸ್ಥಸಮಾಜದ ಕನಸನ್ನು ಕಾಣುವುದಾದರು ಹೇಗೆ? ಇಷ್ಟಿದ್ದರೂ ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಯಾವುದೋ ಕಲಾವಿದ(ರು)ರ ಆರೋಗ್ಯ ವಿಚಾರಿಸಲು ಮಂಗಳೂರಿಗೆ ಹೋಗಿದ್ದಾರೆ.

ಒಬ್ಬ ರಾಜ್ಯದ ಮುಖ್ಯಮಂತ್ರಿಯ ಬೇಜವಾಬ್ದಾರಿತನದ ಪರಮಾವಧಿ ಇದು. ಒಬ್ಬ ರಾಜ್ಯದ ಮುಖ್ಯಮಂತ್ರಿ ರಾಜಧಾನಿಯಿಂದ ಉಪಸ್ಥಿತನಾದಾಗ ಆತನ ಕಾರ್ಯಕ್ರಮಗಳ ಬಗ್ಗೆ ಹಾಗೂ ಆತನ ರಕ್ಷಣೆಯ ಬಗ್ಗೆ ಕಿಂಚಿತ್ತೂ ಕಾಳಜಿ ಮಾಡದ ಗೃಹಮಂತ್ರಿ ಏನು ಮಾಡುತ್ತಿರುತ್ತಾರೋ ದೇವರಿಗೆ ಗೊತ್ತು. ಮಾನ್ಯ ಗೃಹ ಮಂತ್ರಿಗಳು ಮಾತೆತ್ತಿದರೆ ಸಮಾಜವಾದ ಮತ್ತು ಲೋಹಿಯಾರವರ ಹೆಸರನ್ನು ತಮ್ಮ ಭಾಷಣಗಳಲ್ಲಿ ಉಲ್ಲೇಖಿಸುವ ಪರಿ ಕಂಡರೆ ಇವರು ಅಭಿನವ ಲೋಹಿಯಾ ಎಂದೇ ಭ್ರಮಿಸುವಷ್ಟು ಭಾವನೆಗಳನ್ನು ಸಾರ್ವಜನಿಕರಲ್ಲಿ ಮೂಡಿಸುತ್ತಾರೆ. ಹೇಳದೇ ಕೇಳದೆ ಒಬ್ಬ ರಾಜ್ಯದ ಮುಖ್ಯಮಂತ್ರಿ ಮಂಗಳೂರಿಗೆ ಹೋಗುವಾಗ ಆತ ಕೇವಲ ಸಾಮಾನ್ಯ ವ್ಯಕ್ತಿಯಲ್ಲ ಒಬ್ಬ ರಾಜ್ಯದ ಮುಖ್ಯಮಂತ್ರಿ ಕೂಡ ಒಬ್ಬ ಮುಖ್ಯಮಂತ್ರಿಯ ರಕ್ಷಣೆ ಸಂಪೂರ್ಣವಾಗಿ ಗೃಹ ಮಂತ್ರಿಯ ಜವಾಬ್ದಾರಿ ಅಕಸ್ಮಾತ್ ಮಂಗಳೂರಿಗೆ ಹೋದ ಮುಖ್ಯಮಂತ್ರಿಯ ರಕ್ಷಣೆಯ ವಿಚಾರದಲ್ಲಿ ಏನಾದರೂ ಅನಪೇಕ್ಷಿತವಾದ ಘಟನೆ ನಡೆದಿದ್ದರೆ ಇದಕ್ಕೆ ಜವಾಬ್ದಾರಿ ಯಾರಾಗುತ್ತಿದ್ದರು? ಈ ರಾಜ್ಯದ ಮುಖ್ಯಮಂತ್ರಿ ಸಂಪೂರ್ಣವಾಗಿ ಈ ನಾಡಿನ ಜನತೆಯ ಆಸ್ತಿ, ಅದನ್ನೇ ಕಾಪಾಡಿಕೊಳ್ಳದ ಗೃಹಸಚಿವಾಲಯ ಸಾಮಾನ್ಯ ಜನರನ್ನು ಇನ್ನೆಷ್ಟರ ಮಟ್ಟಿಗೆ ಕಾಪಾಡಬಹುದು?





ಸ್ವಾರ್ಥ ಹಾಗೂ ಜಾತಿ, ಕೋಮು ಲೆಕ್ಕಾಚಾರದಲ್ಲಿ ಮುಂಬರುವ ಚುನಾವಣೆಯನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡಿರುವ ರಾಜಕಾರಣಿಗಳು ಸಾಮಾನ್ಯ ಜನರ ಬವಣೆಗೆ ಸ್ಪಂದಿಸದೆ ತಮ್ಮ ಲೆಕ್ಕಾಚಾರಗಳಲ್ಲೇ ಮುಳುಗಿ ಹೋಗಿದ್ದಾರೆ, ಭ್ರಷ್ಟ ಅಧಿಕಾರಿಗಳು ರಾಜರೋಶವಾಗಿ ತಮ್ಮ ಮರಿಮಕ್ಕಳವರೆಗೂ ಆಸ್ತಿ ಪಾಸ್ತಿ ಮಾಡಿಕೊಂಡು ರಾಜಗಾಂಭೀರ್ಯದಲ್ಲಿ ಮೆರೆಯುತ್ತಿದ್ದಾರೆ. ಇವರಿಬ್ಬರನ್ನೂ ವಿರೋಧಿಸುವ ಜನಸಾಮಾನ್ಯರ ಘೋಷಣೆಗಳು ಹಾಗು ಚಳುವಳಿಗಳು ಆರ್ತನಾದವಾಗುತ್ತಿದೆ. ಇದಕ್ಕೆ ಜವಾಬ್ದಾರರಾದರು ಯಾರು? ಜೆಡಿಎಸ್ ಇಡೀ ಕರ್ನಾಟಕ ರಾಜ್ಯದಲ್ಲಿ ಇನ್ನಿಲ್ಲದ ಜಾತಿ ರಾಜಕಾರಣದ ಪರಾಕಾಷ್ಠೆಯಲ್ಲಿ ತನ್ನನ್ನು ತಾನೇ ಮರೆತಿದೆ. "ಜಾತ್ಯತೀತ" ರಾಜಕಾರಣದ ಹೆಸರಿನಲ್ಲಿ ಕೋಮುವಾದಿ ಪಕ್ಷದೊಂದಿಗೆ ಕೈ ಜೋಡಿಸಿರುವ ಈ ಪಕ್ಷದಿಂದ ಸ್ವಸ್ಥಸಮಾಜದ ಕನಸನ್ನು ಕಾಣುವುದಾದರು ಹೇಗೆ?

ರೈತರು ಮತ್ತು ಜನಸಾಮಾನ್ಯರ ಬದುಕಿನ ಬಗ್ಗೆ ಕಾಳಜಿ ತೋರಿಸುತ್ತಾ ಗ್ರಾಮ ವಾಸ್ತವ್ಯ ಮಾಡುವ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಕಚೇರಿಯಲ್ಲಿಯೇ ಕುಳಿತು ಅಧಿ ಕಾರಿಶಾಹಿಗಳ ಜೊತೆಗೆ ಉತ್ತಮ ರೀತಿಯ ಸಂಪರ್ಕ ಸಾಧಿಸುತ್ತಾ ರಾಜ್ಯದಲ್ಲಿ ಅನೇಕ ರಚನಾತ್ಮಕ ಕಾರ್ಯಗಳನ್ನು ಅನುಷ್ಠಾನಗೊಳಿಸುವತ್ತಾ ಇನ್ನಾದರು ಎಚ್ಚರವಹಿಸುವರೆ?

ಇದೊಂದು ನೈತಿಕ ಪ್ರಶ್ನೆ. ಇಲ್ಲಿ ಅನುಭವ ಹಾಗೂ ಗಾಂಭೀರ್ಯ ಎರಡೂ ವಿಷಯಗಳ ಉಲ್ಲಂಘನೆಯಾಗಿದೆ. ಇದು ನಮ್ಮ ಮುಖ್ಯಮಂತ್ರಿಗಳು ಈ ರಾಜ್ಯದ ವ್ಯವಸ್ಥೆಯ ಬಗ್ಗೆ ನಡೆದುಕೊಳ್ಳುತ್ತಿರುವ, ಹಾಗೂ ತೋರಿಸುತ್ತಿರುವ ಉಡಾಫೆತನದ ಪರಮಾವಧಿ ಅಲ್ಲದೆ ಮತ್ತಿನ್ನೇನು? ಹಾಗೆ ಒಂದು ವೇಳೆ ವೈಯಕ್ತಿಕ ಸಂಬಂಧ ಹಾಗೂ ಸ್ನೇಹಗಳಿಗೆ ಅಷ್ಟೊಂದು ಪ್ರಾಮುಖ್ಯತೆ ಕೊಡುವ ವ್ಯಕ್ತಿಯಾಗಿದ್ದರೆ ಈ ಅಧಿಕಾರದ ವ್ಯಾಮೋಹವಾದರು ಏಕೆ?

ಎಲ್ಲ ಬಯಕೆ, ಆಸ್ತಿ, ಅಧಿಕಾರಗಳು ಈ ರಾಜ್ಯದ ಜನತೆಯ ಭಾವನೆಗಳ ಹಾಗೂ ಆಶಯಗಳ ಪ್ರತೀಕ. ಇಷ್ಟನ್ನು ಅರ್ಥ ಮಾಡಿಕೊಳ್ಳದ ಬೇಜವಾಬ್ದಾರಿ ಮಂತ್ರಿಗಳು ಈ ರಾಜ್ಯಕ್ಕೆ ಬೇಕೇ ದಿನ ಪ್ರತಿ ನಮ್ಮ ರಾಜ್ಯದ ರಸ್ತೆಗಳಲ್ಲಿ ನೂರಾರು ಪ್ರತಿಭಟನೆಗಳು ನಡೆಯುತ್ತವೆ. ಈ ಪ್ರತಿಭಟನೆಗಳಿಗೆಲ್ಲಾ ಒಂದು ವಿಶ್ವಾಸವಿರುತ್ತದೆ ಅದೇನೆಂದರೆ ಇಲ್ಲೊಂದು ಸರ್ಕಾರವಿದೆ. ಅದು ನಮ್ಮ ಆಶಯ ಹಾಗೂ ಬೇಡಿಕೆಗಳಿಗೆ ಸ್ಪಂದಿಸುತ್ತದೆ ಎಂದು ಆದರೆ ಈ ಹೊತ್ತು ರಾಜಕಾರಣದಲ್ಲಿರುವವರು ಸ್ವಲ್ಪವಾದರು ಜವಾಬ್ದಾರಿಯಿಂದ ಇದ್ದಾರೆಯೆ? ಎಲ್ಲಿಗೆ ಈ ಭಾರತದ ಸ್ವಾತಂತ್ರ ಹೋಗುತ್ತಿದೆ. ಎಲ್ಲಾ ಭೂಮಿ ಪರರಾಷ್ಟ್ರಗಳಿಗೆ ಪರಬಾರೆಯಾಗುತ್ತಿದೆ. ಕೃಷಿಕರು ತಮ್ಮ ಅಸಹಾಯಕತೆಗೋಸ್ಕರ ಭೂಮಿಯನ್ನು ಮಾರಿಕೊಂಡು ಅತಂತ್ರರಾಗುತ್ತಿದ್ದಾರೆ. ಬೆಳೆದ ಬೆಳೆಗೆ ಬೆಲೆ ಸಿಕ್ಕದ ಬವಣೆ ಪ್ರಜ್ಞಾಪೂರ್ವಕವಾಗಿ ನೇಣಿಗೆ ಶರಣಾಗುತ್ತಿರುವ ರೀತಿ ಚಿಲ್ಲರೆ ವ್ಯಾಪಾರಿಗಳನ್ನು ಬಲಿತೆಗೆದುಕೊಳ್ಳಲು ತಯಾರಾಗಿರುವ ಮಾರುಕಟ್ಟೆಯ ನೀತಿ ನಾವು ಯಾರನ್ನು ಆರಾಮಾಗಿ ಇಡಲು ಪ್ರಯತ್ನ ಮಾಡ್ತಾಯಿದ್ದೀವಿ? ಏಕೆ ಈ ಪ್ರಶ್ನೆಗಳು ಆಡಳಿತಾರೂಢ ರಾಜಕಾರಣಿಗಳಿಗೆ ಕಾಡುತ್ತಿಲ್ಲ. ಅತ:ಕರಣವಿಲ್ಲದ ಪ್ರಭುತ್ವ ಅನಾಥರಾದ ಪ್ರಜೆಗಳು ಈ ವ್ಯವಸ್ಥೆ ಹೀಗಾಗಿರುವುದಾದರು ಏಕೆ? ನಿಷ್ಕ್ರಿಯ ಸಜ್ಜನರೆ? ಅಥವಾ ಭಯಂಕರ ಶಕ್ತಿಯಿರುವ ದುರಾತ್ಮರೇ? ಪ್ರಶ್ನೆ ಮೇಲೆ ಪ್ರಶ್ನೆ ಕಾಡುತ್ತಲೆಯಿರುತ್ತದೆ.

ಸಮಾಜ ಮತ್ತು ಅದರ ಆರೋಗ್ಯ ಕಾಪಾಡಿಕೊಂಡು ಬರುವುದು ಪ್ರಭುತ್ವದ ಜವಾಬ್ದಾರಿ ಆ ಜವಾಬ್ದಾರಿಯನ್ನು ಮರೆತ ಪ್ರಭುತ್ವದಲ್ಲೇ ಮೈಮರೆವ ತನ್ನನ್ನು ಚುನಾಯಿಸಿದ ಜನತೆಯ ಬಗ್ಗೆ ಯಾವುದೇ ಬಗೆಯ ಜವಾಬ್ದಾರಿಯಿಲ್ಲದ ಈ ಸರ್ಕಾರ ಒಂದು ಸರ್ಕಾರವೇ? ಈ ಬಗೆಯ ರೀತಿಯಲ್ಲಿ ಆಲೋಚಿಸಿದಾಗಲೆ ಗೊತ್ತಾಗುತ್ತದೆ ಈ ಸರ್ಕಾರ ಸಂಪೂರ್ಣವಾಗಿ "ಜನಪ್ರಿಯ" ಸರ್ಕಾರವಾಗಲು ಹೊರಟಿದೆ. ಘೋಷಣೆ ಹಾಗೂ "ಮುಖ್ಯ ಮಂತ್ರಿಗಳ ವಾಸ್ತವ"ದಲ್ಲಿ ಕಳೆದು ಹೋಗಿದೆ ಎಂದು gross root ಮಟ್ಟದ ಸಮಸ್ಯೆಗಳಿಗೆ ಮುಖಾಮುಖಿಯಾಗದ ಈ ಸರ್ಕಾರದ ಉದ್ದೇಶವಾದರು ಏನು? ದೇವೇಗೌಡರು ಸದಾಕಾಲ ಅಮೆರಿಕದ ಬುಶ್ ರೀತಿಯಲ್ಲಿ ದಾಳ ಹಾಕುತ್ತಾ ಈ ನಾಡಿನ ಜನ ಸಾಮಾನ್ಯರಿಗೆ ಮಣ್ಣೆರೆಚುತ್ತಾ "ಅಂತ:ಕರಣದ" ಆತ್ಮನಿವೇದನೆ ಮಾಡಿಕೊಳ್ಳುತ್ತಾ ಜಾತಿರಾಜಕಾರಣವನ್ನು ಇನ್ನೆಷ್ಟು ದಿನ ಮಾಡಬೇಕೆಂದಿದ್ದಾರೆ.

ಕರ್ನಾಟಕದ ಜನತೆಗೆ ಈ "ಜಾತ್ಯತೀತ" ರಾಜಕಾರಣ ಸಾಕಾಗಿದೆ. ಅವರಿಗೆ ನೆಮ್ಮದಿಯ ಬದುಕು ಬೇಕು. ಅವರಿಗೆ ಜಾತೀ ಹಾಗೂ ಜಾತ್ಯತೀತ ಎರಡೂ ರಾಜಕಾರಣ ಸಾಕಾಗಿದೆ. ಈ ಭೂಮಿಯ ಮೇಲೆ ಅದರಲ್ಲೂ ಕನ್ನಡನಾಡ ಜನತೆ ಈಗಾಗಲೇ ಸಾಕಷ್ಟು ನೊಂದು ಬೆಂದಿದ್ದಾರೆ. ಈ ಬಹುರಾಷ್ಟ್ರೀಯ ಕಂಪನಿ ಮತ್ತು ಅವರನ್ನು ಸಂತೋಷ ಪಡಿಸಲೆಂದೆ ಮುಂದಾಗಿರುವ ಸರ್ಕಾರ ಇದರಿಂದ ನಮ್ಮ ನಾಡಿನಲ್ಲೇ ಅತಂತ್ರರಾಗಿರುವ ಕನ್ನಡಿಗರು. ನಮ್ಮ ಬಾಳನ್ನು ಬೇರೆಯವರಿಗೆ ಮಾರಿಕೊಳ್ಳಲು ಸಿದ್ಧವಾಗಿರುವ ಮಾರುಕಟ್ಟೆ ಏಜೆಂಟರನ್ನು ಸದಾ ಕಾಪಾಡಿಕೊಳ್ಳುವ ಹುನ್ನಾರ ಇದು ಎಲ್ಲಿಯವರೆಗೆ?.

ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆತ್ಮಾವಲೋಕನವನ್ನು ಮಾಡಿಕೊಳ್ಳಲಿ. ಅಧಿಕಾರದಾಹ ಒಂದೇ ಕೊನೆಯಲ್ಲಾ, ಈ ರಾಜ್ಯಕ್ಕೆ ಹೋರಾಟಗಳ ಇತಿಹಾಸವಿದೆ. ಇಲ್ಲಿ. ಗೋಪಾಲಗೌಡರಿದ್ದಾರೆ. ಕಡಿದಾಳ್ ಮಂಜಪ್ಪನವರಿದ್ದಾರೆ. ನಂಜುಂಡ ಸ್ವಾಮಿಯವರಿದ್ದಾರೆ. ಕಾಗೋಡು ತಿಮ್ಮಪ್ಪನವರಿದ್ದಾರೆ. ಜಾತಿ ರಾಜಕಾರಣ ಇನ್ನೆಷ್ಟು ದಿನ ಮಾಡಲು ಸಾಧ್ಯ. ಗೋಪಾಲಗೌಡರು ಗೇಣಿ ರೈತರ ಸಲುವಾಗಿ ಹಲವಾರು ವರ್ಷ ಏಕಾಂಗಿಯಾಗಿ ಹೋರಾಟ ಮಾಡಿ ಕೊನೆಗೆ ತಮ್ಮ ಸಂಸಾರಕ್ಕೆ ಸೂರಿಲ್ಲದೆ ಸತ್ತರು. ಆ ಆದರ್ಶಗಳ ಹಿಂದೆ ಸತ್ತ ಚೇತನಗಳು ನೂರಾರು ಇದರ ಸಮಾಧಿಯ ಮೇಲೆ ಯಾವ ಸಾಮ್ರಾಜ್ಯ ಕಟ್ಟಲು ಬಯಸಿದ್ದರೋ ಕಾಣೆ.

ಆದರೂ ಜಾಗತೀಕರಣದ ಈ ಭರಾಟೆಯಲ್ಲಿ ಬಡ ಹೆಣ್ಣು ಮಕ್ಕಳ ಮೇಲೆ ಆಗುತ್ತಿರುವ ದೌರ್ಜನ್ಯ ಅಮಾನವೀಯ ನಡುವಳಿಕೆಗಳ ಬಗ್ಗೆ ಗಮನ ಹರಿಸದೆ, ಡಾನ್ಸ್ ಬಾರ್‌ಗಳಿಗೆ ಅನುಮತಿ ನೀಡಿದರೆ ಇನ್ನಷ್ಟು ಕ್ರಿಮಿನಲ್ ಚಟುವಟಿಕೆಗಳಿಗೆ ಅವಕಾಶ ನೀಡಿದಂತಾಗುವುದಿಲ್ಲವೆ?

ರೈತರು ಮತ್ತು ಜನಸಾಮಾನ್ಯರ ಬದುಕಿನ ಬಗ್ಗೆ ಕಾಳಜಿ ತೋರಿಸುತ್ತಾ ಗ್ರಾಮ ವಾಸ್ತವ್ಯ ಮಾಡುವ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಕಚೇರಿಯಲ್ಲಿಯೇ ಕುಳಿತು ಅಧಿಕಾರಿಶಾಹಿಗಳ ಜೊತೆಗೆ ಉತ್ತಮ ರೀತಿಯ ಸಂಪರ್ಕ ಸಾಧಿಸುತ್ತಾ ರಾಜ್ಯದಲ್ಲಿ ಅನೇಕ ರಚನಾತ್ಮಕ ಕಾರ್ಯಗಳನ್ನು ಅನುಷ್ಠಾನಗೊಳಿಸುವತ್ತಾ ಇನ್ನಾದರು ಎಚ್ಚರವಹಿಸುವರೆ? ಘೋಷಣೆಗಳು ಹಾಗು ಆಶ್ವಾಸನೆಗಳ ಸುತ್ತ ಜನಪರಕಾಳಜಿ ತೋರಿಸುವ ಈ ಸರ್ಕಾರ ಇನ್ನಾದರು ಅಧಿಕಾರಿಶಾಹಿಗಳ ಮೇಲೆ ತನ್ನ ನಿಯಂತ್ರಣ ಹೇರಲೇಬೇಕಾಗಿದೆ. ಇಲ್ಲದಿದ್ದರೆ ಇಬ್ಬರ ಜಗಳದಲ್ಲಿ ಮೂರನೆಯವರು ಉಂಡೂ ಹೋಗುವುದಲ್ಲದೆ ಕೊಂಡು ಹೋಗುವುದನ್ನು ಕರ್ನಾಟಕದ ಜನತೆ ಅಸಹಾಯಕರಾಗಿ ನೋಡುತ್ತಿರಬೇಕಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಅಧಿಕಾರಿಶಾಹಿಗಳನ್ನು ಉಪಯೋಗಿಸಿಕೊಂಡು ಉತ್ತಮ ಆಡಳಿತ ನೀಡುವಲ್ಲಿ ಈ ಸರ್ಕಾರ ಕಾಳಜಿವಹಿಸಲಿ ಎಂದು ಹಾರೈಸುತ್ತೇನೆ. □

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಾಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಅದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಮೈಸೂರಿನಲ್ಲಿ ನಿಧನದ ಸುದ್ದಿ ಕೇಳಿ ಜನರಿಂದ ಮರೆಯಾಗಿ ಗೂಡು ಸೇರಿದ್ದ ದೇವನೂರ ಮಹಾದೇವ ಮತ್ತೆ ಜನರ ಕಣ್ಣಿಗೆ ಕಂಡದ್ದು ಕುಪ್ಪಳಿಯಲ್ಲಿ- ಅದೂ ಅಂತ್ಯ ಸಂಸ್ಕಾರ ಮುಗಿದು ಜನಸ್ತೋಮ ಕರಗಿಹೋದ ಮೇಲೆ. ತೇಜಸ್ವಿಯವರ ಅನಿರೀಕ್ಷಿತ ನಿಧನ ಹಾಗೆ ಅವರ ಗೆಳೆಯರನ್ನು ಕಂಗೆಡಿಸಿತ್ತು. ಈ ಗೆಳೆಯರು ಎಂದರೆ ಗೆಳೆಯರು ಮಾತ್ರವಲ್ಲ; ಅವರನ್ನು ಓದಿ ಸಂತೋಷಪಟ್ಟ, ಬದುಕಿನ ಹೊಸ ರುಚಿಗಳನ್ನು ಕಂಡುಕೊಂಡ ಹಾಗೂ ಆ ಮೂಲಕ ಬದುಕನ್ನು ಪರಿಭಾವಿಸುವ ಕ್ರಮವನ್ನೇ ಬದಲಾಯಿಸಿಕೊಂಡ ಅಬಾಲ ವೃದ್ಧರವರೆಗಿನ ಅವರ ಅಪಾರ ಓದುಗ ಸಮೂಹವೂ ಅದರಲ್ಲಿ ಸೇರಿತ್ತು. ಹಾಗೆ ನೋಡಿದರೆ, ಅಂದು ಏಪ್ರಿಲ್ ಆರರಂದು ಕುಪ್ಪಳಿಯಲ್ಲಿ ಕರ್ನಾಟಕದ ಇಡೀ ಕುವೆಂಪು ಕುಟುಂಬವೇ ಒಟ್ಟಿಗೆ ಸೇರಿದಂತಿತ್ತು- ಗತಿಸಿದ ಮಹನೀಯರು ಹಾಗೂ ದೂರ ಪ್ರಯಾಣ ಮಾಡಲಾಗದ ಹಿರಿಯರ ಹೊರತಾಗಿ.

ಡಿ.ಎಸ್. ನಾಗಭೂಷಣ

ಇದೇ ತಿಂಗಳ ೭ ಅಥವಾ ೮ ರಂದು ನಾವು ನಮ್ಮ ಸ್ನೇಹಿತರನ್ನು ಕಾಣಲು ಚಿಕ್ಕಮಗಳೂರು-ಅರೇಹಳ್ಳಿ-ಹಾಸನಗಳಿಗೆ ಹೋಗಿ ಬರಬೇಕೆಂದಿದ್ದೆವು. ದಾರಿಯಲ್ಲಿ ಪೂರ್ಣಚಂದ್ರ ತೇಜಸ್ವಿಯವರ ಮನೆಗೂ ಒಂದು ಸಂಕ್ಷಿಪ್ತ ಭೇಟಿ ನೀಡಬೇಕೆಂಬ ಉದ್ದೇಶವೂ ಇತ್ತು. ಒಂದೂವರೆ ತಿಂಗಳ ಹಿಂದಷ್ಟೇ ಕುಪ್ಪಳಿಯ ಕುವೆಂಪು ಪ್ರತಿಷ್ಠಾನದವರು ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರಿಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸಿಕ್ಕಿದ್ದ ತೇಜಸ್ವಿಯವರನ್ನು ಶಿವಮೊಗ್ಗಕ್ಕೆ ಆಹ್ವಾನಿಸಿದ್ದೆ. 'ಅಲ್ಲಿಗ್ಯಾಕೆ ಬರಲೋ ಮಾರಾಯಾ' ಎಂದಿದ್ದ ಅವರು ನಮ್ಮನ್ನು ಮೂಡಿಗೆರೆಯ ತಮ್ಮ ಮನೆಗೆ ಆಹ್ವಾನಿಸಿದ್ದರು. ನಮ್ಮ ಜೊತೆ ಬಂದಿದ್ದ ಕಡಿದಾಳು ಶ್ಯಾಮಣ್ಣ ಕೂಡಾ ಒಮ್ಮೆ ಹೋಗಿ ಬರೋಣ ಎಂದಿದ್ದರು. ಆದರೆ ನಾವು ಹೋಗುವ ಮುನ್ನವೇ ಅವರೇ 'ಮನೆ'ಬಿಟ್ಟು ಹೋಗಿಬಿಟ್ಟಿದ್ದಾರೆ...

ಮೂರು ನಾಲ್ಕು ವರ್ಷಗಳ ಹಿಂದೆ ಎಂದು ಕಾಣುತ್ತದೆ- ಪತ್ರಿಕೆಯೊಂದರಲ್ಲಿ ಯಾವುದೋ ವಿಷಯಕ್ಕೆ ಪ್ರತಿಕ್ರಿಯಿಸುತ್ತಾ ನಮ್ಮ ಬಹುಮುಖ್ಯ ಲೇಖಕರಾದ ತೇಜಸ್ವಿ ಎಲ್ಲ ಬಿಟ್ಟು ಈಗ ಬರೀ ಮಾಹಿತಿಯ ಪುಸ್ತಕಗಳನ್ನು ಬರೆಯುತ್ತಾ 'ಇಂಟರ್‌ನೆಟ್ ಸಾಹಿತಿ' ಎಂದು ಪ್ರಖ್ಯಾತರಾಗುತ್ತಿರುವುದು ವಿಷಾದಕರ ಎಂದು ಬರೆದಿದ್ದೆ. ಇದರಿಂದ ಕೆರಳಿದ್ದ ತೇಜಸ್ವಿ ಮೈಸೂರಿನಲ್ಲೊಮ್ಮೆ ಸಿಕ್ಕಾಗ ಜಗಳಾಡಿದ್ದರು. ನಾನು ನನ್ನ ಅಭಿಪ್ರಾಯವನ್ನು ವಿವರಿಸುತ್ತಾ, 'ಆ ಅಭಿದಾನ ನಾನು ಕೊಟ್ಟಿದ್ದಲ್ಲ, ನಿಮ್ಮ ಅಭಿಮಾನಿಗಳೇ ನಿರಾಶರಾಗಿ ಕೊಟ್ಟ ಬಿರುದು!' ಎಂದು ಎಷ್ಟೇ ಹೇಳಿದರೂ (ವಾಸ್ತವವಾಗಿ 'ಅಗ್ನಿ' ಪರಿವಾರದೊಂದಿಗೆ ನಮ್ಮ ಮನೆಗೆ ಬಂದಿದ್ದ ಸುಜಾತಾ ಕುಮಟಾ ಅವರು ಬಳಸಿದ್ದ ಪದವದು) ಕೇಳದೆ, 'ಇಲ್ಲ ನೀನೇ ವಿಲನ್!' ಎಂದು ಮುನಿಸಿಕೊಂಡು ಮುಂದೆ ಮಾತೇ ಆಡದಾದರು. ನಾನು 'ಸರಿಬಿಡಿ, ನಿಮ್ಮ ಸಿನಿಮಾದಲ್ಲಿ ನಾನು ವಿಲನ್; ನನ್ನ ಸಿನಿಮಾದಲ್ಲಿ ನೀವು ವಿಲನ್' ಎಂದು ಹೇಳಿ ಬಂದಿದ್ದೆ.

ಕುಪ್ಪಳಿಯಲ್ಲಿ ಸಿಕ್ಕಾಗ ನಾನು ಪರಿಚಯದ ನಗೆ ಬೀರಿ ನಮಸ್ಕರಿಸಿದೊಡನೆ ತೇಜಸ್ವಿ, ಆ ಘಟನೆಯ ಕಹಿ ಒಂಚೂರೂ ಇಲ್ಲದಂತೆ ಅದೇ ಹಳೆಯ ಪ್ರೀತಿ-ವಿಶ್ವಾಸದಿಂದ ಮಾತನಾಡಿಸಿದರು. ಆದರೆ ಆ ಹಿಂದಿನ ಉಲ್ಲಾಸ ಅವರ ವ್ಯಕ್ತಿತ್ವದಿಂದ ಮಾಯವಾಗಿದ್ದುದು ಎದ್ದು ಕಾಣುತ್ತಿತ್ತು. ಆರೇಳು ತಿಂಗಳುಗಳ ಹಿಂದೆ ಅವರ ಕಾಲುಗಳಿಗೆ ಆಗಿದ್ದ ತೊಂದರೆಯಿಂದಾಗಿ ಅವರು ಅನುಭವಿಸಿದ ದೀರ್ಘಕಾಲಿಕ ಅನಾರೋಗ್ಯದ ತೀವ್ರತೆ ಅವರನ್ನು ತುಂಬಾ ಬಳಲಿಸಿತ್ತು. ಹಾಗಾ

ಕೆ.ಪಿ. ಪೂರ್ಣಚಂದ್ರ ತೇಜಸ್ವಿ:
ಈ ಭೂಮಿಯಿಂದ ಆ ಆಕಾಶದವರೆಗೆ...

ಗಿಯೇ, 'ಮಾಯಾಲೋಕ-೨'ರ ಮುಂದಿನ ಭಾಗ ಯಾವಾಗ?' ಎಂದು ನಾನು ಕುತೂಹಲದಿಂದ ಕೇಳಿದಾಗ ಅವರು ತಮ್ಮ ಸಹಜ ಒರಟು ಶೈಲಿಯಲ್ಲಿ 'ನಾನೇನು ಒಂದಾದರ ಮೇಲೆ ಒಂದರಂತೆ ಕೃತಿ ರಚಿಸಿ ಕೊಡುತ್ತೇನೆ ಅಂತಾ ನಿಮಗೆಲ್ಲಾ ಛಾಪಾ ಕಾಗದದ ಮೇಲೆ ಬರೆದು ಕೊಟ್ಟಿದ್ದೀನೇನ್ರೀ?' ಎಂದು ಹುಸಿ-ಹುಸಿಯಾಗಿ ರೇಗುತ್ತಾ, 'ನಾನು ಸಾವನ್ನು ಮುಟ್ಟಿ ಬಂದಿದ್ದೀನಿ. ಆದ್ದರಿಂದ ಭಯ ವಿಲ್ಲ. ಮಾಯಾಲೋಕ-೨ ಮಾತ್ರ ಅಲ್ಲ ಕಣ್ರೀ; ಒಂದು ಸರಣಿಯೇ ಬರುವಷ್ಟು ಸರಕು ಇದೆ. ಆದರೆ ಕಾಯ ಬೇಕು' ಎಂದು ಆಶ್ವಾಸನೆ ನೀಡುವ ಧ್ವನಿಯಲ್ಲಿ ನನ್ನ ಹೆಗಲ ಮೇಲೆ ಕೈಹಾಕಿ ಮಾತನಾಡುತ್ತಾ; ಸಂಜೆಯ ಉಪಹಾರ ವಿತರಿಸುತ್ತಿದ್ದ ಕುವೆಂಪು ಶತಮಾನೋತ್ಸವ ಭವನದ ಪಕ್ಕದಲ್ಲಿದ್ದ ದಿಬ್ಬದ ಕಡೆ ನನ್ನೊಂದಿಗೆ ನಡೆದು ಬಂದರು. ನನ್ನ ಕಾಲಿನ ಸಮಸ್ಯೆಯ ವಿವರಗಳನ್ನು ಕೇಳಿ, ನಾನು ಪ್ರಾಣಾಪಾಯದಿಂದ ಪಾರಾದ ಬಗೆಗೆ ತಮ್ಮ ಸಂತೋಷ ಭರಿತ ಆಶ್ಚರ್ಯ ವ್ಯಕ್ತಪಡಿಸಿದರು.



ಆದರೆ ಈ ಕೊನೆಯ ಭೇಟಿಯ ಸ್ಥಳದಲ್ಲೇ, ಅನತಿ ಕಾಲದಿಂದಲೇ ಅವರ ಅಂತ್ಯ ಸಂಸ್ಕಾರಕ್ಕೆ ಹಾಜರಾಗುವ ಸಂದರ್ಭ ಎದುರಾಗುತ್ತದೆಂದು ನಾನು ಎಣಿಸಿರಲಿಲ್ಲ. ನಾನು ಹಾಗೂ ನನ್ನ ಪತ್ನಿ ಕಂಬನಿಗಳಿಂದ ತೊಯ್ದ ಹಾರ ಹಿಡಿದು ಅವರ ಅಂತಿಮ ದರ್ಶನಕ್ಕಾಗಿ ಅದೇ ಕುವೆಂಪು ಶತಮಾನೋತ್ಸವ ಭವನದಲ್ಲಿ ನಿಲ್ಲಬೇಕಾದೀತೆಂದು ಎಣಿಸಲಾದರೂ ಹೇಗೆ ಸಾಧ್ಯವಿತ್ತು? ನಿಜ, ತೇಜಸ್ವಿ ಹಣ್ಣಾಗಿದ್ದರು, ಆದರೆ ತೊಟ್ಟು ಕಳಚಿ ಬೀಳುವ ಯಾವ ಸೂಚನೆಯೂ ಇರಲಿಲ್ಲ. ಬಹಳ ವರ್ಷಗಳ ಹಿಂದೆಯೇ ವ್ಯಾವಹಾರಿಕ ಕಾರಣಗಳಿಂದಾಗಿ ಕಳಚಿ ಹೋಗಿದ್ದ ಲಂಕೇಶರ ಸ್ನೇಹ ಹಾಗೂ ಅದರ ಅಡ್ಡ ಪರಿಣಾಮದಂತೆ ತಪ್ಪಿಹೋಗಿದ್ದ ಜೀವದ ಗೆಳೆಯ ರಾಮದಾಸರ ಒಡನಾಟ ಅವರನ್ನು ಕಂಗೆಡಿಸಿದ್ದಂತಿತ್ತು. ಅಂದು ಆಪ್ತಮಿತ್ರ ಕಡಿದಾಳು ಶಾಮಣ್ಣ ಹಾಗು ಕಿರಿಯ ಮಿತ್ರ ದಿವಾಕರ ಹೆಗಡೆಯೊಂದಿಗೆ ಲೋಕಾಭಿರಾಮವಾಗಿ ಮಾತನಾಡುತ್ತ, ಆ ರಾತ್ರಿ ನಮ್ಮನ್ನೆಲ್ಲಾ ಅಲ್ಲೇ ಉಳಿಸಿಕೊಂಡು ಆ ಅದೇ ಹಳೆಯ ಬದುಕಿನ ಉಲ್ಲಾಸಮಯ ಕ್ಷಣಗಳ ನೆನಪುಗಳಲ್ಲಿ ತೊಯ್ಯುವ ಆಸೆ ವ್ಯಕ್ತಪಡಿಸಿದ್ದರು.

ಆದರೆ ಅನಿರೀಕ್ಷಿತವಾಗಿ ಅಲ್ಲಿಗೆ ಹೋಗಿದ್ದ ನಾವು ಆ ದಿನವೇ ನಮ್ಮ ಊರುಗಳಿಗೆ ಹಿಂದಿರುಗುವ ಒತ್ತಡದಲ್ಲಿದ್ದೆವು. ಹಾಗಾಗಿ ನಾವು ಬಂದುಬಿಟ್ಟೆವು. ಅದರ ಅಂತಹ ಯಾವ ಒತ್ತಡದಲ್ಲೂ ಇದ್ದಂತೆ ತೋರದ ಅವರು ಹಿಂದಿರುಗಿ ಬಾರದ ಊರಿಗೆ ಹೋಗಿಯೇಬಿಟ್ಟರು... ತೇಜಸ್ವಿ ನಿಧನದ ಸುದ್ದಿ ತಿಳಿದೊಡನೆ ಮೂಡಿಗೆರೆಗೆ ಧಾವಿಸಿದ ಶಾಮಣ್ಣ ಹಾಗೂ ದಿವಾಕರ ಹೆಗಡೆ ಕುಟುಂಬದವರು ಅಂತ್ಯ ಸಂಸ್ಕಾರ ಮುಗಿಯುವವರೆಗೂ ಇದೇ ದಿಗ್ಭ್ರಮೆಯಲ್ಲಿದ್ದರು. ಹಾಗೇ ಶವದೊಡನೆ ಮೂಡಿಗೆರೆಯಿಂದ ಬಂದ ಕೆ.ರಾಮದಾಸರ ಕುಟುಂಬ ಲಂಕೇಶರ ಸಾವಿನೊಂದಿಗೆ ಅರ್ಧ ಬದುಕನ್ನು ಕಳೆದುಕೊಂಡು, ಈಗ ತೇಜಸ್ವಿ ಸಾವಿನೊಂದಿಗೆ ಪೂರ್ತಿ ಬದುಕನ್ನೇ ಕಳೆದುಕೊಂಡ ಶೂನ್ಯ ಸ್ಥಿತಿಯ ಪರಿತಾಪದಲ್ಲಿತ್ತು.

ಇವರೆಲ್ಲ ಮಾತ್ರವಲ್ಲ, ರಾಜ್ಯದ ವಿವಿಧೆಡೆಯಿಂದ ಕುಪ್ಪಳಿಗೆ ಧಾವಿಸಿದ್ದ ಇಡೀ ಜನಸ್ತೋಮವೇ ಆ ದಿಗ್ಭ್ರಮೆ-ಪರಿತಾಪಗಳಲ್ಲಿ ಮುಳುಗಿಹೋಗಿತ್ತು. ಮೈಸೂರಿನಲ್ಲಿ ನಿಧನದ ಸುದ್ದಿ ಕೇಳಿ ಜನರಿಂದ ಮರೆಯಾಗಿ ಗೂಡು ಸೇರಿದ್ದ ದೇವನೂರ ಮಹಾದೇವ ಮತ್ತೆ ಜನರ ಕಣ್ಣಿಗೆ ಕಂಡದ್ದು ಕುಪ್ಪಳಿಯಲ್ಲಿ- ಅದೂ ಅಂತ್ಯ ಸಂಸ್ಕಾರ ಮುಗಿದು ಜನಸ್ತೋಮ ಕರಗಿಹೋದ ಮೇಲೆ. ತೇಜಸ್ವಿಯವರ ಅನಿರೀಕ್ಷಿತ ನಿಧನ ಹಾಗೆ ಅವರ ಗೆಳೆಯರನ್ನು ಕಂಗೆಡಿಸಿತ್ತು. ಈ ಗೆಳೆಯರು ಎಂದರೆ ಗೆಳೆಯರು ಮಾತ್ರವಲ್ಲ; ಅವರನ್ನು ಓದಿ ಸಂತೋಷಪಟ್ಟ, ಬದುಕಿನ ಹೊಸ ರುಚಿಗಳನ್ನು ಕಂಡುಕೊಂಡ ಹಾಗೂ ಆ ಮೂಲಕ ಬದುಕನ್ನು ಪರಿಭಾವಿಸುವ ಕ್ರಮವನ್ನೇ ಬದಲಾಯಿಸಿಕೊಂಡ ಅಬಾಲವೃದ್ಧರವರೆಗಿನ ಅವರ ಅಪಾರ ಓದುಗ ಸಮೂಹವೂ ಅದರಲ್ಲಿ ಸೇರಿತ್ತು. ಹಾಗೆ ನೋಡಿದರೆ, ಅಂದು ಏಪ್ರಿಲ್ ಆರರಂದು ಕುಪ್ಪಳಿಯಲ್ಲಿ ಕರ್ನಾಟಕದ ಇಡೀ ಕುವೆಂಪು ಕುಟುಂಬವೇ ಒಟ್ಟಿಗೆ ಸೇರಿದಂತಿತ್ತು- ಗತಿಸಿದ ಮಹನೀಯರು ಹಾಗೂ ದೂರ ಪ್ರಯಾಣ ಮಾಡಲಾಗದ ಹಿರಿಯರ ಹೊರತಾಗಿ.

ಅವರೆಲ್ಲ, ಎದೆಯಲ್ಲಿ ಮಡುಗಟ್ಟಿದ ದುಃಖವನ್ನು ಹೊರಚೆಲ್ಲದ ಸಂಯಮದಲ್ಲಿ ಕುವೆಂಪು ಕುಟುಂಬಕ್ಕೆ ತಕ್ಕುದಾದ ವ್ಯವಧಾನ-ಶಾಂತಿ-ಸಮಾಧಾನಗಳೊಂದಿಗೆ ಕುವೆಂಪು ಮಗನನ್ನು ತಮ್ಮ ಮಧ್ಯದಿಂದ ಬೀಳ್ಕೊಟ್ಟರು. ತೇಜಸ್ವಿ ಹೇಗೆ ತಾವು ನಂಬಿದಂತೆ ಧಾರ್ಮಿಕ ಸಂಪ್ರದಾಯಗಳ ಭಾರವಿಲ್ಲದೆ ನಿರುಮ್ಮಳವಾಗಿ ಬದುಕಿದರೋ ಹಾಗೇ, ಯಾವ ಪುರೋಹಿತನ ಮಧ್ಯವರ್ತಿಕೆ ಇಲ್ಲದೆ ನಿರುಮ್ಮಳ ಮೌನದಲ್ಲಿ ನಮ್ಮಿಂದ ತೆರಳಿದರು. ಅವರ ಪತ್ನಿ-ಪುತ್ರಿಯರು ಹಾಗೂ ಬಂಧು ಬಳಗವೂ ಅಷ್ಟೇ ಘನತೆ-ಗಾಂಭೀರ್ಯಗಳಿಂದ ತಮ್ಮ ಬದುಕಿನ ಒಂದು ಭಾಗವನ್ನು, ಅದು ತಮ್ಮದು ಮಾತ್ರವಲ್ಲವೆಂಬ ವಿನಯದಲ್ಲಿ ಬೀಳ್ಕೊಟ್ಟಿತು. 'ಇದು ನಮ್ಮೆಲ್ಲರ ಕೊನೆಯ ಸಂತಾಪಸಭೆ' ಎಂದು ದುಃಖ ಉಮ್ಮಳಿಸಿಕೊಂಡು ಬಂದಂತೆ ಘೋಷಿಸಿದ ರಾಮದಾಸ್, ಒಂದು ತಲೆಮಾರಿನ ಕ್ರಿಯಾಶೀಲತೆ ಇಲ್ಲಿಗೆ ಮುಗಿದಂತೆ; ಈ ನಂತರದ ಜವಾಬ್ದಾರಿಯೇನಿದ್ದರೂ ಮುಂದಿನ ತಲೆಮಾರುಗಳದ್ದು ಎಂದು ವಿದಾಯದ ಅಶ್ರುತರ್ಪಣ ಅರ್ಪಿಸಿ ಆಧುನಿಕ ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಒಂದು ಯುಗ ಮುಗಿದಿದ್ದರ ಸೂಚನೆ ನೀಡಿದರು.

ತೇಜಸ್ವಿ, ನವೋದಯ ಮುಗಿದ ನಂತರದ ಕನ್ನಡ ಸಾಹಿತ್ಯ-ಸಂಸ್ಕೃತಿಗಳ ತ್ರಿಮೂರ್ತಿಗಳೆನಿಸಿದವರಲ್ಲಿ ಉಳಿದಿಬ್ಬರೊಡನೆ ಇದ್ದೂ ಇಲ್ಲದಂತಿದ್ದವರು. ಈ ಉಳಿದಿಬ್ಬರಾದ ಲಂಕೇಶ್ ಮತ್ತು ಅನಂತಮೂರ್ತಿ ಆಧುನಿಕ ಬದುಕಿನ ಆಕರ್ಷಣೆಗಳಿಗೆ ಅವಿಮರ್ಶಾತ್ಮಕವೆಂಬಂತೆ ತಮ್ಮನ್ನು ತಾವು ಒಪ್ಪಿಸಿಕೊಂಡು ನಂತರದ ದಿನಗಳಲ್ಲಿ ಪರಿತಪಿಸುತ್ತಾ, ಆ ಪರಿತಾಪದಲ್ಲೇ ಕನ್ನಡಕ್ಕೆ 'ನಿಜ'ವೆನ್ನಿಸುವ ಕೃತಿಗಳನ್ನು ನೀಡಿದವರು. ಆದರೆ ತೇಜಸ್ವಿ ಕುವೆಂಪು ಮಗನಾಗಿ ಹುಟ್ಟಿ ಅವರ ಸಾಹಚರ್ಯದಲ್ಲಿ ಬೆಳೆದ ಕಾರಣದಿಂದಲೋ ಏನೋ ಆರಂಭದಿಂದಲೇ, ಆಧುನಿಕ ಬದುಕಿನ ಆಕರ್ಷಣೆಗಳ ಬಗ್ಗೆ ಅನುಮಾನವಿಟ್ಟುಕೊಂಡೇ ತಮ್ಮ ಬದುಕಿನ ತಾತ್ವಿಕತೆ ಕಟ್ಟಿಕೊಂಡವರು. ಲಂಕೇಶ್, ಎಳೆಬಿಸಿಲು, ತಂಪುಮಳೆ, ಉನ್ಮತ್ತ ಹುಡುಗಿಯರು ಎಂದು ಬೆಂಗಳೂರಿನಲ್ಲಿ ನೆಲೆ ನಿಂತು, ಪದೇಪದೇ ಬದಲಾಗುತ್ತಿದ್ದ ತಮ್ಮ ಗೆಳೆಯರ ಬಳಗದ ಜೈಕಾರಗಳ ನಡುವೆ ಮತ್ತೇರಿಸಿಕೊಂಡು ಕರ್ನಾಟಕವನ್ನು ಬೌದ್ಧಿಕವಾಗಿ ಆಳಲು ಹಾತೊರೆದ ಆಧುನಿಕ ಪಾಳೇಗಾರನಾಗಿ ಮೂಡಿ ನಿಂತರೆ; ಅನಂತಮೂರ್ತಿ, ತಮ್ಮ ವಿಸ್ತಾರಕ್ಕೆ ಮೈಸೂರು ಸಾಲದೆಂಬಂತೆ ಬೆಂಗಳೂರಿಗೆ ವಲಸೆ ಬಂದು; ಅಲ್ಲೂ ಕುಂತಲ್ಲಿ ಕೂರಲಾಗದೆ, ನಿಂತಲ್ಲಿ ನಿಲ್ಲಲಾಗದೆ ಪ್ರಪಂಚವನ್ನೇ ಸುತ್ತು ಹೊಡೆಯುತ್ತಾ, ಮಾತಿನ ಮಾಟಗಾರರಾಗಿ ಪರಿವರ್ತಿತರಾಗಿ ಕನ್ನಡ ಲೋಕವನ್ನು ತಮ್ಮ ಬೆಡಗಿನಲ್ಲಿ ಸುತ್ತುವರಿದುಕೊಳ್ಳುವ ಹವಣಿಕೆಯಲ್ಲಿದ್ದಂತೆ ತೋರುತ್ತಿದ್ದಾರೆ. ಆದರೆ ತೇಜಸ್ವಿ ತಮ್ಮ ಔಪಚಾರಿಕ ವಿದ್ಯಾಭ್ಯಾಸವನ್ನು ಹಾಗೂ ಹೀಗೂ ಕಷ್ಟಪಟ್ಟು ಮೈಸೂರಿನಲ್ಲಿ ಮುಗಿಸಿದೊಡನೆ, ಎರಡನೇ ಆಲೋಚನೆಯೇ ಇಲ್ಲವೆಂಬಂತೆ ಹಳ್ಳಿಗೆ ತೆರಳಿದವರು. ಮಲೆನಾಡಿನ ಮೂಲೆಯೊಂದರಲ್ಲಿ ಭೂಮಿ ನೆಚ್ಚಿ ಬೇಸಾಯ ಮಾಡತೊಡಗಿದವರು. ಅದು ಕುವೆಂಪು ಕಾಲದ ಹೊತ್ತಿಗೇ ಬದುಕಿನ ಸಾರ್ಥಕ್ಯ ಕಂಡುಕೊಳ್ಳುವ ಹೊಸ ಮಾರ್ಗವೆಂಬಂತೆ ಅನಾವರಣಗೊಂಡಿದ್ದ, ಹಳ್ಳಿಯಿಂದ ನಗರದೆಡೆಯ ಪ್ರಯಾಣದ ಉತ್ತುಂಗ ಕಾಲ. ಆದರೆ ತೇಜಸ್ವಿ ಇದಕ್ಕೆ ವಿರುದ್ಧ ದಿಕ್ಕಿನ ಪ್ರಯಾಣ ಕೈಗೊಂಡರೆಂಬುದು ಮೇಲ್ನೋಟಕ್ಕೆ ಎದ್ದು ಕಾಣುವಷ್ಟು ಸರಳ ವಿಷಯವಾಗಿರಲಿಲ್ಲ.

ಆಧುನಿಕ ಜೀವನಕ್ರಮ ನಿಜವಾಗಿಯೋ, ಹುಸಿಯಾಗಿಯೋ ಹುಟ್ಟಿಸತೊಡಗಿದ್ದ ಅಪಾಯಕಾರಿ ಅನಾಥ ಪ್ರಜ್ಞೆಯ ಬಲೆಗೆ ಸಿಕ್ಕಿಹಾಕಿಕೊಳ್ಳದೆ, ಬದುಕಿನ ಅರ್ಥವನ್ನು ತನ್ನದೇ ಆಯ್ಕೆಯ ಅನುಭವಗಳಲ್ಲಿ ಅನ್ವೇಷಿಸಿಕೊಳ್ಳಲು ಕೈಗೊಂಡಂತೆ ತೋರುವ ಈ ಪ್ರಯಾಣದ ಸಾರ್ಥಕ ಕ್ಷಣಗಳಲ್ಲಿ ತೇಜಸ್ವಿಗೆ ಅನಿಸಿದ್ದು: "ಲೋಹಿಯಾರ ತತ್ವಚಿಂತನೆ, ಕುವೆಂಪುರವರ ಕಲಾಸೃಷ್ಟಿ, ಕಾರಂತರ ಜೀವನದ ದೃಷ್ಟಿ ಮತ್ತು ಬದುಕಿನಲ್ಲಿ ಪ್ರಯೋಗಶೀಲತೆ" ಈ ಮೂರೇ ನನ್ನ ಈಚಿನ ಸಾಹಿತ್ಯ ರಚನೆಯ ಮೇಲೆ ಗಾಢ ಪರಿಣಾಮಗಳನ್ನುಂಟು ಮಾಡಿರುವಂಥವು. ಬಹುಶಃ ಮುಂಬರುವ ಕಲಾವಿದರಿಗೆ ಕನ್ನಡ ಸಾಹಿತ್ಯ ಸೃಷ್ಟಿಯಲ್ಲಿ ಚೈತನ್ಯ ಶಕ್ತಿಯಾಗಬಲ್ಲಂಥವು ಈ ಮೂರೇ". ಕಳೆದ ಶತಮಾನದ ಎಪ್ಪತ್ತರ ದಶಕದ ಹೊತ್ತಿಗೆ ಕನ್ನಡ ಸಾಹಿತ್ಯದ ದಿಕ್ಕನ್ನೇ ಬದಲಾಯಿಸಿದ ತಮ್ಮ 'ಅಬಚೂರಿನ ಪೋಸ್ಟಾಫೀಸು' ಕಥಾ ಸಂಕಲನಕ್ಕೆ 'ಹೊಸ ದಿಗಂತದ ಕಡೆಗೆ' ಎಂಬ ಶೀರ್ಷಿಕೆಯಡಿಯಲ್ಲಿ ಬರೆದ ಮುನ್ನುಡಿಯ ಆರಂಭದ ಈ ಮಾತುಗಳ ಹಿಂದಿರುವುದು ಪರಂಪರೆ, ಪ್ರತಿಭಟನೆ ಮತ್ತು ಪ್ರಯೋಗಗಳು ಮುಪ್ಪುರಿಗೊಂಡ ಜೀವನ ಕ್ರಮ. ಅದೇನೂ ಕಡಿಮೆ ಆಧುನಿಕವಾಗಿರಲಿಲ್ಲ. ಅದು ಸ್ವಾತಂತ್ರ್ಯ, ಸಮಾನತೆ ಹಾಗೂ ಸೌಂದರ್ಯಗಳನ್ನು ತನ್ನ ತಿರುಳಾಗಿ–ಹೊರ ಕವಚವಾಗಿ ಅಲ್ಲ–ಪಡೆದುಕೊಂಡ ಆಧುನಿಕತೆ. ಎಲ್ಲರನ್ನೂ ಸಮನಾಗಿ 'ಕಾಣುವ' ನಾಗರಿಕ ಪ್ರಜ್ಞೆಯ ಆಧುನಿಕತೆಯಲ್ಲ. ಬದಲಾಗಿ ಎಲ್ಲರೂ ಸಮಾನರು ಎಂದು 'ಅರಿಯುವ' ಬದುಕಿನ ಕ್ರಮದಲ್ಲಿ ದತ್ತವಾದ ಆಧುನಿಕತೆ.

ತೇಜಸ್ವಿಯವರ ಬಹಳಷ್ಟು ಕೃತಿಗಳ ಸೌಂದರ್ಯ ಸೃಷ್ಟಿಯಾಗುವುದು ಈ ನೆಲೆಯಲ್ಲೇ. ಹಾಗಾಗಿ ಈ ಸೌಂದರ್ಯ ಆಧುನಿಕ ಹೇಗೋ ಹಾಗೇ, ಅಪ್ಪಟ ದೇಸೀ ಕೂಡ ಆದದ್ದು. ಹಾಗಾಗಿಯೇ ಬೋಬಣ್ಣ–ಕಾವೇರಿ, ಗೌರಿ–ಸೂರಾಚಾರಿ, ತುಕ್ಕೋಜಿ–ಸರೋಜಾ, ಇಯಾಲ, ಪ್ಯಾರ, ಮಂದಣ್ಣ, ಕರಿಯಪ್ಪ, ಎಂಗ್ಟ, ಮಾರ, ಬೈರ, ಮಾಸ್ತಿ, ಕಾಳಪ್ಪ, ಲೈನ್‌ಮ್ಯಾನ್ ದುರ್ಗಪ್ಪ, ದಾನಮ್ಮ, ಜಬ್ಬಾರ್ ಸಾಬಿ, ಕೃಷ್ಣೇಗೌಡ, ರಫೀಕ್, ರಮೇಶ್, ಇಂಗ್ಲಿಷ್ ಗೌಡ, ಜೋಸೆಫ್ ಅಂಗಾರ, ಕರಾಟೆ ಮಂಜ, ಭಂಡಾರಿ ಬಾಬು, ಜಲೀಲ, ಫಾತಿಮಾ, ತಿಮ್ಮಾಬೋಯಿ, ಅಣ್ಣಪ್ಪಣ್ಣ, ಕುಂಟರಾಮ, ಹುಚ್ಚರಾಮ ಮುಂತಾದವರು ಆಧುನಿಕ ಬದುಕಿನ ಗೆರೆಯಾಚೆ ಅಥವಾ ಅಂಚಿನಲ್ಲಿದ್ದುಕೊಂಡೇ ಬದುಕಿನ ತಮ್ಮ ಸ್ವಾಯತ್ತತೆಯನ್ನು ಕಾಪಾಡಿಕೊಳ್ಳುವ ಮೂಲಕ ಅವರ ಕಥೆ–ಕಾದಂಬರಿಗಳ defining ಪಾತ್ರಗಳೆನಿಸಿಕೊಳ್ಳುತ್ತವೆ. ಹಾಗೇ ನಿರೂಪಕನಾದ ಲೇಖಕನೂ ಸೇರಿದಂತೆ ಕರ್ವಾಲೋ, ಜೋಗಿಹಾಳರಂತಹ ಮುಖ್ಯಪಾತ್ರಗಳು ಈ ಅಂಚಿನ ಪಾತ್ರಗಳನ್ನು define ಮಾಡುವಷ್ಟಕ್ಕೇ ಸೀಮಿತವಾದ ಪಾತ್ರಗಳಂತೆ ಚಿತ್ರಿತವಾಗಿವೆ. ಅಂದರೆ ಇಡೀ ಸಾಹಿತ್ಯ ಕ್ರಮವೇ– ಪ್ರಕ್ರಿಯೆಯೇ ಇಲ್ಲಿ ಬುಡಮೇಲುಗೊಂಡಿದೆ. ತೇಜಸ್ವಿ ನಮ್ಮ ಸಾಹಿತ್ಯದಲ್ಲಿ ಮಾಡಿದ ದೊಡ್ಡ ಕ್ರಾಂತಿಯಿದು. ಇದು ಪರಿಧಿಯೇ ಕೇಂದ್ರವಾಗುವ ಬೆರಗಿನ ಸಾಂಸ್ಕೃತಿಕ ಕ್ರಾಂತಿ ಕೂಡಾ. ಈ ಕ್ರಾಂತಿ ಕನ್ನಡ ಸಾಹಿತ್ಯದಲ್ಲಿ ಸುಸ್ಥಿರವಾಗಿರುವುದು, ಮುಖ್ಯಪಾತ್ರಗಳ ಮುಲಾಜೇ ಇಲ್ಲದೆ ಈ ಅಂಚಿನ ಪಾತ್ರಗಳೇ ಸೃಷ್ಟಿಸಿರುವ 'ಕಿರಗೂರಿನ ಗಯ್ಯಾಳಿಗಳು' ಹಾಗೂ 'ಜುಗಾರಿ ಕ್ರಾಸ್' ನಂತಹ ಕೃತಿಗಳಲ್ಲಿ. ಹೀಗಾಗಿ ಸಹಜವಾಗಿಯೇ ತೇಜಸ್ವಿಯವರ ಕೃತಿಗಳು ಭಾಷೆ ಮತ್ತು ತಂತ್ರಗಳ ವಿಷಯದಲ್ಲೂ, ಕನ್ನಡ ಸಾಹಿತ್ಯ ತಲೆ ಮೇಲೆ

ಹೊತ್ತುಕೊಂಡಿದ್ದ ಯಮಭಾರಗಳನ್ನು ಇಳಿಸಿ ಚೇತೋಹಾರಿ ಎನಿಸಿದವು.

ಇದನ್ನು ಜನಪ್ರಿಯ ಧಾಟಿ ಎನ್ನುವವರಿದ್ದಾರೆ. ಹಾಗೆಯೇ ತೇಜಸ್ವಿಯವರ ಸಾಹಿತ್ಯವನ್ನು ತ್ರಿಮೂರ್ತಿಗಳಲ್ಲಿ ಉಳಿದಿಬ್ಬರ ಸಾಹಿತ್ಯದೊಂದಿಗೆ ಹೋಲಿಸಿ ಬೆಲೆ ಕಟ್ಟುವ ಅಂಗುಲ ಹುಳ ವಿಮರ್ಶೆಗೆ ನಮ್ಮಲ್ಲೇನೂ ಕೊರತೆಯಿಲ್ಲ. ಆದರೆ ತೇಜಸ್ವಿ ಸ್ವಭಾವತಃ ಹೊಸ ದಿಗಂತಗಳನ್ನರಸಿಕೊಂಡು ಹೋಗುವ ಮಾರ್ಗಪ್ರವರ್ತಕ ಲೇಖಕರಾಗಿ ಆಧುನಿಕ ಕನ್ನಡ ಸಾಹಿತ್ಯದ ಮೈಚಳಿ ಬಿಡಿಸಲು ಮಂಡಿಸಿದ ತಾತ್ವಿಕತೆ, ಈ ಅಂಗುಲ ಹುಳು ವಿಮರ್ಶೆಯನ್ನೇ ಅಸಂಗತಗೊಳಿಸುವಂತಹದು. ಕನ್ನಡ ಸಾಹಿತ್ಯ–ಸಂಸ್ಕೃತಿ–ರಾಜಕಾರಣಗಳ ಚರ್ಚೆಯ ದಿಕ್ಕನ್ನೇ ಬದಲಿಸಿದ ಅಖಿಲ ಕರ್ನಾಟಕ ಲೇಖಕ ಹಾಗೂ ಕಲಾವಿದರ ಒಕ್ಕೂಟದ ಸಮಾವೇಶದಲ್ಲಿನ(೧೯೮೧) ತಮ್ಮ ಮುಖ್ಯ ಭಾಷಣದಲ್ಲಿ ಕನ್ನಡ ಸಾಹಿತ್ಯ–ಸಂಸ್ಕೃತಿ ಚರಿತ್ರೆಯನ್ನೇ 'ಶೂದ್ರ ಸಮುದಾಯದ ಮೂಕ ಅನುಭವಗಳು ಪ್ರಜ್ಞಾಗಮ್ಯವಾಗುತ್ತಾ, ಅಭಿವ್ಯಕ್ತಿಯನ್ನು ಸಾಧಿಸಿಕೊಳ್ಳುತ್ತಾ ಬಂದುದರ ಚರಿತ್ರೆ' ಎಂದು ನಿರೂಪಿಸಿದ ತೇಜಸ್ವಿ, ಅದನ್ನು ತಮ್ಮ ಕೊನೆಯ ಕೃತಿ 'ಮಾಯಾಲೋಕ–೧'ರಲ್ಲಿ ತಾವೇ ದಾಟಿ ನಿಂತು, ಲೋಕ ಚರಿತ್ರೆಯ ನೆಲೆಯಲ್ಲಿ ಸಮಕಾಲೀನ ಕನ್ನಡ ಸಾಹಿತ್ಯಲೋಕದ ಪ್ರಜ್ಞಾಗಮ್ಯತೆಯ ಎಲ್ಲೆಗಳನ್ನು ವಿಸ್ತರಿಸುವ ಪ್ರಯತ್ನ ಮಾಡುತ್ತಾರೆ. 'ಮಾಯಾಲೋಕ'ದ ಮೂಲಕ ಅವರು ಈ ಇಡಿಯಾದ ವಿಶ್ವದ ಧಾರಣಾ ಶಕ್ತಿಯ ರೂಪಗಳನ್ನು ಅನ್ವೇಷಿಸಲು ಹೊರಟಿದ್ದು, ಅವರ ಈ ಮೊದಲಿನ ಕಾಳಜಿಗಳಾಗಿದ್ದ ಮನುಷ್ಯ ಮತ್ತು ಪ್ರಕೃತಿಗಳು ಈ ಮಹಾ ಅನ್ವೇಷಣೆಯಲ್ಲಿ ಆನುಷಂಗಿಕವಾಗಿ ಬಿಡುವ ಬೆರಗನ್ನು ನಾವು ಕಾಣಬಹುದು. ನಮ್ಮ ಕಾಲದ ಮೂಲಭೂತ ಆಕರ್ಷಣೆಯೆನಿಸಿರುವ 'ಆಧುನಿಕತೆ' ಇಲ್ಲಿ ಆಧ್ಯಾತ್ಮಿಕ ಪ್ರಶ್ನೆಯಾಗಿ ಎದುರಾಗುವ ಪರಿ ಕನ್ನಡಕ್ಕೇ ಹೊಸದು.

'ಕರ್ವಾಲೋ'ದಿಂದ ಆರಂಭವಾಗಿ 'ಚಿದಂಬರ ರಹಸ್ಯ'ದ ಮೂಲಕ ಕಟ್ಟಿಕೊಂಡು 'ಮಾಯಾ ಲೋಕ'ದಲ್ಲಿ ಪೂರ್ಣರೂಪ ಪಡೆದಂತೆ ತೋರುವ ಈ 'ವಿಜ್ಞಾನವೋ, ಆಧ್ಯಾತ್ಮವೋ?' ಎಂಬ ಪ್ರಶ್ನೆ ಈ ಆಧುನಿಕ ನಾಗರೀಕತೆಯ ಚರಿತ್ರೆಯಲ್ಲಿ ಮನುಕುಲ ಎದುರಿಸುತ್ತಿರುವ ದೊಡ್ಡ ಪ್ರಶ್ನೆ.

ಸುಮಾರು ನಾನು ೨೫ ವರ್ಷಗಳ ಹಿಂದೆ ತೇಜಸ್ವಿಯವರ ಮೂಡಿಗೆರೆ ಮನೆಗೆ ಎರಡನೇ ಬಾರಿಯೋ, ಮೂರನೇ ಬಾರಿಯೋ ಹೋಗಿದ್ದಾಗ, ನಾನು ಗಣಿತ ಶಾಸ್ತ್ರದ ವಿದ್ಯಾರ್ಥಿಯಾಗಿ ಕುತೂಹಲಕ್ಕಾಗಿ ಓದಿಕೊಂಡಿದ್ದ High energy Physics ನ Quantum mechanics ಬಗ್ಗೆ ಅವರ ಕುತೂಹಲದ ಒಂದೆರಡು ಪ್ರಶ್ನೆಗಳಿಗೆ ಉತ್ತರ ಹೇಳಲು ಪ್ರಯತ್ನಿಸಿದ್ದೆ. ಆ ಸಂದರ್ಭದಲ್ಲಿ ಅವರ ಮನೆಯ ಹಜಾರದ ಗೋಡೆಗಳ ಮೇಲಿದ್ದ ರಾಮಕೃಷ್ಣ ಪರಮಹಂಸ ಮತ್ತು ಶಾರದಾದೇವಿಯವರ ದೊಡ್ಡ ಫೋಟೋಗಳನ್ನು ನೋಡಿ ಸ್ವಲ್ಪ ವಿಚಲಿತನಾಗಿ 'ಇವನ್ನು ನಿಮ್ಮ ತಂದೆ ಹಾಕಿಸಿದ್ದಾ?' ಎಂದು, ಅವರಿಗೆ ಉತ್ತರ ಕೊಡಲು ಸಹಾಯಕವಾಗುವ ಧ್ವನಿಯಲ್ಲಿ ಕೇಳಿದ್ದೆ. ಅದಕ್ಕೆ ಅವರು ಕೊಂಚ ಸಿಟ್ಟಾಗಿ 'ನಾನೇ ಹಾಕಿಸಿಕೊಂಡಿದ್ದೇನೆ ಎಂದರೆ ನೀನೇನು ನನ್ನನ್ನು ಢೋಂಗಿ ವಿಚಾರವಾದಿಯೆಂದು ಪ್ರಚಾರ ಮಾಡಬೇಕೆಂದಿದ್ದಿಯಾ? ಈವರೆಗೆ ನೀನು ವಿವರಿಸಿದ quantum mechanics ನ principle of uncertainity ಇತ್ಯಾದಿಗಳೆಲ್ಲ ನಿನ್ನ ಪ್ರಕಾರ ವಿಜ್ಞಾನವೋ, ಆಧ್ಯಾತ್ಮವೋ ಅದನ್ನು ಮೊದಲು ಹೇಳು' ಎಂದು ನನ್ನನ್ನು ದೊಡ್ಡ ಒಗಟಿನಲ್ಲಿ ನೇತುಹಾಕಿದರು!

ಅವರ 'ಕರ್ವಾಲೋ'ದಿಂದ ಆರಂಭವಾಗಿ 'ಚಿದಂಬರ ರಹಸ್ಯ'ದ ಮೂಲಕ ಕಟ್ಟಿಕೊಂಡು 'ಮಾಯಾಲೋಕ'ದಲ್ಲಿ ಪೂರ್ಣರೂಪ ಪಡೆದಂತೆ ತೋರುವ ಈ 'ವಿಜ್ಞಾನವೋ, ಆಧ್ಯಾತ್ಮವೋ?' ಎಂಬ ಪ್ರಶ್ನೆ ಈ ಆಧುನಿಕ ನಾಗರೀಕತೆಯ ಚರಿತ್ರೆಯಲ್ಲಿ ಮನುಕುಲ ಎದುರಿಸುತ್ತಿರುವ ದೊಡ್ಡ ಪ್ರಶ್ನೆ. ತಾವು ನಂಬಿ ಭಾಗವಹಿಸಿದ್ದ ಸಮಾಜವಾದಿ ಚಳುವಳಿ, ರೈತ ಚಳುವಳಿ, ದಲಿತ ಚಳುವಳಿ, ಪರಿಸರ ಚಳುವಳಿ, ಕನ್ನಡ ಚಳುವಳಿ ಹಾಗೂ ಆಸಕ್ತಿಯಿಂದ ಕೈಗೊಂಡ ಸಂಗೀತಾಭ್ಯಾಸ, ಫೋಟೋಗ್ರಫಿ, ಚಿತ್ರಕಲೆ, ಮೀನು ಹಿಡಿಯುವುದು ಹಾಗೂ ಕಂಪ್ಯೂಟರ್ ತಂತ್ರಾಂಶ ಆವಿಷ್ಕಾರ ಪ್ರಯತ್ನಗಳ ಮೂಲಕವೂ ಅವರು ಎದುರಿಸಿದ್ದು, ಬಿಡಿಸಲೆತ್ನಿಸಿದ್ದು ಈ ದೊಡ್ಡ ಪ್ರಶ್ನೆಯನ್ನೇ. ತಮ್ಮ ಬಾಳಿನ ಕೊನೆಯ ದಿನಗಳಲ್ಲಷ್ಟೇ ತೇಜಸ್ವಿಯವರನ್ನು ಕಂಡ ಶಿವರಾಮ ಕಾರಂತರು ತಮ್ಮ ಬಾಳ್ವೆಗಳಲ್ಲಿನ ಸಮಾನಾಂತರತೆಯನ್ನು ಕಂಡು ಹಿಗ್ಗಿ, ಈ ಮೊದಲೇ ಭೇಟಿಯಾಗದಿದ್ದುದರ ಬಗ್ಗೆ ವಿಷಾದಪಟ್ಟಿದ್ದರಂತೆ. ಅದು ತೇಜಸ್ವಿಯವರ ಬಾಳಿನ ಸಾರ್ಥಕ ಕ್ಷಣ. ಆದರೆ ಕಾರಂತರಂತೆ, ತೇಜಸ್ವಿ ಹಠತೊಟ್ಟ ವಿಜ್ಞಾನವಾದಿಯಾಗಿರಲಿಲ್ಲ. ಇದೇ ಇವರಿಬ್ಬರ ಭೇಟಿಗೆ ತಡೆಯಾಗಿದ್ದಿರಲೂಬಹುದು! ಏಕೆಂದರೆ, 'ಅವನತಿ' ಎಂಬ ಸಣ್ಣಕಥೆಯಿಂದ ಹಿಡಿದು ಅವರ ಕೊನೆಯ ಕೃತಿ ಎನಿಸಿದ 'ಮಾಯಾಲೋಕ'ದವರೆಗೆ ತೇಜಸ್ವಿ ಚಿತ್ರಿಸಿರುವುದು ವಿಜ್ಞಾನ ನಾಗರೀಕತೆಯ ವಿಚಿತ್ರ ಒತ್ತಡಗಳಿಗೆ ಸಿಕ್ಕಿ ಮನುಷ್ಯನ ಸೂಕ್ಷ್ಮತೆ ಮತ್ತು ಸಂವೇದನಾಶೀಲತೆಗಳು ಕ್ರಮೇಣ ನಾಶವಾಗುತ್ತಿರುವ ದುರಂತವನ್ನೇ. ಪರಿಸ್ಥಿತಿ ಹೀಗಿರುವಾಗ ತೇಜಸ್ವಿ ಜಾಗತೀಕರಣವನ್ನು ಬೆಂಬಲಿಸುತ್ತಿದ್ದರು ಎಂದು ಹೇಳುವವರಿಗೆ ತೇಜಸ್ವಿಯೂ ಅರ್ಥವಾಗಿಲ್ಲ ಜಾಗತೀಕರಣವೂ ಅರ್ಥವಾಗಿಲ್ಲ ಎಂದು ಹೇಳಬಹುದಷ್ಟೆ!

ತೇಜಸ್ವಿ ನಮ್ಮ ಕಾಲದ ಚರಿತ್ರೆಯನ್ನು ತಮ್ಮ ಕೃತಿಗಳ ಮೂಲಕ ವ್ಯಾಖ್ಯಾನ ಮಾಡುತ್ತಿದ್ದ ಕನ್ನಡದ ದೊಡ್ಡ ದಾರ್ಶನಿಕ ಲೇಖಕ. ಹಾಗಾಗಿಯೇ ಅವರ ಚೈತನ್ಯ ಈಗ ಭೂಮಿಯಿಂದ ಆಕಾಶದವರೆಗೆ ಹಬ್ಬಿ ನಿಂತಿದೆ. ಅದೇ, 'ವಿಜ್ಞಾನವೋ, ಆಧ್ಯಾತ್ಮವೋ?' ಎಂಬ ಪ್ರಶ್ನೆಗೆ ಉತ್ತರವೂ ಆಗಿದೆ... □

‘ಎಲುಬಿನೊಳಗೆ ಹವ್ವಾ’



೧
ಆದಿಮಾ ತಾಯಿಯಾ, ಮಣ್ಣಿನ
ತನ್ನೊಡಲಿನಿಂದಾದ ಆದಾಮನೆಂಬ ಮಗುವಿಗೆ,
ಸಮಸ್ತವನು ಸೃಷ್ಟಿಸಿ, ಧರೆಯ ತನ್ನೀ ಮಡಿಲ ಸಾಂತ್ವಾನದಲಿ
ಎದೆಗವಚಿ ಪ್ರಕೃತಿಯ ಮೊಲೆ ಹಾಲುಣಿಸಿ
ನಡೆನುಡಿಯ ಕಲಿಸಿ, ಅಪ್ಪಿ ಮುದ್ದಾಡಿ ಬೆಳೆಸುವಳು.
ಬೆಳೆದ ಪರಿಯನು ಕಂಡು, ತಾನೂ ಸೃಷ್ಟಿಧಾತನು ಬೇರೆಯಲ್ಲವೆಂಬಂತೆ
ಒಬ್ಬರೊಳಗೊಬ್ಬರು ತಿರುಗುವ ಗೋಳವಾಗಿ
ನಿರಂತರ ಚಲನೆಯಲಿ ಅಣು, ಅಣುವಿನೊಳಗೂ ಅಸ್ತಿತ್ವವ
ಬೀರಿ ಶಕ್ತಿರೂಪವ ತಾಳುವರು.

೨
ಈ ಜಗದ ಅನಂತ ನಿಗೂಢಗಳೊಡನೆ ಬೆಳೆದ
ಆದಾಮನು, ತನ್ನ ಅಂತರಂಗದ ಗುಹೆಯ ಅರಿವ ಬೆರಗಿಗೆ
ತಾನೇ ದಿಗಿಲಾಗಿ! ಸತ್ಯವನ್ನು, ಸೃಷ್ಟಿಕರ್ತನನ್ನೂ, ಸೌಂದರ್ಯವನ್ನೂ
ಅನುಭವಿಸುತ್ತಾ, ಗಾಢ ಮೌನವ ತಾಳಿದ. ತಾಯಿ ತಂದೆಯರ ನೆನೆಯುತ್ತಾ
ನುಡಿ ಭಾಷೆಯ ಪಲ್ಲವಿಸಿ ಕರೆವಾಗ;
ಅದು ಮಾರ್ದನಿನೆದಷ್ಟನ್ನೇ ಕೇಳಿ, ಸೂಕ್ಷ್ಮಗೊಂಡಷ್ಟು ಗಾಳಿಯ ನಿನಾದದಲಿ
ಗಿಡ ಮರದೆಲೆಗಳು ಅಲ್ಲಾಡುತ್ತಿರಲು, ಹಕ್ಕಿಗಳು ಹಾಡುತ್ತಿರಲು
ದುಂಬಿಯು ಝೇಂಕರಿಸುತ್ತಿರಲು ಪರವಶವಾಗಿ,
ತನಗೆ ಸಂಗಾತಿ ಬೇಕೆನುತ ಮೌನದೊಳಗೆ ಬೆರೆತು ಧ್ಯಾನಾಸಕ್ತನಾದನು.

೩.
ಮುತ್ತುಗಳಂತೆ ಮಳೆ ಹನಿಗಳು ಚೆಲ್ಲುತ್ತಾ
ಮಣ್ಣ ತಾಯಿಯೂ ಘಮಘಮಿಸತೊಡಗಿ
ಜೀವದುಸಿರು ತಂಗಾಳಿಯಂತೆ ಬೀಸಿ
ಆರಾಮನನ್ನು ಆವರಿಸಿ ಗಾಢ ನಿದ್ರೆಯೂ
ಮೇಲರಿಗಿ ಅಲ್ಲೇ ತಾಯೆಂಬ ತನ್ನಿಳೆಯ
ಮಡಿಲಿಗೆ ಬರಗುವನು



೪.
ಸೃಷ್ಟಿಕರ್ತನು ಆದಿಮ ತಾಯಿಯೂ ಜೀವದಾಸಿರಾಗಿ
ಅಣುವಿನೊಳಗಿನ ಶಕ್ತಿಯಾಗಿ ತಿರುಗುತಲಿರಲು
ಕಂಪನವಾಗಿ, ನಾದ ಹೊಮ್ಮಿ ಸಹಜ ಸೃಷ್ಟಿಸ್ಥಿತಿಯು
ಕ್ರಿಯೆಗೆ ತೊಡಗಿ ನಾದವೆಂಬ ಸ್ವರವೂ ಅಕ್ಷರವಾಗಿ
ಆದಾಮನಿಗೆ ಪ್ರಾಣವಾಯುವು ನುಡಿದು
"ನಿರಾಕಾರದ ಈ ಬ್ರಹ್ಮಾಂಡಕ್ಕೆ ಆಕಾರವಾದೆ
ನನ್ನ ಪ್ರತಿಬಿಂಬದ ನಿನ್ನಲ್ಲಿಟ್ಟೆ. ಈಗೋ
ನಿನ್ನ ಪಕ್ಕೆಲಬನ್ನು ತೆಗೆದು ತುಂಬುವೆನು
ರಕ್ತಮಾಂಸವನು, ಆಕೆಯೂ ನಿನ್ನ ತಾಯಿಯ ರೂಪುಳ್ಳವಳಾಗಿ
ಕಾಣುವಳು, ನಿನ್ನ ಸಂಗಾತಿಯಾಗುವಳು.
ನರರಿಂದ ಉತ್ಪತ್ತಿಯಾದವಳನ್ನು ನಾರಿಯೆಂದೇ ಕರೆವರು."

೫.
ನಿದ್ರೆಯಿಂದೆಚ್ಚೆತ್ತಾ ಆಮರನು ಮೊಲೆ ಮುಡಿಯ ಹೆಣ್ಣನ್ನು ನೋಡಿ
"ನೀನು ನನ್ನಾಕೆ ಹವ್ವಾ ಅಂದರೆ ನನ್ನೀ ಜೀವ
ನನ್ನೆಲುಬಿನ ಎಲುಬು, ನನ್ನೊಡಲಿನ ಒಡಲು." ಎಂದೆನುತ
ಬೆಳದಿಂಗಲ ಕಣ್ತುಂಬಿಸಿ ಎರಡು ಜೀವಗಳು ಒಂದಾಗಿ
ಶಕ್ತಿಯೆಂಬುದು ಮೂಡಿ ಅದು ಅರಿವಾಯಿತು...
ಹೀಗೆ ಮೈಮನಗಳು ಎರಡಾಗಿ ಕಂಡರೂ ಅತೀವ ಆನಂದದಲಿ
ಒಂದು ಗೂಡಲು ಅದು ಒಂದಾಯಿತು.

○ ಅಪೂರ್ವ 'ಡಿ' ಸಿಲ್ವಾ

ವಿಶೇಷ ಆರ್ಥಿಕ ವಲಯಗಳು (SEZ):

ಅಶ್ಲೀಲ ಅಭಿವೃದ್ಧಿಯ ಅನರ್ಥಗಳು...

ವಿಶೇಷ ಆರ್ಥಿಕ ವಲಯಗಳು-SEZ ಎಂಬ ಅಭಿವೃದ್ಧಿಯ ಹೆಸರಿನಲ್ಲಿ ರೈತರ ಮೇಲೆ ಸ್ವದೇಶಿ ಮತ್ತು ವಿದೇಶಿ ಕಾರ್ಪೋರೇಟ್ ಉದ್ಯಮಿಗಳು ನಡೆಸುತ್ತಿರುವ ಹೊಸ ಆಕ್ರಮಣಕ್ಕೆ ದೇಶಾದ್ಯಂತ ಸಾವಿರಾರು ರೈತರು ಬಲಿಯಾಗುತ್ತಿದ್ದಾರೆ. ದೇಶಾದ್ಯಂತ ರೈತಾಪಿ ಜನತೆ ಈ ಹಗಲು ದರೋಡೆಯ ವಿರುದ್ಧ ನಡೆಸುತ್ತಿದ್ದ ಹೋರಾಟಕ್ಕೆ ಮಣಿದಂತೆ ತೋರಿಸಿದ ಯು ಪಿ.ಎ.ಸರ್ಕಾರ ಒಂದು ತಿಂಗಳ ಕೆಳಗೆ ಈ ರೈತ ಬಡಜನ ವಿರೋಧಿ ಪ್ರಕ್ರಿಯೆಗೆ ತಾತ್ಕಾಲಿಕವಾಗಿ ತಡೆಯೊಡ್ಡಿತ್ತು. ಆದರೆ ಏಪ್ರಿಲ್ ಮೊದಲ ವಾರದಲ್ಲಿ ನಡೆದ ಕ್ಯಾಬಿನೆಟ್ ಸಭೆಯಲ್ಲಿ ಮತ್ತೆ ಈ ಪ್ರಕ್ರಿಯೆಗೆ ಚಾಲನೆ ನೀಡಿ ಹೊಸ ಲಕ್ಷಿ ಆರ್ಥಿಕ ವಲಯಗಳಿಗೆ ಮಂಜೂರಾತಿ ನೀಡಿದೆ. ಮತ್ತು ಇನ್ನು ಹತ್ತು ಹಲವಕ್ಕೆ ತಾತ್ವಿಕ ಮಂಜೂರಾತಿ ನೀಡಿವೆ. ರೈತರಿಂದಲೇ ಕೈಗಾರಿಕೋದ್ಯಮಿಗಳು ನೇರವಾಗಿ ಮಾರುಕಟ್ಟೆ ದರದಲ್ಲಿ ಜಮೀನು ಖರೀದಿಸಬೇಕು ಮತ್ತು ಒಂದು ಕುಟುಂಬದಲ್ಲಿ ಒಬ್ಬರಿಗೆ ಉದ್ಯೋಗ ಕೊಡಬೇಕೆಂಬ ಬಾಯುಪಚಾರದ ಬದಲಾವಣೆಗಳನ್ನು ಬಿಟ್ಟರೆ ಸರ್ಕಾರ ತನ್ನ ಜನವಿರೋಧಿ ನಿಲುವಿನಲ್ಲಿ ಯಾವುದೇ ಬದಲಾವಣೆ ತಂದುಕೊಂಡಿಲ್ಲ. ಅಂದರೆ ಸಾರಾಂಶದಲ್ಲಿ ಜನತೆಯ ಮೇಲೆ ಈ ಪ್ರಜಾತಾಂತ್ರಿಕ ಪ್ರಭುತ್ವ ಯುದ್ಧವನ್ನು ಮುಂದುವರೆಸುವ ಘೋಷಣೆಯನ್ನೇ ಮಾಡಿದೆ.

"ಅಭಿವೃದ್ಧಿ"ಯೆಂಬ ಜನತೆಯ ಮೇಲಿನ ಈ ಯುದ್ಧದಲ್ಲಿ ಪಶ್ಚಿಮ ಬಂಗಾಳದ ಸಿಂಗೂರು ಮತ್ತು ನಂದಿಗ್ರಾಮಗಳು ಈಗಾಗಲೇ ರಕ್ತಸಿಕ್ತ ರಣರಂಗವಾಗುತ್ತಿದೆ. ಒಂದೆಡೆ ಜಾಗತೀಕರಣದ ಈ ಕಾಲಘಟ್ಟದಲ್ಲಿ ಸುಂದರ ಬದುಕೆಂಬುದೆಲ್ಲಾ ಕಾಗದದ ಭರವಸೆಗಳೆಂದು ಅನುಭವದಿಂದ ಅರ್ಥ ಮಾಡಿಕೊಂಡು ತಮ್ಮ ಉಳಿವಿನ ಏಕೈಕ ಜೀವನಾಧಾರವಾದ ಭೂಮಿಯನ್ನಾದರೂ ಉಳಿಸಿಕೊಳ್ಳಲೇಬೇಕೆಂದು ಅನಿವಾರ್ಯ ಸಮರಕ್ಕೆ ಸಜ್ಜಾಗಿರುವ ರೈತಾಪಿ ಮತ್ತೊಂದೆಡೆ ರಾಜ್ಯಶಕ್ತಿಯ ಬೆಂಬಲದೊಂದಿಗೆ ತಮ್ಮ ಲಾಭದ ದರವನ್ನು ಅತ್ಯಧಿಕ ಮಾಡಿಕೊಳ್ಳಲು ನಮ್ಮಂಥ ದೇಶಗಳನ್ನು ಸುಲಿಗೆ ಮಾಡಲು ಈ ದೇಶದ ರೈತಾಪಿ ಮತ್ತು ಬಡಜನತೆಯ ಮೇಲೆ ಆಕ್ರಮಣ ಮಾಡುತ್ತಿರುವ ಸ್ವದೇಶಿ ಮತ್ತು ವಿದೇಶಿ ಬಂಡವಾಳ ಶಕ್ತಿಗಳ ಕೂಟ. ನ್ಯಾಯ ಮತ್ತು ಅನ್ಯಾಯಗಳ ನಡುವಿನ ಈ ಯುದ್ಧ ಸಾರಾಂಶದಲ್ಲಿ ಭಾರತದ ಪ್ರಸ್ತುತ ರಾಜಕೀಯ ಮತ್ತು ಸಾಮಾಜಿಕ ಸಂದರ್ಭದಲ್ಲಿ ಯಾವುದು ಪ್ರಗತಿ ಮತ್ತು ಯಾವುದು ವಿಗತಿ ಎಂಬುದರ ಸೈದ್ಧಾಂತಿಕ ಸಂಘರ್ಷವೂ ಆಗಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಏನಿದು ವಿಶೇಷ ಆರ್ಥಿಕ ವಲಯಗಳು-SEZ ??

ಕಳೆದ ವರ್ಷ ಎಡಪಕ್ಷ ಬೆಂಬಲಿತ 'ಪ್ರಗತಿಪರ' ಯು.ಪಿ.ಎ. ಸರ್ಕಾರ ದೇಶದ ಆರ್ಥಿಕ ಅಭಿವೃದ್ಧಿಯ ಹೆಸರಲ್ಲಿ ಒಂದು ಹೊಸ ಕಾಯಿದೆಯನ್ನು ಮಾಡಿದೆ. ದೇಶ ಅಭಿವೃದ್ಧಿ ಆಗಬೇಕೆಂದರೆ ವಿದೇಶಿ ಬಂಡವಾಳ ಅತ್ಯಗತ್ಯ ಹಾಗೂ ಆ ಬಂಡವಾಳ ಲಾಭ ಮಾಡಲು ಈ ದೇಶದ ಯಾವುದೇ ಕಾಯಿದೆ ಅಥವಾ ಕಾನೂನುಗಳು ಅಡ್ಡಿ ಬರಬಾರದಲ್ಲವೇ? ಆದರೆ ದುರದೃಷ್ಟವಶಾತ್ ಸ್ವಾತಂತ್ರ್ಯಾನಂತರ ನಮ್ಮ ದೇಶದಲ್ಲಿ ಹೆಸರಿಗಾದರೂ ಕೆಲವು ಕಾರ್ಮಿಕ, ಹಾಗೂ ಸ್ವದೇಶಿ ಬಂಡವಾಳಿಗರ ಹಿತ ಕಾಯುವಂತ ಕಾನೂನು ಮಾಡಿತ್ತಾಗಿದೆಯಲ್ಲ?



ಕಳೆದ ವರ್ಷ ಎಡಪಕ್ಷ ಬೆಂಬಲಿತ 'ಪ್ರಗತಿಪರ' ಯು.ಪಿ.ಎ. ಸರ್ಕಾರ ದೇಶದ ಆರ್ಥಿಕ ಅಭಿವೃದ್ಧಿಯ ಹೆಸರಲ್ಲಿ ಒಂದು ಹೊಸ ಕಾಯಿದೆಯನ್ನು ಮಾಡಿದೆ. ದೇಶ ಅಭಿವೃದ್ಧಿ ಆಗಬೇಕೆಂದರೆ ವಿದೇಶಿ ಬಂಡವಾಳ ಅತ್ಯಗತ್ಯ ಹಾಗೂ ಆ ಬಂಡವಾಳ ಲಾಭ ಮಾಡಲು ಈ ದೇಶದ ಯಾವುದೇ ಕಾಯಿದೆ ಅಥವಾ ಕಾನೂನುಗಳು ಅಡ್ಡಿ ಬರಬಾರದಲ್ಲವೇ? ಆದರೆ ದುರದೃಷ್ಟವಶಾತ್ ಸ್ವಾತಂತ್ರ್ಯಾನಂತರ ನಮ್ಮ ದೇಶದಲ್ಲಿ ಹೆಸರಿಗಾದರೂ ಕೆಲವು ಕಾರ್ಮಿಕ, ಹಾಗೂ ಸ್ವದೇಶಿ ಬಂಡವಾಳಿಗರ ಹಿತ ಕಾಯುವಂತ ಕಾನೂನು ಮಾಡಿತ್ತಾಗಿದೆಯಲ್ಲ? ಈಗ ಅದಕ್ಕೆ ತಿದ್ದುಪಡಿ ತರಬೇಕು- ಅಥವಾ ಹೊಸ ಕಾನೂನುಗಳನ್ನು ಜಾರಿಗೆ ತರಬೇಕು. ಮೊದಲಾದರೆ ಆ ಬಗೆಯ ಕಾನೂನುಗಳನ್ನು ತರಲು ತೋರಿಕೆಯ ವಿರೋಧವಾದರೂ ಇರುತ್ತಿತ್ತು.

ಶಿವಸುಂದರ್.

ಈಗ ಅದಕ್ಕೆ ತಿದ್ದುಪಡಿ ತರಬೇಕು-ಅಥವಾ ಹೊಸ ಕಾನೂನುಗಳನ್ನು ಜಾರಿಗೆ ತರಬೇಕು.

ಮೊದಲಾದರೆ ಆ ಬಗೆಯ ಕಾನೂನುಗಳನ್ನು ತರಲು ತೋರಿಕೆಯ ವಿರೋಧವಾದರೂ ಇರುತ್ತಿತ್ತು. ಈಗ ಅದೂ ಇಲ್ಲವಾದ್ದರಿಂದ ಅಂಥಾ ಕಾನೂನಗಳನ್ನು ತರಬಹುದು. ಆದರೆ ಅದಕ್ಕೆ ಕೊಂಚ ಸಮಯ ಹಿಡಿಯುತ್ತದೆ. ಏಕೆಂದರೆ ದುರದೃಷ್ಟವಶಾತ್ ನಮ್ಮ ದೇಶದ ಪ್ರಜಾತಂತ್ರದಲ್ಲಿ ಕೆಲವು ಶಾಸನಾತ್ಮಕ ಪ್ರಕ್ರಿಯೆಗಳು ನಡೆಯಲೇಬೇಕಲ್ಲ! ತಡವಾಗುತ್ತದೆ. ಆದರೆ ತುರ್ತಾಗಿ ನಮ್ಮ ದೇಶದಲ್ಲಿ ಶೇ.೮ರ ಅಭಿವೃದ್ಧಿ ದರವನ್ನು ಸಾಧಿಸಬೇಕೆಂದು ಪ್ರಧಾನಿ ಮನಮೋಹನ್ ಕಟಿಬದ್ಧರಾಗಿರುವುದರಿಂದ ನಾವು ಕಾಯಲಾಗುವುದಿಲ್ಲ. ಆದ್ದರಿಂದ ಅಭಿವೃದ್ಧಿಗೆ ಅಡ್ಡಿಯಾಗಿರುವ ಎಲ್ಲಾ ಕಾನೂನುಗಳನ್ನು ತೆಗೆದು ಹಾಕಬೇಕು. ಆದರೆ ನಮ್ಮ ದೇಶದ ಕೆಲವು ದೂರದೃಷ್ಟಿಯಿಲ್ಲದ ಕಾನೂನುಗಳಿಗೆ ನಮ್ಮ ಪ್ರಧಾನಿಯ ಅಂತರಂಗವೇ ಅರ್ಥವಾಗಿಲ್ಲ. ಅವು ವಿದೇಶಿ ಬಂಡವಾಳಕ್ಕೆ ನಮ್ಮ ದೇಶ ಜನರಿಗೆ ಕೆಲಸ ಸೃಷ್ಟಿಸಲೇಬೇಕೆಂಬ, ಅವುಗಳ ಲಾಭದ ಮೇಲೆ ತೆರಿಗೆ ವಿಧಿಸುವ, ಸ್ಥಳೀಯ ಕಚ್ಚಾವಸ್ತುಗಳನ್ನು ಬಳಸಲೇಬೇಕೆಂಬ, ಗಳಿಸಿದ ಲಾಭವನ್ನು ಮತ್ತೆ ಇದೇ ದೇಶದಲ್ಲಿ ಹೂಡಬೇಕೆಂಬ ಹಲವಾರು ಅಭಿವೃದ್ಧಿ ವಿರೋಧಿ ಮತ್ತು ದೇಶದ್ರೋಹಿ ಶರತ್ತುಗಳನ್ನು ಒಡ್ಡುತ್ತವೆ. ಎಷ್ಟೇ ಆದರೂ ಅಭಿವೃದ್ಧಿಯೆಂದರೆ ಹೆಚ್ಚೆಚ್ಚು ವಿದೇಶಿ ಬಂಡವಾಳ, ಅಭಿವೃದ್ಧಿಯೆಂದರೆ ಎಕ್ಸ್‌ಪ್ರೆಸ್ ಹೈವೇಗಳು, ಶಾಪಿಂಗ್ ಮಾಲ್‌ಗಳು, ಐ.ಟಿ. ಪಾರ್ಕ್‌ಗಳು ಮತ್ತು ಐಷಾರಾಮಿ ಹೋಟೆಲ್‌ಗಳೇ ಹೊರತು ದುಡಿಯುವ ಜನತೆಯ ಅಭಿವೃದ್ಧಿಯೇನಲ್ಲವಲ್ಲ. ಏಕೆಂದರೆ ದೇಶವೆಂದರೆ ಈ ದೇಶದ ಸಂಪನ್ನರೇ ಹೊರತು ಈ ದೇಶದ ದುಡಿಯುವ ಜನರೇ ಅಂತೇನೂ ಕಾನೂನು ಮಾಡಿಲ್ಲವಲ್ಲ.

ಆದ್ದರಿಂದ ಈ ದೇಶದ ದುಡಿಯುವ ಜನತೆಯಿಂದ ಈ 'ದೇಶದ ಅಭಿವೃದ್ಧಿಗೆ' ಆಗುತ್ತಿರುವ ಅಡ್ಡಿ ಆತಂಕಗಳನ್ನು ನಿವಾರಿಸಿಕೊಳ್ಳಲು ೨೦೦೫ರಲ್ಲಿ ಯು.ಪಿ.ಎ. ಸರ್ಕಾರ ಹೊಸ "ವಿಶೇಷ ಅರ್ಥಿಕ ವಲಯ ಕಾಯಿದೆ-೨೦೦೫" ಅನ್ನು ಜಾರಿಗೆ ತಂದಿದೆ. ಇದನ್ನು ಮೊದಲು ಜಾರಿಗೆ ತಂದದ್ದು ಎನ್.ಡಿ.ಎ ಸರ್ಕಾರ. ಅದೂ ೨೦೦೦ ಏಪ್ರಿಲ್ ಒಂದರಂದು..! ಇದಕ್ಕೆ ಸ್ಫೂರ್ತಿ ವಿದೇಶಿ ಬಂಡವಾಳ ಹೂಡಿಕೆ ಮೂಲಕ ತಮ್ಮ ದೇಶವನ್ನು ಅಮೆರಿಕದ ರೀತಿ ಮಾಡಬೇಕೆಂದು ಹೊರಟ ಚೀನಾದೇಶ. ಚೀನಾದಲ್ಲಿರುವುದು ಸಹಾ ಪಶ್ಚಿಮ ಬಂಗಾಳದ ಬ್ರಾಂಡಿನ ಕಮ್ಯುನಿಸ್ಟ್ ಪಕ್ಷವೇ..! ಅವರ ಆರ್ಥಿಕ ನೀತಿ ಇಷ್ಟೇ..ಅಸಮಾನತೆ ಅನಿವಾರ್ಯ ಆದರೆ ಅದನ್ನು ಸಹನೀಯ ಮಾತ್ರ ಮಾಡಬಹುದಷ್ಟೇ.. ಆದ್ದರಿಂದ ಎಲ್ಲರೂ ಶ್ರೀಮಂತರಾಗಲು ಹಾತೊರೆಯಬೇಕು. ಅದಕ್ಕೆ ಬಂಡವಾಳ ಬೇಕು. ಅದನ್ನು ವಿದೇಶದಿಂದ ಬರಮಾಡಿಕೊಳ್ಳಬೇಕು. ಕಮ್ಯುನಿಸ್ಟ್ ಹೆಸರಲ್ಲಿದ್ದರೂ ಥೇಟ್ ಅಮೆರಿಕ ರೀತಿ ಚಿಂತನೆಯೇ..!

ಹಾಗೆ ನೋಡಿದರೆ ಈ ಬಗೆಯ ಮೊದಲ ವಿಶೇಷ ವಲಯ ೧೯೬೫ರಲ್ಲೇ ಗುಜರಾತಿನ ಕಾಂಡ್ಲಾದಲ್ಲಿ ಸ್ಥಾಪಿಸಲಾಗಿತ್ತು. ನಂತರ ೧೯೯೧-೨೦೦೨ ರ ಅವಧಿಯಲ್ಲಿ ಉದಾರೀಕರಣ ಪ್ರಕ್ರಿಯೆಯ ಭಾಗವಾಗಿ ಹಲವಾರು ವಿಶೇಷ ವಲಯಗಳು ಅಸ್ತಿತ್ವಕ್ಕೆ ಬಂದವು. ಆದರೆ ಆ ದಿನಗಳಲ್ಲೂ ಆ ವಲಯಗಳಿಗೆ ಸ್ಥಳೀಯ ಕಚ್ಚಾವಸ್ತು ಕೊಂಡುಕೊಳ್ಳುವ ಮತ್ತು ಪಡೆದ ಲಾಭದ ಒಂದು ಭಾಗಾಂಶವನ್ನು



ಹೋರಾಟಗಾರರ ಮೇಲೆ ಗುಂಡು ಹಾರಿಸಿದ ಪಶ್ಚಿಮ ಬಂಗಾಳ ಮುಖ್ಯ ಮಂತ್ರಿ ಬುದ್ಧದೇವ

> **ವಿಶೇಷ ಆರ್ಥಿಕ ವಲಯವೆಂದರೇನು ಎಂಬುದಕ್ಕೆ ಸರ್ಕಾರಿ ಗೆಜೆಟಿನಲ್ಲಿರುವ ವಿವರಣೆಯೇನೆಂದರೆ "ಸುಂಕ ರಹಿತ ಮುಕ್ತ ವಲಯ. ತೆರಿಗೆ ವಾಣಿಜ್ಯದಂತಹ ಎಲ್ಲಾ ವಿಷಯಗಳಿಗೂ ಈ ಪ್ರದೇಶಗಳನ್ನು ವಿದೇಶಿ ಪ್ರದೇಶವೆಂದೇ ಪರಿಗಣಿಸಲಾಗುವುದು". ವಿಪರ್ಯಾಸವೆಂದರೆ ಈ ಬಗೆಯ ವಿಶೇಷ ಆರ್ಥಿಕ ವಲಯ ಯೋಜನೆ ದೇಶದ ಆರ್ಥಿಕತೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆಂದು ದೇಶಾದ್ಯಂತ ಇದೇ ಎಡಪಕ್ಷಗಳೆ ಸಕಾರಣವಾಗಿ ಬೀದಿಗೆ ಬಂದು ಹೋರಾಡುತ್ತವೆ. ಆದರೆ ಪಶ್ಚಿಮ ಬಂಗಾಳದ ಸರ್ಕಾರ ಹೋರಾಟ ಮಾಡುತ್ತಿರುವವರನ್ನೇ ಗುಂಡಿಟ್ಟು ಸಾಯಿಸುತ್ತದೆ.**

ಇಲ್ಲೇ ಮರುಹೂಡಬೇಕಾದ ಶರತ್ತುಗಳನ್ನು ವಿಧಿಸಲಾಗಿತ್ತು. ಈಗ ಹೊಸ ೨೦೦೫ರ ಕಾಯಿದೆ ಪ್ರಕಾರ ಬರುತ್ತಿರುವ ೧೮೮ ವಿಶೇಷ ಆರ್ಥಿಕ ವಲಯದಲ್ಲಿ ಇವ್ಯಾವ ಶರತ್ತುಗಳೂ ಇಲ್ಲ. ಮೊದಲು ಬಹು ಉತ್ಪನ್ನ ವಲಯಗಳಿಗೆ ೧೦೦೦ ಹೆಕ್ಟೇರ್ ಅಷ್ಟು ಜಮೀನನ್ನೂ, ಸೇವಾ ಕ್ಷೇತ್ರದ ವಲಯಗಳಿಗೆ ೧೦೦ ಹೆಕ್ಟೇರಷ್ಟು ಜಮೀನನ್ನು ಮತ್ತು ಆಭರಣ ಅಥವಾ ಐ.ಟಿ.ಯಂತಾ ಒಂದು ಉತ್ಪನ್ನದ ವಲಯಗಳಿಗೆ ಕೇವಲ ೧೦ ಹೆಕ್ಟೇರಷ್ಟು ಜಮೀನನ್ನು ಮಾತ್ರ ಕೊಡಲಾಗುತ್ತಿತ್ತು. ಈಗ ಅವೆಲ್ಲಾ ನಿಯಮಗಳನು ಸಡಿಸಲಾಗುತ್ತಿದೆ. ಆದ್ದರಿಂದಲೇ ಬರಲಿರುವ ೧೮೮ ವಿಶೇಷ ವಲಯಗಳಿಗೆ ೪೦೦೦೦ ಹೆಕ್ಟೇರಷ್ಟು ಜಮೀನನ್ನು ಮೀಸಲಿರಿಸಲಾಗಿದೆ. ಅವೆಲ್ಲಾ ರೈತರ ಕೃಷಿ ಜಮೀನೆಂದು ವಿಶೇಷವಾಗಿ ಹೇಳುವ ಅಗತ್ಯವೇ ಇಲ್ಲ.

ಅಷ್ಟು ಮಾತ್ರವಲ್ಲ. ಈ ವಲಯಗಳಿಗೆ ಇನ್ನು ಮುಂದೆ ಕಡ್ಡಾಯ ಉದ್ಯೋಗ ಸೃಷ್ಟಿ ಮಾಡಲೇಬೇಕೆಂಬ, ಸ್ಥಳಿಯರಿಂದ ಖರೀದಿಸಲೇಬೇಕೆಂಬ, ಬಂದ ಲಾಭದಲ್ಲಿ ಒಂದಷ್ಟು ಭಾಗವನ್ನು ಮರು ವಿನಿಯೋಗ ಮಾಡಲೇಬೇಕೆಂಬ ಯಾವ ಶರತ್ತುಗಳು ಇಲ್ಲ. ಅವರು ವಿದೇಶಿ ಬಂಡವಾಳ ತಂದರೇ ಸಾಕು. ಅವರಿಗೆ ಬೇಕಾದ ಜಮೀನನ್ನು ಅತ್ಯಂತ ಕಡಿಮೆ ಬೆಲೆಗೆ, ಕಡಿಮೆ ದರದಲ್ಲಿ ವಿದ್ಯುತ್, ನೀರು, ಸಾರಿಗೆ ಸೌಲಭ್ಯಗಳನ್ನು ಪಡೆದುಕೊಳ್ಳುತ್ತವೆ. ಅಷ್ಟು ಮಾತ್ರವಲ್ಲ. ಆ ಕಂಪನಿಗಳಿಗೆ ೧೦ ವರ್ಷಗಳ ಕಾಲ ಕಾರ್ಪೊರೇಟ್ ತೆರಿಗೆ ವಿಧಿಸುವುದಿಲ್ಲ. ಒಂದು ವೇಳೆ ಅವರು ಸ್ಥಳೀಯರಿಂದ ಕಚ್ಚಾ ವಸ್ತುಗಳನ್ನು ಕೊಂಡರೆ ಅಬ್ಕಾರಿ ಸುಂಕ ರದ್ದು. ಮಾರಾಟ ತೆರಿಗೆ, ಖರೀದಿ ತೆರಿಗೆ ರದ್ದು.. ಕೇವಲ ಕಾರ್ಪೊರೇಟ್ ತೆರಿಗೆ ರದ್ದಿನಿಂದಲೇ ಈ ದೇಶದ ಬೊಕ್ಕಸಕ್ಕೆ ೩೫೪೩೦ಕೋಟಿ ರುಪಾಯಿಯಷ್ಟು ಆದಾಯ ಇಲ್ಲವಾಗುತ್ತಿದೆಯೆಂದು ತೆರಿಗೆ ನಿರ್ವಹಣಾ ಸಮಿತಿಯೇ ಸ್ಪಷ್ಟಪಡಿಸಿದೆ. ಈ ಬಡ ದೇಶದಲ್ಲಿ ೩೦ ಕೋಟಿ ಬಡವರ ಪಡಿತರಕ್ಕೆಂದು ವೆಚ್ಚ ಮಾಡುತ್ತಿರುವುದು ಕೇವಲ ೨೫೦೦೦ಕೋಟಿ. ಇನ್ನು ಮುಂದೆ ಅಷ್ಟನ್ನೂ ವೆಚ್ಚ ಮಾಡಲಾಗುವುದಿಲ್ಲವೆಂದು ಆಗಲೇ ೪೫೦೦ ಕೋಟಿಯಷ್ಟು ಕಡಿತ ಮಾಡಲಾಗುತ್ತಿದೆ. ವಿಶೇಷ ಆರ್ಥಿಕ ವಲಯವಲ್ಲ.. ಹೊಸ ಬಗೆಯ ವಿದೇಶಿ ವಸಹಾತುಗಳು..!

ವಿಶೇಷ ಆರ್ಥಿಕ ವಲಯವೆಂದರೇನು ಎಂಬುದಕ್ಕೆ ಸರ್ಕಾರಿ ಗೆಜೆಟಿನಲ್ಲಿರುವ ವಿವರಣೆಯೇನೆಂದರೆ "ಸುಂಕ ರಹಿತ ಮುಕ್ತ ವಲಯ.. ತೆರಿಗೆ ವಾಣಿಜ್ಯದಂತಹ ಎಲ್ಲಾ ವಿಷಯಗಳಿಗೂ ಈ ಪ್ರದೇಶಗಳನ್ನು ವಿದೇಶೀ ಪ್ರದೇಶವೆಂದೇ ಪರಿಗಣಿಸಲಾಗುವುದು".

ಹೀಗಾಗಿ ಅಂಥಾ ನವವಸಾಹತು ರೀತಿಯ ಯೋಜನೆಯನ್ನು ಬಿಜೆಪಿಯಂಥ ಪ್ರತಿಗಾಮಿ ಪಕ್ಷವು ಜಾರಿಗೆ ತಂದಾಗ ಕಮ್ಯುನಿಸ್ಟ್ ಪಕ್ಷಗಳು ಪ್ರತಿಭಟಿಸಲೇ ಇಲ್ಲ. ಅಷ್ಟು ಮಾತ್ರವಲ್ಲ ೨೦೦೪ರ ಚುನಾವಣೆಯ ನಂತರ ತಮ್ಮ ಸಂಪೂರ್ಣ ಬೆಂಬಲದೊಂದಿಗೆ ಯು.ಪಿ.ಎ. ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅದಕ್ಕೊಂದಷ್ಟು ತೋರಿಕೆಯ ಬದಲಾವಣೆ ಮಾಡಿತು. ವಿಪರ್ಯಾಸವೆಂದರೆ ಈ ಬಗೆಯ ವಿಶೇಷ ಆರ್ಥಿಕ ವಲಯ ಯೋಜನೆ ದೇಶದ ಆರ್ಥಿಕತೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆಂದು ದೇಶಾದ್ಯಂತ ಇದೇ ಎಡಪಕ್ಷಗಳೆ ಸಕಾರಣವಾಗಿ ಬೀದಿಗೆ ಬಂದು ಹೋರಾಡುತ್ತವೆ. ಆದರೆ ಅದೇ ನೀತಿಗಳಿಗೆ ಒಳಪಟ್ಟೇ ಪಶ್ಚಿಮ ಬಂಗಾಳದ ಸರ್ಕಾರ ರೈತರ ಜಮೀನನ್ನು ಕನಿಷ್ಟ ೧೦ ಕಡೆ ಈ ನವವಸಾಹತು ಯೋಜನೆಗೆ ಒಳಪಡಿಸಿಕೊಂಡರೆ ಹೋರಾಟ ಮಾಡುತ್ತಿರುವವರನ್ನೇ ಗುಂಡಿಟ್ಟು ಸಾಯಿಸುತ್ತದೆ. ನಂದಿಗ್ರಾಮದಲ್ಲಿ ಮಾಡಿದಂತೆ. ಸಿಂಗೂರಲ್ಲಿ ಮಾಡಿದಂತೆ..

೨೦೦೦ದ ಆ ಕಾಯಿದೆಗೆ ಈಗ ಮತ್ತಷ್ಟು ತಿದ್ದಪಡಿಗಳನ್ನು ತರಲಾಗಿದೆ. ಹೊಸ ೨೦೦೫ರ ಕಾಯಿದೆ ಪ್ರಕಾರ ಬರುತ್ತಿರುವ ೧೮೮ ವಿಶೇಷ ಆರ್ಥಿಕ ವಲಯದಲ್ಲಿ ಬರುವ ಬಂಡವಾಳಕ್ಕೆ ಯಾವ ಸಾಮಾಜಿಕ ಜವಾಬ್ದಾರಿಯನ್ನಾಗಲೀ, ಪರಿಸರ ಅಥವಾ ಕಾರ್ಮಿಕರ ಕುರಿತಾದ ಜವಾಬ್ದಾರಿಗಳಾಗಲೀ ಹೊರುವಂಥ ಯಾವುದೇ ಶರತ್ತು

ಗಳು ಇಲ್ಲ. ಮೊದಲು ಬಹು ಉತ್ಪನ್ನ ವಲಯಗಳಿಗ ೧೦೦೦೦ ಹೆಕ್ಟೇರ್ ಅಷ್ಟು ಜಮೀನನ್ನೂ, ಸೇವಾ ಕ್ಷೇತ್ರದ ವಲಯಗಳಿಗೆ ೧೦೦ ಹೆಕ್ಟೇರಷ್ಟು ಜಮೀನನ್ನು ಮತ್ತು ಆಭರಣ ಅಥವಾ ಐ.ಟಿ.ಯಂತಾ ಒಂದು ಉತ್ಪನ್ನದ ವಲಯಗಳಿಗೆ ಕೇವಲ ೧೦ ಹೆಕ್ಟೇರಷ್ಟು ಜಮೀನನ್ನು ಮಾತ್ರ ಕೊಡಲಾಗುತ್ತಿತ್ತು. ಈಗ ಅವೆಲ್ಲಾ ನಿಯಮ ಗಳನ್ನು ಸರಿಸಲಾಗಿದೆ. ಆದ್ದರಿಂದಲೇ ಬರಲಿರುವ ೧೪೮ ವಿಶೇಷ ವಲಯಗಳಿಗೆ ೧.೨೫ ಲಕ್ಷ ಎಕರೆಯಷ್ಟು ಜಮೀ ನನ್ನು ಮೀಸಲಿರಿಸಲಾಗಿದ. ಅವೆಲ್ಲಾ ರೈತರ ಕೃಷಿ ಜಮೀ ನೆಂದು ವಿಶೇಷವಾಗಿ ಹೇಳುವ ಅಗತ್ಯವೇ ಇಲ್ಲ.

ಒಂದು ಅಂದಾಜಿನ ಪ್ರಕಾರ ಈ ೧೪೮ ಆರ್ಥಿಕ ವಲಯದಲ್ಲಿ ಅಬ್ಬಬ್ಬಾ ಎಂದರೆ ಒಂದು ಲಕ್ಷ ಕೋಟಿ ರುಪಾಯಿಗಳಷ್ಟು ಮಾತ್ರ ಬಂಡವಾಳ ಹೂಡಿಕೆ ಬರ ಬಹುದು. ಆದರೆ ಅದಕ್ಕೆ ಪ್ರತಿ ವರ್ಷ ಕೊಡುವ ರಿಯಾ ಯತಿಯೇ ಕನಿಷ್ಟ ೧.೨೫ ಲಕ್ಷ ಕೋಟಿ ರುಪಾಯಿ ಗಳೆಂದು ಅಂದಾಜು ಮಾಡಲಾಗಿದೆ.

ಕರ್ನಾಟಕ, ಒರಿಸ್ಸ, ಮಧ್ಯಪ್ರದೇಶ, ಗುಜರಾತ್, ಪಶ್ಚಿಮ ಬಂಗಾಳ ಹೀಗೆ ಯಾವುದೇ ಬಗೆಯ, ಯಾವುದೇ ಬಣ್ಣದ ಪಕ್ಷಗಳಿದ್ದರೂ ಎಲ್ಲವೂ ಎಸ್‌ಇಜೆಡ್‌ಗಳ ಸ್ಥಾಪನೆಯಲ್ಲಿ ನಾ ಮುಂದು ತಾ ಮುಂದು ಎಂದು ಧಾವಿಸುತ್ತಿವೆ. ಇದರಲ್ಲಿ ಕಾಂಗ್ರೆಸ್, ಬಿಜೆಪಿ, ಜನತ ದಳದಂಥ ಪಕ್ಷಗಳ ಬಗ್ಗೆ ಈ ದೇಶದ ಜನ ಇದನ್ನೇ ನಿರೀಕ್ಷಿಸಿದ್ದರು. ಸ್ವಾತಂತ್ರ್ಯ ಬಂದಾಗಲಿಂದಲೂ ಈ ಪಕ್ಷಗಳು ಮಾಡಿಕೊಂಡು ಬಂದಿದ್ದೇ ಜನವಿರೋಧಿ, ಸ್ವದೇಶಿ ಮತ್ತು ವಿದೇಶಿ ಬಂಡವಳಶಾಹಿ ರಾಜಕಾರಣ. ಇದು ಅದರ ಮುಂದುವರೆಕೆಯಷ್ಟೆ

ಆದರೆ ಈ ದೇಶದಲ್ಲಿ ಬಂಡವಾಳಶಾಹಿಗಳ ವಿರೋಧಿಯಾದ ರೈತಾಪಿ-ಕಾರ್ಮಿಕರ ಕ್ರಾಂತಿ ಮಾಡಲು ಹೊರಟು ಬಂಗಾಳ ಮತ್ತು ಕೇರಳದಲ್ಲಿ ತಾತ್ಕಾಲಿಕ ವಿಶ್ರಾಂತಿಗೆಂದು ನಿಂತ ಕಮ್ಯುನಿಸ್ಟ್ ಪಕ್ಷಗಳು ಅಲ್ಲೇ ಸ್ಥಾವ ರವಾಗಿ, ಆಳುವವರ್ಗದ ಹಿತಾಸಕ್ತಿಯನ್ನು ಕಾಯುವ ನಿಷ್ಟಾವಂತರಾಗಿ, ಎಸ್‌ಇಜೆಡ್‌ಗಳ ಸ್ಥಾಪನೆಯಲ್ಲಿ ಮುಂಚೂಣೆಯಲ್ಲಿರುವುದು ದುರಂತದ ವಿಷಯ. ತಮ್ಮ ಈ ದ್ರೋಹವನ್ನು ಸಮರ್ಥಿಸಿಕೊಳ್ಳಲು ಇಲ್ಲದ ಸುಳ್ಳುಗ ಳನ್ನು, ಕುತರ್ಕವನ್ನು ಮುಂದಿಡುತ್ತಿರುವುದನ್ನು ಮಾತ್ರವ ಲ್ಲದೆ ಸಿಂಗೂರು ಮತ್ತು ನಂದಿಗ್ರಾಮಗಳಲ್ಲಿ ರೈತಾಪಿಯ ರಕ್ತದೊಕುಳಿಯನ್ನೂ ಹರಿಸಿವೆ.

ಹೀಗಾಗಿ ಈ ಎಸ್ ಇ ಜೆಡ್ ವಿವಾದ ಇಡಿ ಭಾರ ತದ ರಾಜಕಾರಣಕ್ಕೂ ಅದರಲ್ಲೂ ಎಡ ರಾಜಕಾರಣಕ್ಕೂ ಆತ್ಮ ಪರಿಶೊಧನೆಯ ಸಂದರ್ಭವನ್ನು ಮತ್ತು ಜನತೆ ಮತ್ತಷ್ಟು ಜಾಗೃತರಾಗಿರಬೇಕಾದ ಸನ್ನಿವೇಶವನ್ನೂ ಹುಟ್ಟಿ ಹಾಕಿದೆ. ಆದಕ್ಕಾಗಿಯೇ ಎಡಪಕ್ಷಗಳ ಅದರಲ್ಲೂ ಸಿಪಿಎಂ ಪಕ್ಷದ ಹುಸಿ ಕ್ರಾಂತಿಕಾರತೆಯನ್ನು ಸ್ವಲ್ಪ ಹತ್ತಿರದಿಂದಲೇ ಪರಿಶೀಲನೆಗೊಡ್ಡಬೇಕು..

ಟಾಟಾ,ಸಲೀಂ..ಲಾಲ್ ಸಲಾಂ, ಲಾಲ್ ಸಲಾಂ..!

ಬುದ್ಧದೇವ ಭಟ್ಟಾಚಾರ್ಯರು ಪ.ಬಂಗಾಳದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಈವರೆಗೆ ಎಡಪಕ್ಷಗಳು ಮತ್ತ ವರ ಸರ್ಕಾರಗಳು ಹೊದ್ದುಕೊಳ್ಳುತ್ತಿದ್ದ ಪ್ರಗತಿಪರತೆಯ ಮುಸುಕೆಲ್ಲಾ ಕಳಚಿಬೀಳುತ್ತಿದೆ. ಈ ಬಾರಿ ಅಧಿಕಾರದ ಪ್ರಮಾಣವಚನ ಸ್ವೀಕರಿಸಿದ ತಕ್ಷಣ ಬುದ್ಧದೇವರು ತಾವು ಈ ದೇಶದ ದೊಡ್ಡ ಬಂಡವಾಳಿಗರಿಗಾಗಲೀ, ವಿದೇಶಿ ಬಂಡವಾಳಕ್ಕಾಗಲೀ ವಿರುದ್ದವಲ್ಲವೆಂದು ಸ್ಪಷ್ಟವಾಗಿ

ಘೋಷಿಸಿಬಿಟ್ಟಿದ್ದರು. ಅದರಂತೆ ಇಂಡೋನೇಷಿಯಾದ ಸಲೀಂ ಗ್ರೂಪ್ ಕಂಪನಿಗೆ ಸಲಾಮ್ ಹೊಡೆದು ಕರೆ ತಂದು ಬಂಗಾಳದ ೧೦೦೦೦ ಎಕರೆಗೂ ಹೆಚ್ಚಿನ ಕೃಷಿ ಭೂಮಿಯನ್ನು ನೀಡಲಾಯಿತು. ಅದೇರೀತಿ ಜಪಾನಿನ ಮಿತ್ಸುಬುಷಿ ಕಂಪನಿ ಕೋಲ್ಕತ್ತದಲ್ಲಿ ಬಂಡವಾಳ ಹೂಡು ವಂತೆ ಮನ ಒಲಿಸಲು ಇನ್ನಿಲ್ಲದ ರಿಯಾಯಿತಿಗಳನ್ನು ಸೌಕರ್ಯಗಳನ್ನು ಕಲ್ಪಿಸಲಾಗಿತ್ತು. ಇದೀಗ ಈ ದೇಶದ ದೊಡ್ಡ ಬಂಡವಾಳಿಗರ ಸರದಿ. ಸಿಂಗೂರಿನಲ್ಲಿ ೧೦೦೦ ಎಕರೆ ರೈತರ ಜಮೀನನ್ನು ಟಾಟಾಗಳಿಗೆ ಒಪ್ಪಿಸುತ್ತಿದ್ದರೆ ನಂದಿಗ್ರಾಮದಲ್ಲಿ ೪೦೦೦ ಎಕರೆ ಜಮೀನನ್ನು ಇಂಡೋ ನೇಷಿಯಾದ ಸಲಿಂ ಗ್ರೂಪ್ ಆಫ್ ಕಂಪನಿಗಲಿಗೆ ಕೊಡ ಲಾಗುತ್ತಿದೆ. ಅಷ್ಟು ಮಾತ್ರವಲ್ಲ ಪಶ್ಚಿಮ ಬಂಗಾಳದ ಮಿಡ್ನಾಪುರ, ಕರಗ್‌ಪುರ, ಉತ್ತರ ಮತ್ತು ದಕ್ಷಿಣ ೨೪ ಪರಗಣ ಮತ್ತು ಸಿಲಿಗುರಿ ಜಿಲ್ಲೆಗಳಲ್ಲಿ ಸುಮಾರು ೩೦೦೦೦ ಸಾವಿರ ಎಕರೆ ಕೃಷಿ ಭೂಮಿಯನ್ನು ವಿಡಿ ಯೋಕಾನ್ ರಿಯಲ್ಟಿಸ್, ಸಲಿಂ ಗ್ರೂಪ್ ಮತ್ತಿತರ ವಿದೇಶಿ ಕಂಪನಿಗಳಿಗೂ ಮತ್ತು ಟಾಟಾದಂತ ಸ್ವದೇಶಿ(?) ಬಂಡವಾಳಶಾಹಿಗಳಿಗೂ ಪರಭಾರೆ ಮಾಡಲಾಗುತ್ತಿದೆ.

ಈ ಬಾರಿ ಬುದ್ಧ ದೇವರು ಚುನಾವಣೆಯಲ್ಲಿ ಗೆದ್ದು ಅಧಿಕಾರ ಸ್ವೀಕರಿಸುವ ಮುನ್ನ ನಡೆಸುತ್ತಿದ್ದ ಪ್ರಥಮ ಪತ್ರಿಕಾ ಗೊಷ್ಠಿಯಿಂದ ಈ ಕಥೆ ಅರ್ಥಾತ್ ಬಂಗಾಳದ ಸಿಂಗೂರ್ ಪ್ರಾಂತ್ಯದ ರೈತರ ವ್ಯಥೆಯ ಕಥೆ ಪ್ರಾರಂಭವಾ ಗುತ್ತದೆ.

ಸುಮಾರು ಒಂದು ಲಕ್ಷಕ್ಕೆ ಒಂದು ಕಾರು ದಕ್ಕುವ ಬಡವರ ಕಾರೆಂಬ ಈ ಟಾಟಾದ ಯೋಜನೆಗೆ ಅವರು ದುರ್ಗಾಪುರ ಹೈವೆಗೆ ಅಂಟಿಕೊಂಡಿರುವ, ಕೊಲ್ಕತ್ತಾಗೆ ಅನತಿದೂರದಲ್ಲೇ ಇರುವ ಸಿಂಗೂರಿನ ೧೦೦೦ ಎಕರೆ ಜಮೀನನನ್ನು ತಮ್ಮ ವಶಕ್ಕೆ ಕೊಡಬೇಕೆಂದು ಆಗ್ರಹಿಸಿ ದ್ದರು. ಕೂಡಲೇ, ಪ್ರಜಾತಂತ್ರಿಕ ವಿಕೇಂದ್ರೀಕರಣದ ಬಗ್ಗೆ ಉದ್ದುದ್ದ ಮಾತಾಡುವ ಬಂಗಾಳದ ಎಡ ಸರ್ಕಾರ ಯಾವ ಗ್ರಾಮ ಪಂಚಾಯತ್, ಜಿಲ್ಲಾ ಪಂಚಾಯತ್‌ಗಳ ಒಪ್ಪಿಗೆಯನ್ನು ಕೇಳದೆ ಜಮೀನನ್ನು ಮಂಜೂರು ಮಾಡಿತು. ಇತರರ ಮಾತಿರಲಿ ತನ್ನ ಸಹಭಾಗಿ ಪಕ್ಷಗಳ ಜೊತೆಗಾಗಲೀ, ಕ್ಯಾಬಿನೆಟ್‌ನಲ್ಲಾಗಲೀ ಇದರ ಬಗ್ಗೆ ಕೂಲಂಕಷ ಚರ್ಚೆಗಳೂ ಆಗಲಿಲ್ಲ.

ಆದರೆ ಸಿಂಗೂರಿನ ಜನತೆ ತಮ್ಮ ಬದುಕಿನ ಪ್ರಧಾನ ಆಸರೆಯಾಗಿದ್ದ ಭೂಮಿಯನ್ನು ಕಳೆದುಕೊಳ್ಳಲು ಸಿದ್ಧರಿರಲಿಲ್ಲ. ಸಿಂಗೂರಿನ ಬಗ್ಗೆ ನಡೆಯುತ್ತಿರುವ ವಾದ ಪ್ರತಿವಾದಗಳಲ್ಲಿ ಸತ್ಯವೆಷ್ಟು? ಮಿಥ್ಯವೆಷ್ಟು?. ವಾಸ್ತವವಾಗಿ ಪಶ್ಚಿಮ ಆಳುವ ಪಕ್ಷದ ಸತ್ವ ಪರೀಕ್ಷೆ ಇಲ್ಲಿಂದಲೇ ಪ್ರಾರಂಭವಾಗುತ್ತದೆ. ಸಾಮಾನ್ಯವಾಗಿ ಇಂಥಾ ವಿವಾದ ಗಳಲ್ಲಿ ಮೊದಲು ಸಾಯುವುದು ಸತ್ಯವೇ.. ಏಕೆಂದರೆ

ಶೋಷಕ ವರ್ಗದ ಆಳುವಪಕ್ಷಗಳಿಗೆ ಸತ್ಯವನ್ನು ಮುಚ್ಚಿಡದೆ ಗತ್ಯಂತರವಿರುವುದಿಲ್ಲ. ಏಕೆಂದರೆ ಒಂದು ಬೂರ್ಜ್ವ ಪ್ರಜಾ ಪ್ರಭುತ್ವದಲ್ಲಿ ಅವರು ಜನರ ಹೆಸರಲ್ಲೇ ಎಲ್ಲಾ ಶೋಷಣೆಯನ್ನು ಮಾಡಬೇಕಿರುವುದರಿಂದ ಸತ್ಯವನ್ನು ಮುಚ್ಚಿಡಲೇಬೇಕಾಗುತ್ತದೆ. ಆದರೆ ಜನರ ಹಿತಾಸಕ್ತಿಗಾಗಿ ಎಂದೇ ಅಧಿಕಾರ ಗ್ರಹಣ ಮಾಡಿದವರಿಗೆ ಸತ್ಯವನ್ನು ಮುಚ್ಚಿಡುವ ಯಾವ ದರ್ದೂ ಇರುವುದಿಲ್ಲ. ಆದರೆ ಈವರೆಗೆ ಸರ್ಕಾರ ಹಾಗೆ ನಡೆದುಕೊಂಡಿಲ್ಲ.

ಸರ್ಕಾರವೂ ಮತ್ತು ಸಮಾಜವೂ ಒಪ್ಪಿಕೊಳ್ಳುವ ಒಂದು ಸಮಾಜದ ಗಣ್ಯರನ್ನೊಳಗೊಂಡ ಸಮಿತಿಯಿಂದ ಒಂದು ನಿಷ್ಪಕ್ಷಪಾತ ತನಿಖೆ ಮಾಡಿಸಲು ಸರ್ಕಾರ ಈವರೆಗೆ ಒಪ್ಪಿಕೊಂಡಿಲ್ಲ. ಬದಲಿಗೆ ಮಹಾಶ್ವೇತದೇವಿ, ಮೇಧಾ ಪಾಟ್ಕರ್‌ರಂಥವರನ್ನೂ ಹೊರಗಿನವರೆಂದೂ, ತಪ್ಪುದಾರಿಗೆಳೆಯಲ್ಪಟ್ಟವರೆಂದೂ ಆರೋಪಿಸಿ ಪದೇಪದೇ ಬಂಧಿಸಿದ್ದಾರೆ. ಅದೇರೀತಿ ಜನರೆಲ್ಲಾ ಭೂಮಿಯನ್ನು ಕೊಡಲು ಸ್ವಇಚ್ಛೆಯಿಂದ ಒಪ್ಪಿಕೊಂಡಿದ್ದಾರೆ ಹಾಗೂ ಈಗಾಗಲೇ ಶೇ.೯೦ರಷ್ಟು ಜನ ಪರಿಹಾರ ಪಡೆದಿದ್ದಾರೆ ಎಂಬ ವಾದ. ಬೃಂದಾ ಕಾರಟ್‌ರನ್ನೂ ಒಳಗೊಂಡಂತೆ ಈ ಬಗ್ಗೆ ಸರಿಯಾದ ಮಾಹಿತಿಯನ್ನು ಯಾರೂ ನೀಡಲೇ ಇಲ್ಲ. ಕೊನೆಗೆ ಡಿಸೆಂಬರ್ ೩೧ರಂದು ಸಿಂಗೂರ್ ಬಗ್ಗೆ ಸರ್ಕಾರ ಅನಿವಾರ್ಯವಾಗಿ ನೀಡಲೇಬೇಕಾಗಿ ಬಂದ ವರದಿಯಲ್ಲಿ ಇನ್ನೂ ಶೇ. ೪೦ರಷ್ಟು ಜನ ಪರಿಹಾರ ಪಡೆದುಕೊಂಡಿಲ್ಲವೆಂಬುದೂ ಮತ್ತು ಶೇ.೪೦ರಷ್ಟು ರೈತರು ಒಪ್ಪಿಗೆ ಕೊಟ್ಟಿಲ್ಲವೆಂಬುದು ಬಯಲಾಗಿದೆ. ಅದೇರೀತಿ ಪ್ರಾರಂಭದಲ್ಲಿ ಸಿಂಗೂರಿನಲ್ಲಿ ವಶಪಡಿಸಿಕೊಳ್ಳುತ್ತಿರುವುದು ಬೀಳು ಭೂಮಿಯನ್ನು ಮತ್ತು ಅವು ಒಂದು ಫಸಲು ಕೂಡ ಕೊಡದ ಭೂಮಿಯೆಂದು ಸರ್ಕಾರ ಪ್ರಚಾರ ಮಾಡಿತ್ತು.

ನಂತರ ಹೋರಾಟ ತೀವ್ರವಾದಂತೆ ಮತ್ತು ಸ್ವತಂತ್ರ ಸತ್ಯಶೋಧನೆಗಳು ನಡೆಯುತ್ತಿದ್ದಂತೆ ವಶಪಡಿಸಿಕೊಳ್ಳುತ್ತಿರುವ ಭೂಮಿಯೆಲ್ಲಾ ಕನಿಷ್ಟ ವರ್ಷಕ್ಕೆ ಎರಡು ಫಸಲು ಬೆಳೆಯುವಂಥಾ ಭೂಮಿಯೆಂಬುದು ಬಯಲಿಗೆ ಬಂತು. ಈಗ ಸರ್ಕಾರವೂ ಅದನ್ನೇನೂ ನಿರಾಕರಿಸುತ್ತಿಲ್ಲ. ಅದೇ ರೀತಿ ಸಿಂಗೂರ್ ಒಂದು SEZ ಅಲ್ಲವೆಂಬ ವಾದ. ಇದು ಕೇವಲ ಪದವ್ಯಾಖ್ಯಾನಗಳ ಮೇಲಾಟವೇ ಹೊರತು ಈ ವಾದದಲ್ಲಿ ಜನಹಿತ ಕಾಯುವ ರಾಜಕೀಯವೇನೂ ಇರಲಿಲ್ಲ. ಏಕೆಂದರೆ ಬಂಡವಾಳವನ್ನು ಪಶ್ಚಿಮ ಬಂಗಾಳ ಸರ್ಕಾರ ತನ್ನ ಶರತ್ತಿನ ಮೇಲೆ ಆಹ್ವಾನಿಸುತ್ತಿದೆಯೇ ವಿನಃ ದೇಶೀ ಆಗಲೀ ವಿದೇಶಿ ಬಂಡವಾಳದ ಶರತ್ತಿಗೆ ಮಣಿಯುತ್ತಿಲ್ಲ ಎಂಬ ವಾದ ಕರ್ನಾಟಕದಲ್ಲಂತೂ ಮಾಡಲಾಗುತ್ತಿದೆ. ತಮಗೂ ಇತರ ಸರ್ಕಾರಗಳಿಗೂ ಇರುವ ವ್ಯತ್ಯಾಸ ಅದೇ ಎಂದು ವಾದಿಸಲಾಗುತ್ತದೆ. ಹೀಗಾಗಿಯೇ ತಮ್ಮ ಸರ್ಕಾರ SEZ ವಿರೋಧಿಸುತ್ತದೆ. ಆದರೆ ಸಿಂಗೂರ್ ವಿಷಯ ಅದಲ್ಲ ಎನ್ನುತ್ತಾರೆ. ಆದರೆ ವಾಸ್ತವವೆಂದರೆ ಒಂದು SEZ ನಲ್ಲಿ ಯಾವ್ಯಾವ ರಿಯಾಯತಿಗಳನ್ನು ಒಂದು ಕಂಪನಿಗೆ ನೀಡಲಾಗುವುದೋ, ಯಾವ ಯಾವ ಕಾನೂನುಗಳಿಂದ ವಿನಾಯತಿ ನೀಡಲಾಗುವುದೋ ಅವೆಲ್ಲವನ್ನೂ ಸಿಂಗೂರಿನಲ್ಲಿ ಟಾಟಾದವರಿಗೂ ನೀಡಲಾಗಿದೆ. ಉದಾಹರಣೆಗೆ ಸಿಂಗೂರಿನ ಸ್ಥಳ ಆಯ್ಕೆ ಆಗಿದ್ದೇ ಅವರು ಕೇಳಿದ ಕಡೆ ಕೇಳಿದಷ್ಟು ಜಮೀನನ್ನು ಕೊಡುತ್ತೇವೆ ಎಂಬ ಶರತ್ತಿನ ಮೇಲೆ. ಅದೇರೀತಿ ಭೂಮಿ ವಶಪಡಿಸಿಕೊಳ್ಳುವ ಜವಾಬ್ದಾರಿ ಸರ್ಕಾರದ್ದೇ ಆಗಿದ್ದು ಅದಕ್ಕೆ ಸರ್ಕಾರವೇ ಹೇಳುತ್ತಿರುವಂತೆ ೧೪೦ ಕೋಟಿ ರುಪಾಯಿ ಖರ್ಚಾಗಲಿದೆ. ಆದರೆ ಅದಕ್ಕೆ ಟಾಟಾ ಕೊಡುತ್ತಿರುವುದು ಕೇವಲ ೨೦ ಕೋಟಿ ರುಪಾಯಿ. ಅದೂ ಐದು ವರ್ಷಗಳಲ್ಲಿ..

ಅದೇರೀತಿ ಸಿಂಗೂರ್ ಕಾರ್ಖಾನೆ ಅಲ್ಲಿ ಕನಿಷ್ಟ ೧೦೦೦೦ ಸಾವಿರ ಹೊಸ ಉದ್ಯೋಗಗಳನ್ನು ಸೃಷ್ಟಿ ಮಾಡುತ್ತದೆ. ಕೃಷಿಯಲ್ಲಿ ಇನ್ನೂ ಅಂಥ ಉದ್ಯೋಗ ಸೃಷ್ಟಿಯ ಸಾಮರ್ಥ್ಯ ಇಲ್ಲ. ಎನ್ನುವ ವಾದ. ಸರ್ಕಾರದ ಪ್ರಕಾರವೇ ಈಗ ಆ ೧೦೦೦ ಎಕರೆ ಭೂಮಿಯ ಮೇಲೆ ಆಧಾರ ಪಟ್ಟಿರುವವರು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕನಿಷ್ಟ ೧೨೦೦೦ ಜನ. ಅವರಿಗೆಲ್ಲಾ ಇಲ್ಲಿ ಉದ್ಯೋಗ ಸಿಗುವುದೇ? ಈವರೆಗೂ ಟಾಟಾದವರು ಇಲ್ಲಿ ಎಷ್ಟು ಉದ್ಯೋಗ ಸೃಷ್ಟಿಯಾಗಬಹುದೆಂಬುದರ ಬಗ್ಗೆ ಸ್ಪಷ್ಟ ಮಾಹಿತಿ ನೀಡಿಲ್ಲ. ಅದರಲ್ಲಿ ಕೃಷಿಯನ್ನು ಬಿಟ್ಟರೆ ಬೇರೆ ಕೌಶಲ್ಯವಾಗಲೀ ತಿಳಿದಿರುವ ರೈತ ಮಕ್ಕಳಿಗೆ ಏನು ಕೆಲಸ ಸಿಗುತ್ತದೆ ಎಂಬುದು ಸ್ಪಷ್ಟವಾಗಿಲ್ಲ. ಸರ್ಕಾರ ನೊಂದಾಯಿತ ನಿರ್ವಸಿತರಿಗೆ ಕೊಡುತ್ತಿರುವ ತರಬೇತಿಗೂ ಕಾರ್ ಉತ್ಪಾದನೆಗೂ ಯಾವ ಸಂಬಂಧವೂ ಇಲ್ಲ. ಮೇಲಾಗಿ ಒಂದು ಲಕ್ಷಕ್ಕೆ ಒಂದು ಕಾರ್ ಉತ್ಪಾದಿಸುವ ಕಾರ್ಖಾನೆ ಮೂಲಭೂತವಾಗಿ ಉತ್ಪಾದನಾವೆಚ್ಚವನ್ನು ನಿಗ್ರಹಿಸಲೇ ಬೇಕಾಗಿರುತ್ತದೆ ಮತ್ತು ಅಂಥಾ ಕಾರ್ಖಾನೆ ಕಾರ್ಮಿಕ ಕೇಂದ್ರಿತಕ್ಕಿಂತ ಹೆಚ್ಚಾಗಿ ಬಂಡವಾಳ ಮತ್ತು ತಂತ್ರಜ್ಞಾನ ಕೇಂದ್ರಿತವೇ ಆಗಿರುತ್ತದೆ ಎಂಬುದರಲ್ಲಿ ಆಶ್ಚರ್ಯವೇನೂ ಇಲ್ಲ. ಆಶ್ಚರ್ಯವಾಗುವುದು ಪಶ್ಚಿಮ ಬಂಗಾಳ ಅಂಥಾ ವಾದವನ್ನು ಮುಂದಿಟ್ಟಾಗ!

ಸರ್ಕಾರ ಹೇಳುವಂತೆ ಅದು ಬೀಳು ಭೂಮಿಯೂ ಆಗಿರಲಿಲ್ಲ. ಅಥವಾ ಒಂದು ಬೆಳೆ ಮಾತ್ರ ತೆಗೆಯುವ ಏಕ ಬೆಳೆ ಕೃಷಿ ಭೂಮಿಯೂ ಆಗಿರಲಿಲ್ಲ. ಸಿಂಗೂರಿನ ರೈತರು ಭತ್ತ, ಸೆಣಬಿನ ಜೊತೆಗೆ ಆಲೂ, ಹೂಕೋಸು, ಸೌತೆ, ಕುಂಬಳಕಾಯಿ, ಬದನೆ ಇನ್ನಿತ್ಯಾದಿ ತರಕಾರಿಗಳನ್ನು ಬೆಳೆಯುತ್ತಾ ಹೆಚ್ಚು ಸಂಕಟವಿಲ್ಲದೆ ಬದುಕುತ್ತಿದ್ದಾರೆ. ಆದರೆ ಆ ಜಮೀನನ್ನು ವಶಪಡಿಸಿಕೊಂಡು ಟಾಟಾಗಳಿಗೆ ಪರಭಾರೆ ಮಾಡಬೇಕೆಂಬ ಏಕೈಕ ಉದ್ದೇಶದಿಂದ ಎಡ ಸರ್ಕಾರ ಅದು ಪಾಳು ಭೂಮಿ ಎಂದು ಘೋಷಿಸಿತು. ವಾಸ್ತವವಾಗಿ ಸಿಂಗೂರಿನಲ್ಲೇ ಕೃಷಿಯೋಗ್ಯವಲ್ಲದ ಪಾಳು ಭೂಮಿ ಇದೆ. ಆದರೆ ಟಾಟಾದವರಿಗೆ ಅದರ ಮೇಲೆ ಆಸಕ್ತಿ ಇಲ್ಲ. ಏಕೆಂದರೆ ಅದನ್ನು ಅಭಿವೃದ್ಧಿ ಪಡಿಸಬೇಕಾದ ವೆಚ್ಚ ಹೆಚ್ಚುವರಿಯಾಗುತ್ತದಲ್ಲ.

ಸರ್ಕಾರ ಹೇಳುವಂತೆ ಅದು ಬೀಳು ಭೂಮಿಯೂ ಆಗಿರಲಿಲ್ಲ. ಅಥವಾ ಒಂದು ಬೆಳೆ ಮಾತ್ರ ತೆಗೆಯುವ ಏಕ ಬೆಳೆ ಕೃಷಿ ಭೂಮಿಯೂ ಆಗಿರಲಿಲ್ಲ. ಸಿಂಗೂರಿನ ರೈತರು ಭತ್ತ, ಸೆಣಬಿನ ಜೊತೆಗೆ ಆಲೂ, ಹೂಕೋಸು, ಸೌತೆ, ಕುಂಬಳಕಾಯಿ, ಬದನೆ ಇನ್ನಿತ್ಯಾದಿ ತರಕಾರಿಗಳನ್ನು ಬೆಳೆಯುತ್ತಾ ಹೆಚ್ಚು ಸಂಕಟವಿಲ್ಲದೆ ಬದುಕುತ್ತಿದ್ದಾರೆ. ಆದರೆ ಆ ಜಮೀನನ್ನು ವಶಪಡಿಸಿಕೊಂಡು ಟಾಟಾಗಳಿಗೆ ಪರಭಾರೆ ಮಾಡಬೇಕೆಂಬ ಏಕೈಕ ಉದ್ದೇಶದಿಂದ ಎಡ ಸರ್ಕಾರ ಅದು ಪಾಳು ಭೂಮಿ ಎಂದು ಘೋಷಿಸಿತು. ವಾಸ್ತವವಾಗಿ ಸಿಂಗೂರಿನಲ್ಲೇ ಕೃಷಿಯೋಗ್ಯವಲ್ಲದ ಪಾಳು ಭೂಮಿ ಇದೆ. ಆದರೆ ಟಾಟಾದವರಿಗೆ ಅದರ ಮೇಲೆ ಆಸಕ್ತಿ ಇಲ್ಲ. ಏಕೆಂದರೆ ಅದನ್ನು ಅಭಿವೃದ್ಧಿ ಪಡಿಸಬೇಕಾದ ವೆಚ್ಚ ಹೆಚ್ಚುವರಿಯಾಗುತ್ತದಲ್ಲ. ಇದಕ್ಕೆ ವೆಚ್ಚ ಮಾಡಿದರೆ ಲಾಭದ ದರ ಕಡಿಮೆಯಾಗುತ್ತದಲ್ಲ. ಎಡ ಸರ್ಕಾರ ಯಾವ ಕಾರಣದಿಂದಲೂ ಅವರ ಲಾಭದ ದರ ಕುಗ್ಗದಂತೆ ನೋಡಿಕೊಳ್ಳುವ ಆಶ್ವಾಸನೆ ಕೊಟ್ಟ ನಂತರವೇ ಟಾಟಾದವರು ಬಂಗಾಳಕ್ಕೆ ಬಂದದ್ದು.

ಈ ರೀತಿ ರೈತರ ಬದುಕನ್ನು ಬೀದಿ ಪಾಲು ಮಾಡಿ ಟಾಟಾದವರ ಖಜಾನೆ ತುಂಬಿಸುವ ಕಮ್ಯುನಿಸ್ಟ್ ಸರ್ಕಾರದ ಕುತಂತ್ರಗಳ ವಿರುದ್ಧ ಸಿಂಗೂರಿನ ರೈತರು ರಾಜಿ ಇಲ್ಲದ ಹೋರಾಟವನ್ನು ಪ್ರಾರಂಭಿಸಿದ್ದಾರೆ. ಸತತವಾಗಿ ರಾಸ್ತಾರೋಖೋ, ಬಂದ್, ಅಸಹಕಾರ ಚಳವಳಿ, ಇತ್ಯಾದಿಗಳನ್ನು ಸಮರಶೀಲವಾಗಿ ನಡೆಸುತ್ತಿದ್ದಾರೆ. ಚುನಾವಣಾ ಪಕ್ಷಗಳು ಇದರ ದುರ್ಲಾಭವನ್ನು ಪಡೆದುಕೊಳ್ಳಲು ಸತತವಾಗಿ ಪ್ರಯತ್ನಿಸುತ್ತಿರುವುದು ನಡೆಯುತ್ತಿದೆ. ಆದರೆ ಜನ ಯಾರ ಕುತಂತ್ರಗಳಿಗೂ ಬಗ್ಗದೆ ಹೋರಾಟ ನಡೆಸಿದ್ದಾರೆ. ಇದರ ಭಾಗವಾಗಿಯೇ ಮೊನ್ನೆ ಸೆಪ್ಟೆಂಬರ್ ೨೬ರಂದು ರೈತರು ನಡೆಸಿದ ಹೋರಾಟದ ಮೇಲೆ ಕಮ್ಯುನಿಸ್ಟ್ ಸರ್ಕಾರ ಅತ್ಯಂತ ಕ್ರೂರವಾಗಿ ಲಾಠಿ ಚಾರ್ಜ್ ನಡೆಸಿ ೭೨ ಅಮಾಯಕರನ್ನು ಜೈಲಿಗೆ ತಳ್ಳಿದೆ. ಇದರಲ್ಲಿ ಹದಿಹರೆಯದ ಹಲವರು ಸೇರಿದ್ದಾರೆ. ಅವರುಗಳ ಮೇಲೆ ಕೊಲೆ ಮತ್ತು ಅಕ್ರಮ ಶಸ್ತ್ರಾಸ್ತ್ರಗಳನ್ನು ಹೊಂದಿದ್ದರೆಂಬ ಸುಳ್ಳು ಕೇಸುಗಳನ್ನು ಹಾಕಲಾಗಿದೆ. ಹೀಗೆ ಹೋರಾಟದ ದಮನದಲ್ಲಿ ಅದರಲ್ಲೂ ದೊಡ್ಡ ಬಂಡವಾಳಶಾಹಿಗಳ ವಿರುದ್ಧ ಬಡಜನತೆ ನಡೆಸುವ ಹೋರಾಟಗಳನ್ನು ದಮನಿಸುವಲ್ಲಿ ಕಮ್ಯುನಿಸ್ಟ್ ಸರ್ಕಾರ ಯಾವುದೇ ಬಂಡವಾಳಶಾಹಿ ಪಕ್ಷಗಳಿಗೆ ಕಮ್ಮಿ ಏನಿಲ್ಲವೆಂದು ವರ್ತಿಸಿದೆ. ಇದರಲ್ಲಿ ರಾಜ್ ಕುಮಾರ್ ಭುಲ್ ಎಂಬ ೨೬ ವರ್ಷದ ಯುವಕ ಅಸುನೀಗಿ ಸಿಂಗೂರ್ ಹೋರಾಟದ ಮೊಟ್ಟಮೊದಲ ಹುತಾತ್ಮನೂ ಆಗಿದ್ದಾನೆ. ಸಿಂಗೂರಿನ ಇಬ್ಬರು ರೈತರು ಮೊನ್ನೆ ಆತ್ಮಹತ್ಯೆಗೂ ಶರಣಾಗಿದ್ದಾರೆ. ಇವೆಲ್ಲವೂ ಕಮ್ಯುನಿಸ್ಟ್ ಎಂದು ಹೇಳಿಕೊಳ್ಳುವವರ ಸಾಮ್ರಾಜ್ಯದಲ್ಲಿ ನಡೆಯುತ್ತಿರುವ ಸಂಗತಿಗಳೆ ಆಗಿವೆ.

ಅದೇರೀತಿ ನಂದಿಗ್ರಾಮದಲ್ಲಿ ಸಲಿಂ ಕಂಪನಿಗೆ ರಾಸಾಯನಿಕ ಕಾರ್ಖಾನೆ ಸ್ಥಾಪಿಸಲು ನಂದಿಗ್ರಾಮದಲ್ಲಿ ೪೦೦೦ ಎಕರೆ ಜಮೀನನ್ನು ವಿಶೇಷ ಆರ್ಥಿಕ ವಲಯದಡಿ ವಶಪಡಿಸಿಕೊಳ್ಳಲು ಇದೇ ಕಮುನಿಸ್ಟ್ ಸರ್ಕಾರ ಮುಂದಾಗಿದೆ. ಈ ಬಗೆಯ ಇನ್ನೂ ಹತ್ತು ಯೋಜನೆಗಳು ಪಶ್ಚಿಮ ಬಂಗಾಳಾದ್ಯಂತ ಬರುವ ಯೋಜನೆಗೆ ಮುಖ್ಯಮಂತ್ರಿ ಬುದ್ಧದೇವರು ಸಹಿ ಹಾಕಿದ್ದಾರೆ. ಆದರೆ ಇದೇ ಕಮ್ಯುನಿಸ್ಟ್ ಪಕ್ಷಗಳೇ ದೇಶಾದ್ಯಂತ ಬರುತ್ತಿರುವ ವಿಶೇಷ ಆರ್ಥಿಕ ಯೋಜನೆಗಳನ್ನು ಮರು ವಸಾಹತೀ

ಕರಣ ಯೋಜನೆಗಳೆಂದು ಕರೆದು ಪ್ರತಿಭಟಿಸುತ್ತಾರೆ. ಆದರೆ ತಮ್ಮದೇ ಸರ್ಕಾರವಿರುವ ರಾಜ್ಯದಲ್ಲಿ ಅದನ್ನು ಚಾಚೂ ತಪ್ಪದೆ ಅನುಸರಿಸುತ್ತಾ ಅದನ್ನು ವಿರೋಧಿಸುವವರೇ ಅಭಿವೃದ್ಧಿ ವಿರೋಧಿಗಳು ಮತ್ತು ಸಮಾಜವಾದದ ವಿರೋಧಿಗಳೆಂಬಂತೆ ಚಿತ್ರಿಸುತ್ತಿದ್ದಾರೆ.

ಇವುಗಳ ಪರಿಣಾಮದಿಂದ ಸಿಂಗೂರಿನ ನೋವು ಆರುವ ಮುನ್ನವೇ ಪಶ್ಚಿಮ ಬಂಗಾಳದ ನಂದಿಗ್ರಾಮದಲ್ಲಿ ರೈತರ ಆಕ್ರೋಶ ಸ್ಫೋಟಗೊಂಡಿದೆ. ಈ ಆಕ್ರೋಶದ ದಾವಾನಲದಲ್ಲಿ ಹನ್ನೊಂದು ಜನರು ಬಲಿಯಾಗಿದ್ದಾರೆ. ಮತ್ತೆ ಪಶ್ಚಿಮ ಬಂಗಾಳದ ಪೋಲಿಸರು ನಡೆಸಿದ ನರಮೇಧದಲ್ಲಿ ಐವತ್ತಕ್ಕೂ ಹೆಚ್ಚು ರೈತರನ್ನು ಕೊಲ್ಲಲಾಗಿದೆ. ಹಲವಾರು ಹೆಣ್ಣು ಮಕ್ಕಳು ಬಲಾತ್ಕಾರಕ್ಕೊಳಗಾದ ವರದಿಗಳು ಬಯಲಾಗುತ್ತಿವೆ. ವಿಪರ್ಯಾಸದ ಸಂಗತಿಯೆಂದರೆ ಪಶ್ಚಿಮ ಬಂಗಾಳದ ಕಮ್ಯುನಿಸ್ಟ್ ಸರ್ಕಾರ ಸಿಂಗೂರಿನ ಅಶಾಂತಿಯ ಕಾರಣವನ್ನು ವಿರೋಧ ಪಕ್ಷದ ಮೇಲೆ ಅಥವಾ ನಕ್ಸಲೈಟರ ಮೇಲೆ ಹಾಕುವ ವಿಫಲ ಪ್ರಯತ್ನ ನಡೆಸಿತ್ತು. ಆದರೆ ನಂದಿಗ್ರಾಮದಲ್ಲಿ ಯಾರನ್ನಾದರೂ ದೂರಬೇಕೆಂದರೆ ಅವರು ತಮ್ಮ ಪಕ್ಷವನ್ನೇ ದೂರಬೇಕು. ಏಕೆಂದರೆ ನಂದಿಗ್ರಾಮದಲ್ಲಿ ವಿಶೇಷ ಆರ್ಥಿಕ ವಲಯಕ್ಕೆಂದು ಜಮೀನು ವಶಪಡಿಸಿಕೊಳ್ಳಲು ಬಂದವರು ಸಿಪಿಎಂ ಪಕ್ಷದ ಗೂಂಡಾಗಳಾದರೆ ಅದನ್ನು ವಿರೋಧಿಸಿದವರು ಸಿಪಿಎಂ ಪಕ್ಷಕ್ಕೆ ಮತ್ತವರ ಮಿತ್ರ ಪಕ್ಷಕ್ಕೆ ಸೇರಿದ ರೈತ ಸಮುದಾಯವೇ ಆಗಿತ್ತು.

ಇದಲ್ಲದೆ ಸಿಂಗೂರಿನಲ್ಲಿ ಮಾತ್ರವಲ್ಲದೆ ಇಡೀ ಪಶ್ಚಿಮ ಬಂಗಾಳದ ಬಗ್ಗೆ ಎಡರಂಗ ಮುಂದಿಡುತ್ತಿರುವ ಮತ್ತೊಂದು ವಾದವಿದೆ. ಎಡರಂಗದ ಭೂಸುಧಾರಣೆ ಯೋಜನೆಯಿಂದ ಅಲ್ಲಿ ಕೃಷಿ ಸಾಕಷ್ಟು ಪ್ರಗತಿ ಕಂಡಿದೆ. ಇನ್ನು ಅಲ್ಲಿ ಕೃಷಿ ಅಭಿವೃದ್ಧಿ ಸಾಧ್ಯವಿಲ್ಲ. ನಿರುದ್ಯೋಗವೂ ಹೆಚ್ಚುತ್ತಿದೆ. ರಾಜ್ಯ ಕೈಗಾರಿಕೆಯಲ್ಲಿ ಅಭಿವೃದ್ಧಿಯಾಗದೆ ಪ್ರಗತಿಯೂ ಆಗುವುದಿಲ್ಲ ಮತ್ತು ನಿರುದ್ಯೋಗವೂ ತೀರುವುದಿಲ್ಲ. ಮೇಲಾಗಿ ಕಮ್ಯುನಿಸ್ಟ್ ಸರ್ಕಾರವಿದ್ದರೂ ಪಶ್ಚಿಮ ಬಂಗಾಳ ಒಂದು ಭೂಮಾಲಿಕ ಮತ್ತು ಗುತ್ತೇದಾರಿ ಬಂಡವಾಳಶಾಹಿ ಭಾರತದ ಭಾಗವಾಗಿರುವುದರಿಂದ ಅಲ್ಲಿ ಕಮುನಿಸ್ಟ್ ಸರ್ಕಾರವಿದ್ದರೂ ಕಟ್ಟುತ್ತಿರುವುದು ಬಂಡವಾಳಶಾಹಿಯನ್ನೇ. ಅದು ಈ ಕಾಲಘಟ್ಟದಲ್ಲಿ ಕಾರ್ಮಿಕವರ್ಗಕ್ಕೆ ಅನುಕೂಲಕಾರಿಯಾದದ್ದೇ. ಲೆನಿನ್ ಸಹಾ ಕ್ರಾಂತಿಯ ಪೂರ್ವದಲ್ಲಿ ಮತ್ತು ನಂತರದಲ್ಲಿ ಬಂಡವಾಳಶಾಹಿಯೊಂದಿಗೆ ರಾಜಿ ಮಾಡಿಕೊಂಡಿದ್ದರು. ಕಾರ್ಮಿಕ ವರ್ಗ ದುರ್ಬಲವಾಗಿದ್ದಾಗ ಇದು ಅನಿವಾರ್ಯ. ಇವಿಷ್ಟು ಸಿಂಗೂ ರಿಗೆ ನೀಡಲಾಗುತ್ತಿರುವ ಸೈದ್ಧಾಂತಿಕ ಸಮರ್ಥನೆಗಳು.

ಒಂದು ರೀತಿಯಲ್ಲಿ ವಿಶ್ವದಾದ್ಯಂತ ಆವರಿಸಿರುವ ಮತ್ತು ಸಾಮ್ರಾಜ್ಯಶಾಹಿಗಳೆ ಹರಿಬಿಟ್ಟಿರುವ There Is No Alternative (TINA)–ಬೇರೆ ಪರ್ಯಾಯವಿಲ್ಲ ಎಂಬ ಹತಾಶ ವಾದದ ಮುಂದುವರಕೆಯೆತಿರುವ ಈ ವಾದಗಳನ್ನು ಪ್ರಜ್ಞಾವಂತ ವಲಯ ಸ್ವಲ್ಪ ಗಂಭೀರವಾಗಿಯೇ ಸಿಂಗೂರಿನ ಸಂದರ್ಭದಲ್ಲಿಟ್ಟೇ ವಿಶ್ಲೇಷಿಸುವ ಅಗತ್ಯವಿದೆ.

ಎಡರಂಗದ ಸಮ್ಮತಿಯೊಂದಿಗೆ ಪಶ್ಚಿಮ ಬಂಗಾಳಕ್ಕೆ ಬರುತ್ತಿರುವ SEZ ಗಳು

ಎಲ್ಲಕ್ಕಿಂತ ಹೆಚ್ಚಾಗಿ ಸರ್ಕಾರ ಮತ್ತು ಅದನ್ನು ನಡೆಸುತ್ತಿರುವವರು ಹೇಳುತ್ತಿರುವವರು ಮತ್ತೊಂದು ಹಸಿಸುಳ್ಳೆಂದರೆ ತಮ್ಮ ಸರ್ಕಾರ SEZ ವಿರೋಧಿಸುತ್ತದೆ ಎಂಬುದು. ಸಿಂಗೂರು ಶಿರ್ಷಿಕೆಯಿಲ್ಲದ SEZ ಆಗಿರಬಹುದು. ಆದರೆ ನಂದಿಗ್ರಾಮವೇನು? ಅಲ್ಲಿ ಇಂಡೋನೇಷಿಯಾದ ಸಲಿಂ ಗ್ರೂಪ್ ಆಫ್ ಕಂಪನಿಗೆ New Kolkatta Internationala Dvelopment Private limited ಎಂಬ ಹೆಸರಲ್ಲಿ ರಾಸಾಯನಿಕ ಕಾರ್ಖಾನೆಗೆಂದು ೪೦೦೦ ಎಕರೆ ಜಮೀನು ನೀಡಿರುವುದು SEZ ಗಾಗಿಯೇ ಅಲ್ಲವೇ? ಅದೇರೀತಿ ಇದೇ ಕಂಪನಿಗೆ ಹಾಲ್ದಿಯಾ ಬಳಿ ಮತ್ತೆ ೫೦೦೦ ಎಕರೆಯನ್ನು SEZ ಗೆಂದೇ ನೀಡಲಾಗುತ್ತಿದೆ. ಅದೇರೀತಿ Vedeocaon Realties and Infrastructures Limited ಎಂಬ ಕಂಪನಿಗೆ ಉತ್ತರ ೨೪ ಪರಗಣ ಜಿಲ್ಲೆಯಲ್ಲಿ ೧೦೮೦ ಎಕರೆಯನ್ನೂ, ಕರಗ್‌ಪುರ್‌ದಲ್ಲಿ ೧೦೦೦ ಎಕರೆಯನ್ನೂ ನೀಡಲಾಗಿದೆ. Ramky Infrastructures Limited Ramky Infrastructures Limited ಹಾಲ್ದಿಯಾ ಬಳಿ ೧೦೧೨ ಎಕರೆ ಜಮೀನನ್ನೂ Gremech Infrastructures Limited ಎಂಬ ಕಂಪನಿಗೆ ಧೀಫಾ ಪೋರ್ಟ್ ಬಳಿ ೧೦೧೨ ಎಕರೆಯನ್ನೂ ನೀಡಲಾಗಿದೆ. ಇವೆಲ್ಲವೂ SEZ ಗಳೇ ಆಗಿದ್ದು ಇವೆಲ್ಲಕೂ ರಾಜ್ಯ ಸರ್ಕಾರದ ಸಮ್ಮತಿಯ ಮೇರೆಗೆ ಕೇಂದ್ರ ಸರ್ಕಾರ ವಿಶೇಷ ಆರ್ಥಿಕ ವಲಯದ ಎಲ್ಲಾ ರಿಯಾಯತಿಗಳನ್ನೂ ಘೋಷಿಸಿದೆ. ಹೀಗಾಗಿ ಸಿಂಗೂರ್ ವಿಶೇಷ ಆರ್ಥಿಕ ವಲಯವಾಗಿದ್ದರೆ ನಾವು ವಿರೋಧಿಸುತ್ತಿದ್ದೆವು ಎಂಬ ವಾದದಲ್ಲಿ ಏನೂ ಹುರುಳಿಲ್ಲ. ಆದರೆ ಉಳಿಯುವ ಪ್ರಶ್ನೆ ಒಂದೇ ಶೋಷಕ ವರ್ಗದ ಪಕ್ಷಗಳಂತೆ ಸುಳ್ಳುಗಳನ್ನೇಕೆ ಹೇಳಬೇಕು? ಮತ್ತು ಉಳಿದ ಕಡೆ ಮಾಡುವ ತರ್ಕಗಳನ್ನು ಪಶ್ಚಿಮ ಬಂಗಾಳದ ಗಡಿಯೊಳಗೆ ಬಂದ ತಕ್ಷಣ ಏಕೆ ನಿಲ್ಲಿಸಬೇಕು?

ಪಶ್ಚಿಮ ಬಂಗಾಳದ ಅಭಿವೃದ್ಧಿ ಈ ಬಗೆಯ ಕೈಗಾರೀಕರಣದಿಂದ ಸಾಧ್ಯವೇ?

ಈಗ ಉಳಿಯುವ ಶೇಷಪ್ರಶ್ನೆ ಇಷ್ಟೇ. ಎಡರಂಗ ಸರ್ಕಾರದ ಪ್ರಕಾರ ಕೃಷಿಯಿಂದ ಇನ್ನು ಪಶ್ಚಿಮ ಬಂಗಾಳದ ಅಭಿವೃದ್ಧಿ ಸಾಧ್ಯವಿಲ್ಲ. ಆದ್ದರಿಂದ ಕೈಗಾರೀಕರಣದಿಂದ ಮಾತ್ರ ಪಶ್ಚಿಮ ಬಂಗಾಳ ಇತರ ರಾಜ್ಯಗಳಂತೆ ಅಭಿವೃದ್ಧಿ ಹೊಂದಲು ಸಾಧ್ಯ. ಅದಕ್ಕೆ ಬಂಡವಾಳ ಬೇಕು. ಅದನ್ನು ಪಡೆಯಲು ಇವೆಲ್ಲಾ ಕಸರತ್ತುಗಳನ್ನು ಮಾಡಲೇ ಬೇಕು. ಆದರೆ ಪ್ರಶ್ನೆ ಈ ಬಗೆಯ ಕೈಗಾರೀಕರಣದಿಂದ ಪಶ್ಚಿಮ ಬಂಗಾಳ ಅಭಿವೃದ್ಧಿ ಹೊಂದಲು ಸಾಧ್ಯವೇ? ಅದನ್ನು ಅಭಿವೃದ್ಧಿ ಎಂದು ಕರೆಯಲು ಸಾಧ್ಯವೇ? ಈ ಮಾದರಿ ಅಭಿವೃದ್ಧಿಗೂ "ಭಾರತ ಪ್ರಕಾಶಿಸುತ್ತಿದೆ" ಎಂದು ಬಿಜೆಪಿಗಳು ಮತ್ತು ಕಾಂಗ್ರೆಸ್ಸಿಗರು ಹೇಳುವ ಅಭಿವೃದ್ಧಿ ಮಾದರಿಗೂ ಏನು ವ್ಯತ್ಯಾಸ? ಮೇಲೆ ಪಟ್ಟಿ ಮಾಡಲಾದ ಅವೆಲ್ಲಾ ಆರ್ಥಿಕ ವಲಯಗಳು ಸೃಷ್ಟಿಸಲಿರುವುದು ದೊಡ್ಡ ದೊಡ್ಡ ಶಾಪಿಂಗ್ ಮಾಲ್‌ಗಳನ್ನು, ಎಕ್ಸ್‌ಪ್ರೆಸ್ ಹೈವೇಗಳನ್ನು, ಕುಬೇರರ ಟೌನ್‌ಶಿಪ್‌ಗಳನ್ನು. ಇದು ಅಭಿವೃದ್ಧಿಯೆನ್ನುವುದಾದರೆ ಕಾಂಗ್ರೆಸ್ ಅಥವಾ ಬಿಜೆಪಿಯನ್ನೇ ಅಧಿಕಾರದಲ್ಲಿರಲು ಬಿಟ್ಟರೆ ಸಾಕು. ಭಾರತ ಪ್ರಕಾಶಿಸುತ್ತದೆ..! ಈ ಅಭಿವೃದ್ಧಿ ಮಾದರಿಯಿಂದ ಪಶ್ಚಿಮ ಬಂಗಾಳದ ಮೇಲೆ ಮಧ್ಯಮವರ್ಗದ ಕನಸು ಈಡೇರಬಹುದು. ಪಶ್ಚಿಮ ಬಂಗಾಳ ದೇಶಿ ಮತ್ತು ವಿದೇಶಿ ಬಂಡವಾಳದ ಆಕರ್ಷಣೆಯ ಕೇಂದ್ರವೂ ಆಗಬಹುದು. ಆದರೆ ನಿರುದ್ಯೋಗ ನಿವಾರಣೆಯಾಗುವುದೇ? ಇತ್ತೀಚಿನ ಚುನಾವಣೆಯಲ್ಲಿ ಎಡರಂಗ ಭರ್ಜರಿ ಜಯ ಸಾಧಿಸಿದ ಮೇಲೆ ಎಡರಂಗದ ಪ್ರಮುಖ ಚಿಂತಕ ಪ್ರಭಾತ್ ಪಟ್ನಾಯಕ್ ಇದೇ ಎಚ್ಚರಿಕೆ ನೀಡುತ್ತಾ ಹೀಗೆ ಬರೆದಿದ್ದರು "ಈ ನವ ಉದಾರವಾದಿ ಯುಗದಲ್ಲಿ ಅತ್ಯಂತ ಲಾಭ ಪಡೆದವರು ಮೇಲ್ ಮಧ್ಯಮವರ್ಗದವರೇ. ಅವರೂ ಎಡರಂಗ ಸರ್ಕಾರವನ್ನು ಬೆಂಬಲಿಸುತ್ತಿರುವುದನ್ನು ಈ ಚುನಾವಣೆಯ ಫಲಿತಾಂಶ ಸೂಚಿಸುತ್ತದೆ. ಆದರೆ ಅದು ಒಂದು ವೈರುದ್ಯವನ್ನೂ ಹುಟ್ಟಿಹಾಕುತ್ತದೆ. ಅವರ ಆಶಯಗಳನ್ನು ಈಡೇರಿಸುವುದರಿಂದ ಸಣ್ಣಪುಟ್ಟ ವ್ಯಾಪಾರಿಗಳು, ರೈತಾಪಿ ಮತ್ತು ಗ್ರಾಮೀಣ ಬಡವರ ಹಿತಾಸಕ್ತಿಗೆ ಹಾನಿಯುಂಟು ಮಾಡುತ್ತದೆ. ಶಾಪಿಂಗ್‌ಮಾಲ್‌ಗಳುಬೇಕೆಂಬ ಅವರ ಬೇಡಿಕೆ ಸಣ್ಣಪುಟ್ಟ ವ್ಯಾಪಾರಿಗಳನ್ನು ಹಾಳುಗೆಡುವುತ್ತದೆ. ಹೆಚ್ಚುತ್ತಿರುವ ಕಾರುಗಳು ಮತ್ತು ಅವರ ಸೌಲಭ್ಯಗಳ ದೃಷ್ಟಿಯಿಂದ ಅವರು ಕೇಳುವ ಎಕ್ಸ್‌ಪ್ರೆಸ್ ಹೈವೇಗಳು ರೈತ ಜಮೀನನ್ನು ಹಾಳುಗೆಡೆವುತ್ತವೆ. ಅದೇರೀತಿ ಅವರು ಕೇಳುವ ಟೌನ್ ಶಿಪ್‌ಗಳು ರೈತರನ್ನು ಒಕ್ಕಲೆಬ್ಬಿಸಬಹುದು. ಪಶ್ಚಿಮ ಬಂಗಾಳದಂತ ಅತಿ ಹೆಚ್ಚಿನ ಜನಸಾಂದ್ರತೆ ಹೊಂದಿದ ರಾಜ್ಯದಲ್ಲಿ "ಭೂಮಿಗೆ ಬದಲಾಗಿ ಭೂಮಿಯನ್ನು" ಕೊಡಲಾಗುವುದಿಲ್ಲ ಹಾಗೂ "ಭೂಮಿಗೆ ಬದಲಾಗಿ ಹಣವನ್ನು" ಕೊಡುವುದು ಆಹಾರ ಉತ್ಪಾದನೆ

ಮತ್ತು ಉದ್ಯೋಗಗಳ ಮೇಲ್ಕೆ ತೀವ್ರ ಒರಭಾವವನ್ನು ಬೀರುವುದಲ್ಲದೆ ಅದು ಸೂಕ್ತ ಪರ್ಯಾಯವೂ ಆಗುವು ದಿಲ್ಲ." ಅವರದೇ ಮತ್ತೊಂದು ಬರಹದಲ್ಲಿ ಅವರು ಕಾರ್ಮಿಕ ವರ್ಗದ ಸರ್ಕಾರ ಅನಿವಾರ್ಯ ಕಾರಣದಿಂದ ಬಂಡವಾಳಶಾಹಿ ಚೌಕಟ್ಟಿನೊಳಗಡೆ ಅಧಿಕಾರಕ್ಕೆ ಬಂದು ಬಂಡವಾಳಶಾಹಿಯನ್ನೇ ಕಟ್ಟಬೇಕಾಗಿ ಬಂದರೂ ಅದು ಬಂಡವಾಳಶಾಹಿ ಕಟ್ಟುವ ಬಂಡವಾಳಶಾಹಿಗಿಂತ ಭಿನ್ನವಾ ಗಿಲ್ಲದ್ದರೇ ಪ್ರಯೋಜನವಿಲ್ಲವೆಂದು ಎಚ್ಚರಿಸಿದ್ದಾರೆ.

ನವ ಉದಾರವಾದ ಮತ್ತು ಮೂರನೇ ಜಗತ್ತಿನ ಕೈಗಾರೀಕರಣ:

ಸಿಂಗೂರಾಗಲೀ, ನಂದಿಗ್ರಾಮದಲ್ಲಾಗಲೀ ಅಭಿವ್ಯಕ್ತ ಗೊಳ್ಳುತ್ತಿರುವುದು ಪ್ರಸ್ತುತ ಜಾಗತಿಕ ಬಂಡವಾಳದ ಅತಿ ಪ್ರತಿಗಾಮಿ ಮತ್ತು ಆಕ್ರಮಣಶೀಲ ಘಟ್ಟದ ಚಹರೆಯೇ ಆಗಿದೆ. ಈ ಚೌಕಟ್ಟನೊಳಗೆ ಕಟ್ಟಲ್ಪಡುವುದು ಬಂಡವಾಳ ಶಾಹಿಯಲ್ಲ. ಬದಲಿಗೆ ಹಣಕಾಸು ಬಂಡವಾಳದ ಅತಿ ನಗ್ನ ಮತ್ತು ದುರಾಕ್ರಮಣಕೋರ ಅತ್ಯಂತ ಪರಾವಲಂಬಿ ಮುಖವಾದ ಫ್ಯಾಸಿಸಮ್ಮನ್ನು. ಆದ್ದರಿಂದ ಕಾರ್ಮಿಕ ವರ್ಗ ದುರ್ಬಲವಾಗಿದ್ದಾಗ ಬಂಡವಾಳದೊಂದಿಗೆ ರಾಜಿಯಾಗು ವುದು ಅನಿವಾರ್ಯ ಎಂಬ ತರ್ಕ ಅನ್ವಯಿಸುವುದು ರಾಜ ಕೀಯ ಮುಠಾಳತನವಾಗುತ್ತದೆ.

ನವ ಉದಾರವಾದದ ಜಾಗತಿಕ ವ್ಯವಸ್ಥೆಯೊಳಗೆ ಭಾರತದ ಆರ್ಥಿಕತೆಯೂ ಬೆಸೆಯಲ್ಪಟ್ಟಿದೆ. ಅದೇ ವ್ಯವಸ್ಥೆ ಯೊಳಗೆ ಬಂಗಾಳದ ಆರ್ಥಿಕತೆಯೂ ಬೆಸೆಯಲ್ಪಡುತ್ತಿದೆ. ನವ ಉದಾರವಾದ ಕಾಲಘಟ್ಟವೇ ಜಾಗತಿಕ ಬಂಡವಾಳದ ಅತ್ಯಂತಿಕ ಬಿಕ್ಕಟ್ಟನ್ನು ಸೂಚಿಸುತ್ತದೆ. ಅದರಿಂದ ಹೊರ ಬರಲೆಂದೇ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣ ನೀತಿಗಳನ್ನು ಜಾಗತಿಕ ಬಂಡವಾಳ ಭಾರ ತದಂಥ ಮೂರನೇ ಜಗತ್ತಿನ ಮೇಲೆ ಹರಿ ಬಿಟ್ಟಿವೆ. ಅತ್ಯಂತ ಲಾಭಭಕ್ಷಕ ಸ್ವರೂಪದ ಈ ಬಂಡವಾಳ ಹುಟ್ಟು ಹಾಕುವ ಕೈಗಾರೀಕರಣ ಇದ್ದ ಲಕ್ಷ ಉದ್ಯೋಗಗಳನ್ನು ಕಿತ್ತುಕೊಂಡು ತನಗೆ ಬೇಕಾದ ಸಾವಿರ ದೀನ ಉದ್ಯೋ ಗಗಳನ್ನು ಸೃಷ್ಟಿಸುತ್ತದೆ. ದೇಶಿ ಸಂಪನ್ಮೂಲವನ್ನು ಆಧರಿಸಿ ಕಟ್ಟಬಹುದಾಗಿದ್ದ ದೇಶಿ ಬಂಡವಾಳವನ್ನು ನಿರ್ನಾಮ ಮಾಡಿ ಎಲ್ಲಾ ಸಂಪನ್ಮೂಲಗಳನ್ನು ತನ್ನ ಅಧೀನಕ್ಕೆ ತೆಗೆದು ಕೊಳ್ಳುತ್ತದೆ.

ಒಟ್ಟಾರೆಯಾಗಿ ಸಿಂಗೂರ್ ಮಾದರಿಯ ನಂದಿ ಗ್ರಾಮ ಮಾದರಿಯ ಎಸ್.ಇಜೆಡ್ ಮಾದರಿಯ ಅಭಿವೃದ್ಧಿ ಮಾದರಿಯನ್ನು ಕ್ಲಾಸಿಕಲ್ ಬಗೆಯ ಒಂದು ಬಂಡ ವಾಳಶಾಹಿ ಅಭಿವೃದ್ಧಿ ಮಾದರಿ ಎಂದು ಪರಿಗಣಿಸುವುದೇ ತಪ್ಪು ರಾಜಕೀಯ. ಹೀಗಾಗಿ ಈ ಕಾಲಘಟ್ಟದ ಈ ನರ ಭಕ್ಷಕ ಸಾಮ್ರಾಜ್ಯವಾದಿ ನವ ಉದಾರವಾದದ ಕಾಲಘಟ್ಟ ವನ್ನು, ಸಮಾಜದ ಅಭಿವೃದ್ಧಿಗೆ ಪೂರಕವಾಗಿ ಉತ್ಪಾದಕ ಶಕ್ತಿಗಳನ್ನು ಬೆಳೆಸಬೇಕೆಂದು ಲೆನಿನ್, ಮಾವೋ ಮಾಡಿ ಕೊಂಡ ಹೊಂದಾಣಿಕೆಯೊಂದಿಗೆ ಹೋಲಿಸುವುದು ಚರಿ ತ್ರೆಯ ವಿಕೃತಿ ಮಾತ್ರವಲ್ಲ ವಿತಂಡವಾದ ಮತ್ತು ಮಾರ್ಕ್ಸ್ ವಾದದ ತಿರಿಚುವಿಕೆ ಕೂಡಾ.

ನವ ಸಾಮ್ರಾಜ್ಯವಾದದಡಿ ಮೂರನೇ ಜಗತ್ತಿನ ಪ್ರಭುತ್ವಕ್ಕಿರುವ ಸ್ವಾತಂತ್ರ್ಯವೆಷ್ಟು?

ಇದು ನಮ್ಮ ಕೊನೆಯ ಪ್ರಶ್ನೆಯೆಡೆ ಕೊಂಡೊ ಯ್ಯುತ್ತದೆ. ಎಡರಂಗವಿರಬಹುದು, ಕಾಂಗ್ರೆಸ್, ಬಿಜೆಪಿಗಳಿರ ಬಹುದು–ಯಾವುದೇ ಸರ್ಕಾರವಿದ್ದರೂ ಈ ನವ ಸಾಮ್ರಾ ಜ್ಯಶಾಹಿ ಜಾಗತಿಕ ವ್ಯವಸ್ಥೆಯಡಿ ಎಷ್ಟು ಸ್ವಾತಂತ್ರ್ಯವನ್ನು

> **ಸಿಂಗೂರಾಗಲೀ, ನಂದಿಗ್ರಾಮದಲ್ಲಾಗಲೀ ಅಭಿವ್ಯಕ್ತ ಗೊಳ್ಳುತ್ತಿರುವುದು ಪ್ರಸ್ತುತ ಜಾಗ ತಿಕ ಬಂಡವಾಳದ ಅತಿ ಪ್ರತಿಗಾಮಿ ಆಕ್ರ ಮಣಶೀಲ ಘಟ್ಟದ ಚಹರೆಯೇ ಆಗಿದೆ. ಈ ಚೌಕಟ್ಟನೊಳಗೆ ಕಟ್ಟಲ್ಪಡುವುದು ಬಂಡವಾಳ ಶಾಹಿಯಲ್ಲ. ಬದಲಿಗೆ ಹಣಕಾಸು ಬಂಡವಾಳದ ಅತಿ ನಗ್ನ ದುರಾಕ್ರಮಣಕೋರ ಫ್ಯಾಸಿಸಮ್ಮನ್ನು.**

ಪಡೆದಿವೆ ಎಂಬುದು? ಹಾಗಿದ್ದಲ್ಲಿ ಪರ್ಯಾಯವೇನು ಎಂಬುದು?. (ಕಾಂಗ್ರೆಸ್ ಮತ್ತು ಬಿಜೆಪಿಗಳಿಗೆ ಯಾವುದೇ ಬಗೆಯ ಸ್ವಾತಂತ್ರ್ಯಾಪೇಕ್ಷೆಯೂ ಇಲ್ಲ. ಆದರೆ ಎಡ ರಂಗಕ್ಕೆ ಈ ವ್ಯವಸ್ಥೆಯೊಳಗಡೆ ಸ್ವಲ್ಪವಾದರೂ ಜನಪರ ಕೆಲಸ ಮಾಡಬೇಕೆಂಬ ಹಿತಾಸಕ್ತಿ ಇರುತ್ತದೆ ಎಂಬ ವ್ಯತ್ಯಾ ಸವನ್ನು ಗಣನೆಗೆ ತೆಗೆದುಕೊಂಡರೂ ಈ ಪ್ರಶ್ನೆ ಇರು ತ್ತದೆ.)

ಸಿಂಗೂರು ಮತ್ತು ನಂದಿಗ್ರಾಮಗಳು ಮತ್ತು ಇತ ರೆಡೆ ಬರುತ್ತಿರುವ ಎಸ್.ಇಜೆಡ್‌ಗಳು ಸ್ಪಷ್ಟವಾಗಿ ಸೂಚಿಸು ವಂತೆ ನವ ಉದಾರವಾದಿ ಚೌಕಟ್ಟಿನಲ್ಲಿ ಪಶ್ಚಿಮ ಬಂಗಾಳ ಸರ್ಕಾರಕ್ಕೆ ಆ ರೀತಿಯ ಯಾವ ಬಗೆಯ ಸ್ವಾತಂತ್ರ್ಯವೂ ಇಲ್ಲ. ಇತರ ಸರ್ಕಾರಗಳಂತೆ ಅದು ಸಹಾ ೧೮೯೪ರ ಭೂಸ್ವಾಧೀನ ಕಾಯಿದೆಯೆಂಬ ವಸಾಹತುಶಾಹಿ ಕಾನೂ ನನು ಬಳಸಿಯೇ ರೈತರ ಜಮೀನನ್ನು ವಶಪಡಿಸಿಕೊಳ್ಳು ತ್ತಿದೆ. ಎಸ್.ಇಜೆಡ್‌ಗಳಲ್ಲಿ ನೀಡಲಾಗುವ ಎಲ್ಲ ಆಮಿಷ ಗಳನ್ನು ಬಂಡವಾಳದಾರರಿಗೆ ನೀಡುತ್ತಿದೆ. ಆದ್ದರಿಂದಲೇ CII ನ ಅಧ್ಯಕ್ಷ ಶೇಷಶಾಯಿ ಒಂದು ಸಂದರ್ಶನದಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯನ್ನು ಇತರ ಎಲ್ಲಾ ಮುಖ್ಯಮಂತ್ರಿಗಳಿಗಿಂತಾ ಹೆಚ್ಚು ಬಂಡವಾಳ ಸ್ನೇಹಿ ಎಂದು ಹೊಗಳಿದರು. ನಾರಾಯಣಮೂರ್ತಿ ಇಡಿ ಭಾರ ತದಲ್ಲೇ ಪಶ್ಚಿಮ ಬಂಗಾಳ ಸರ್ಕಾರ ಮಾದರಿ ಸರ್ಕಾರ ಎಂದರು.

ಹೀಗಾಗಿ ಇರುವ ವ್ಯವಸ್ಥೆಯನ್ನು ಜನಪರವಾಗಿ ದುಡಿಸಿಕೊಳ್ಳಲು ಇದ್ದ ವ್ಯಾಪ್ತಿ ಕುಗ್ಗುತ್ತಾ ಇದೆ. ಬೂರ್ಜ್ವ ಪ್ರಜಾಪ್ರಭುತ್ವವೂ ತನ್ನ ಮುಖ ಕಳಚಿಕೊಳ್ಳುತ್ತಾ ಫ್ಯಾಸಿಸ್ಟ್ ಆಗುತ್ತಿದೆ. ಏಕೆಂದರೆ ಆರ್ಥಿಕತೆಯಲ್ಲಿ ಅತ್ಯಂತ ಪ್ರತಿಗಾಮಿ ಜಾಗತಿಕ ಹಣಕಾಸು ಬಂಡವಾಳ ಆರ್ಥಿಕತೆಯನ್ನು ವಸಾ ಹತೀಕರಿಸಿವೆ. ಅವಕಾಶವಿದ್ದರೆ ಎಡಪಕ್ಷಗಳು ಜನಪರ ಕಾರ್ಯಕ್ರಮ ಕೊಡುತ್ತಿದ್ದವು ಎಂದುಕೊಂಡರೂ ಪರ್ಯಾಯ ಜನಪರ ನೀತಿಗಳ ಮೂಲಕ ಜನರನ್ನು ಕಮ್ಯುನಿಸ್ಟ್ ಪಕ್ಷಗಳೆಡೆ ಆಕರ್ಷಿಸುವ ಅವಕಾಶವನ್ನೇ ನವ ಸಾಮ್ರಾಜ್ಯವಾದಿ ಜಾಗತಿಕ ವ್ಯವಸ್ಥೆ ನಿರಾಕರಿಸುತಿದೆ. ಸಿಂಗೂರ್ ಮತ್ತು ನಂದಿಗ್ರಾಮ ಅದರ ಅಭಿವ್ಯಕ್ತಿ ಅಷ್ಟೆ.

ಸಮಾಜ ಬದಲಾವಣೆಗೆ ಹಾಗೂ ಕ್ರಾಂತಿಗೆ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ಒಂದು ಕಾರ್ಯ ತಂತ್ರವನ್ನಾಗಿ ಉಪಯೋಗಿಸಿಕೊಳ್ಳಬಹುದೆಂದು ಪ್ರಪಂಚಾ ದ್ಯಂತ ಹಲವಾರು ಕಮ್ಯುನಿಸ್ಟ್ ಪಕ್ಷಗಳು ಪ್ರಯತ್ನಿಸುತ್ತಿವೆ. ಪ್ರಾರಂಭದಲ್ಲಿ ಲೆನಿನ್ ಮಾಡಿದಂತೆ ಸಂಸತ್ತಿನ ನಿರುಪಯು ಕ್ತತೆಯನ್ನು ಸಾಬೀತು ಮಾಡಲು ಸಂಸತ್ ಪ್ರವೇಶ ಒಂದು ಕಾರ್ಯತಂತ್ರವಾಗಿತ್ತು. ಆದರೆ ಕ್ರಮೇಣ ಸಂಸ ತ್ತಿನ ಮೂಲಕ ಸಾಧ್ಯವಾದಷ್ಟು ಜನಪರ ಕೆಲಸ ಮಾಡಿಸ ಬೇಕೆಂಬ ಕಾರ್ಯತಂತ್ರವಾಗಿ ಅದು ಮಾರ್ಪಟ್ಟು ಮುಂದಿನ ಬೆಳವಣಿಗೆಗಳನ್ನು, ಪ್ರಭಾತ ಪಟ್ನಾಯಕ್ ಹೇಳುವಂತೆ Actuality of revolution ಅಂದರೆ ಕ್ರಾಂತಿಯ ವಾಸ್ತವ ಸಂಭಾವ್ಯತೆಯ ದೃಷ್ಟಿಯಿಂದ ನೋಡದೆ ಅದನ್ನು ದೂರದ ಸಾಧ್ಯತೆಯೆಂದು ತಳ್ಳಿಹಾಕಿ ತತ್‌ಕ್ಷಣದ ಜನರ ಹಿತಾಸಕ್ತಿಯೆಂಬ ಪ್ರಾಗ್ಮಾಟಿಕ್ ಪ್ರಶ್ನೆಯ ನ್ನಾಗಿ ಮಾಡಲಾಯಿತು. ಈಗ ಆ ಸಾಧ್ಯತೆಯೂ ಇಲ್ಲ ದಿರುವಾಗ ಕಾರ್ಯತಂತ್ರಗಳು ಜನತೆಯ ಪ್ರಜಾಪ್ರಭುತ್ವ ಗಳನ್ನು ಸಾಧ್ಯಗೊಳಿಸುವ ಮಾರ್ಗ ಎಂದು ಅರ್ಥಮಾಡಿ ಕೊಳ್ಳುತ್ತೇವೆಂದರೆ ಭಾರತದಲ್ಲಿ ಪ್ರಜಾಪ್ರಭುತ್ವದ ಮುಸುಕಿ ನಲ್ಲಿ ಆಗುತ್ತಿರುವ ಆರ್ಥಿಕತೆಯ ನವವಸಾಹತೀಕರಣ, ರಾಜಕೀಯದಲ್ಲಿ ಬೆಳೆಯುತ್ತಿರುವ ಫ್ಯಾಸಿಸಮ್ಮನ್ನು ಗುರುತಿ ಸದೇ ತಾವು ಕಟ್ಟುತ್ತಿರುವುದು ಸಮಾಜವಾದವನ್ನಲ್ಲ, ಬಂಡವಾಳಶಾಹಿ ಪ್ರಜಾಪ್ರಭುತ್ವವನ್ನು ಎಂದುಕೊಳ್ಳುವುದು ಅದಕ್ಕೆ ಲೆನಿನ್ ಬೇರೆಯದೇ ಆದ ಐತಿಹಾಸಿಕ ಕಾಲಘಟ್ಟ ದಲ್ಲಿ ಬಂಡವಾಳಶಾಹಿಯೊಂದಿಗೆ ಮಾಡಿಕೊಂಡ ಸಂಧಾ ನವನ್ನು ಉದಾಹರಣೆಯನ್ನು ನೀಡುವುದು ನಿರರ್ಥಕ ಬೌದ್ಧಿಕ ಕಸರತ್ತು ಮಾತ್ರವಲ್ಲ. ದ್ರೋಹ ಕೂಡಾ. ಸಮಾಜ ಬದಲಾವಣೆ ಮತ್ತು ಜನತೆಯ ಪ್ರಜಾತಂತ್ರ, (ಸಮಾಜ ವಾದವಲ್ಲ,) ಮುಖ್ಯರಾದವರು ಈ ಸ್ವಯಂ ಹೇರಿಕೊಳ್ಳ ಲ್ಪಟ್ಟ ಚೌಕಟ್ಟಿನಿಂದ ಹೊರಬರದೆ ಹೊಸ ಮಾರ್ಗಗಳು ಸಾಧ್ಯತೆಗಳು ಗೋಚರಿಸುವುದಿಲ್ಲ.

ಈ ವಿಪರ್ಯಾಸ ಕೇವಲ ನಂದಿಗ್ರಾಮಕ್ಕೆ ಸೀಮಿತ ವಾದದ್ದಲ್ಲ. ಇದು ಜಾಗತೀಕರಣದ ಕಾಲಘಟ್ಟದಲ್ಲಿ ಅದ ರೊಡನೆ ಅನುಸಂಧಾನ ನಡೆಸಿಕೊಂಡು ಸರ್ಕಾರ ನಡೆ ಸಲು ಪ್ರಯತ್ನಿಸುತ್ತಿರುವ ಸಮಾಜವಾದಿ ಬ್ರಾಂಡಿನ ಎಲ್ಲಾ ಸರ್ಕಾರಗಳು ಎದುರಿಸುತ್ತಿರುವ ಸವಾಲು. ಈ ಸವಾಲು ಒಂದೋ ಜನರ ಪರವಾಗಿ ಬಗೆಹರಿಯಬೇಕು. ಅಥವಾ ದೇಶೀ ಮತ್ತು ವಿದೇಶೀ ಬಂಡವಾಳಿಗರ ಪರವಾಗಿ ಬಗೆ ಹರಿಯಬೇಕು. ಕಾಂಗ್ರೆಸ್ ಸರ್ಕಾರ ಮತ್ತು ಈ ಹಿಂದೆ ಅಧಿಕಾರದಲ್ಲಿದ್ದ ಎನ್.ಡಿ.ಎ. ಸರ್ಕಾರ ಭಾರತ ಪ್ರಕಾಶಿಸು ತ್ತಿದೆ ಎಂಬ ಹೆಸರಿನಲ್ಲಿ ಈ ಸವಾಲನ್ನು ಬಂಡವಾಳಶಾಹಿ ಗಳ ಪರವಾಗಿ ಬಗೆಹರಿಸುವ ಯತ್ನ ನಡೆಸಿದ್ದರು. ಅದ ರಿಂದಾಗಿ ದೇಶಾದ್ಯಂತ ರೈತ ಕಾರ್ಮಿಕರ ಬಡ ಮಧ್ಯಮ ವರ್ಗದವರ ಬದುಕು ಮೂರಾಬಟ್ಟೆಯಾಗಿ ೨೦೦೪ರಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ ಮತ್ತದರ ಮಿತ್ರ ಪಕ್ಷಗಳು ಘೋರವಾಗಿ ಸೋಲನ್ನಪ್ಪಿದವು. ಆಗ ಇದೇ ಎಡ ಪಕ್ಷಗಳೆ ಬಿಜೆಪಿ ಪ್ರಚಾರಕ್ಕೆ ತಂದಿದ್ದ "ಭಾರತ ಪ್ರಕಾಶಿಸುತ್ತಿದೆ" ಎಂಬ ಅಭಿಯಾನವನ್ನು ಲೇವಡಿ ಮಾಡಿ ಅಸಲಿ ಭಾರತ ಹೇಗೆ ಗಾಡಾಂಧಕಾರದಲ್ಲಿ ಮುಳುಗಿದೆ ಎಂಬ ಸತ್ಯವನ್ನು ಬಯಲಿಗೆ ತಂದಿದ್ದರು. ಈಗ ಅದೇ ಎಡಪಕ್ಷಗಳೆ ಎನ್ ಡಿಎ ಮಾದರಿ ಅಭಿವೃದ್ಧಿ ಪಥವನ್ನೇ ಹಿಡಿಯುತ್ತಾ "ಪಶ್ಚಿಮ ಬಂಗಾಳ ಪ್ರಕಾಶಿಸುತ್ತಿದೆ" ಎನ್ನುತ್ತಿವೆ. ಸಹಜವಾ ಗಿಯೇ ರೈತ ಕಾರ್ಮಿಕರು ತಮ್ಮ ನಿಜ ಬದುಕಿನಿಂದ ಈ ಪೊಳ್ಳು ಪ್ರಕಾಶದ ಹಿಂದಿರುವ ಕತ್ತಲನ್ನು ಅರ್ಥಮಾಡಿ ಕೊಂಡಿರುವುದರಿಂದ ಬೀದಿಗಿಳಿದು ತಮ್ಮ ಪ್ರಕಾಶಮಾನ ವಲ್ಲದಿದ್ದರೂ ಮಿಣುಕುತ್ತಿರುವ ಜೀವನ ದೀಪವನ್ನು ಉಳಿ ಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಅದರ ಪರಿಣಾ ಮವೇ ಸಿಂಗೂರು. ನಂದಿಗ್ರಾಮ ಹಾಗೂ ಮುಂದೆ ಬರ ಲಿರುವ ಇನ್ನು ಹತ್ತು ಹಲವು ಚಳವಳಿಗಳು... □

ನಾಡಿನ ಸಾಂಸ್ಕೃತಿಕ ವಲಯದಲ್ಲಿ ವಿಚಾರವಾದಿ ವರಂಕಿಲ ಎಂದೂ ಜ್ಞಾನ ಸಂಗಮ ಕ್ಯಾಂಪಸ್‌ನಲ್ಲಿ ಆರ್.ಕೆ. ಮೇಷ್ಟ್ರು ಎಂದೂ ಪ್ರಖ್ಯಾತರಾಗಿದ್ದ ವರಂಕಿಲ ರಾಧಾ ಕೃಷ್ಣ ಡಿಸೆಂಬರ್ ೭ರಂದು ಬೂಸನೂರಿನ ಹೋಟೆಲ್ ಕೋಣೆಯೊಂದರಲ್ಲಿ ನಿಗೂಢ ರೀತಿಯಲ್ಲಿ ಸಾವನ್ನಪ್ಪಿದ ಸುದ್ದಿ ಬೆಳಿಗ್ಗೆಯೇ ಟೆಲಿವಿಷನ್ ಮತ್ತು ರೇಡಿಯೋ ವಾಹಿನಿಗಳಲ್ಲಿ ಪ್ರಸಾರವಾಗುತ್ತಿದ್ದಂತೆ ರಾಜ್ಯದ್ಯಂತ ಅಚ್ಚರಿ, ಆಘಾತ ಹುಟ್ಟಿಸಿದ ಜತೆಗೆ ಅವರ ಸಾವಿನ ಕಾರಣ ತಿಳಿಯುವ ತನಿಖೆಗೆ ಆಗ್ರಹಿಸಿ ಧರಣಿ, ಪ್ರತಿಭಟನೆ ಆರಂಭವಾಗಿತ್ತು.

ಆರಂಭಿಕ ತನಿಖೆಯಲ್ಲಿ ಏನೊಂದು ಸುಳಿವು ದೊರೆಯದಿದ್ದರೂ ಪೊಲೀಸರು ಅದನ್ನೊಂದು ಆತ್ಮಹತ್ಯೆ ಪ್ರಕರಣವೆಂದು ಬಿಂಬಿಸಿ ಕೈತೊಳೆದುಕೊಳ್ಳುವ ಸನ್ನಾಹದಲ್ಲಿದ್ದರು. ಕಳೇಬರದ ಪೋಸ್ಟ್ ಮಾರ್ಟಂ ನಡೆಸಿದ ಸರ್ಕಾರಿ ವೈದ್ಯರು "ಹೃದಯ ಸ್ಥಂಭನವಾಗಿದೆ" ಎಂದು ವರದಿ ನೀಡಿ ಪ್ರಕರಣಕ್ಕೆ ಇತಿಶ್ರೀ ಹಾಡಿದ ನಂಬಿಕೆಯಿಂದ ನಿಟ್ಟುಸಿರು ಬಿಟ್ಟಿದ್ದರು.

ಆದರೆ ಈ ಸಾವು ಸಾಮಾನ್ಯನೊಬ್ಬನ ಸಾವಾಗಿರಲಿಲ್ಲ, ಅದು ನಾಡಿನ ಸಾಕ್ಷೀ ಪ್ರಜ್ಞೆಯಂತಿದ್ದ ವರಂಕಿಲ ರಾಧಾಕೃಷ್ಣರ ಸಾವು. "ಅವರ ಸಾವು ಹೃದಯಾಘಾತದಿಂದ ಸಂಭವಿಸಿಲ್ಲ, ಅವರು ಆತ್ಮಹತ್ಯೆ ಮಾಡಿಕೊಳ್ಳುವಂಥ ಹೇಡಿಯೂ ಅಲ್ಲ, ಅದಕ್ಕೆ ಕಾರಣಗಳೂ ಇರಲಿಲ್ಲ, ಪೊಲೀಸರ ಮಾಹಿತಿಗೂ, ವೈದ್ಯರ ವರದಿಗೂ ಸಾಕಷ್ಟು ವ್ಯತ್ಯಾಸಗಳಿರುವುದರಿಂದ ಅವರ ಕಳೇಬರವನ್ನು ಫೊರೆನ್ಸಿಕ್ ಪರೀಕ್ಷೆಗೆ ಒಳಪಡಿಸಿ, ಕೊಲೆ ಪ್ರಕರಣವೆಂದು ದಾಖಲಿಸಿ, ಸಿಬಿಐ ತನಿಖೆಗೆ ಶಿಫಾರಸು ಮಾಡಬೇಕು" ಎಂದು ಬುದ್ಧಿಜೀವಿಗಳು, ಸಾಹಿತಿಗಳು, ಕಲಾವಿದರಿಂದ ಸರ್ಕಾರವೇ ಕಂಪಿಸುವಂಥ ಪ್ರಚಂಡ ಒತ್ತಾಯ ಕೇಳಿ ಬಂತು.

ಸಾಂಸ್ಕೃತಿಕ ವಲಯದ ಮಹಾಮಹಿಮರೆಲ್ಲ ವರಂಕಿಲ ರಾಧಾಕೃಷ್ಣರ ಸಾವಿನ ಬಗ್ಗೆ ತನಿಖೆಗೆ ಒತ್ತಾಯಸಿದ್ದು ಅಸಹಜವಾಗಿರಲಿಲ್ಲ. ಅದು ಕೇವಲ ಆಕಸ್ಮಿಕವೂ ಅಲ್ಲ.

ಭರತ ಭೂಮಿಯು ಸಾಂಸ್ಕೃತಿಕ ವಲಯದಲ್ಲಿ ವಿಶೇಷ ಛಾಪು ಮೂಡಿಸಿದ್ದ ವರಂಕಿಲರ ಶಕ್ತಿ ಹಾಗಿತ್ತು. ಸುಮಾರು ೪೫ ರ ಆಸುಪಾಸಿನಲ್ಲಿದ್ದ ವರಂಕಿಲರು ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದಾಗ ತಮ್ಮ ಹೆಸರಿನ ಜತೆಗಿದ್ದ ಭಟ್ಟ ಎಂಬ ಜಾತಿಸೂಚಕ ಪದ ಕಿತ್ತು ಮೈಮೇಲಿದ್ದ ಜನಿವಾರ ಎಸೆದು ಮೈ, ಮನ ಹಗುರ ಮಾಡಿಕೊಂಡ, ಕೈಕಾಲುಗಳ ಸರಪಳಿ ಕಳಚಿಕೊಂಡ ಅದೆಂಥದ್ದೋ ವಿಚಿತ್ರ ಸ್ವಾತಂತ್ರ್ಯದ ಖುಷಿ ಅನುಭವಿಸಿದ್ದರು. ಬ್ರಾಹ್ಮಣ್ಯದ ಬಗ್ಗೆ ಬೆಂಕಿ ಉಗುಳುವಂಥ ಮಾತು ಅವರದು. ಸದಾ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರ ಜತೆಯೇ ಅವರ ಒಡನಾಟ. ಜತೆಗಾರರಲ್ಲಿ ಕೆಲವರ ವೈಯಕ್ತಿಕ ದೋಷಗಳ ಬಗ್ಗೆ ಕಟುವಾಗಿ ಟೀಕಿಸುವುದಕ್ಕೂ ವರಂಕಿಲರು ಹಿಂಜರಿಯುತ್ತಿರಲಿಲ್ಲ, ಕೆಲವು ಬರಹಗಾರರು "ಭ್ರಷ್ಟಾಚಾರಕ್ಕಿಂತ ಕೋಮುವಾದ ಅಪಾಯಕಾರಿ" ಎನ್ನುತ್ತಾ ಸ್ವತಃ ಭ್ರಷ್ಟರಾಗಿದ್ದನ್ನು ಕಂಡು "ಭ್ರಷ್ಟಾಚಾರ ಮತ್ತು ಕೋಮುವಾದ ಎರಡೂ ಸಮಾನವಾಗಿ ಈ ದೇಶದ ಪ್ರಗತಿಗೆ ಅಡಿಯಾಗಿವೆ. ಕೋಮುವಾದ ವಿರೋಧಿಸುವ ಅಸ್ತ್ರ ಇರಿಸಿಕೊಂಡು ಭ್ರಷ್ಟರಾಗಬೇಡಿ" ಎಂದು ಕಟು ಮಾತುಗಳಲ್ಲೇ ತಿವಿಯುತ್ತಿದ್ದರು.

ಅವರು ಬರೆದಿದ್ದ ೧೬ ಪುಸ್ತಕಗಳು ಜಗತ್ತಿನ ೩೬ ಭಾಷೆಗಳಿಗೆ ಅನುವಾದಗೊಂಡಿದ್ದವು. ದೇಶದ ಅಸಮಾನತೆ, ಜಾತಿ ವ್ಯವಸ್ಥೆ, ಲಿಂಗ ತಾರತಮ್ಯ, ಮೀಸಲಾತಿ, ಕಮ್ಯುನಿಸ್ಟರ ಹಳಸಲುವಾದ, ಕೋಮುಸಾಮರಸ್ಯ, ಕರಿಯರು ಮತ್ತು ದಲಿತರ ನಡುವಿನ ಸಾಮ್ಯ, ಭಾಷಾ ಮಾಧ್ಯಮ ಇವೇ ಮೊದಲಾದ ವಿಚಾರಗಳ ಕುರಿತು ವಿಭಿನ್ನ, ನಿಷ್ಠುರ ವಿಶ್ಲೇಷಣೆಯನ್ನು ತಮ್ಮ ಕೃತಿಗಳಲ್ಲಿ ದಾಖಲಿಸಿದ್ದರು.

ಅವರ "ಭಾರತೀಯ ದಲಿತರು" ಎಂಬ ಕೃತಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ದೊರೆತ ಮನ್ನಣೆಯಂತೂ ಅನನ್ಯ. "ನನ್ನ ಪೂರ್ವಜರು ಸಾವಿರಾರು ವರ್ಷಗಳಿಂದ ನಡೆಸಿಕೊಂಡು ಬಂದಿರುವ ಶೋಷಣೆಯ ಪ್ರಾಯಶ್ಚಿತ್ತಕ್ಕಾಗಿ ದೇಶದ ಜೀವ ಚೈತನ್ಯವಾದ ದಲಿತ ಸಮುದಾಯದ ಬಗ್ಗೆ ಬರೆದಿದ್ದೇನೆ" ಎಂಬ ವಿಷಾದ ಮತ್ತು ಪಶ್ಚಾತ್ತಾಪ ಬೆರೆತ ದನಿ ಅಲ್ಲಿ ಪ್ರತಿಧ್ವನಿಸಿತ್ತು.

ಇಂಥಾ ವರಂಕಿಲರು ಸಾವನ್ನಪ್ಪಿದ ಸುದ್ದಿ ಬಂದ ದಿನವೇ ಬೂಸನೂರಿನಲ್ಲಿ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆ ಪರವಾಗಿ ಜನರ ಮನವೊಲಿಸುವ ಸಭೆಯಲ್ಲಿ ಅವರು ಮಾತನಾಡಬೇಕಿತ್ತು. ರಾಜ್ಯಾದ್ಯಂತ ಅಗಿಂದಾಗ್ಗೆ ಕಾಡುತ್ತಿದ್ದ ವಿದ್ಯುತ್ ಕೊರತೆ ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರ ಒಂದು ತಿಂಗಳ ಹಿಂದೆ ಬೂಸನೂರಿನಲ್ಲಿ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪಿಸುವ ನಿರ್ಧಾರ ಕೈಗೊಂಡಾಗ ಪರಿಸರವಾದಿಗಳಿಂದ ಸಹಜವಾಗಿಯೇ ಅಪಸ್ವರ.

"ಸ್ಥಾವರದಿಂದ ಈ ಭಾಗದ ಅರಣ್ಯ ಬಹುತೇಕ ನಾಶವಾಗಲಿದೆ. ಇದರಿಂದ ಜೀವ ಸಂಕುಲದ ಮೇಲೆ ತೀವ್ರ ತರಹದ ದುಷ್ಪರಿಣಾಮ ಉಂಟಾಗಲಿದೆ. ಸುತ್ತಮುತ್ತಲಿನ

ಸಾಂಸ್ಕೃತಿಕ ವಲಯದ ಮಹಾಮಹಿಮರೆಲ್ಲ ವರಂಕಿಲ ರಾಧಾಕೃಷ್ಣರ ಸಾವಿನ ಬಗ್ಗೆ ತನಿಖೆಗೆ ಒತ್ತಾಯಸಿದ್ದು ಅಸಹಜವಾಗಿರಲಿಲ್ಲ. ಅದು ಕೇವಲ ಆಕಸ್ಮಿಕವೂ ಅಲ್ಲ. ಭರತ ಭೂಮಿಯು ಸಾಂಸ್ಕೃತಿಕ ವಲಯದಲ್ಲಿ ವಿಶೇಷ ಛಾಪು ಮೂಡಿಸಿದ್ದ ವರಂಕಿಲರ ಶಕ್ತಿ ಹಾಗಿತ್ತು. ಸುಮಾರು ೪೫ರ ಆಸುಪಾಸಿನಲ್ಲಿದ್ದ ವರಂಕಿಲರು ಸ್ನಾತ ಕೋತ್ತರ ವಿದ್ಯಾರ್ಥಿಯಾಗಿದ್ದಾಗ ತಮ್ಮ ಹೆಸರಿನ ಜತೆಗಿದ್ದ ಭಟ್ಟ ಎಂಬ ಜಾತಿಸೂಚಕ ಪದ ಕಿತ್ತು ಮೈಮೇಲಿದ್ದ ಜನಿವಾರ ಎಸೆದು ಮೈ, ಮನ ಹಗುರ ಮಾಡಿಕೊಂಡಿದ್ದರು.



ಜನರೂ ರೋಗ ರುಜಿನಕ್ಕೆ ತುತ್ತಾಗುವುದಲ್ಲದೆ ಮುಂದಿನ ಅನೇಕ ತಲೆಮಾರುಗಳವರೆಗೆ ಇದರ ದುಷ್ಟ ಕೊಡುಗೆಯನ್ನು ಕಾಣಬೇಕಾದ ಅಪಾಯವೂ ಇದೆ" ಎಂದು ಅವರೆಲ್ಲ ತಕರಾರು ತೆಗೆದಿದ್ದರು.

ಇದಕ್ಕೆ ಪ್ರತಿಯಾಗಿ ವರಂಕಿಲರು, "ಪರಿಸರವಾದಿಗಳು ಪ್ರಗತಿ ವಿರೋಧಿಗಳಂತೆ ವರ್ತಿಸುತ್ತಿದ್ದಾರೆ ಪರಿಸರ ಕಾಪಾಡುವ ಹೆಸರಿನಲ್ಲಿ ಶಿಲಾಯುಗಕ್ಕೆ ವಾಪಸು ಕರೆದೊಯ್ಯುತ್ತಿದ್ದಾರೆ. ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಮುನ್ನಡೆಯುವ ಅಭಿವೃದ್ಧಿ ಯೋಜನೆಗಳನ್ನು ವಿರೋಧಿಸುವವರು ಪರಿಸರ ವ್ಯಾಧಿಗಳೇ ಹೊರತು ಪರಿಸರವಾದಿಗಳಲ್ಲ. ಅಗತ್ಯ ಇರುವಷ್ಟು ವಿದ್ಯುತ್ ಉತ್ಪಾದನೆ ಮಾಡದಿರುವ ಯಾವ ರಾಷ್ಟ್ರವೂ ಈವರೆಗೆ ಅಭಿವೃದ್ಧಿ ಹೊಂದಿದ ಒಂದೇ ಒಂದು ಉದಾಹರಣೆ ಇಲ್ಲ. ಕೇವಲ ಪ್ರಕೃತಿಯನ್ನೆ ನೆಚ್ಚಿಕೊಂಡು ಜಲವಿದ್ಯುತ್ ಯೋಜನೆಗಳನ್ನು ಮುಂದುವರಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಒಂದು ಮನೆಯ ಹಿತಕ್ಕೆ ಒಬ್ಬರು, ಒಂದು ನಾಡಿನ ಹಿತಕ್ಕೆ ಒಂದು ಪ್ರದೇಶ ತ್ಯಾಗ ಮಾಡಬೇಕಾಗುತ್ತದೆ" ಎಂಬುದನ್ನು ಕೆರೆಗೆ ಹಾರವಾದ ಭಾಗೀರಥಿ ಕುರಿತ ಜನಪದ ಗೀತೆಯ ಉದಾಹರಣೆ ನೀಡಿ ನಾಡಿನ ಒಟ್ಟಾರೆ ಪ್ರಗತಿಗೆ ಕೆಲವರು ತ್ಯಾಗ ಮಾಡಲೇಬೇಕಾಗುತ್ತದೆ ಎಂದು ಯೋಜನೆಯನ್ನು ಪ್ರಬಲವಾಗಿ ಸಮರ್ಥಿಸಿಕೊಂಡಿದ್ದರು.

ವರಂಕಿಲರ ಈ ನಿಲುವಿನಿಂದ ಅವರ ಗೆಳೆಯರ ಬಳಗದಲ್ಲಿ ತಳಮಳ. ಯಾರೆಷ್ಟೇ ವಿರೋಧ ವ್ಯಕ್ತಪಡಿಸಿದ್ದರೂ ವರಂಕಿಲರ ಸಮರ್ಥನೆಯೊಂದರಿಂದಲೇ ಸರ್ಕಾರಕ್ಕೆ ಆನೆ ಬಲ ಬಂದಂಥ ಪೊಗರು. ಆವರಿಗೆ ಅದೇ ಸರ್ಕಾರವನ್ನು ಕೋಮುವಾದಿ ಎಂದು ಕರೆದಿದ್ದ ವರಂಕಿಲರೇ ಸರ್ಕಾರದ ನಿರ್ಧಾರಕ್ಕೆ ಬೆಂಬಲ ವ್ಯಕ್ತಪಡಿಸಿದ್ದರಿಂದ ಅನೇಕರಿಗೆ ಅಚ್ಚರಿ. ಈ ಹಿನ್ನೆಲೆಯಲ್ಲಿ ಸ್ವತಃ ಮುಖ್ಯಮಂತ್ರಿಯೇ ಯೋಜನೆ ಪರವಾದ ಸಭೆಯಲ್ಲಿ ಪಾಲ್ಗೊಳ್ಳುವಂತೆ ನೀಡಿದ್ದ ಆಹ್ವಾನಕ್ಕೆ ವರಂಕಿಲರು ಸೂಚಿಸಿದ ಸಮ್ಮತಿ ಜನಪರ ಚಿಂತಕರ ವಲಯದಲ್ಲಿ ಬಿರುಗಾಳಿ ಎಬ್ಬಿಸಿತ್ತು. ಈ ಬೆಳವಣಿಗೆಗಳ ನಡುವೆಯೇ ಸಮಾಜದ ಎಲ್ಲ ವರ್ಗಗಳಿಗೂ ಕಗ್ಗಂಟಾಗಿದ್ದ ವರಂಕಿಲರ ಸಾವಿನ ತನಿಖೆಯನ್ನು ಸರ್ಕಾರ ಅನಿವಾರ್ಯವಾಗಿ ಸಿಬಿಐಗೆ ಒಪ್ಪಿಸಿತು.

ಗಾಳಿ ವೇಗದಲ್ಲಿ ನಡೆದ ತನಿಖೆ, ವಿಚಾರಣೆ, ಫೊರೆನ್ಸಿಕ್ ಪರೀಕ್ಷೆಗಳಿಂದ ಸ್ಪಷ್ಟ ತೀರ್ಮಾನ ಕೈಗೊಳ್ಳಲು ವಿಫಲವಾದ ಸಿಬಿಐ ಇಂಥದ್ದೇ ಜಟಿಲ ಪ್ರಕರಣಗಳನ್ನು ಬಿಡಿಸಿ ವೈದ್ಯಕೀಯ, ಮನೋವೈದ್ಯಕೀಯ ಮತ್ತು ಫೊರೆನ್ಸಿಕ್ ವಿಜ್ಞಾನದಲ್ಲಿ ವಿಶ್ವಮನ್ನಣೆ ಗಳಿಸಿದ್ದ ನ್ಯೂಯಾರ್ಕ್‌ನ ಭಾರತೀಯ ಮೂಲದ ವೈದ್ಯೆ ಡಾ॥ ಪಾರಿಜಾತ ಗೌಡ ಅವರ ನೆರವು ಕೋರಿತು. ಸತತ ಹದಿನೈದು ದಿನಗಳ ಕಾಲ ಪೊಲೀಸ್, ಸಿಬಿಐ ಮತ್ತು ಫೊರೆನ್ಸಿಕ್ ವರದಿಗಳ ಅಧ್ಯಯನ ನಡೆಸಿ ವರಂಕಿಲರ ಕುಟುಂಬ ಸದಸ್ಯರು ಮತ್ತು ಆಪ್ತರೊಂದಿಗೆ ವಿಚಾರ ವಿನಿಮಯ ಮಾಡಿಕೊಂಡ ಪಾರಿಜಾತ ಗೌಡ, ಸಾವಿನ ನಿಗೂಢ ಸತ್ಯ ಬಯಲು ಮಾಡಲು ಮುಂದಾದರು.

ಅವೊತ್ತಿನ ಸಭೆ ಮುಖ್ಯಮಂತ್ರಿ, ಗೃಹ ಸಚಿವ, ಪೊಲೀಸ್ ಮಹಾನಿರ್ದೇಶಕ,

ವಿಚಾರವಾದಿಯ ನಿಗೂಢ ಸಾವು

ಟಿ.ಕೆ. ತ್ಯಾಗರಾಜ್



ಸಿಬಿಐ ಮುಖ್ಯಸ್ಥ, ಸಾಂಸ್ಕೃತಿಕ ರಂಗದ ಪ್ರತಿನಿಧಿಗಳು ಮತ್ತು ಪತ್ರಕರ್ತರಿಂದ ತುಂಬಿ ತುಳುಕುತ್ತಿತ್ತು. ವಿದೇಶಿ ಟೆಲಿವಿಷನ್ ವಾಹಿನಿಗಳು ಕೂಡಾ ಆ ಮಹತ್ವದ ಸಭೆಯ ನೇರ ಪ್ರಸಾರದ ವ್ಯವಸ್ಥೆ ಮಾಡಿದ್ದವು.

ವರಂಕಿಲರನ್ನು ಕೊಂದವರು ಯಾರಿರಬಹುದು? ಸರ್ಕಾರ ತಪ್ಪಿತಸ್ಥರ ವಿರುದ್ಧ ನಿಷ್ಠುರ ಕ್ರಮ ಕೈಗೊಳ್ಳಬಹುದೇ? ವರಂಕಿಲರಂಥವರೂ ಆತ್ಮಹತ್ಯೆ ಮಾಡಿಕೊಳ್ಳುವುದು ಸಾಧ್ಯವೇ? ಇಂಥಾ ಅನೇಕಾನೇಕ ಪ್ರಶ್ನೆಗಳನ್ನು ತಲೆ ತುಂಬ ತುಂಬಿಕೊಂಡಿದ್ದವರಿಂದ ಅಲ್ಲಿ ವಿಚಿತ್ರ ಗಾಂಭೀರ್ಯ ನೆಲೆಸಿತ್ತು. ಡಾ॥ ಪಾರಿಜಾತ ಗೌಡ ಮಾತು ಆರಂಭಿಸುತ್ತಿದ್ದಂತೆ ಕೂದಲು ಬಿದ್ದರೂ ಸದ್ದಾಗುವಂಥ ನೀರವ ವಾತಾವರಣ.

"ಜಗತ್ತಿನಲ್ಲಿ ವರ್ತಮಾನದ ಶ್ರೇಷ್ಠ ಚಿಂತಕರ ಸಾಲಿನಲ್ಲಿ ನಿಲ್ಲುವ ವರಂಕಿಲರ ಅಗಲಿಕೆ ನಿಜಕ್ಕೂ ಶಬ್ದಶಃ ತುಂಬಲಾರದ ನಷ್ಟ. ಈ ಮಹಾನ್ ವ್ಯಕ್ತಿಯ ನಿಗೂಢ ಸಾವಿನ ತನಿಖೆ ಅತ್ಯಂತ ಸವಾಲಿನ ಸಮಸ್ಯೆಯಾಗಿತ್ತು."

ಪೊಲೀಸ್ ಹಾಗೂ ಸಿಬಿಐ ತನಿಖೆ ಮತ್ತು ಫೊರೆನ್ಸಿಕ್ ಪರೀಕ್ಷೆಯಿಂದ ವ್ಯಕ್ತವಾಗಿರುವ ಅಂಶಗಳ ಪ್ರಕಾರ...

ಹೊಟೆಲ್ ಕೆಲಸದ ಹುಡುಗ ರೂಂ ಕ್ಲೀನ್ ಮಾಡಲು ಹೋದಾಗ ಆತ ಕೈ ಇಡುತ್ತಿದ್ದಂತೆಯೇ ಬಾಗಿಲು ತೆಗೆದುಕೊಂಡಿತು. ಮಂಚದ ಮೇಲೆ ಅಂಗಾತ ಮಲಗಿದ್ದ ವರಂಕಿಲರನ್ನೆಬ್ಬಿಸಲು ಪ್ರಯತ್ನಿಸಿ ಅವರಿಂದ ಪ್ರತಿಕ್ರಿಯೆ ಬಾರದ್ದರಿಂದ ಅವರು ಸತ್ತಿದ್ದಾರೆಂದು ಹುಡುಗ ಭಾವಿಸಿದ.

ವರಂಕಿಲರ ದೇಹದ ಮೇಲೆ ಯಾವುದೇ ಗಾಯದ ಗುರುತಿರಲಿಲ್ಲ. ಅವರಿದ್ದ ಕೋಣೆಯಲ್ಲಿ ವಿಷದ ಬಾಟಲಿ, ನಿದ್ರೆ ಮಾತ್ರೆಯ ರಕ್ಷಾ ಕವಚಗಳು ಎಲ್ಲೂ ಕಂಡುಬರಲಿಲ್ಲ. ಆದರೆ ರಾತ್ರಿಯಷ್ಟೇ ಊಟ ಮಾಡಿದ್ದ ೨ ಖಾಲಿ ತಟ್ಟೆಗಳು ಮತ್ತು ಕಾಫಿ ಕುಡಿದಿಟ್ಟಿದ್ದ ೪ ಕಪ್‌ಗಳಿದ್ದವು.

ಆನಂತರ ವರಂಕಿಲರ ಕಳೇಬರವನ್ನು ಸಂಪೂರ್ಣವಾಗಿ ಪೋಸ್ಟ್ ಮಾರ್ಟಂಗೆ ಒಳಪಡಿಸಲಾಗಿದೆ.

ನಯವಾದ ಹಗ್ಗ ಅಥವಾ ವಸ್ತ್ರ ಬಳಸಿ ಅವರ ಕೊರಳಿಗೆ ಬಲವಾಗಿ ಬಿಗಿದು ಸಾಯಿಸಿದ್ದರೆ ಹೊರ ಭಾಗದಲ್ಲಿ ಗಾಯ ಕಾಣಿಸದಿದ್ದರೂ ಒಳಭಾಗದಲ್ಲಿ ರಕ್ತಸ್ರಾವ ಆಗಿರುತ್ತದೆ. ಉಸಿರು ಕಟ್ಟುವಂತೆ ಮೂಗು ಮತ್ತು ಬಾಯಿ ದಿಂಬನ್ನು ಒತ್ತಿರಿಸಿದ್ದರೂ ದೇಹದ ಮೇಲೆ ಬಲ ಪ್ರಯೋಗದ ಲಕ್ಷಣಗಳು ಕಾಣುತ್ತವೆ. ಅಥವಾ ಬಾತ್‌ರೂಂನಲ್ಲಿದ್ದ ಟಬ್‌ನಲ್ಲಿ ಅವರನ್ನು ಮುಳುಗಿಸಿ ಸತ್ತ ನಂತರ ಮಂಚದ ಮೇಲೆ ತಂದು ಮಲಗಿಸಿದ್ದರೂ ಶ್ವಾಸಕೋಶದಲ್ಲಿ ನಿಗದಿತ ಪ್ರಮಾಣದಲ್ಲಿ ನೀರಿನ ಅಂಶ ಪತ್ತೆಯಾಗುತ್ತದೆ. ವಿಷ ಪ್ರಾಶನವಾಗಿದ್ದರೆ ಬಾಯಿಯಿಂದ ನೊರೆ ಅಥವಾ ರಕ್ತದ ಅಂಶ ಹೊರಬರುತ್ತದೆ. ದೇಹ ನೀಲಿ ಅಥವಾ ಹಳದಿ ಬಣ್ಣಕ್ಕೆ ಬದಲಾಗುತ್ತದೆ. ತುಟಿ ಮತ್ತು ನಾಲಗೆಯ ಸ್ಥಿತಿಯಲ್ಲಿ ಗಮನಾರ್ಹ ಬದಲಾವಣೆ ಕಾಣುತ್ತದೆ. ಅಷ್ಟೇ ಅಲ್ಲ. ವಿಷ ಸೇವನೆ ಮಾಡಿರುವ ದೇಹ ಕತ್ತರಿಸುವಾಗ ವಿಲಕ್ಷಣವಾದ ವಾಸನೆ ಹೊರಹೊಮ್ಮುತ್ತದೆ. ಆದರೆ ಅಂಥ ಯಾವುದೇ ಲಕ್ಷಣ ಗೋಚರಿಸಿಲ್ಲ.

ವೈದ್ಯಕೀಯ ಪರಿಭಾಷೆಯಲ್ಲಿ ವಿಸೆರಾ ಎನ್ನಲಾಗುವ ಹೊಟ್ಟೆಯೊಳಗಿನ ಭಾಗಗಳ ಪರೀಕ್ಷೆ ನಡೆಸಿದಾಗ ವಿಷದ ಅಂಶ ಎಳ್ಳಷ್ಟೂ ಇರಲಿಲ್ಲ. ವರಂಕಿಲರಿದ್ದ ಕೋಣೆಯಲ್ಲಿ ವಿದ್ಯುತ್ ಸಲಕರಣೆಗಳ ದೋಷದಿಂದ ಆಕಸ್ಮಿಕವಾಗಿ ಅಥವಾ ಹೊರಗಿನ ವ್ಯಕ್ತಿಗಳ ಪ್ರಯತ್ನದಿಂದ ಕಾರ್ಬನ್ ಮೋನಾಕ್ಸೈಡ್ ಅನಿಲ ಪ್ರವೇಶಿಸಿದ್ದರೆ ಅದು ಹೆಮೋಗ್ಲೋಬಿನ್ ಜತೆ ಸೇರಿಕೊಂಡು ಉತ್ಪತ್ತಿಯಾಗುವ ಕಾರ್ಬಾಕ್ಸಿ ಹೆಮೋಗ್ಲೋಬಿನ, ದೇಹದ ಪ್ರಮುಖ ಅಂಗಗಳಿಗೆ ಬೇಕಾಗುವ ಆಮ್ಲಜನಕವನ್ನು ರಕ್ತದಿಂದ ಸೆಳೆಯುವುದಿಲ್ಲ. ಇದರಿಂದಾಗಿ ಸತತ ೩ ನಿಮಿಷಗಳ ಕಾಲ ಆಮ್ಲಜನಕ ಪೂರೈಕೆಗೆ ತಡೆ ಉಂಟಾಗುವುದರಿಂದ ಹೃದಯದ ಚಟುವಟಿಕೆ ಸ್ಥಗಿತಗೊಳ್ಳುತ್ತದೆ. ಆದರೆ ರಕ್ತದ ರಾಸಾಯನಿಕ ಪರೀಕ್ಷೆಯಲ್ಲಿ ಕಾರ್ಬನ್ ಮೋನಾಕ್ಸೈಡ್ ಅಂಶ ಒಂದಿಷ್ಟೂ ಪತ್ತೆಯಾಗಿಲ್ಲ.

ಅಷ್ಟೇ ಏಕೆ? ದೇಹದ ಮೇಲೆ ಯಾವುದೇ ಚುಚ್ಚುಮದ್ದಿನ ಗುರುತೂ ಇರಲಿಲ್ಲ. ಕೊಕೇನ್ ಅಥವಾ ಪೊಟಾಷಿಯಂ ಸೈನೈಡ್ ದೇಹವನ್ನು ಯಾವುದೇ ರೀತಿಯಿಂದ ಪ್ರವೇಶಿಸಿದರೂ ಹೃದಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಆದರೆ ರಕ್ತಪರೀಕ್ಷೆಯಲ್ಲಿ ಇವುಗಳ ಅಂಶ ಪತ್ತೆಯಾಗುವುದಿಲ್ಲ ನಿಜ ಈ ಕಾರಣದಿಂದಲೇ ವರಂಕಿಲರ ಆತ್ಮಹತ್ಯೆ ಅಥವಾ ಕೊಲೆ ನಡೆದಿರಬಹುದೆಂಬುದಕ್ಕೆ ಯಾವುದೇ ಆಧಾರವಿಲ್ಲ.

ಹೀಗಾಗಿ ವರಂಕಿಲರ ಸಾವು, ಕೊಲೆ ಅಥವಾ ಆತ್ಮಹತ್ಯೆಯಿಂದ ಸಂಭವಿಸಿಲ್ಲ ಎಂಬ ತೀರ್ಮಾನಕ್ಕೆ ಬರಬೇಕಾಯಿತು. ಹಾಗಾದರೆ ವರಂಕಿಲರು ಸತ್ತಿದ್ದು ಹೇಗೆ?

ಕೊಲೆ ಅಥವಾ ಆತ್ಮಹತ್ಯೆ ಅಲ್ಲದಿದ್ದರೆ ವೃದ್ಧಾಪ್ಯ, ಕಾಯಿಲೆ, ಹೃದಯಸ್ತಂಭನ, ಬ್ರೈನ್ ಹೆಮರೇಜ್ ಸೇರಿದಂತೆ ಯಾವುದೇ ಸಹಜ ಕಾರಣದಿಂದ ಸಾವು ಸಂಭವಿಸುತ್ತದೆ.

ವರಂಕಿಲರು ಇನ್ನೂ ೪೫ ರ ಆಸುಪಾಸಿನವರು. ಅವರಿಗೆ ಯಾವುದೇ ಕಾಯಿಲೆ ಇರಲಿಲ್ಲ. ಇದರಿಂದಾಗಿ ಮೊದಲೆರಡು ಅಂಶಗಳು ಅವರ ಸಾವಿಗೆ ಕಾರಣವಾಗಿಲ್ಲ ಎಂಬುದು ಸುಸ್ಪಷ್ಟ ಇನ್ನುಳಿದದ್ದು ಹೃದಯಸ್ತಂಭನ ಮತ್ತು ಬ್ರೈನ್ ಹೆಮರೇಜ್.

ಪ್ರಮುಖ ರಕ್ತ ನಾಳದಲ್ಲಿ ಒಮ್ಮಿಂದೊಮ್ಮೆಗೆ ರಕ್ತ ಸಂಚಾರಕ್ಕೆ ತಡೆ ಉಂಟಾದಾಗ ಅಥವಾ ಹೃದಯದ ಒಂದು ಭಾಗ ನಿಷ್ಕ್ರಿಯವಾಗುವುದರಿಂದ ಅಥವಾ ರಕ್ತ ಪೂರೈಕೆಯ ಕೊರತೆಯಿಂದಲೂ ಹೃದಯದ ಬಡಿತದಲ್ಲಿ ಏರುಪೇರಾಗಿ ಹೃದಯಾಘಾತವಾಗುತ್ತದೆ. ಬಹಳ ಹೊತ್ತು ಮಲಗಿಕೊಂಡೇ ಇರುವವರ ಕಾಲಿನಲ್ಲಿ ಹೆಪ್ಪುಗಟ್ಟುವ ರಕ್ತದ ಒಂದು ತುಣುಕು ಆಕಸ್ಮಿಕವಾಗಿ, ಚಲಿಸಿ ಶ್ವಾಸಕೋಶದಲ್ಲಿ ಸಿಕ್ಕಿ ಹಾಕಿಕೊಳ್ಳುವ ಮೂಲಕ ಹೃದಯದ ಬಲಭಾಗ ನಿಷ್ಕ್ರಿಯವಾಗುವುದರಿಂದಲೂ ಹೃದಯಾಘಾತವಾಗು ತ್ತದೆ. ದೇಹದಲ್ಲಿ ಹರಿಯುವ ಅತಿ ಕಡಿಮೆ ಪ್ರಮಾಣದ ವಿದ್ಯುತ್ ಪ್ರವಾಹ ಒಮ್ಮಿಂದೊಮ್ಮೆಗೇ ಸ್ಥಗಿತಗೊಂಡರೆ ಹೃದಯ ಸ್ತಂಭನ ಉಂಟಾಗುತ್ತದೆ. ಬ್ರೈನ್ ಹೆಮರೇಜ್‌ನ ಅತಿ ಮುಖ್ಯ ಲಕ್ಷಣ ಎಂದರೆ ಮೆದುಳಿನಲ್ಲಿ ರಕ್ತಸ್ರಾವವಾಗುವುದು.

ವಿಚಿತ್ರ ಎಂದರೆ ವರಂಕಿಲರಿಗೆ ಹೃದಯ ಸ್ಥಂಭನ ಅಥವಾ ಬ್ರೈನ್ ಹೆಮರೇಜ್ ಆಗಿರುವುದಕ್ಕೆ ಯಾವುದೇ ವೈದ್ಯಕೀಯ ಸಮರ್ಥನೆ ದೊರೆಯಲಿಲ್ಲ.

ಯಾವುದೇ ವ್ಯಕ್ತಿ ಸತ್ತ ನಂತರ ಅವರ ಮೆದುಳು ನಿಷ್ಕ್ರಿಯವಾಗುತ್ತದೆ. ಹೃದಯ ರಕ್ತಹೀನವಾಗಿರುತ್ತದೆ. ರಕ್ತನಾಳದ ಚಟುವಟಿಕೆ ಸ್ಥಬ್ಧವಾಗಿರುತ್ತದೆ. ಅಟಾಪ್ಸಿ ಎಂದು ನಾವು ಕರೆಯುವ ಮರಣೋತ್ತರ ಪರೀಕ್ಷೆಯಲ್ಲಿ ಸಾವು ಎಷ್ಟು ಹೊತ್ತಿಗೆ ಸಂಭವಿಸಿದೆ ಎಂದೂ ತಿಳಿಯುತ್ತದೆ. ಆದರೆ ಮೊದಲು ಪರೀಕ್ಷೆ ಮಾಡಿದ ಸರ್ಕಾರಿ ವೈದ್ಯರಿಗೆ ಮೆದುಳು, ಹೃದಯ ಮತ್ತು ರಕ್ತನಾಳದಲ್ಲಿ ಈ ಯಾವುದೇ ಬದಲಾವಣೆ ಕಾಣಲಿಲ್ಲ, ಅವರಿಗೆ ಸಾವು ಸಂಭವಿಸಿದ ಸಮಯ ತಿಳಿಯಲೂ ಇಲ್ಲ. ವರಂಕಿಲರು ಸಾವನ್ನಪ್ಪಿದ್ದರೂ ವೈದ್ಯಕೀಯವಾಗಿ ಸತ್ತಿರಲಿಲ್ಲ. ಅದು ಕೋಮಾ ಸ್ಥಿತಿಯೂ ಆಗಿರಲಿಲ್ಲ.

ಈ ಯಾವುದೇ ಅಂಶ ಗೋಚರಿಸದಿದ್ದಾಗ ತನಿಖೆ ಸಂಕೀರ್ಣವಾಗತೊಡಗಿತು. ಹೀಗಾಗಿಯೇ ಆ ವೈದ್ಯರು ಸಾವಲ್ಲದ ಸಾವಿಗೆ, ಕಾರಣವಿಲ್ಲದ ಕಾರಣದಿಂದ ಇನ್ನಷ್ಟು ಸಮಸ್ಯೆ ಎದುರಾಗಬಹುದೆಂದು ಭಾವಿಸಿ ತಕ್ಷಣಕ್ಕೆ ಇಕ್ಕಟ್ಟಿನಿಂದ ಪಾರಾಗಲು " ಹೃದಯ ಸ್ಥಂಭನ" ಎಂದು ವರದಿ ನೀಡಿದ್ದರು.

ವಲಂಕಿಲರು ಸತ್ತಿದ್ದಾರೆಂದು ಅನ್ನಿಸಿದರೂ ಅದಕ್ಕೆ ಕಾರಣವಾದ ಅಂಶಗಳು ಸ್ಪಷ್ಟವಾಗಿರಲಿಲ್ಲ. ವೈದ್ಯಕೀಯ ಲೋಕಕ್ಕೆ ಇಂಥದ್ದೊಂದು ಸವಾಲು ಎದುರಾಗಿದ್ದು ಬಹುಶಃ ಇದೇ ಮೊದಲ ಸಲ ಇರಬಹುದು.

ನಾನು ಇಷ್ಟೆಲ್ಲ ವಿವರ ಒದಗಿಸಿದ ಮೇಲೂ ನಿಮ್ಮೆದುರು ಈಗ ಮೂರು ಪ್ರಶ್ನೆಗಳು ಮತ್ತು ನೂರಾರು ಅನುಮಾನಗಳು ಉಳಿದಿರಬಹುದು. ವರಂಕಿಲರಿದ್ದ ಕೋಣೆಯ ಬಾಗಿಲು ತಾನಾಗಿಯೇ ತೆಗೆದುಕೊಂಡಿದ್ದು ಹೇಗೆ? ಅಲ್ಲಿ ಎರಡು ಊಟದ ತಟ್ಟೆಗಳೇಕೆ ಇದ್ದವು? ಹಾಗೂ ಕಾಫಿ ಕುಡಿದ ನಾಲ್ವರು ಯಾರು?

ವರಂಕಿಲರು ಬೂಸನೂರಿಗೆ ಬಂದ ದಿನ ಸಂಜೆ ಅವರಿದ್ದ ಕೋಣೆಗೆ ಪರಿಸರವಾದಿಗಳಾದ ವಿಕಾಸ್ ಹೆಗಡೆ, ಪ್ರಕೃತಿ ನಾಯ್ಡು ಮತ್ತು ಪ್ರಜಾಸತ್ತಾತ್ಮಕ ಪಕ್ಷದ ನಾಯಕ ಧೃತಿ ಪವಾರ್ ಹೋಗಿದ್ದರು. ಹೀಗಾಗಿ ಅಲ್ಲಿ ನಾಲ್ಕು ಕಾಫಿ ಕಪ್‌ಗಳಿದ್ದವು. ಅವರು ವಾಪಸಾದ ನಂತರ ರಾತ್ರಿ ೮ ಗಂಟೆ ಹೊತ್ತಿಗೆ ವರಂಕಿಲರ ಸಹೋದ್ಯೋಗಿ ವಿಸ್ಮಯ ಪಾಟೀಲ್ ಹೋಗಿ ಅವರ ಜತೆ ಊಟ ಮಾಡಿ ಸುಮಾರು ಒಂಬತ್ತೂವರೆ ಗಂಟೆವರೆಗೆ ಅಲ್ಲೇ ಇದ್ದರು. ಹೀಗಾಗಿ ಅಲ್ಲಿ ಎರಡು ಊಟದ ತಟ್ಟೆಗಳಿದ್ದವು.

ಸುಮಾರು ೧೦ ಗಂಟೆ ಹೊತ್ತಿಗೆ ವರಂಕಿಲರ ಪತ್ನಿ ಮಹೇಶ್ವರಿ ಫೋನ್ ಮಾಡಿದ್ದಾರೆ. ಏಳು ನಿಮಿಷಗಳ ಕಾಲ ಇಬ್ಬರೂ ಮಾತನಾಡಿದ್ದಾರೆ. ಮಧ್ಯರಾತ್ರಿ ನಂತರ ೧೨.೨೦ಕ್ಕೆ ವರಂಕಿಲರು ತಮ್ಮ ಮೊಬೈಲ್‌ನಿಂದ ವಿಸ್ಮಯ ಪಾಟೀಲ್‌ಗೆ ಫೋನ್ ಮಾಡಿ ೧೩ ನಿಮಿಷಗಳ ಕಾಲ ಮಾತನಾಡಿದ್ದಾರೆ.

ಅಂದರೆ ವರಂಕಿಲರ ಕೊಲೆಯಲ್ಲದ, ಆತ್ಮಹತ್ಯೆಯಲ್ಲದ, ಹೃದಯ ಸ್ಥಂಭನವಲ್ಲದ, ಸಹಜ ಸಾವಲ್ಲದ ಸಾವು ರಾತ್ರಿ ೧೨.೩೩ರ ನಂತರ ಸಂಭವಿಸಿದೆ.

ಇದಕ್ಕೆ ಮುನ್ನ ರೂಂನ ಬಾಗಿಲು ಹಾಕುವ ಪ್ರಯತ್ನದಲ್ಲಿ ಬೋಲ್ಟ್ ಚೌಕಟ್ಟಿನ ರಂಧ್ರಕ್ಕೆ ಹೋಗದೆ ಹೊರಗೇ ಉಳಿದಿರುವುದನ್ನು ವರಂಕಿಲರು ಗಮನಿಸಿಲ್ಲ. ಹೀಗಾಗಿ ಹೊಟೆಲ್ ಕೆಲಸದ ಹುಡುಗ ರೂಂಗೆ ಹೋದಾಗ ಬಾಗಿಲು ತಾನಾಗಿಯೇ ತೆಗೆದುಕೊಂಡಿದೆ.

ಈ ಎಲ್ಲರನ್ನೂ ವಿಚಾರಣೆಗೆ ಒಳಪಡಿಸಿದಾಗ...

ವಿಕಾಸ್ ಮತ್ತು ಪ್ರಕೃತಿ

ನಾವು ವರಂಕಿಲರ ಬಗ್ಗೆ ಅಪಾರ ಗೌರವ ಇಟ್ಟುಕೊಂಡವರು. ನಮ್ಮ ಎಷ್ಟೋ ನಿರ್ಧಾರಗಳಿಗೆ ಅವರ ವಿಚಾರಗಳೇ ಆದರ್ಶವಾಗಿದ್ದವು. ಇಂಥಾ ವರಂಕಿಲರು ಉಷ್ಣ ವಿದ್ಯುತ್ ಸ್ಥಾವರದ ಪರವಾಗಿ ನಿಂತಿದ್ದು ನೋಡಿ ನಮಗೆ ಆತಂಕವಾಗಿತ್ತು. ಆ ಸಂಜೆ ಹೊಟೆಲ್‌ನಲ್ಲಿ ವರಂಕಿಲರ ನಿರ್ಧಾರ ಬದಲಿಸುವಂತೆ ಸಕಾರಣಗಳ ಸಹಿತ ಮನವಿ ಮಾಡಿದೆವು. ಬಹುರಾಷ್ಟ್ರೀಯ ಕಂಪೆನಿಯೊಂದರ ಮುಖ್ಯಸ್ಥನಿಂದ ಭಾರೀ ಕಾಣಿಕೆ ಪಡೆದು ಈ ಯೋಜನೆಗೆ ಅನುಮತಿ ನೀಡಲಾಗಿದೆ. ಇಂಥ ಯೋಜನೆಗೆ ನೀವು ಬೆಂಬಲಿಸಬಾರದು ಎಂಬ ನಮ್ಮ ಕೋರಿಕೆಗೆ ಅವರು ಸರ್ಕಾರದ ನಿರ್ಧಾರಕ್ಕೆ ಲಂಚ ಕಾರಣವಾಗಿದ್ದರೆ ಲಂಚ ಹಗರಣದ ವಿರುದ್ಧ ಹೋರಾಟ ನಡೆಸಬೇಕೇ ಹೊರತು ಯೋಜನೆಯ ವಿರುದ್ಧ ಅಲ್ಲ ಎಂದು ಪ್ರತಿಕ್ರಿಯಿಸಿದ್ದರು. ನೀವೇ ಟೀಕಿಸುತ್ತಿದ್ದ ಸರ್ಕಾರದ ಪರ ನಿಲುವು ತೆಗೆದುಕೊಂಡಿರುವುದು ಸರಿಯೇ ಎಂದು ಪ್ರಶ್ನಿಸಿದಕ್ಕೆ ತಾವು ಯೋಜನೆಯ ಪರವೇ ಹೊರತು ಸರ್ಕಾರದ ಪರ ಅಲ್ಲ ಅನ್ನುವ ಸಮಜಾಯಿಷಿ ನೀಡಿದ್ದರು. ಆದರೂ ಸ್ಥಾವರದಿಂದುಂಟಾಗುವ ಪರಿಸರ ಹಾನಿಯ ಸಮರ್ಥನೀಯ ಕಾರಣಗಳನ್ನು ಕೇಳಿ ಅವರು ಇಕ್ಕಟ್ಟಿಗೆ ಸಿಕ್ಕಿಕೊಂಡವರಂತೆ ಕಂಡು ಬಂದರು. "ಈ ನಾಡಿಗೆ ಈ ಯೋಜನೆ ಬೇಕು. ಆದರೆ ರಾಜಕಾರಣಿಗಳ ಹೊಟ್ಟೆ ತುಂಬಿಸುವುದಕ್ಕೆ

ಪತ್ನಿ ಮಹೇಶ್ವರಿ ನಾನು ಅವೊತ್ತು ರಾತ್ರಿ ಫೋನ್ ಮಾಡಿ ಎಲ್ಲಿದ್ದೀರಿ ಅಂದೆ. ಅದಕ್ಕವರು ಈ ಭೂಮಿ ಮೇಲಿದ್ದೇನೆ ಅಂದ್ರು, ಅವರು ತಿಂಗಳೂರಿನಲ್ಲಿದ್ದರೂ ಬೇರೆ ಕಡೆ ಪ್ರವಾಸ ಹೋಗಿದ್ದರೂ ಎಲ್ಲಿ ಉಳಿಯುತ್ತಿದ್ದರೆಂದು ಮಾತ್ರ ಹೇಳ್ತಿರಲಿಲ್ಲ. ಅವರ ಈ ವಿಚಿತ್ರ ಗುಣ ನನಗೆ ಅಭ್ಯಾಸವಾಗಿ ಹೋಗಿತ್ತು. ಹೀಗಾಗಿ ನಾನು ಅಷ್ಟೇನೂ ಇಂಪಾರ್ಟೆಂಟ್ ಅಲ್ಲದ ವಿಚಾರಗಳನ್ನು ಮಾತನಾಡಿದ ನಂತರ ಫೋನ್ ಕೆಳಗಿಟ್ಟಿದ್ದೆ. ಅವರು ದೇವರು ದಿಂಡರನ್ನು ನಂಬದಿದ್ದರೂ ತಮ್ಮ ತಂದೆ, ತಾಯಿಯೇ ನಿಜವಾದ ದೇವರು ಅನ್ನುತ್ತಿದ್ದರು. ತಾನೇನಾದ್ರೂ ಬ್ರಹ್ಮ ಆಗಿದ್ರೆ ಅಪ್ಪ, ಅಮ್ಮನ್ನ ಸಾಯೋಕೂ ಬಿಡೋಲ್ಲ ಅಂತ ಹುಚ್ಚು ಪ್ರೀತಿಯನ್ನು ಪ್ರಕಟಿಸುತ್ತಿದ್ದರು.

ಅಥವಾ ಇನ್ಯಾರೋ ವ್ಯಾಪಾರಿಯ ದುರ್ಲಾಭಕ್ಕಲ್ಲ" ಎಂದ ಅವರು ಮಾರನೇ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಮುಜುಗರ ತಪ್ಪಿಸಿಕೊಳ್ಳಲು ಕಾರಣ ಹುಡುಕುತ್ತಾ ಸರ್ಕಾರಕ್ಕೆ ಕೊಟ್ಟ ಮಾತಿಗೆ ತಪ್ಪಿ ನಡೆಯುವುದು ಹೇಗೆಂಬ ಆತಂಕದಲ್ಲಿದ್ದಂತೆ ಕಂಡು ಬಂದರು.

ಧೃತಿ ಪವಾರ್

ಪ್ರಜಾಸತ್ತಾತ್ಮಕ ಪಕ್ಷದ ಸರ್ಕಾರವಿದ್ದಾಗ ನಿಮ್ಮನ್ನು ಸಂಸ್ಕೃತಿ ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಿಸಿದ್ದೆವು. ಈಗ ನೋಡಿದರೆ ನೀವು ಜಾತ್ಯತೀತ ಪಕ್ಷ ಎಂದು ಹೇಳಿಕೊಳ್ಳುವ ಕೋಮುವಾದಿ ಹಾಗೂ ಭ್ರಷ್ಟ ಸರ್ಕಾರಕ್ಕೆ ಬೆಂಬಲಿಸುತ್ತಿದ್ದೀರಿ ಎಂದು ಆಕ್ಷೇಪಿಸಿದ್ದಕ್ಕೆ ವರಂಕಿಲರು ಕೋಪಿಸಿಕೊಂಡರು. ಯಾವುದೋ ಮಧಾರಿಗೆ ಬೋರ್ಡ್ ಅಥವಾ ಕಾರ್ಪೊರೇಷನ್ ಅಧ್ಯಕ್ಷ ಸ್ಥಾನ ಕೊಟ್ಟಿದ್ದಂತೆ ನನ್ನನ್ನು ಬ್ಲ್ಯಾಕ್ ಮೇಲ್ ಮಾಡುತ್ತಿದ್ದೀರಿ ಎಂದು ಆರೋಪಿಸಿದರು. ಸಾಹಿತಿಗಳು, ಕಲಾವಿದರು, ಬುದ್ಧಿ ಜೀವಿಗಳು ಸರ್ಕಾರದ ಆಶ್ರಯದಲ್ಲಿರುವ ಯಾವುದೇ ಸಂಸ್ಥೆಯ ಜವಾಬ್ದಾರಿ ವಹಿಸಿಕೊಳ್ಳಬಾರದು ಎಂಬುದು ನನ್ನ ನಿಲುವು. ಹೀಗಾಗಿ ನಿಮ್ಮ ಸರ್ಕಾರ ನನ್ನನ್ನು ಎಂಎಲ್‌ಸಿಯಾಗಿಸಿ ಮಂತ್ರಿ ಮಾಡುವ ಆಹ್ವಾನ ನೀಡಿದಾಗ ನಾನು ಒಪ್ಪಿಗೆ ಸೂಚಿಸಿರಲಿಲ್ಲ. ಆದರೆ ನಾಡಿನ ಸಾಂಸ್ಕೃತಿಕ ಬೆಳವಣಿಗೆ ದೃಷ್ಟಿಯಿಂದ ಸರ್ಕಾರದ ನಿಯಂತ್ರಣವಿಲ್ಲದ ಈ ಪ್ರಾಧಿಕಾರದಲ್ಲಿ ಕಾರ್ಯ ನಿರ್ವಹಿಸಬಹುದು ಎಂಬ ನಂಬಿಕೆಯಿಂದ ಒಪ್ಪಿಕೊಂಡಿದ್ದೆ. ಆದರೆ ಅನಂತರದ ಬೆಳವಣಿಗೆಗಳಿಂದ ನಾನು ಸಾಕಷ್ಟು ನೋವನುಭವಿಸಿದ್ದೆ. ಈಗ ವಿದ್ಯುತ್ ಯೋಜನೆ ಬೆಂಬಲಿಸುವ ಮೂಲಕ ನಾನೇನೋ ಸರ್ಕಾರವನ್ನು ಪರೋಕ್ಷವಾಗಿ ಬೆಂಬಲಿಸುತ್ತಿದ್ದೀನೇನೋ ಎಂಬ ಅನುಮಾನ ನನ್ನಲ್ಲೆ ಹುಟ್ಟುವಂತೆ ನೀವೆಲ್ಲ ಮಾತನಾಡುತ್ತಿದ್ದೀರಿ. ನನ್ನ ವೈಯಕ್ತಿಕ ನಿಲುವಿಗೂ, ಯಾವುದೇ ಪಕ್ಷದ ಸರ್ಕಾರಕ್ಕೂ ಯಾವ ಸಂಬಂಧವೂ ಇಲ್ಲದಿದ್ದರೂ ನನ್ನ ನಿಲುವನ್ನೂ ನಾನೇ ಪ್ರಶ್ನಿಸುವಂತೆ ಮಾಡುತ್ತಿದ್ದೀರಿ. ಗೇಟ್‌ಔಟ್. ದಯವಿಟ್ಟು ಹೊರಟು ಹೋಗಿ ಎಂದು ನನ್ನನ್ನು ಕಳಿಸಿಬಿಟ್ಟರು.

ಪತ್ನಿ ಮಹೇಶ್ವರಿ

ನಾನು ಅವೊತ್ತು ರಾತ್ರಿ ಫೋನ್ ಮಾಡಿ ಎಲ್ಲಿದ್ದೀರಿ ಅಂದೆ. ಅದಕ್ಕವರು ಈ ಭೂಮಿ ಮೇಲಿದ್ದೇನೆ ಅಂದ್ರು, ಅವರು ತಿಂಗಳೂರಿನಲ್ಲಿದ್ದರೂ ಬೇರೆ ಕಡೆ ಪ್ರವಾಸ ಹೋಗಿದ್ದರೂ ಎಲ್ಲಿ ಉಳಿಯುತ್ತಿದ್ದರೆಂದು ಮಾತ್ರ ಹೇಳ್ತಿರಲಿಲ್ಲ. ಅವರ ಈ ವಿಚಿತ್ರ ಗುಣ ನನಗೆ ಅಭ್ಯಾಸವಾಗಿ ಹೋಗಿತ್ತು. ಹೀಗಾಗಿ ನಾನು ಅಷ್ಟೇನೂ ಇಂಪಾರ್ಟೆಂಟ್ ಅಲ್ಲದ ವಿಚಾರಗಳನ್ನು ಮಾತನಾಡಿದ ನಂತರ ಫೋನ್ ಕೆಳಗಿಟ್ಟಿದ್ದೆ. ಅವರು ದೇವರು ದಿಂಡರನ್ನು ನಂಬದಿದ್ದರೂ ತಮ್ಮ ತಂದೆ, ತಾಯಿಯೇ ನಿಜವಾದ ದೇವರು

ಅನ್ನುತ್ತಿದ್ದರು. ತಾನೇನಾದ್ರೂ ಬ್ರಹ್ಮ ಆಗಿದ್ರೆ ಅಪ್ಪ, ಅಮ್ಮನ್ನ ಸಾಯೋಕೂ ಬಿಡೋಲ್ಲ ಅಂತ ಹುಚ್ಚು ಪ್ರೀತಿಯನ್ನು ಪ್ರಕಟಿಸುತ್ತಿದ್ದರು. ಆದರೆ ಅಷ್ಟೊಂದು ಪ್ರೀತಿಸುತ್ತಿದ್ದ ಅಪ್ಪ, ಅಮ್ಮ ಹಾಸಿಗೆ ಹಿಡಿದರೂ ಅವರನ್ನು ನೋಡೋಕೆ ಊರಿಗೂ ಹೋಗಿರ್ಲಿಲ್ಲ. ಅಪ್ಪ ಸತ್ತ ಸುದ್ದಿ ಬಂದರೂ ಅಂತ್ಯಕ್ರಿಯೆಯಲ್ಲೂ ಪಾಲ್ಗೊಳ್ಳಲಿಲ್ಲ. ಈಗ ಅವರ ಅಮ್ಮ "ರಾಧಾಕೃಷ್ಣ, ರಾಧಾಕೃಷ್ಣ" ಅಂತ ಕೋಮಾದಲ್ಲೂ ಕನವರಿಸ್ತಾ ಇದಾರೇಂತ ಯಾರೋ ಹೇಳಿದ್ರೂ ಅದನ್ನೂ ತಲೆಗೆ ಹಾಕ್ಕೊಳ್ಳಿಲ್ಲ. ಅವರ ಈ ವಿಚಿತ್ರ ನಡವಳಿಕೆಗೆ ಕಾರಣ ಏನೂಂತ ನನಗೆ ಅರ್ಥವಾಗ್ತಾ ಇಲ್ಲ. ಆದರೆ ಅವರ ಹುಟ್ಟೂರಿನಲ್ಲಾದ ಅನಿರೀಕ್ಷಿತ ಕೌಟುಂಬಿಕ ಬೆಳವಣಿಗೆಗಳ ಒತ್ತಡಗಳನ್ನು ಯಾರಿಗೂ ಹೇಳಿಕೊಳ್ಳಲಾಗದೆ ಈ ರೀತಿ ವರ್ತಿಸುತ್ತಿರಬಹುದು ಎಂಬ ಅನುಮಾನ ನನಗಿದೆ.

ಅವರು ತಮ್ಮ ಒಡಹುಟ್ಟಿದ ಅಣ್ಣ, ತಂಗಿಯನ್ನು ತುಂಬ ಪ್ರೀತಿಸ್ತಾರೆ. ನನಗೂ, ನನ್ನ ಮಕ್ಕಳಿಗೂ ನಿಸ್ವಾರ್ಥ ಪ್ರೇಮ ತೋರಿಸ್ತಾರೆ. ಆದರೆ ಅವರ ಪ್ರೀತಿ ಕೇವಲ ಮಾತಿನಲ್ಲಿ, ಭಾವನೆಯಲ್ಲಿ ಮಾತ್ರ ಉಳಿದು ಹೋಗಿದೆ ಅಂತ ನನಗೆ ಅನ್ನಿಸಿದೆ. ಅವರ ಅಣ್ಣ, ತಂಗಿಗೂ ತುಂಬ ಅಗತ್ಯ ಸಂದರ್ಭಗಳಲ್ಲೂ ಯಾವುದೇ ನೆರವು ನೀಡದೆ ಎಷ್ಟೋ ಸಲ ಮೌನ ವಹಿಸಿದ್ದನ್ನೂ ನಾನು ನೋಡಿದ್ದೇನೆ. ಅವರ ಪ್ರಕಾರ ಪ್ರೀತಿ ಮತ್ತು ಸಂಬಂಧದ ಡೆಫಿನಿಷನ್ ಏನೂಂತ ನನಗಿನ್ನೂ ಅರ್ಥವಾಗಿಲ್ಲ.

ಸಮಾಜದಲ್ಲಿ ತುಂಬ ಎತ್ತರದ ವ್ಯಕ್ತಿಯಾಗಿದ್ದರೂ ಅವರು ನಮ್ಮೆಲ್ಲರ ಬದುಕಿನ ಭವಿಷ್ಯವನ್ನು ನಿರ್ಲಕ್ಷಿಸಿದ ಬೇಜವಾಬ್ದಾರಿ ವ್ಯಕ್ತಿಯಂತೆ ನಮಗೆ ಕಾಣುತ್ತಿದ್ದರು. ಸಾರ್ವಜನಿಕ ಬದುಕಿನಲ್ಲಿ ತುಂಬ ಶಿಸ್ತಿನ ವ್ಯಕ್ತಿಯಾಗಿದ್ದರೂ ಮನೆಗೆ ಸಂಬಂಧಿಸಿದಂತೆ ಅಶಿಸ್ತು ಅವರ ಇನ್ನೊಂದು ಹೆಸರು ಎಂಬಂತೆ ವರ್ತಿಸುತ್ತಿದ್ದರು.

ಅವರು ಯಾವ ಕ್ಷಣ ಯಾವ ರೀತಿ ಇರ್ತಾರೆ, ಯಾವ ವಿಚಾರಕ್ಕೆ ಯಾವ ರೀತಿ ಪ್ರತಿಕ್ರಿಯಿಸ್ತಾರೆ ಅಂತ ನನಗೆ ಈವರೆಗೂ ನಿರೀಕ್ಷಿಸುವುದಕ್ಕೆ ಸಾಧ್ಯವಾಗಿಲ್ಲ.

ವಿಸ್ಮಯ ಪಾಟೀಲ್

ನಾನು ವರಂಕಿಲರ ಅರ್ಧದಷ್ಟು ವಯಸ್ಸಿನವಳಾಗಿದ್ದರೂ ಅವರ ಸಾಮಾಜಿಕ ಪ್ರಜ್ಞೆ ಮತ್ತು ಪ್ರಖರ ವೈಚಾರಿಕತೆಯ ಆಕರ್ಷಣೆಗೆ ಒಳಗಾಗಿದ್ದೆ. ಅವರೂ ಅಷ್ಟೇ. ಪತ್ನಿ, ಮಕ್ಕಳಿದ್ದರೂ ನನ್ನನ್ನು ಮಗುವಿನಂತೆ ಆಶ್ರಯಿಸುತ್ತಿದ್ದರು. ನಮ್ಮಿಬ್ಬರದು ಅತ್ಯಂತ ಸಹಜ ಆಧ್ಯಾತ್ಮಿಕ ಸಂಬಂಧವಾಗಿದ್ದರೂ ಏಕಾಂತದಲ್ಲಿ ಪರಸ್ಪರ ದೈಹಿಕವಾಗಿಯೂ ಹತ್ತಿರಾಗುತ್ತಿದ್ದೆವು. ವರಂಕಿಲರ ಪಾಲಿಗೆ ಕಾಮ ಅನ್ನುವುದು ಒಬ್ಬರಿಗೊಬ್ಬರು ಸೋತು ಗೆಲ್ಲುವ ಕಳಂಕ ರಹಿತ ಆತ್ಮೀಯ ಕ್ರೀಡೆಯಾಗಿತ್ತು. ಅದು ಅವರ ಭಾವ ತೀವ್ರತೆಗೆ ಆಪ್ತ ಸಂವೇದನೆಯ ಅತ್ಯಮೂಲ್ಯ ಕ್ಷಣ ಎನ್ನುತ್ತಿದ್ದರು. ಹೀಗಾಗಿ ನನ್ನ ಜತೆಗಿನ ಸಂಬಂಧದ ಬಗ್ಗೆ ಅವರಿಗೆ ಪಾಪ ಪ್ರಜ್ಞೆ ಇತ್ತೆಂದು ನನಗೆ ಯಾವತ್ತೂ ಅನ್ನಿಸಿರಲಿಲ್ಲ. ಅವರು ಯಾವುದೇ ಊರಿಗೆ ಹೋದರೂ ನನ್ನ ಅಗತ್ಯ ಅನಿವಾರ್ಯವಾಗಿರುತ್ತಿತ್ತು. ಆದರೆ ಆ ರಾತ್ರಿ ಹೊಟೆಲ್‌ನಲ್ಲಿ ನನ್ನನ್ನು 'ಮಗಳೇ' ಅಂತ ಸಂಬೋಧಿಸಿದರು. ತುಂಬು ಪ್ರೀತಿಯಿಂದ ತಲೆ ನೇವರಿಸಿ ಬದುಕನ್ನು ಅತಂತ್ರ ಮಾಡಿಕೊಳ್ಳದೆ ಗಟ್ಟಿಯಾಗು ಎಂದರು. ನನಗೇ ನಂಬಲಾಗದ ಅವರ ಆ ದಿನದ ವಿಚಿತ್ರ ಮಾತುಗಳಿಂದ ಬೇಸರ, ದುಃಖ, ಅಚ್ಚರಿ ಮೊದಲಾದ ಮಿಶ್ರಭಾವ ತುಂಬಿಕೊಂಡು ಹೊರ ನಡೆದಿದ್ದೆ.

ಆ ರಾತ್ರಿ ತಿಂಗಳೂರಿಗೆ ವಾಪಸಾಗಿ ಸ್ವಲ್ಪ ಹೊತ್ತು ಕಳೆದಿತ್ತು. ಮಧ್ಯರಾತ್ರಿ ನಂತರ ವರಂಕಿಲರಿಂದ ಬಂದ ಪೋನ್ ಎತ್ತಿಕೊಂಡು ಅಚ್ಚರಿಯಿಂದ, "ಇದೇನಿದು? ಈ ಹೊತ್ತಿನಲ್ಲಿ?" ಅಂತ ಪ್ರಶ್ನಿಸಿದೆ. ನಾನೀಗ ಸಂದರ್ಶನ ಮಾಡ್ತಿದೀನಿ ಅಂದ್ರು. ಅಲ್ಲಿ ಯಾರಿದ್ದಾರೆ ಅಂದಿದ್ದಕ್ಕೆ ನನ್ನೊಬ್ನೇ ಇದೀನಿ. ನನ್ನೊಳಗಿನ ಇನ್ನೊಬ್ಬ ವ್ಯಕ್ತಿಯ ಜತೆ ಮಾತಾಡ್ತಿದ್ದೇನೆ. ನನ್ನ ಅಂತರಂಗದ ಭಾವನೆಗಳು ಮತ್ತು ಕಾರ್ಯ ರೂಪಕ್ಕೆ ಬರುವ ನನ್ನ ನಿರ್ಧಾರಗಳು ಮುಖಾಮುಖಿಯಾಗಿವೆ. ನನ್ನ ಇಷ್ಟು ವರ್ಷದ ಬದುಕಿನಲ್ಲಿ ಭಾವನೆಗಳ ಗರ್ಭಪಾತವಾಗಿ ನನ್ನದಲ್ಲದ ನನ್ನದೇ ನಿರ್ಧಾರಗಳು ದತ್ತು ಮಕ್ಕಳಂತೆ ನನ್ನನ್ನು ಕೆಣಕುತ್ತಿವೆ ಅಂದರು.

ಅವರ ಅಷ್ಟೂ ಮಾತಿಗೂ ಸಕಾರಣಗಳಿದ್ದವು. ಬೂಸನೂರು ವಿದ್ಯುತ್ ಸ್ಥಾವರ ಕುರಿತ ನಿಲುವಿನಿಂದಾಗಿ ಮಾತ್ರ ಅವರು ಇದೇ ಮೊದಲ ಸಲ ವಿವಾದಕ್ಕೊಳಗಾಗಿರಲಿಲ್ಲ. ಅಪ್ರತಿಮ ಕನ್ನಡ ಪ್ರೇಮಿಯಾಗಿದ್ದ ಅವರು ಪ್ರಾಥಮಿಕ ಶಿಕ್ಷಣದಲ್ಲಿ ಇಂಗ್ಲಿಷ್ ಭಾಷಾ ಬೋಧನೆಗೆ ಒತ್ತಾಯಿಸಿ ಕನ್ನಡ ಹೋರಾಟಗಾರರ ಟೀಕೆಗೆ ಒಳಗಾಗಿದ್ದರು. ಕನ್ನಡ ಮಕ್ಕಳ ಕೀಳರಿಮೆ ಹೋಗಲಾಡಿಸಿ ಜಾಗತಿಕ ಅವಕಾಶಗಳನ್ನು ಪಡೆಯುವ ಸಲುವಾಗಿ ಇಂಗ್ಲಿಷ್ ಭಾಷೆ ವರ್ತಮಾನದ ಅನಿವಾರ್ಯ ಎನ್ನುವುದು ಅವರ ವಾದವಾಗಿತ್ತು. ಅದರ ಜತೆ ಜತೆಯಲ್ಲೇ ಎಲ್ಲರೂ ತನ್ನಂತೇ ಇಂಗ್ಲಿಷ್ ಪರವಾಗಿ ಮಾತನಾಡುತ್ತಾ ಮುಂದೊಂದು ದಿನ ಕನ್ನಡದ ದನಿಯೇ ಕೇಳದಂಥ ವಾತಾವರಣ ನಿರ್ಮಾಣವಾದೀತೆಂಬ ಊಹಿಸಿಕೊಳ್ಳಲೂ ಇಷ್ಟವಾಗದ ಚಿಂತೆ ಅವರನ್ನು ಕಾಡುತ್ತಿತ್ತು.

ಎಲ್ಲ ಬಾಬಾಗಳು, ಸ್ವಾಮೀಜಿಗಳನ್ನು ಕಂಡರೆ ಮೈಲಿಗೆಯಾದಂತೆ ಮೈಲುದೂರವೇ ಇರುತ್ತಿದ್ದ ವರಂಕಿಲರು, ಗಾಲೀಚ ಗಾವಣ ಸ್ವಾಮೀಜಿ ವಿಚಾರದಲ್ಲಿ ಮಾತ್ರ ವಿಸ್ಮೃತಿಗೆ ಒಳಗಾದವರಂತೆ ವರ್ತಿಸುತ್ತಿದ್ದರು. ಅವರೇ ಎಷ್ಟೋ ಸಲ ನನ್ನ ಬಳಿ "ಈ ಸ್ವಾಮೀಜಿಯನ್ನು ಕಂಡರೆ ಅದೇನೋ ನನ್ನಲ್ಲಿ ನಿಷ್ಕಾರಣ ಶರಣಾಗತಿ, ಪ್ರೀತಿ, ವಿಶ್ವಾಸ. ಅವರ ಮಾತಿನ ಮಾಯೆಯಲ್ಲಿ ನಾನು ಅನಪೇಕ್ಷಿತವಾಗಿ ವಿಹರಿಸಿದ್ದೇನೆ" ಎಂಬ ತಾತ್ಕಾಲಿಕ ಪರಾಧೀನ ಸ್ಥಿತಿಯ ನೋವನ್ನು ವ್ಯಕ್ತಪಡಿಸುತ್ತಿದ್ದರು. ಬದುಕಿನಷ್ಟೇ ಸಾವನ್ನೂ ಪ್ರೀತಿಸುವ ಎದೆಗಾರಿಕೆಯನ್ನು ಎಲ್ಲರೂ ಬೆಳೆಸಿಕೊಳ್ಳಬೇಕು ಎನ್ನುತ್ತಿದ್ದರು.

ಅವರು ತಾವೊಬ್ಬ EXCEPTIONAL ಮತ್ತು ಈಗಿನ ವ್ಯವಸ್ಥೆಗೆ MISFIT ಆಗಿರುವ ವ್ಯಕ್ತಿ ಎಂದು ಪ್ರಾಮಾಣಿಕವಾಗಿ ನಂಬಿಕೊಂಡಿದ್ದರು. ಆದರೆ ಎಷ್ಟೋ ಸಲ ಅವರ ವರ್ತನೆ ಅಂಥ ನಂಬಿಕೆಯನ್ನೇ ಪ್ರಶ್ನಿಸುವಂತಿದ್ದು. ನಮ್ಮ ಎಲ್ಲ ನಿಲುವುಗಳು ಅಂತರಂಗ ಒಪ್ಪುವಂತಿರಬೇಕು, ಆದರೆ ಇತರರಿಗೆ ಅಚ್ಚರಿ, ಆಘಾತ ಹುಟ್ಟಿಸುವಂತಿರಬೇಕು ಎನ್ನುತ್ತಿದ್ದರು. ಜೀನಿಯಸ್‌ಗಳಲ್ಲಿ ಎಕ್ಸೆಂಟ್ರಿಸಿಟಿ ಬೇಕಾಬಿಟ್ಟಿಯಾಗಿ ಇರುತ್ತದೇನೋ ಅಂತ ಅವರಿಂದಾಗಿ ನನಗೆ ಅನ್ನಿಸತೊಡಗಿತ್ತು.

ಡಾ॥ ಪಾರಿಜಾತ ಗೌಡ ತೀರ್ಮಾನ

ಕೆಲವು ದಿನಗಳ ಹಿಂದೆ ನ್ಯೂಯಾರ್ಕ್‌ನಲ್ಲಿ ಸಾವು, ಸತ್ತವ್ಯಕ್ತಿಗೆ ಮರು ಹುಟ್ಟು ಮತ್ತು ತದ್ರೂಪಿಗಳ ಸೃಷ್ಟಿ ಕುರಿತು ನಡೆದ ಅಂತರ್‌ರಾಷ್ಟ್ರೀಯ ಸಮಾವೇಶದ ನಂತರ ಅಪರಿಚಿತರೊಬ್ಬರು, ನನಗೆ ಇ-ಮೇಲ್ ಮಾಡಿ ಈವರೆಗೆ ನಂಬಿಕೊಂಡಿರುವ ಹಾಗೂ ವೈಜ್ಞಾನಿಕವಾಗಿ ಸಾಬೀತಾಗಿರುವ ಸಾವಿಗಿಂತ ವಿಭಿನ್ನ ರೀತಿಯಲ್ಲಿ ಸಾವು ಸಂಭವಿಸುವುದು ಸಾಧ್ಯವೇ ಎಂದು ಪ್ರಶ್ನಿಸಿದ್ದರು. ಅದಕ್ಕೆ ನಾನು, ಈಗ ನಿಮಗೆ ವಿವರಿಸಿದಂತೆ ಸಾವು ಸಂಭವಿಸುವ ಎಲ್ಲ ಅಂಶಗಳನ್ನು ವಿವರಿಸಿ ಇನ್ಯಾವ ರೀತಿಯಲ್ಲೂ ಸಾವು ಸಂಭವಿಸುವುದು ಸಾಧ್ಯವೇ ಇಲ್ಲ ಎಂದು ಉತ್ತರಿಸಿದ್ದೆ. ಈ ಮನುಷ್ಯನ ಪ್ರಶ್ನೆಗೆ ನನ್ನಷ್ಟಕ್ಕೇ ನಾನು ನಕ್ಕು ಎಲ್ಲೋ ಹುಚ್ಚ ಇರಬೇಕು ಅಂದುಕೊಂಡಿದ್ದೆ. ಅದಕ್ಕೆ ಪ್ರತ್ಯುತ್ತರವಾಗಿ ಆ ಆಸಾಮಿ, ನೀವು ಸತ್ತ ವ್ಯಕ್ತಿಗೆ ಮರುಹುಟ್ಟು ನೀಡುವ ಬಗ್ಗೆ ಚರ್ಚೆ ನಡೆಸುವುದಾದರೆ, ಸಾವು ಈವರೆಗಿನ ಎಲ್ಲ ನಂಬಿಕೆಯನ್ನೂ ಭೇದಿಸುವಂತೆ ಬೇರೆಯೇ ರೀತಿಯಲ್ಲಿ ಸಂಭವಿಸುವ ಸಾಧ್ಯತೆ ಬಗ್ಗೆ ಏಕೆ ಚಿಂತಿಸಿಲ್ಲ ಎಂದು ಪ್ರಶ್ನಿಸಿದ್ದರು. ಎಷ್ಟೋ ಸಲ ಸಾವನ್ನಪ್ಪಿದ್ದಾರೆ ಎಂದು ವೈದ್ಯರು ಸರ್ಟಿಫೈ ಮಾಡಿದ ವ್ಯಕ್ತಿಗಳು ಮತ್ತೆ ಜೀವಂತವಾದಾಗ ಅದೊಂದು ಪವಾಡ ಎಂದೇ ವರ್ಣಿಸುತ್ತಾ ಬಂದಿದ್ದೀರಿ. ಆದರೆ ವೈಜ್ಞಾನಿಕ ವ್ಯಾಪ್ತಿಗೆ ಈವರೆಗೂ ನಿಲುಕದ ಅದೆಷ್ಟೋ ಪ್ರಾಕೃತಿಕ ಸತ್ಯಗಳಲ್ಲಿ ಸಾವಿನ ಇನ್ನೊಂದು ಸಾಧ್ಯತೆಯನ್ನು ಒಪ್ಪಿಕೊಳ್ಳಲು ನೀವ್ಯಾರೂ ಸಿದ್ಧರಿಲ್ಲ. ವೈಜ್ಞಾನಿಕವಾಗಿ ಸಾಬೀತಾದ ಅಂಶಗಳು ಮಾತ್ರ ಅಂತಿಮ ಸತ್ಯವಲ್ಲ ಎಂಬುದನ್ನು ಸಾವಿನ ವಿಚಾರದಲ್ಲಿ ಮಾತ್ರ ನಿಮಗೆ ಹೊಳೆಯದಿರುವುದು ವಿಚಿತ್ರ ಎಂದು ಅವರು ನಮ್ಮನ್ನೇ ದಡ್ಡರೆಂಬಂತೆ ಟೀಕಿಸಿದ್ದರು. ಇಲ್ಲಿಗೆ ಬಂದ ಮೇಲೆ ನನಗೆ ಇ-ಮೇಲ್ ಮಾಡಿದ ವಿ. ರಾಧಾಕೃಷ್ಣ ಎಂಬ ವ್ಯಕ್ತಿ ಈ ವರಂಕಿಲರು ಎಂದು ಗೊತ್ತಾದಾಗ ನಿಜಕ್ಕೂ ಆಘಾತಕ್ಕೊಳಗಾದೆ. ನಾನು ವಿಚಾರಣೆ ನಡೆಸಿದ ಈ ಎಲ್ಲರ ಮಾತುಗಳಲ್ಲಿ ಒಂದು ಸಮಾನ ಅಂಶ ಇದೆ.

ವರಂಕಿಲರಿಗೆ ಇತ್ತೀಚಿನ ದಿನಗಳಲ್ಲಿ ತಮ್ಮ ಭಾವನೆಗಳ ಜತೆ ತಾಕಲಾಟ ತೀವ್ರಗೊಂಡಿತ್ತು. ವಿವಿಧ ಸಂದರ್ಭ, ಒತ್ತಡಗಳ ಕಾರಣ ಅವರು ಅಂದುಕೊಂಡಿದ್ದಕ್ಕೆ, ತೆಗೆದುಕೊಳ್ಳುತ್ತಿದ್ದ ತೀರ್ಮಾನಕ್ಕೂ ಸಪ್ತಸಾಗರ ಅಂತರವಿರುತ್ತಿತ್ತು. ಆದರೆ ಅವರ ಪಾಲಿಗದು ದ್ವಂದ್ವ, ವೈರುಧ್ಯ ಅಥವಾ ಗೊಂದಲವಾಗಿರಲಿಲ್ಲ. ತನ್ನಂತರಂಗದ ಬಯಕೆಗೆ ವಿರುದ್ಧವಾಗಿ ತೆಗೆದುಕೊಳ್ಳುತ್ತಿದ್ದ ನಿಸ್ವಾರ್ಥದ ತೀರ್ಮಾನಗಳು ತಮ್ಮದಲ್ಲ ಅಂತ ಅವರಿಗೆ ಅನ್ನಿಸಲಾರಂಭಿಸಿತ್ತು. ಯಾಕೆಂದರೆ ರಕ್ತದ ಕಣಕಣದಲ್ಲೂ, ಪ್ರತಿಯೊಂದು ಉಸಿರಿನಲ್ಲೂ ದಟ್ಟವಾಗಿದ್ದ ಭಾವನೆಗಳೇ ಅವರ ಕ್ರಿಯಾಶೀಲ ಬದುಕಿನ ನಿಜ ಚೈತನ್ಯವಾಗಿತ್ತು. ಭಾವನೆಗಳು ವಾಸ್ತವದಲ್ಲಿ ಫಲಿಸದೆ ತನ್ನೊಳಗೇ ಸಾಯುತ್ತಿವೆ ಎಂದು ಖಚಿತವಾದಾಗ ಅವರು ಸಾವಲ್ಲದ ಸಾವಿನ ಸ್ಥಿತಿ ತಲುಪಿದ್ದಾರೆ. ಅಂದರೆ ಅವರಿಗೆ ತಾವು ಸತ್ತಿರುವುದು ಸ್ವತಃ ಖಾತ್ರಿಯಾಗಿದೆ. ಆದರೆ ಅದು ಇಚ್ಛಾಮರಣವಲ್ಲ, ಅವರ ಅರಿವಿಗೆ ಬಂದ ಸಾವು. ರಕ್ತದಲ್ಲಿ ಹಿಮೋಗ್ಲೋಬಿನ್ ಪ್ರಮಾಣ ತೀವ್ರವಾಗಿ ಇಳಿಮುಖಗೊಂಡರೆ ಹೇಗೆ ಸಾವು ಸಂಭವಿಸುತ್ತದೋ ಹಾಗೆ ಕಾರ್ಯರೂಪಕ್ಕೆ ಬಾರದ ಸತ್ತ ಭಾವನೆಗಳಿಂದಾಗಿ, ಈವರೆಗಿನ ಸಾವಿನ ನಂಬಿಕೆಗಳ ಲೆಕ್ಕಾಚಾರಕ್ಕೆ ನಿಲುಕದ ರೀತಿಯಲಿ ಅವರು ವಿದಾಯ ಹೇಳಿದ್ದಾರೆ. ಬದುಕಿನಲ್ಲೂ ವಿಚಿತ್ರ, ವಿಲಕ್ಷಣ, ವಿಕ್ಷಿಪ್ತ ವ್ಯಕ್ತಿತ್ವದಿಂದ ಸದಾ ಸುದ್ದಿಯಾಗುತ್ತಿದ್ದ ವರಂಕಿಲರು ಸಾವಿನಲ್ಲೂ ವಿಭಿನ್ನ, ವಿಶಿಷ್ಟ, ಹೊಸ ಸತ್ಯವೊಂದನ್ನು ದಾಖಲಿಸಿದ್ದಾರೆ.

ಡಾ॥ ಪಾರಿಜಾತ ಗೌಡ ಇಡೀ ಜಗತ್ತೇ ನಿಬ್ಬೆರಗಾಗುವಂತೆ ವೈದ್ಯಕೀಯ ವಿಜ್ಞಾನಕ್ಕೇ ಸವಾಲೆಸೆಯುವಂಥ ಕಾಲಾತೀತ ಸತ್ಯವೊಂದನ್ನು ಮಂಡಿಸಿದಾಗ ಅಲ್ಲಿ ಗಾಢ ಮೌನ ನೆಲಸಿತ್ತು. □

ಮೀಸಲಾತಿ ತಡೆಗೆ ನ್ಯಾಯಂಗ ಕೊಟ್ಟಿರುವ ಕಾರಣವೆಂದರೆ, ಮಂಡಲ ಮೊಕದ್ದಮೆಯಲ್ಲಿ ಹಿಂದುಳಿದ ವರ್ಗಗಳನ್ನು ಗುರ್ತಿಸುವಲ್ಲಿ ಅನುಸರಿಸಿದ ಮಾನದಂಡ ಮತ್ತು ೧೯೩೧ರ ಅಂಕಿಅಂಶಗಳನ್ನು ಸರ್ಕಾರ ತೋರಿಸುತ್ತಿರುವುದು ಸಮಂಜಸವಲ್ಲ ಎಂಬ ಅಸಮಾಧಾನ. ಒಂದು ರೀತಿಯಿಂದ ನ್ಯಾಯಾಂಗವು ಸರ್ಕಾರಕ್ಕೆ ಪುನಃ ಆ ಅಂಕಿಅಂಶಗಳ ಮೇಲೆ ಮರುವೀಕ್ಷಣೆಯನ್ನು ಮಾಡಲು ಒಂದು ಅವಕಾಶವನ್ನು ನೀಡಿದಂತಾಗಿದೆ. ಮತ್ತು ಕೆನೆಪದರಿನವರನ್ನು ಇದರಿಂದ ಹೊರತುಪಡಿಸಲು ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳಲು ಕೂಡ ಅವಕಾಶ ಕೊಟ್ಟಿರುವುದು ಒಂದರ್ಥದಲ್ಲಿ ನಿಜವಾಗಿ ಹಿಂದುಳಿದ ಜನರು ಅದರ ಲಾಭಪಡೆಯಲು ಎಂದು ನಾವು ಸಕಾರತ್ಮಕವಾಗಿ ಅರ್ಥಮಾಡಿಕೊಂಡರೂ, ಅದು 'ಮಿಸಲಾತಿಯ' ಬಗ್ಗೆ ವ್ಯಕ್ತಪಡಿಸಿರುವ ಅಭಿಪ್ರಾಯವು ನಕಾರತ್ಮಕವಾಗಿದೆ

ಮನೋರಂಜಿನಿ

ನ್ಯಾಯಾಲಯಗಳ ಹಂಗಿನಲ್ಲಿ ಮೀಸಲಾತಿ

ಪ್ರಸ್ತುತ ದಿನಗಳಲ್ಲಿ ಸರ್ವೋಚ್ಚನ್ಯಾಯಾಲಯದ ತೀರ್ಪುಗಳನ್ನು ನೋಡುವಾಗ ಇದು ನಮ್ಮ ಸಂವಿಧಾನದ ತತ್ವಗಳಿಗೆ ವಿರುದ್ಧ ನಿಲುವನ್ನು ತಾಳುತ್ತಿರುವುದು ಮತ್ತು ಶಾಸಕಾಂಗ ಮತ್ತು ನ್ಯಾಯಂಗದಲ್ಲಿ ಘರ್ಷಣೆಯನ್ನು ಉಂಟುಮಾಡುತ್ತಿರುವಂತ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿರುವುದು ಸ್ಪಷ್ಟವಾಗುತ್ತಿದೆ. ಈ ತೀರ್ಪುಗಳು ಪ್ರಬಲ ವರ್ಗ ಮತ್ತು ದುರ್ಬಲ ವರ್ಗಗಳ ಪ್ರಬಲ ತಿಕ್ಕಾಟಕ್ಕೆ ಎಡೆಯನ್ನುಂಟು ಮಾಡುತ್ತಿದೆ. ಇದನ್ನು ಒಂದು ಮಾತಿನಲ್ಲಿ ಹೇಳುವುದಾದರೆ 'ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ' ಎಂಬ ಗಾದೆ ಮಾತಿನಂತಿದೆ. ಈ ರೀತಿಯ ಅಭಿಪ್ರಾಯವನ್ನು ನಾನು ವ್ಯಕ್ತಪಡಿಸಲು ಈ ಕೆಳಗಿನ ಎರಡು ತೀರ್ಪುಗಳು ಸ್ಪಷ್ಟ ಉದಾಹರಣೆಗಳಾಗಿವೆ.

ಮೊದಲನೇಯದು, ಜನವರಿ ೧೧ರಂದು ಐ.ರ್.ಕೋಯಿಲ್ ತಮಿಳುನಾಡು ಸರ್ಕಾರದ ಮೊಕದ್ದಮೆಯಲ್ಲಿ ನಮ್ಮ ಸಂವಿಧಾನದ ೯ನೇ ಅನುಸೂಚಿಯಲ್ಲಿನ ಕಾಯಿದೆಯಾದ ತಮಿಳುನಾಡು ಸರ್ಕಾರದ ಹಿಂದುಳಿದ ವರ್ಗಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಶೈಕ್ಷಣಿಕ ಸಂಸ್ಥೆಗಳ ಸರ್ಕಾರಿ ಉದ್ದೆಗಳಲ್ಲಿ ಮೀಸಲಾತಿ) ಕಾಯಿದೆ ೧೯೯೩ರನ್ನು ನ್ಯಾಯಿಕ ಪುನರ್‌ವಿಮರ್ಶೆಗೆ ಸಂವಿಧಾನದ ವಿರುದ್ಧವಾಗಿ ಕೈಗೆ ತೆಗೆದುಕೊಂಡಿರುವುದು. ಈ ಮೊಕದ್ದಮೆಯಲ್ಲಿ 'ಪ್ರಜಾಪ್ರಭುತ್ವ' ಸರ್ಕಾರದ ಅಧಿಕಾರವನ್ನು ನ್ಯಾಯಾಂಗವು ತನ್ನ ಹತೋಟಿಗೆ ತೆಗೆದುಕೊಳ್ಳುತ್ತಿರುವುದು.

ಈ ತೀರ್ಪನ್ನು ನಾವು ವಿಶ್ಲೇಷಿಸುವಾಗ ನಮ್ಮ ಸರ್ಕಾರ ಪ್ರಜಾಪ್ರಭುತ್ವ ಸರ್ಕಾರ ಅದಕಾಗಿಯೇ ಅದು ಅಧಿಕಾರ ವಿಕೇಂದ್ರಿಕರಣ ನೀತಿಯನ್ನು ಪಾಲಿಸಬೇಕಾಗುತ್ತದೆ. ಅಧಿಕಾರ ವಿಕೇಂದ್ರಿಕರಣ ನೀತಿಯು ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗಗಳನ್ನು ಬೇರ್ಪಡಿಸುವುದರ ಮೂಲಕ ಆಂತರಿಕವಾಗಿ ಅಧಿಕಾರ ಕೇಂದ್ರೀಕೃತವಾಗದಂತೆ ಒಂದರ ಮೇಲೊಂದು ಪರಿವೀಕ್ಷಣೆಯನ್ನು ಮಾಡುವುದರ ಮೂಲಕ ಅಧಿಕಾರವಿಕೇಂದ್ರಿಕರಣವನ್ನು ಸರಿತೂಗಿಸುತ್ತಿದೆ. ಆದರೂ, ಪ್ರಜಾಪ್ರಭುತ್ವ ಅರ್ಥವನ್ನು ಸಂಪೂರ್ಣ ಫಲಪ್ರದವನ್ನಾಗಿ ಮಾಡಲು ಅದು ಶಾಸಕಾಂಗಕ್ಕೆ ಸಂವಿಧಾನದ ಯಾವುದೇ ಅನುಚ್ಛೇದಗಳನ್ನು ತಿದ್ದುಪಡಿಮಾಡುವ, ತೆಗೆದುಹಾಕುವ ಮತ್ತು ಸೇರಿಸುವ ಅಧಿಕಾರವನ್ನು ೩೬೮ರಲ್ಲಿ ನೀಡಿದೆ. ಇದು ಸರ್ವೋಚ್ಚನ್ಯಾಯಲಯಕ್ಕೆ ನೀಡಿಲ್ಲವಾದರೂ, ಶಾಸಕಾಂಗ ಮಾಡುವ ಕಾನೂನುಗಳು ಜನರ ಹಿತಸಕ್ತಿಗೆ ಮತ್ತು ಮೂಲಭೂತಹಕ್ಕುಗಳಿಗೆ ಚ್ಯುತಿಯನ್ನು ಉಂಟು ಮಾಡುವಂತಿದ್ದರೆ ಯಾರಾದರು ಕಾನೂನಿನ ಮೂಲಕ ಮೊರೆ ಹೋಗಬಹುದು ಮತ್ತು ಅದರ ತೀರ್ಪನ್ನು ಎಲ್ಲ ಅಂಗಗಳು ಪಾಲಿಸಬೇಕಾಗುತ್ತದೆ.

ಶಾಸಕಾಂಗವು ಸಂವಿಧಾನದ ಈ ಅಧಿಕಾರದ ಮೂಲಕ ನಮ್ಮ ಸಂವಿಧಾನಕ್ಕೆ ಮೊದಲನೇಯ ತಿದ್ದುಪಡಿಯನ್ನು ೧೯೫೧ರಲ್ಲಿ ತರುವುದರ ಮೂಲಕ ೩೧-ಎ ಅನುಚ್ಛೇದವನ್ನು ಜನಹಿತಾಸಕ್ತಿಯ ಕೆಲವು ಕಾಯಿದೆಗಳನ್ನು ರಕ್ಷಿಸುವ ಅನುಚ್ಛೇದವನ್ನಾಗಿ ಮಾಡಿತು. ಅಲ್ಲದೆ ೩೧-ಬಿಯನ್ನು ೯ನೇ ಅನುಸೂಚಿಯಲ್ಲಿರುವ ಭೂಸುಧಾರಣ ಕಾಯಿದೆಗಳನ್ನು ಮತ್ತು ಇತರೆಕಾಯಿದೆಗಳನ್ನು ರಕ್ಷಿಸುವ ಅನುಸೂಚಿಯನ್ನಾಗಿ ಮಾಡುವುದಲ್ಲದೆ ಈ ಅನುಸೂಚಿಯಲ್ಲಿ ಬರುವ ಕಾಯಿದೆಗಳು ಶೂನ್ಯವಲ್ಲ ಮತ್ತು ಅವು ಯಾವಾಗಲೂ ಶೂನ್ಯವಾಗುವುದಿಲ್ಲ ಎಂದು ತಿಳಿಸುತ್ತದೆ. ಮತ್ತು ಈ ಕಾಯಿದೆಗಳನ್ನು ಯಾವ ಕೋರ್ಟ್‌ಗಳಾಗಲಿ, ನ್ಯಾಯಸ್ಥಾನಗಳಾಗಲಿ, ತೀರ್ಪುಗಳಾಗಲಿ ಕಾಯಿದೆಯನ್ನು ರದ್ದುಮಾಡುವಂತಿಲ್ಲ ಶೂನ್ಯಗೊಳಿಸುವಂತಿಲ್ಲ; ಈ ಅನುಸೂಚಿಯಲ್ಲಿ ಕಾಯಿದೆಗಳನ್ನು ಸೇರಿಸುವ ಅಧಿಕಾರ ಶಾಸಕಾಂಗಕ್ಕೆ ಮಾತ್ರವಿರುವುದು. ನ್ಯಾಯಾಂಗಕ್ಕೆ ಅಥವಾ ನ್ಯಾಯಸ್ಥಾನಗಳಿಗೆ ಈ ಅನುಸೂಚಿಯ ಮೇಲೆ ಅಧಿಕಾರವಿಲ್ಲ ಅವು ಮೂಲಭೂತ ಹಕ್ಕುಗಳಿಗೆ ಚ್ಯುತಿಯನ್ನುಂಟುಮಾಡುವಂತ್ತಿದ್ದರೆ ಮತ್ತು ಸಂವಿಧಾನದ ಮೂಲಸ್ವರೂಪವನ್ನು ಅಳಿಸುವಂತಾದಗ ಮಾತ್ರ ಅವುಗಳನ್ನು ಯಾರದರೂ ಪ್ರಶ್ನಿಸಬಹುದು ಎಂದು ಕೇಶವಾನಂದ ಭಾರತಿ ಮೊಕದ್ದಮೆಯಲ್ಲಿ ೧೩ ನ್ಯಾಯಾದೀಶರನ್ನು ಒಳಗೊಂಡ ನ್ಯಾಯಪೀಠವು ಕೂದಲು ಎಳೆಯಷ್ಟು ೭:೬ ಬಹುಮತದೊಂದಿಗೆ ೯ಅನುಸೂಚಿಗೆ ಸಕಾರಾತ್ಮ ಪುಷ್ಟಿನೀಡಿ ೧೧೮ ಕಾಯಿದೆಗಳನ್ನು ಇದಕ್ಕೆ ಸೇರಿಸಲಾಯಿತು.

ತರುವಾಯ ಬಂದ ವಾಮನ್ ರಾವ್ ೧೯೮೧ ತೀರ್ಪಿನಲ್ಲಿ

'೯ನೇ ಅನುಸೂಚಿಯಲ್ಲಿ ಭೂಸುದಾರಣಾಕಾಯಿದೆಗಳ ಮೂಲಕ ಆಸ್ತಿಯಲ್ಲಿ ಸಮಾನ ವಿತರಣೆಯಾಗಿರುವುದು ಕಂಡುಬಂದಿರುವುದರಿಂದ ಅನುಚ್ಚೇದ ೧೪ - ಸಮಾನತೆ ಅನುಚ್ಚೇಧ ೧೯- ಸ್ವಾತಂತ್ರ್ಯ ಮತ್ತು ಅನುಚ್ಚೇಧ ೩೧ - ಕಡ್ಡಾಯ ಸ್ವತ್ತಿನ ಸ್ವಾಧೀನ ಪಡಿಸಿಕೊಳ್ಳುವುದು ಇವುಗಳನ್ನು ಎತ್ತಿಹಿಡಿದಂತಾಗಿದೆ ಆದ್ದರಿಂದ ೯ನೇ ಅನುಸೂಚಿಯನ್ನು ಅಸಿಂದುತ್ವ ಮಾಡುವುದರಿಂದ ಸಮಾಜದಲ್ಲಿ ಕಾನೂನಿನ ಕಾರ್ಯಾಚರಣೆಯಲ್ಲಿ ಗೊಂದಲ ತರುವುದು ಅಸಂಮಜ ವೆನಿಸುತ್ತದೆ' ಎಂಬ ಅಂಶವನ್ನು ಸ್ಪಷ್ಟಪಡಿಸಿ ಈ ಅನುಸೂಚಿಯ ಪರವಾಗಿ ಅಭಿಪ್ರಾಯ ಸೂಚಿಸಿತು. ಹೀಗೆ ಪ್ರಜಾಪ್ರಭುತ್ವ ನೀತಿಗೆ ಈ ತೀರ್ಪುಗಳು ಪರವಾಗಿದ್ದವು.

ಐರ್. ಕೊಹಿಲೋ ವಿರುದ್ದ ತಮಿಳುನಾಡು ಸರ್ಕಾರ ಮೊಕದ್ದಮೆಯಲಿ . ತಮಿಳುನಾಡು ಸರ್ಕಾರವು ಹಿಂದುಳಿದ ವರ್ಗಗಳ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಶೈಕ್ಷಣಿಕ ಸಂಸ್ಥೆಗಳಲ್ಲಿ ಸರ್ಕಾರಿ ಉದ್ಯೋಗಗಳ ಮೀಸಲಾತಿ) ಕಾಯಿದೆ ೧೯೯೮ ವಿವಾದಾಸ್ಪದ ಕಾಯಿದೆಯಾಗಿದೆ. ಈ ಕಾಯಿದೆಯ ಪ್ರಕಾರ ಶೇ೬೯% ರಷ್ಟು ಮೀಸಲಾತಿಯನ್ನು ಈ ವರ್ಗಗಳಿಗೆ ನೀಡಿರುವುದು. ಸರ್ವೋಚ್ಚನ್ಯಾಯಾಲಯದ ಮಂಡಲ್ ಮೊಕದ್ದಮೆಯ ೧೯೯೩ರಲ್ಲಿ ತೀರ್ಪಿನ ಪ್ರಕಾರ ಮೀಸಲಾತಿಯು ನೈಜಕಾರಣಗಳನ್ನು ಹೊರತು ಪಡಿಸಿ ೫೦%ಕ್ಕಿಂತ ಹೆಚ್ಚಿಗೆ ಇರಬಾರದು ಎಂಬ ತೀರ್ಪಿಗೆ ವಿರುದ್ದವಾಗಿದೆ ಎಂದು (ಗ್ರಾಹಕರ ಕಾಳಜಿ) ಸಂಸ್ಥೆಯು ತಮಿಳುನಾಡು ಸರ್ಕಾರದ ವಿರುದ್ಧ ಈ ಮೊಕದ್ದಮೆ ದಾಖಲಿಸಿದೆ.

ಆದರೆ ಈ ಕಾಯಿದೆಯ ಮಂಡಲ್ ತೀರ್ಪಿಗೆ ವಿರುದ್ದವಾಗಿಲ್ಲ ಏಕೆಂದರೆ ಅದರ ಪ್ರಕಾರ ಪರಿಶಿಷ್ಟ ಜಾತಿಯ ಜನಸಂಖ್ಯೆಯು ೧೯.೨% ಪರಿಶಿಷ್ಟ ಪಂಗಡ ಶೇ ೧% ಮತ್ತು ಇತರೆ ಹಿಂದುಳಿದ ಜನಾಂಗದವರು ಶೇ ೬೩.೮% ಜನಸಂಖ್ಯೆಯಲ್ಲಿರುವರು , ಅವರ ಮೀಸಲಾತಿಯು ಪರಿಶಿಷ್ಟ ಜಾತಿಗೆ ೧೯% ಪ.ಪಂ. ೩೦% ಹಿಂದುಳಿದ ವರ್ಗಕ್ಕೆ ಮತ್ತು ಅತಿ ಹಿಂದುಳಿದವರ್ಗಕ್ಕೆ ೨೦% ಒಟ್ಟು ಈ ಮೂರು ವರ್ಗಗಳ ಮೀಸಲಾತಿಯನ್ನು ಕ್ರೂಢೀಕರಿಸಿದರಿಂದ ಅದು ೬೯% ಆಗುತ್ತದೆ. ಮಂಡಲ್ ಮೊಕದ್ದಮೆಯ ಪ್ರಕಾರವೇ ತಮಿಳುನಾಡು ಸರ್ಕಾರ ಈ ಕಾಯಿದೆಯಲ್ಲಿ ಗೊತ್ತುಪಡಿಸಿರುವುದು ಅದಕ್ಕಾಗಿಯೇ ಈ ಮೊಕದ್ದಮೆಯನ್ನು ಸರ್ವೋಚ್ಚ ನ್ಯಾಯಾಂಗ ತನ್ನ ವೀಕ್ಷಣೆ ತೆಗೆದು ಕೊಂಡಿರುವುದರಲ್ಲಿ ಅರ್ಥವಿಲ್ಲ ಅದು ಕೇವಲ ತನ್ನ ಬಲ ಪ್ರಯೋಗ ಮಾಡಲು ಹೊರಟಿರುವುದು ಅಧಿಕಾರವಿಕೇಂದ್ರಿಕರಣ ನೀತಿಗೆ ವಿರುದ್ದವಾಗಿದೆ. ಸರ್ವೋಚ್ಚ ನ್ಯಾಯಾಂಗದ ತೀರ್ಪುಗಳನ್ನು ಯಾರು ಪ್ರಶ್ನಿಸು ವಂತಿಲ್ಲವಾದರಿಂದ ಇದು ಎಲ್ಲ ಅಧಿಕಾರವನ್ನು ತನ್ನ ಹತೋಟಿಗೆ ತೆಗೆದು ಕೊಂಡಂತಾಗಿದೆ. ಅದು ಶಾಸಕಾಂಗದಲ್ಲಿರುವುದರಿಂದ ಜನರು ಈ ಕಾಯಿದೆಗಳ ದುರುಪಯೋಗಕ್ಕೆ ಜನ ಪ್ರತಿನಿಧಿಗಳನ್ನು ಪ್ರಜಾಪ್ರಭುತ್ವ ಅರ್ಥದಲ್ಲಿ ಹೊಣೆಗಾರರನ್ನಾಗಿ ಮಾಡಬಹುದು ಆದರೆ ನ್ಯಾಯಾಂಗದಲ್ಲಿ ಯಾರನ್ನೂ ಹೊಣೆಮಾಡಲು ಸಾಧ್ಯವಿಲ್ಲ.

ಎರಡನೆಯದು, ಪ್ರಮುಖ ಶೈಕ್ಷಣಿಕ ಸಂಸ್ಥೆಗಳ (ಪ್ರವೇಶದಲ್ಲಿ ಮೀಸಲಾತಿ) ಕಾಯಿದೆ ೨೦೦೬ ರ ಜಾರಿಗೆ ತಡೆ ಆದೇಶವನ್ನು ಹೊರಡಿಸಿರುವುದು. ಈ ತೀರ್ಪಿನ್ನು ನಾವು ಎರಡು ದೃಷ್ಟಿಕೋನಗಳಿಂದ ನೋಡಬಹುದು ಈ ಕಾಯಿದೆಯ ಪ್ರಕಾರ ೨೭% ಮಿಸಲಾತಿಯನ್ನು ಇತರೆ ಹಿಂದುಳಿದ ವರ್ಗಗಳಿಗೆ ಐಐಟಿಎಸ್ ಮತ್ತು ಐಐಎಮ್‌ಎಸ್ ಶಿಕ್ಷಣದಲ್ಲಿ ನೀಡಬೇಕೆಂದು ಕೇಂದ್ರಸರ್ಕಾರವು ಈ ಕಾಯಿದೆಯಲ್ಲಿ ಆದೇಶಿಸಿರುವುದು ವಿವಾದದ ವಿಷಯವಾಗಿದೆ. ಇದು ಪ್ರಸಕ್ತ ಸಾಲಿನ ವರ್ಷದಲ್ಲಿ ಜಾರಿಯಾಗ'ದಿರುವುದು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಮೇಲೆ ಸ್ವಲ್ಪ ಅಹಿತಕರ ಪರಿಣಾಮ ಬೀರುತ್ತದೆ.

> **'ಹಿಂದುಳಿದಿರುವಿಕೆಯನ್ನು ದೃಢಪಡಿಸುವಲ್ಲಿ ನಮ್ಮ ದೇಶ ಮೊದಲಿನ ಸಾಲಿನಲ್ಲಿದೆ. ಇದು ಇಂದ್ರನೊಯಿ ಮೊಕದ್ದಮೆಯಿಂದ ಸಾಬೀತಾಗಿರುವುದು ತುಂಬ ಗೊಂದಲಕರ ಮತ್ತು ಅಸಂತೋಷದ ಸಂಗತಿ' ಎಂಬ ಅಭಿಪ್ರಾಯವು ನ್ಯಾಯಾಂಗವು ನಿಜವಾಗಿ 'ಹಿಂದುಳಿದಿರುವಿಕೆ'ಯನ್ನು ಅರ್ಥಮಾಡಿಕೊಳ್ಳುವುದರಲ್ಲಿ ವಿಫಲವಾಗಿದೆ ಎಂದು ತೋರುತ್ತದೆ. ಏಕೆಂದರೆ ಮೇಲಿನ ಮೊಕದ್ದಮೆಯಲ್ಲಿ ಅದು ತೋರಿಸಿರುವ ನಿಲುವು ಮತ್ತು ಈಗ ತೋರಿಸುತ್ತಿರುವ ಈ ಅಸಮಧಾನದ ಅಭಿಪ್ರಾಯವನ್ನು ಪರೀಶಿಲಿಸುವಾಗ ಅದು ನಿಜವಾಗಿ ಒಂದು ಸಮುದಾಯವನ್ನು ನಿಂದಿಸುವ ಕಾರ್ಯವಾಗಿದೆ. ಕೇವಲ ಮೀಸಲಾತಿಗಾಗಿ ಹಿಂದುಳಿದವರಗಾಲು ಯಾರು ಆಸೆಪಡುವುದಿಲ್ಲ. ನಮ್ಮ ದೇಶದ ಆರ್ಥಿಕ ಮತ್ತು ಸಾಮಾಜಿಕ ನೀತಿಗಳು ಹಿಂದುಳಿದವರ ಸಂಖ್ಯೆಯನ್ನು ಹೆಚ್ಚು ಹೆಚ್ಚು ಮಾಡುತ್ತಿದೆ, ಅಂತಹ ನೀತಿಗಳನ್ನು ಸುಧಾರಣೆ ಮಾಡಲು ಸರ್ಕಾರಕ್ಕೆ ಆದೇಶವನ್ನು ನೀಡಬಹುದು, ಇಲ್ಲವಾದರೆ ಹಿಂದುಳಿದವರನ್ನು ಸಬಲರನ್ನಾಗಿ ಮಾಡಲು ಬೇರೆ ಯಾವುದಾದರು ದಾರಿಯನ್ನಾದರು ಮಾಡಬೇಕು**

ಮತ್ತು ಈ ಮೀಸಲಾತಿ ತಡೆಗೆ ನ್ಯಾಯಂಗ ಕೊಟ್ಟಿರುವ ಕಾರಣವೇಂದರೆ, ಮಂಡಲ ಮೊಕದ್ದಮೆಯಲ್ಲಿ ಹಿಂದುಳಿದ ವರ್ಗಗಳನ್ನು ಗುರ್ತಿಸುವಲ್ಲಿ ಅನುಸರಿಸಿದ ಮಾನದಂಡ ಮತ್ತು ೧೯೩೧ರ ಅಂಕಿಅಂಶಗಳನ್ನು ಸರ್ಕಾರ ತೋರಿಸುತ್ತಿರುವುದು ಸಮಂಜಸವಲ್ಲ ಎಂಬ ಅಸಮಾಧಾನ. ಒಂದು ರೀತಿಯಿಂದ ನ್ಯಾಯಂಗವು ಸರ್ಕಾರಕ್ಕೆ ಪುನಃ ಅ ಅಂಕಿಅಂಶಗಳ ಮೇಲೆ ಮರುವೀಕ್ಷಣೆಯನ್ನು ಮಾಡಲು ಒಂದು ಅವಕಾಶವನ್ನು ನೀಡಿದಂತಾಗಿದೆ. ಮತ್ತು ಕೆನೆಪದರರಿನವರನ್ನು ಇದರಿಂದ ಹೊರತುಪಡಿಸಲು ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳಲು ಕೂಡ ಅವಕಾಶ ಕೊಟ್ಟಿರುವುದು ಒಂದರ್ಥದಲ್ಲಿ ನಿಜವಾಗಿ ಹಿಂದುಳಿದ ಜನರು ಅದರ ಲಾಭಪಡೆಯಲು ಎಂದು ನಾವು ಸಕಾರತ್ಮಕವಾಗಿ ಅರ್ಥಮಾಡಿಕೊಂಡರು ಅದು 'ಮಿಸಲಾತಿಯ' ಬಗ್ಗೆ ವ್ಯಕ್ತಪಡಿಸಿರುವ ಅಸಮಾಧಾನದ ಅಭಿಪ್ರಾಯವು ನಕಾರತ್ಮಕವಾಗಿದೆ, 'ಪ್ರಪಂಚದ ಯಾವ ದೇಶದಲ್ಲಿಯೂ ಜಾತಿ, ವರ್ಗ ಮತ್ತು ಸಮುದಾಯದ ಹೆಸರಿನಲ್ಲಿ ಹಿಂದುಳಿದ ಸ್ಥಾನ ಪಡೆಯಲು ಸಾಲಿನಲ್ಲಿರುವುದಿಲ್ಲ.

ಹಿಂದುಳಿದಿರುವಿಕೆಯನ್ನು ದೃಢಪಡಿಸಲು ನಮ್ಮ ದೇಶ ಮಾತ್ರವೇ ಮೊದಲಿನ ಸಾಲಿನಲ್ಲಿದೆ. ಇದು ಇಂದ್ರನೊಯಿ ಮೊಕದ್ದಮೆಯಿಂದ ಸಾಬೀತಾಗಿರುವುದು ತುಂಬ ಗೊಂದಲಕರ ಮತ್ತು ಅಸಂತೋಷ ಸಂಗತಿ' ಎಂಬ ಈ ಅಭಿಪ್ರಾಯವು ನ್ಯಾಯಂಗವು ನಿಜವಾಗಿ 'ಹಿಂದುಳಿದಿರುವಿಕೆ'ಯನ್ನು ಅರ್ಥಮಾಡಿಕೊಳ್ಳುವುದಲ್ಲಿ ವಿಫಲವಾಗಿದೆ ಎಂದು ತೋರುತ್ತದೆ, ಎಕೆಂದರೆ ಮೇಲಿನ ಮೊಕದ್ದಮೆಯಲ್ಲಿ ಅದು ತೋರಿಸಿರುವ ನಿಲುವು ಮತ್ತು ಈಗ ತೋರಿಸಿರುವ ಈ ಅಸಮಾಧಾನದ ಅಭಿಪ್ರಾಯವನ್ನು ಪರೀಶಿಲಿಸುವಾಗ ಅದು ನಿಜವಾಗಿ ಒಂದು ಸಮುದಾಯವನ್ನು ನಿಂದಿಸುವ ಕಾರ್ಯವಾಗಿದೆ. ಕೆವಲ ಮೀಸಲಾತಿಗಾಗಿ ಹಿಂದುಳಿದವರಗಾಲು ಯಾರು ಆಸೆಪಡುವುದಿಲ್ಲ. ನಮ್ಮ ದೇಶದ ಆರ್ಥಿಕ ಮತ್ತು ಸಮಾಜಿಕ ನೀತಿಗಳು ಹಿಂದುಳಿದವರ ಸಂಖ್ಯೆಯನ್ನು ಹೆಚ್ಚು ಹೆಚ್ಚು ಮಾಡುತ್ತಿದೆ, ಅಂತಹ ನೀತಿಗಳನ್ನು ಸುಧಾರಣೆ ಮಾಡಲು ಸರ್ಕಾರಕ್ಕೆ ಆದೇಶವನ್ನು ನೀಡಬಹುದು, ಇಲ್ಲವಾದರೆ ಹಿಂದುಳಿದವರನ್ನು ಸಬಲರನ್ನಾಗಿ ಮಾಡಲು ಬೇರೆ ಯಾವುದಾದರು ದಾರಿಯನ್ನಾದರು ಮಾಡಬೇಕು ಇದರ ಬದಲಾಗಿ ಈ ರೀತಿಯ ಮಾತುಗಳು ಪುನಃ ಅವರನ್ನು ಶೋಷಿತರನ್ನಾಗಿ ಮಾಡುತ್ತಿದೆ. ಮೀಸಲಾತಿಯ ಹೆಸರಿನಲ್ಲಿಯಾದರು ಕೆಳವರ್ಗದ ಜನ ತಮ್ಮ ಹಕ್ಕುಗಳನ್ನು ಪಡೆಯುತ್ತಿರುವುದು ಸಹಿಸದ ತುತ್ತಾಗುತ್ತಿದೆ ಮತ್ತು ಮೀಸಲಾತಿಯನ್ನು ತೆಗೆದು ಹಾಕಿ ಶೋಷಿತರನ್ನು ಇನ್ನು ಶೋಷಣೆಗೆ ಒಳಪಡಿಸುವಂತಹ ಪ್ರಯತ್ನಗಳು ಇಲ್ಲಿ ನಡೆಯುತ್ತಿರುವುದು ವಿಷಾದವೆನಿಸುತ್ತಿದೆ.

ಈ ವಿಷಯಕ್ಕೆ ಅನೇಕರು ಪ್ರತಿಕ್ರಿಸಿದರು, ನಮ್ಮ ಸಂಪನ್ಮೂಲ ಸಚಿವ ಅರ್ಜನ್‌ಸಿಂಗ್‌ರವರ ನೇತ್ರತ್ವವು ಈ ವಿಷಯದಲ್ಲಿ ಹಿಂದುಳಿದ ಜನತೆಗೆ ನ್ಯಾಯ ದೊರಕಿಸಲು ಪಣತೊಟ್ಟಿರುವುದು ಪ್ರಸಂಶನೀಯ. ಕೆಲವು ಕಡೆ ಪ್ರತಿಭಟನೆಗಳು ನಡೆದಿರುವುದು ಹಲವಾರು ಪತ್ರಿಕೆಗಳು ಈ ರೀತಿಯ ದೋರಣೆಯನ್ನು ಖಂಡಿಸಿರುವುದು ಗಮನಾರ್ಹವಾಗಿದೆ.

ಅಂಬೇಡ್ಕರ್ ಹೇಳುವಂತೆ, 'ಮೀಸಲಾತಿ ಭಿಕ್ಷೆಯಲ್ಲ ಅದು ನಮ್ಮ ಹಕ್ಕು' ಅದನ್ನು ನಾವು ಪಡೆಯಲೇಬೇಕು. ಎನ್ನುವ ಹೋರಾಟಗಳು ನಮಗೆ ಸ್ಫೂರ್ತಿದಾಯಕವಾಗಿವೆ. ಹಿಂದುಳಿದ ಜನರು ನಾವು ಸಂಘಟಿತರಾಗುತ್ತಿದ್ದೇವೆ ಮತ್ತು ಜಾಗ್ರತರಾಗುತ್ತಿದ್ದೇವೆ. ನಮ್ಮ ಹಕ್ಕುಗಳನ್ನು ಕಸಿದುಕೊಳ್ಳಲು ನಾವು ಇನ್ನು ಬಿಡುವುದಿಲ್ಲ ನಾವು ಹೋರಾಡುತ್ತೇವೆ ನಮ್ಮ ಹೋರಾಟಕ್ಕೆ ಪ್ರತಿಫಲವಿದೆ. ನಾವು ಸಮಾನತೆಯ ಮತ್ತು ಜಾತ್ಯತೀತ ನಾಡನ್ನು ಕಟ್ಟುತ್ತೇವೆ. □

ಭಾರತೀಯ ಮೌನ ಕ್ರಾಂತಿ!



ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಸೋವಿಯತ್ ರಷ್ಯಾದಂತೆ ಮಾಯಾವತಿಯ ದಲಿತ-ಬ್ರಾಹ್ಮಣ ಸಿದ್ಧಾಂತವು ಇಲ್ಲಿಯವರೆಗೆ ಇದ್ದ ಯಾಜಮಾನ್ಯತೆ ಮತ್ತು ಸಾಮಾಜಿಕ ಬದಲಾವಣೆಯ ಬಗೆಗಿನ ಎಲ್ಲಾ ಸಿದ್ಧಾಂತಗಳನ್ನು ತಲೆ ಕೆಳಗಾಗಿಸಿದೆ.

ಉತ್ತರ ಪ್ರದೇಶದ ಚುನಾವಣೆಯಲ್ಲಿ ೪೦೩ ಸ್ಥಾನಗಳಲ್ಲಿ ಬಿಎಸ್‌ಪಿಯು ೨೯೩ ಸ್ಥಾನಗಳಿಗೆ ಸ್ಪರ್ಧಿಸುತ್ತಿದೆ. ಅವುಗಳಲ್ಲಿ ಬ್ರಾಹ್ಮಣರ ನಾಯಕತ್ವಕ್ಕೆ ೧೩೯, ,ದಲಿತರಿಗೆ ೯೩ ಮತ್ತು ಮುಸ್ಲಿಮರಿಗೆ ೬೧ ಸ್ಥಾನಗಳನ್ನು ಹಂಚಲಾಗಿದೆ.

ಇದರಿಂದಾಗಿ ಸಂಘ ಪರಿವಾರದವರ ಮೇಲೆ ಯಾವ ಪರಿಣಾಮ ಬೀರುತ್ತದೆ? **ಭಾರತೀಯ ಮೌನ ಕ್ರಾಂತಿ: ಉತ್ತರ ಭಾರತದಲ್ಲಿ ಕೆಳಜಾತಿಗಳು ಉದಯ** (India's Silent Revolution-The Rise of the Lower Castes in North India) ಎಂಬ ಅರೆ ಸಂಶೋಧಿತ ಕ್ರಿಸ್ಟೋಫರ್ ಜಾಫರ್‌ಲಾಟ್‌ನ ಕೃತಿಯನ್ನು ವಾಪಸ್ಸು ಪಡೆಯಲಾಗುತ್ತದೆಯೇ ಅಥವಾ ಅದನ್ನು ಸುಡಲಾಗುತ್ತದೆಯೇ? ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿರುವ ನಿಕಲಸ್ ಡರ್ಕ್ಸ್ ತನ್ನ ಅಕಾಡೆಮಿಕ್ ಬದುಕನ್ನು ತ್ಯಜಿಸುತ್ತಾನೆಯೇ? ದೆಹಲಿಯಲ್ಲಿರುವ ಸಿಎಸ್‌ಡಿಎಸ್ ತನ್ನ ಪಾಂಡಿತ್ಯವನ್ನು ಬಿಟ್ಟು ರಿಯಲ್ ಎಸ್ಟೇಟ್ ಬ್ಯುಸಿನೆಸ್‌ಗೆ ಇಳಿಯುತ್ತದೆಯೇ? ಜಾತಿಯ ಬಗ್ಗೆ ಮತ್ತು ಭಾರತದಲ್ಲಿ ಸಾಮಾಜಿಕ ಬದಲಾವಣೆಯ ಕುರಿತು ಅಧ್ಯಯನ ಮಾಡುತ್ತಿರುವ ವಿದ್ವಾಂಸರಿಗೆ ಏನಾಗಬಹುದು?

೧೯ನೇ ಶತಮಾನದ ಉದಯದಲ್ಲೇ ಸಾಮಾಜಿಕ ಬದಲಾವಣೆಯ ಬಗ್ಗೆ ಎರಡು ರೀತಿಯ ಮಾದರಿಗಳು ಭಾರತದಲ್ಲಿ ಕಾಣಿಸಿಕೊಂಡಿದ್ದವು: ಅವುಗಳಲ್ಲಿ ಒಂದು ತಮಿಳು ನಾಡಿನಲ್ಲಿ ಕಾಣಿಸಿದ್ದು. ಎರಡನೆಯದ್ದು ಮಹಾರಾಷ್ಟ್ರದಲ್ಲಿ ಆದದ್ದು. ತಮಿಳು ನಾಡಿನಲ್ಲಿ ರಾಮಸ್ವಾಮಿ ಪೆರಿಯಾರ್ 'ಬ್ರಾಹ್ಮಣ ವಿರೋಧಿ ಘೋಷಣೆಯೊಡನೆ', ಅಲ್ಲಿನ ಬ್ರಾಹ್ಮಣರ ಆಳ್ವಿಕೆಯನ್ನು ಕೊನೆಗಾಣಿಸುವ ಮೂಲಕ ಸಾಮಾಜಿಕ ಬದಲಾವಣೆಗೆ ನಾಂದಿ ಹಾಡಿದರೆ, ಮಹಾರಾಷ್ಟ್ರದಲ್ಲಿ ಡಾ. ಅಂಬೇಡ್ಕರವರು ಜಾತಿ ನಿರ್ಮೂಲನೆಯ ಘೋಷಣೆಯೊಂದಿಗೆ ಅಲ್ಲಿನ ಜಾತಿವ್ಯವಸ್ಥೆಯನ್ನು ಕೊನೆಗಾಣಸುವ ಬದಲಾವಣೆಯಲ್ಲಿ ತೊಡಗಿದರು.

೧೯ನೇ ಶತಮಾನದ ಉದಯದಲ್ಲೇ ಸಾಮಾಜಿಕ ಬದಲಾವಣೇಯ ಬಗ್ಗೆ ಎರಡು ರೀತಿಯ ಮಾದರಿಗಳು ಭಾರತದಲ್ಲಿ ಕಾಣಿಸಿಕೊಂಡಿದ್ದವು: ಅವುಗಳಲ್ಲಿ ಒಂದು ತಮಿಳು ನಾಡಿನಲ್ಲಿ ಕಾಣಿಸಿದ್ದು. ಎರಡನೆಯದ್ದು ಮಹಾರಾಷ್ಟ್ರದಲ್ಲಿ ಆದದ್ದು. ತಮಿಳು ನಾಡಿನಲ್ಲಿ ರಾಮಸ್ವಾಮಿ ಪೆರಿಯಾರ್ 'ಬ್ರಾಹ್ಮಣ ವಿರೋಧಿ ಘೋಷಣೆಯೊಡನೆ', ಅಲ್ಲಿನ ಬ್ರಾಹ್ಮಣರ ಆಳ್ವಿಕೆಯನ್ನು ಕೊನೆಗಾಣಿಸುವ ಮೂಲಕ ಸಾಮಾಜಿಕ ಬದಲಾವಣೆಗೆ ನಾಂದಿ ಹಾಡಿದರೆ, ಮಹಾರಾಷ್ಟ್ರದಲ್ಲಿ ಡಾ. ಅಂಬೇಡ್ಕರವರು ಜಾತಿ ನಿರ್ಮೂಲನೆಯ ಘೋಷಣೆಯೊಂದಿಗೆ ಅಲ್ಲಿನ ಜಾತಿವ್ಯವಸ್ಥೆಯನ್ನು ಕೊನೆಗಾಣಸುವ ಬದಲಾವಣೆಯಲ್ಲಿ ತೊಡಗಿದರು.

ಅನು: ಡೊಮಿನಿಕ್. ಡಿ

ಪೆರಿಯಾರ್‌ರವರ ಸಾಮಾಜಿಕ ಬದಲಾವಣೆ ಬಹುಮಟ್ಟಿಗೆ ಸಾಧಿಸಿಯಾಗಿದೆ. ಪಶ್ಚಿಮ ಬಂಗಾಲ ಮತ್ತು ಉತ್ತರಖಂಡ ರಾಜ್ಯಗಳನ್ನು ಹೊರತು ಪಡಿಸಿದರೆ ಉಳಿದೆಡೆಯಲ್ಲಾ ಬ್ರಾಹ್ಮಣೇತರರೇ ಆಡಳಿತದ ಚುಕ್ಕಾಣಿ ಹಿಡಿದಿದ್ದಾರೆ. ಪ್ರಧಾನ ಮಂತ್ರಿ ಹಾಗೂ ಪ್ರತಿಪಕ್ಷದ ನಾಯಕ – ಇಬ್ಬರೂ ಸಹ ಬ್ರಾಹ್ಮಣೇತರರೇ ಆಗಿದ್ದಾರೆ.

ಉತ್ತರ ಭಾರತದಲ್ಲಿ ಲೋಹಿಯಾರ ಪ್ರಕಾರ ಸಾಮಾಜಿಕ ಬದಲಾವಣೆ ಎನ್ನುವುದು ದ್ವಿಜರ ಪ್ರಾಬಲ್ಯವನ್ನು ಅಥವಾ ಅವರ ಆಳ್ವಿಕೆಯನ್ನು ಕೊನೆಗಾಣಿಸುವುದೇ ಆಗಿತ್ತು. ಮಂಡಲ್ ವರದಿ ಜಾರಿಯಾಗುವುದರ ಮೂಲಕ ಅದೂ ಸಹ ನೆರವೇರಿದೆ ಎನ್ನಬಹುದು. ಮಂಡಲೋತ್ತರ ಉತ್ತರ ಭಾರತದ ಅನುಭವದಿಂದ ಘುಳಕಿತನಾದ ಕ್ರಿಸ್ಟೋಫರ್ ಜಾಫರ್‌ಲಾಟ್ ಜನಪ್ರಿಯ ಒಬಿಸಿಗಳ ಸಿದ್ಧಾಂತವನ್ನು ಪ್ರಚಾರಕ್ಕೆ ತಂದು ಭಾರತದಲ್ಲಿ ಮೌನ ಕ್ರಾಂತಿಯಾಗುತ್ತಿದೆ ಎಂದ.

ಉತ್ತರ ಭಾರತದಲ್ಲಿ ಲೋಹಿಯಾರ ಪ್ರಕಾರ ಸಾಮಾಜಿಕ ಬದಲಾವಣೆ ಎನ್ನುವುದು ದ್ವಿಜರ ಪ್ರಾಬಲ್ಯವನ್ನು ಅಥವಾ ಅವರ ಆಳ್ವಿಕೆಯನ್ನು ಕೊನೆಗಾಣಿಸುವುದೇ ಆಗಿತ್ತು. ಮಂಡಲ್ ವರದಿ ಜಾರಿಯಾಗುವುದರ ಮೂಲಕ ಅದೂ ಸಹ ನೆರವೇರಿದೆ ಎನ್ನಬಹುದು. ಮಂಡಲೋತ್ತರ ಉತ್ತರ ಭಾರತದ ಅನುಭವದಿಂದ ಘುಳಕಿತನಾದ ಕ್ರಿಸ್ಟೋಫರ್ ಜಾಫರ್‌ಲಾಟ್ ಜನಪ್ರಿಯ ಒಬಿಸಿಗಳ ಸಿದ್ಧಾಂತವನ್ನು ಪ್ರಚಾರಕ್ಕೆ ತಂದು ಭಾರತದಲ್ಲಿ ಮೌನ ಕ್ರಾಂತಿಯಾಗುತ್ತಿದೆ ಎಂದ.

ಹೀಗಿರುವಲ್ಲಿ ಮೌನ ಕ್ರಾಂತಿಯ ನೇತಾರರಾದ ಒಬಿಸಿ ನಾಯಕರು ದಲಿತರಿಗೆ ಮತ್ತು ಬ್ರಾಹ್ಮಣರಿಗೆ ಸಾಮಾನ್ಯ ಖಳ ನಾಯಕರಾದರು ಏಕೆ? ಸಾಮಾಜಿಕ ಬದಲಾವಣೆಯ ಸಿದ್ಧಾಂತಿಗಳು ಅಥವಾ ಮೌನ ಕ್ರಾಂತಿಯ ನೇತರರಾದ ಪೆರಿಯಾರ್, ಲೋಹಿಯಾ ಅಥವಾ ಜಾಫರ್‌ಲಾಟ್ – ಯಾರೂ ಸಹ ಬ್ರಾಹ್ಮಣ ಅಥವಾ ದಿವಜರಿಗೆ ಪರ್ಯಾಯವಾದ ಸಮಾಜಿಕ ವಿಭಾಗ ಯಾವುದು ಎಂಬುದನ್ನು ಸ್ಪಷ್ಟಪಡಿಸಲಿಲ್ಲ. ಪೆರಿಯಾರ್‌ಗೆ ದ್ರಾವಿಡರು ಹಕ್ಕುಬಾಧ್ಯರೆನಿಸಿದರು. ಆದರೆ ತಮಿಳು ನಾಡಿನಲ್ಲಿ ದಲಿತರು ತಮ್ಮನ್ನೇ ಆದಿ–ದ್ರಾವಿಡರೆಂದು ಗುರುತಿಸಿಕೊಂಡರು. ಅಂದರೆ ಪೆರಿಯಾರ್‌ರವರ ದೃಷ್ಟಿಯಲ್ಲಿ ಬ್ರಾಹ್ಮಣರಿಗೆ ಪರ್ಯಾಯವಾಗಿ ದಲಿತರು ಕಾಣಿಸುವುದಿಲ್ಲ; ದಲಿತರು ಕೇವಲ ಅತಿಥಿಗಳಷ್ಟೆ

ದ್ವಿಜರನ್ನು ರಾಜಕೀಯ ಸಂರಚನೆಯಲ್ಲಿ ಪಲ್ಲಟಗೊಳಿಸಿದ್ದು ಮೌನ ಕ್ರಾಂತಿಗೆ ಸಾಕ್ಷಿ ಎಂದು ಭಾವಿಸಲಾಗಿದೆ. ಆದರೆ ಇಂಥ ಬೂಟಾಟಿಕೆಯ, ವಾದಗಳು ಇಂದು ಬೆತ್ತಲೆಗೊಂಡಿವೆ. ರಾಜಕೀಯವಾಗಿ ಶಕ್ತಗೊಂಡ ಬಿಎಸ್‌ಪಿಯು ಈಗ ಬ್ರಾಹ್ಮಣರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದರ ಮೂಲಕ ಈ ಮೌನ ಕ್ರಾಂತಿಯ ನೇತಾರರಿಗೆ ಸವಾಲೆಸೆಯಲಾಗಿದೆ.

ಈಗ ಸಾಧಿತವಾಗಿರುವ ಸಂಗತಿಗಳೆಂದರೆ:

– ಪೆರಿಯಾರ್‌ರವರ ಬ್ರಾಹ್ಮಣ–ವಿರೋಧಿ ನೀತಿ ಹಾಗೂ ಮಂಡಲ್‌ವರದಿಯ ದ್ವಿಜ–ವಿರೋಧಿ ನೀತಿಗಳೇರಡೂ ಸಹ ಜಾತಿ ವ್ಯವಸ್ಥೆಯ ವಿರೋಧಿ ಚಳುವಳಿಗಳಾಗಿರಲಿಲ್ಲ.

– ಈ ಚಳುವಳಿಗಳು ಒಬಿಸಿಗಳ ಪ್ರಾಬಲ್ಯವನ್ನಷ್ಟೇ ಪ್ರತಿಪಾದಿಸುತ್ತಾ ಬ್ರಾಹ್ಮಣರ ಯಾಜಮಾನ್ಯವನ್ನು ಪಲ್ಲಟಗೊಳಿಸಿದವಷ್ಟೆ

– ಪೆರಿಯಾರ್–ಮಂಡಲ್ ಚಳುವಳಿಗಳು ದಲಿ

ತರ ಕಷ್ಟಗಳನ್ನು ಗುರಾಣಿಯಾಗಿ ಬಳಸಿ ಬ್ರಾಹ್ಮಣರನ್ನು ಹತ್ತಿಕ್ಕಿಪ್ರಾಬಲ್ಯಕ್ಕಾಗಿ ತಮ್ಮ ಹಕ್ಕನ್ನೆಷ್ಟೇ ಮುಂದಿಟ್ಟವು.

- ಆದ್ದರಿಂದ ಒಬಿಸಿಗಳ ಯಜಮಾನಿಕೆಯನ್ನು ಈ ಕೆಳಗಿನ ಕಾರಣಗಳಿಂದಾಗಿ ಒಪ್ಪಿಕೊಳ್ಳಲಾಗುವುದಿಲ್ಲ:

- ಒಬಿಸಿಗಳು ತಮ್ಮಲ್ಲಿ ಕುಲೀನ ವರ್ಗವೊಂದನ್ನು ಸಂಘಟಿಸದೇ ಆಳುವ ಸಾಮಾಜಿಕ ವಿಭಾಗವಾಗಿ ವಿಕಾಸ ಹೊಂದಿತು.

- ಅವರು ಸಾಮಾಜಿಕ ನ್ಯಾಯವನ್ನು ಮಾತನಾಡಿದರೂ ಸಹ ಅವರು ಬ್ರಾಹ್ಮಣ-ದ್ವಿಜರು ಸೃಷ್ಟಿಸಿ, ಬೆಳೆಸಿದ ಸಾಮಾಜಿಕ ವ್ಯವಸ್ಥೆಯನ್ನೇ ಕಾಯ್ದುಕೊಂಡರು.

- ಈ ಒಬಿಸಿಗಳು ಅನಿರೀಕ್ಷಿತವಾಗಿ ಅಧಿಕಾರದ ಗದ್ದುಗೆಯನ್ನು ಏರಿದರೇ ಹೊರತು ತಮ್ಮ ಸಮುದಾಯದಲ್ಲೇ ಗಂಭೀರವಾದ ಸುಧಾರಣೆ/ಬದಲಾವಣೆಯನ್ನೇನೂ ತರಲಿಲ್ಲ.

- ಈ ಒಬಿಸಿಗಳ ಯಜಮಾನಿಕೆಯು ವಾಣಿಜ್ಯ-ವಹಿವಾಟು ಬೆಳೆಯಲು ಅಡ್ಡಿಯಾಗಿದೆ.

- ಒಬಿಸಿಗಳ ಯಜಮಾನಿಕೆಯಡಿ ರಾಜ್ಯಾಂಗದ ಸಂಪನ್ಮೂಲಗಳನ್ನು ಬಹಿರಂಗವಾಗಿಯೇ ಕೊಳ್ಳೆಹೊಡೆಯಲು ಬ್ರಾಹ್ಮಣ-ದ್ವಿಜರಿಗೆ ಸಾಧ್ಯವಾದ್ದರಿಂದ ಅವರು ರಾಜ್ಯದ ಬೊಕ್ಕಸವನ್ನು ಸೂಕ್ಷ್ಮವಾಗಿ ಬಾಚಿಕೊಂಡರು.

ಈ ಮೇಲಿನ ಸಂಗತಿಗಳಿಂದಾಗಿ ಹಿಂದೆ ಬ್ರಾಹ್ಮಣ-ದ್ವಿಜರು ಅನುಭವಿಸಿದ ಸಾಮಾಜಿಕ ಸಮ್ಮತಿ ಒಬಿಸಿಗಳಿಗೆ ದೊರೆಯಲಿಲ್ಲ. ಮಾನಸಿಕವಾಗಿ ಒಬಿಸಿಗಳ ಯಜಮಾನಿಕೆ ೧೯೫೦ ರ ದಶಕದಲ್ಲೇ ಬೇರುಬಿಟ್ಟಿದೆ. ಆಗ ಜನ ಅಷ್ಟೇನೂ ಶಿಕ್ಷಿತರಾಗಿರಲಿಲ್ಲ ಹಾಗೂ ತಮ್ಮ ಹಕ್ಕುಗಳ ಬಗ್ಗೆ ತಿಳಿದುಕೊಂಡಿರಲಿಲ್ಲ.

ಆದ್ದರಿಂದ ಬ್ರಾಹ್ಮಣ/ದ್ವಿಜರೇನಾದರೂ ಇಂದು ಆಳುವ ವಿಭಾಗವಾಗಿ ಹೊರಹೊಮ್ಮಿದರೆ ಅವರು ತಮ್ಮ ಹಿಂದಿನ ಅಕ್ರಮಗಳನ್ನು ಪುನಾರಾವರ್ತಿಸಲಾಗುವುದಿಲ್ಲ. ಅಲ್ಲದೆ ಒಬಿಸಿಗಳು, ಬ್ರಾಹ್ಮಣ/ದ್ವಿಜರು ಪಡೆದ ಜನ ಸಮ್ಮತಿಯನ್ನು ಪಡೆಯಲಾಗುವುದಿಲ್ಲವಾದ್ದರಿಂದ ಅವರು ಬಲತ್ಕಾರದಿಂದ ತಮ್ಮ ಆಳ್ವಿಕೆಯನ್ನು ಸ್ಥಾಪಿಸುತ್ತಾರೆ. ಈ ಒಬಿಸಿಗಳ ಯಜಮಾನಿಕೆಯಿಂದ ಬೇಸತ್ತ ಸಾಮಾಜಿಕ ದುಡಿಯುವ ವರ್ಗವಾಗಿರುವ ದಲಿತರು, ಹಾಗೂ ಸಾಂಸ್ಕೃತಿಕ ಕುಲೀನವರ್ಗವಾಗಿರುವ ಬ್ರಾಹ್ಮಣ/ದ್ವಿಜರು ಉತ್ತರ ಪ್ರದೇಶದಲ್ಲಿ ಪರಸ್ಪರ ಕೈಜೋಡಿಸಿದ್ದಾರೆ. ಇದು ಹೊಸ ಕ್ರಾಂತಿಗೆ ಮುನ್ಸೂಚನೆಯಾಗಲಿದೆ.

ಉತ್ತರ ಪ್ರದೇಶದ ೩/೪ ರಷ್ಟು ದಲಿತ ಮತದಾರರು ಬಿಎಸ್‌ಪಿಗೆ ಮತ ನೀಡುತ್ತಾರೆ. ನಮಗೆ ಗೊತ್ತಿರುವಂತೆ ದಲಿತ ಸಮುದಾಯದೊಳಗೆ ಹಲವಾರು ಸಮುದಾಯ/ಉಪಜಾತಿಗಳಿವೆ. ಅಲ್ಲದೆ ಸಾಂಪ್ರದಾಯಿಕವಾಗಿ ಬಿಎಸ್‌ಪಿಯು ಚಮ್ಮಾರ ಮತ್ತು ಜಾತವರ ಪಕ್ಷವೆಂದೇ ಬಿಂಬಿಸಲಾಗಿದೆ. ಸಿಎನ್‌ಎನ್-ಐಬಿಎನ್ ಮಾಡಿದ ಚುನಾವಣಾ ಪೂರ್ವ ಸಮೀಕ್ಷೆಯನ್ನು ಮಾರ್ಚ್ ೨೭ ರಂದು ಪ್ರಕಟಿಸಿದರು. ಅದರ ಪ್ರಕಾರ ಶೇ.೭೮ ರಷ್ಟು ಚಮ್ಮಾರರು ಬಿಎಸ್‌ಪಿಗೆ ಮತ ಹಾಕುತ್ತಾರೆ. ಚಮ್ಮಾರರನ್ನು ಹೊರತು ಪಡಿಸಿದಲ್ಲಿ ಶೇ.೬೦ ರಷ್ಟು ದಲಿತರು ಬಿಎಸ್‌ಪಿಯೊಂದಿಗೆ ಸಾಗುತ್ತಾರೆ.

ಸಮಾಜವಾದಿ ಪಕ್ಷ ಮತ್ತೊಂದೆಡೆ ದಲಿತರ ಬೆಂಬಲವನ್ನು ಕಡಿಮೆ ಮಟ್ಟದಲ್ಲಿಯಷ್ಟೆ ಪಡೆಯಲಿದೆ. ಸಮೀಕ್ಷೆಯ ಪ್ರಕಾರ ಸಮಾಜವಾದಿ ಪಕ್ಷಕ್ಕೆ ಶೇ. ೫ ರಷ್ಟು

ಬಲಾಢ್ಯರ ನ್ಯಾಯ

ಉತ್ತರ ಪ್ರದೇಶದ ೩/೪ ರಷ್ಟು ದಲಿತ ಮತದಾರರು ಬಿಎಸ್‌ಪಿಗೆ ಮತ ನೀಡುತ್ತಾರೆ. ನಮಗೆ ಗೊತ್ತಿರುವಂತೆ ದಲಿತ ಸಮುದಾಯದೊಳಗೆ ಹಲವಾರು ಸಮುದಾಯ/ಉಪಜಾತಿಗಳಿವೆ. ಅಲ್ಲದೆ ಸಾಂಪ್ರದಾಯಿಕವಾಗಿ ಬಿಎಸ್‌ಪಿಯು ಚಮ್ಮಾರ ಮತ್ತು ಜಾತವರ ಪಕ್ಷವೆಂದೇ ಬಿಂಬಿಸಲಾಗಿದೆ. ಸಿಎನ್‌ಎನ್-ಐಬಿಎನ್ ಮಾಡಿದ ಚುನಾವಣಾ ಪೂರ್ವ ಸಮೀಕ್ಷೆಯನ್ನು ಮಾರ್ಚ್ ೨೭ ರಂದು ಪ್ರಕಟಿಸಿದರು. ಅದರ ಪ್ರಕಾರ ಶೇ.೭೮ ರಷ್ಟು ಚಮ್ಮಾರರು ಬಿಎಸ್‌ಪಿಗೆ ಮತ ಹಾಕುತ್ತಾರೆ. ಚಮ್ಮಾರರನ್ನು ಹೊರತು ಪಡಿಸಿದಲ್ಲಿ ಶೇ.೬೦ ರಷ್ಟು ದಲಿತರು ಬಿಎಸ್‌ಪಿ ಯೊಂದಿಗೆ ಸಾಗುತ್ತಾರೆ. ಸಮಾಜವಾದಿ ಪಕ್ಷ ಮತ್ತೊಂದೆಡೆ ದಲಿತರ ಬೆಂಬಲವನ್ನು ಕಡಿಮೆ ಮಟ್ಟದಲ್ಲಿ ಯಷ್ಟೆ ಪಡೆಯಲಿದೆ.

ಮಾತ್ರ ಚಮ್ಮಾರರ ಮತಗಳು ದೊರೆಯಲಿವೆ. ಚಮ್ಮಾರರನ್ನು ಹೊರತುಪಡಿಸಿ ನೋಡಿದಲ್ಲಿ ಸಮಾಜವಾದಿ ಪಕ್ಷಕ್ಕೆ ಶೇ೧೪ ರಷ್ಟು ದಲಿತರ ಮತಗಳು ದೊರೆಯಲಿವೆ.

ಅಂದರೆ ಸಮಾಜವಾದಿ ಪಕ್ಷವು ಶೋಷಿತರನ್ನು ಪ್ರತಿನಿಧಿಸುವುದಿಲ್ಲ.

ಇತರೆ ಹಿಂದುಳಿದ ಜಾತಿಗಳು (ಎಂಬಿಸಿಗಳು) ಒಬಿಸಿಗಳಿಗಿಂತ ಕೆಳಗಿದ್ದು ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ವಂಚಿತರಾಗಿದ್ದು ದಲಿತರಿಗಿಂತ ಸ್ವಲ್ಪ ಮೇಲಿದ್ದಾರೆ. ಈ ಹಿಂದೆ ಕುಶಲಕರ್ಮಿಗಳಾಗಿ ಸೇವೆ ಸಲ್ಲಿಸುತ್ತಿದ್ದ ಈ ಜಾತಿಗಳು, ತಮ್ಮ ಪಾರಂಪರಿಕ ಕುಲ ಕಸುಬನ್ನು ಕಳೆದುಕೊಂಡು ದಲಿತರಿಗಿಂತಲೂ ಕಡೆಯಾಗಿದ್ದಾರೆಂದರೆ ತಪ್ಪಾಗುವುದಿಲ್ಲ. ಈಗ ಅವರು ಜಡ ಸ್ಥಿತಿಗೆ ತಲುಪಿದ್ದಾರೆ.

ಈ ಸಮುದಾಯಗಳು ತಮ್ಮ ಮತವನ್ನು ಯಾರಿಗೆ ನೀಡಬಹುದು. ಸಮೀಕ್ಷೆಯ ಪ್ರಕಾರ ಶೇ.೨೯ರಷ್ಟು ಇವರ ಮತಗಳು ಬಿಎಸ್‌ಪಿಗೆ ದೊರೆತರೆ, ಕೇವಲ ೨೬% ಮತಗಳು ಸಮಾಜವಾದಿ ಪಕ್ಷಕ್ಕೆ ದೊರೆಯಲಿದೆ. ಇವರಲ್ಲಿ ಶೇ. ೧೮ ರಷ್ಟು ಮತಗಳು ಬಿಜೆಪಿಯತ್ತ ಹೊರಳಯತ್ತವೆ. ಉಳಿದ ಶೇ.೧೨ ರಷ್ಟು ಕಾಂಗ್ರೆಸ್‌ಗೆ ಬೀಳುತ್ತವೆ.

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಎಂಬಿಸಿಗಳಿಗೆ ಸಂಬಂಧಿಸಿದಂತೆ ಬಿಎಸ್‌ಪಿ ಪಕ್ಷವು ಶೋಷಿತರ ಪಕ್ಷವಾಗಿ ಹೊರಹೊಮ್ಮುತ್ತದೆ. ದಲಿತ-ಬ್ರಾಹ್ಮಣ ಸಿದ್ಧಾಂತವನ್ನು ಹೊರತು ಪಡಿಸಿಯು ಸಹ ಉತ್ತರ ಪ್ರದೇಶದಲ್ಲಿ ಬಿಎಸ್‌ಪಿಗೆ ಶೋಷಿತರ ಬೆಂಬಲ ಇದ್ದೇ ಇರುತ್ತದೆ.

ಇಲ್ಲಿರುವ ಮುಖ್ಯ ಪ್ರಶ್ನೆಯೆಂದರೆ ಭಾರತದಲ್ಲಿರುವ

ದಲಿತ ಡೈರಿ ನಿಜವನ್ನು ಹೇಳುತ್ತದೆ

ಸಾಮಾಜಿಕ ನ್ಯಾಯವಾದಿಗಳು ಸಮಾಜವಾದಿ ಪಕ್ಷದೊಂದೊಗಿರುತ್ತಾರೆಯೇ ವಿನಃ ಬಿಎಸ್‌ಪಿಯೊಂದಿಗೆ ಅಲ್ಲ ಏಕೆ?

ಬಿಎಸ್‌ಪಿ ಎನ್ನುವುದು ದಲಿತರ ಪಕ್ಷವಾಗಿದ್ದು, ದಲಿತರಿಂದಲೇ ಮುನ್ನಡೆಯುತ್ತಿದೆ ಎನ್ನುವ ಕಾರಣವೇ? ಈ ಸಾಮಾಜಿಕ ನ್ಯಾಯವಾದಿಗಳನ್ನು ಬಿಎಸ್‌ಪಿಯು ಬೆನ್ನು ತಟ್ಟುತ್ತಿಲ್ಲವೆಂದೇ? ಅಥವಾ ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುವ ಬುದ್ಧಿಜೀವಿಗಳಿಗೆ ಆಲೋಚಿಸಲು ಬುದ್ಧಿ ಸಾಲದಾಗಿದೆಯೇ? ಅಮೆರಿಕಾ ಅಥವಾ ದಕ್ಷಿಣ ಆಫ್ರಿಕಾ ದೇಶಗಳಲ್ಲಿ ಯಾವುದೇ ಬುದ್ಧಿಜೀವಿ ಪ್ರಗತಿಪರ ಎನಿಸಿಕೊಳ್ಳಬೇಕಾದರೆ ಕಪ್ಪುಜನ/ನೇಗಟಿವ್ ಅಮೆರಿಕನ್ನರ ಅಸ್ತಿತ್ವವನ್ನು ಸಮರ್ಥಿಸಲೇಬೇಕಾಗುತ್ತದೆಯಲ್ಲವೇ?

ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಬೇಕಾಗುತ್ತದೆ. ಆದರೆ ನಾನು ಈ ಪ್ರಶ್ನೆಗಳನ್ನು ಕೇಳಿದಾಗ ಆ ಸಾಮಾಜಿಕ ನ್ಯಾಯವಾದಿ ಗುಂಪು ನನ್ನ ವಿರುದ್ಧ ದ್ವೇಷ ಮತ್ತು ಅಣಕವನ್ನು ಮಾಡುತ್ತವೆ. ಕಳೆದ ಅರ್ಧ ದಶಕದಿಂದಲೂ ನಾನು ಅವನ್ನು ಮೌನವಾಗಿ ಅನುಭವಿಸುತ್ತಲೇ ಬಂದಿದ್ದೇನೆ.

ಈ ಸಾಮಾಜಿಕ ನ್ಯಾಯವಾದಿ ಪಡೆಯು ಎರಡು ಜಾತಿ ವಿಭಾಗಗಳಿಂದ ಕೂಡಿದ್ದಾಗಿದೆ: ಒಂದು, ಬ್ರಾಹ್ಮಣರೊಳಗೇ ಇರುವುದು. ಎರಡು, ಒಬಿಸಿ ಬಣದಲ್ಲಿರುವುದು.

ಈ ಬ್ರಾಹ್ಮಣ ಬುದ್ಧಿಜೀವಿಗಳು ಯಾವುದೇ ತ್ಯಾಗವನ್ನು ಮಾಡದೇ ಪ್ರಗತಿಪರತೆಯ ನಾಟಕವಾಡುತ್ತಾರೆ. ಅವರು ಬ್ರಾಹ್ಮಣೇತರ ಪಕ್ಷಗಳೊಂದಿಗೆ ಸಾಗಿ ಬ್ರಾಹ್ಮಣರು ಹಿಂದೆ ಮಾಡಿದ್ದನ್ನು ಒಂದೇ ಉಸಿರಿಗೆ ಬೈಯ್ಯತೊಡಗುತ್ತಾರೆ. 'ಅಹಾ.. ಎಂಥಾ ವ್ಯಕ್ತಿ. ಬ್ರಾಹ್ಮಣನಾಗಿದ್ದರೂ ಬ್ರಾಹ್ಮಣರನ್ನು ಉಗಿಯುತ್ತಾನಲ್ಲವೇ?' ಎಂದು ಜನರಾಡುವಾಗ ಅವರು ಒಂದು ಸಾರ್ವಜನಿಕ ಸಮ್ಮತಿಯನ್ನು ಪಡೆದುಕೊಳ್ಳುತ್ತಾರೆ.

ಹೀಗೆ ಅವರು ಬ್ರಾಹ್ಮಣರನ್ನು ಅಣಕಿಸುತ್ತಾರಾದರೂ ದಲಿತರೊಡನೆ ಅವರು ಸಾಗುವುದಿಲ್ಲ. ಇದಕ್ಕೆ ಕಾರಣ ದಲಿತರಲ್ಲಿ ಬೂಜ್ವಾ ವ್ಯಕ್ತಿಯಾಗಲೀ ಅಥವಾ ರಾಜಕೀಯ ಅಧಿಕಾರ ಗದ್ದುಗೆಯನ್ನು ಪ್ರಭಾವಿಸುವಂಥ ದಲಿತರಾಗಲೀ ಇಲ್ಲದೇ ಇರುವುದು. ಆದ್ದರಿಂದ ಅಂಥ ಬ್ರಾಹ್ಮಣರ ಸಾರ್ವಜನಿಕ ದುರಾಸೆಯನ್ನು ತಣಿಸುವುದಿಲ್ಲ. ಬ್ರಾಹ್ಮಣೇತರ ವಿಭಾಗವು ಹಲವಾರು ರಾಜ್ಯಗಳನ್ನು ಆಳುವವರಾದ್ದರಿಂದ ಬ್ರಾಹ್ಮಣರ ದುರಾಸೆಯನ್ನು ತಕ್ಕಮಟ್ಟಿಗೆ ತೃಪ್ತಿಪಡಿಸುತ್ತಿದೆ. ಹಾಗಾಗಿ ಈ ಬ್ರಾಹ್ಮಣರು ಸಾಮಾಜಿಕ ನ್ಯಾಯದ ಗುಂಪಿನಲ್ಲಿರುವುದನ್ನು ಅರ್ಥೈಸಬಹುದಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ಹಿಡಿತವನ್ನು ಹೊಂದಿರುವುದು ಮತ್ತು ರಾಜಕೀಯವಾಗಿ ಹಲವಾರು ರಾಜ್ಯಗಳಲ್ಲಿ ಅಧಿಕಾರವನ್ನು ಪಲ್ಲಟಗೊಳಿಸುವ ಶಕ್ತಿಯನ್ನು ಹೊಂದಿರುವುದನ್ನು ಈ ಒಬಿಸಿ ಬುದ್ಧಿಜೀವಿಗಳು ನೋಡದೆ ಜಗತ್ತನ್ನು ಅರ್ಥೈಸಲಾಗುವುದಿಲ್ಲ. "ಮಂಡಲ್ ಪ್ರಯೋಜನವು ಇತರ ಹಿಂದುಳಿದಿರುವ ಜಾತಿಗಳಿಗೆ (ಎಂಬಿಸಿ) ಸಿಗಲಿ ಹಾಗೂ ಒಬಿಸಿಗಳಿಗಿಂತ ದಲಿತರು ಮಂಚೂಣಿಗೆ ಬರಲಿ" ಎನ್ನುವಂಥ ಒಬ್ಬನೇ ಒಬ್ಬ ಒಬಿಸಿ ಬುದ್ಧಿಜೀವಿಯೂ ಸಹ ನನ್ನ ಕಣ್ಣಿಗೆ ಇಲ್ಲಿಯವರೆಗೆ ಕಂಡದ್ದಿಲ್ಲ.

"ಸಂಘರ್ಷಗಳನ್ನು ನಿಭಾಯಿಸಿಕೊಳ್ಳಲು ಹಿಂಸೆ ಮೂಲಭೂತ ಅಗತ್ಯ ಎನ್ನುವುದನ್ನು ಒಬಿಸಿಗಳು ಬಿಡಬೇಕು" ಎಂದು ವಾದಿಸುವ ಒಬ್ಬನೇ ಒಬ್ಬ ಒಬಿಸಿ ಬುದ್ಧಿಜೀವಿಯನ್ನು ನಾವು ನೋಡಲಾಗುವುದಿಲ್ಲ. ಭೂಪೇಂದರ್ ಸಿಂಗ್ ಹುಡ್ಡಾ, ಮುಲಾಯಂಸಿಂಗ್ ಯಾದವ್, ಲಾಲು ಯಾದವ್‌ರಂಥ ಸಾಮಾಜಿಕ ನ್ಯಾಯ ಪ್ರತಿಪಾದಿಸುವಂಥ ಬುದ್ಧಿಜೀವಿಗಳು ತೀವ್ರ ಗಾಮಿಗಳಾಗಿ ಭಾರತದಲ್ಲಿ ಹೊಸ ಸಾಮಾಜಿಕ ಯಜಮಾನಿಕೆಯನ್ನು ಸ್ಥಾಪಿಸುತ್ತಿದ್ದಾರೆ. ಪ್ರಫುಲ್ಲ ಬಿದ್ವಾಯ್, ಸತೀಶ್ ದೇಶಪಾಂಡೆ ಮತ್ತು ಪ್ರೊ. ಯೋಗೇಂದ್ರ ಯಾದವ್‌ನಂಥವರು ಈ ಕೆಳಗಿನವುಗಳಿಗೆ ಉತ್ತರಗಳನ್ನು ನೀಡಲೇಬೇಕಾಗುತ್ತದೆ:

ಹಾಗೆಯೇ "ಒಬಿಸಿಗಳು ತಮ್ಮೊಳಗೇ ಸುಧಾರಣೆಯಾಗಬೇಕು-ಅವರ ಶೈಕ್ಷಣಿಕ ಪ್ರಗತಿ ಅವರ ರಾಜಕೀಯ ಮತ್ತು ಆರ್ಥಿಕ ಪ್ರಗತಿಗೆ ಹೋಲಿಸಲಾರದಷ್ಟು ಹಿಂದಿದೆ" ಎನ್ನುವಂಥ ಒಬ್ಬನೇ ಒಬ್ಬ ಒಬಿಸಿ ಬುದ್ಧಿಜೀವಿಯನ್ನು ನಾನು ಇಲ್ಲಿಯವರೆಗೆ ಕಂಡದ್ದಿಲ್ಲ.

"ಸಂಘರ್ಷಗಳನ್ನು ನಿಭಾಯಿಸಿಕೊಳ್ಳಲು ಹಿಂಸೆ ಮೂಲಭೂತ ಅಗತ್ಯ ಎನ್ನುವುದನ್ನು ಒಬಿಸಿಗಳು ಬಿಡಬೇಕು" ಎಂದು ವಾದಿಸುವ ಒಬ್ಬನೇ ಒಬ್ಬ ಒಬಿಸಿ ಬುದ್ಧಿಜೀವಿಯನ್ನು ನಾವು ನೋಡಲಾಗುವುದಿಲ್ಲ. ಭೂಪೇಂದರ್ ಸಿಂಗ್ ಹುಡ್ಡಾ, ಮುಲಾಯಂ ಸಿಂಗ್ ಯಾದವ್, ಲಾಲು ಯಾದವ್‌ರಂಥ ಸಾಮಾಜಿಕ ನ್ಯಾಯ ಪ್ರತಿಪಾದಿಸುಂಥ ಬುದ್ಧಿಜೀವಿಗಳು ತೀವ್ರಗಾಮಿಗಳಾಗಿ ಭಾರತದಲ್ಲಿ ಹೊಸ ಸಾಮಾಜಿಕ ಯಜಮಾನಿಕೆಯನ್ನು ಸ್ಥಾಪಿಸುತ್ತಿದ್ದಾರೆ.

ಪ್ರಫುಲ್ಲ ಬಿದ್ವಾಯ್, ಸತೀಶ್ ದೇಶಪಾಂಡೆ ಮತ್ತು ಪ್ರೊ. ಯೋಗೇಂದ್ರ ಯಾದವ್‌ನಂಥವರು ಈ ಕೆಳಗಿನವುಗಳಿಗೆ ಉತ್ತರಗಳನ್ನು ನೀಡಲೇಬೇಕಾಗುತ್ತದೆ:

ಲಾಲು ಯಾದವ್‌ನ ಆರ್‌ಜೆಡಿಯ ವಿರುದ್ಧ ದಲಿತರು ಮತ್ತು ಎಂಬಿಸಿಗಳು ಯಾಕೆ ಮತ ಚಲಾಯಿಸಿದರು? ಅಲ್ಲದೆ ಮಾಯಾವತಿಯ ಬಿಎಸ್‌ಪಿಗೆ ದಲಿತರು ಮತ್ತು ಎಂಬಿಸಿಗಳು ಮತ ಚಲಾಯಿಸಲು ಯೋಚಿಸುತ್ತಿದ್ದಾರೆ ಏಕೆ? ಈ ಬುದ್ಧಿಜೀವಿಗಳಿಂದ ಸಾಧ್ಯವಾದರೆ ಸಾಮಾಜಿಕ ನ್ಯಾಯ ಎನ್ನುವುದು ದ್ವಿಜರ ಯಜಮಾನಿಕೆಯನ್ನು ಒಬಿಸಿ ಯಜಮಾನಿಕೆಯನ್ನಾಗಿ ಪಲ್ಲಟಗೊಳಿಸಿದ್ದು ಏಕೆ? ಎನ್ನುವುದಕ್ಕೆ ಉತ್ತರ ಕೊಡಬೇಕಾಗುತ್ತದೆ. ಜಾತಿ ಯಜಮಾನಿಕೆಯ ದೇಶವಾಗಿ ಮತ್ತು ದಲಿತರು ಅಧೀನರಾಗಿರುವಂತೆ ಭಾರತ ಎಂದೆಂದಿಗೂ ಇರಬೇಕೇ?

ಏಪ್ರಿಲ್ ೪, ೧೯೯೯ ರಲ್ಲಿ ಹುಟ್ಟಿದ ದಲಿತ ಡೈರಿ ಈಗ ತನ್ನ ೮ನೇ ವಾರ್ಷಿಕೋತ್ಸವದಲ್ಲಿದೆ. ಹಾಗೆಯೇ ೨೦೦೭ನೇ ವರ್ಷವು ದಲಿತ-ಬ್ರಾಹ್ಮಣ ಸಿದ್ಧಾಂತದ ೧೦ನೇ ವಾರ್ಷಿಕೋತ್ಸವವನ್ನು ಆರಂಭಿಸುತ್ತಿದೆ. ಹಾಗೆಯೇ ಈ ವರ್ಷವು ಭೋಪಾಲ್ ಸಮ್ಮೇಳನದ ಐದನೇ ವರ್ಷವನ್ನು ಆಚರಿಸುತ್ತಿದೆ.

ಕೇವಲ ಎರಡು ಬಾರಿ ನಾನು ಪಾಯನೀಯರ್ ಪತ್ರಿಕೆಗೆ ಅಂಕಣಗಳನ್ನು ನಿಗದಿತ ವೇಳೆಗೆ ತಲುಪಿಸಲಾಗಿರಲಿಲ್ಲ. ಈ ಎಲ್ಲಾ ವರ್ಷಗಳಲ್ಲಿಯೂ ನಾನು ಹೊಸ ವಿಚಾರಗಳು ಇಲ್ಲವೇ ವಿಚಾರಗಳ ಸರಣಿಯನ್ನು ತಡಕಾಡಬೇಕಾಗಿತ್ತು. ಆದರೆ ಅಲ್ಲಿ ಹೊಸ ಸಾಧ್ಯತೆಗಳು ಕಂಡಿವೆ. ಅವುಗಳನ್ನು ಚಾರಿತ್ರಿಕವಾಗಿ ನಿರೂಪಿಸುವುದಾದರೆ ಅವು ಈ ಕೆಳಗಿನಂತಿವೆ:

–ಭಾರತದಲ್ಲಿ ಸಾಮಾಜಿಕ ದ್ವಂದ್ವಗಳು ಪಲ್ಲಟಗೊ

ದಲಿತ ಕಾರ್ಯಕರ್ತೆಯೊಬ್ಬಳು ವೇದಿಕೆಗೆ ನುಗ್ಗಿ ಬಂದು "ಅಮೆರಿಕಾದ ಮಾದರಿ ಭಾರತದಲ್ಲಿ ಸಾಧ್ಯವಾಗದು" ಎಂದು ಘೋಷಿಸಿದ್ದಳು. ಇಂದು ಪ್ರಧಾನ ಮಂತ್ರಿಗಳು ಆ ಮಾದರಿಯನ್ನು ಕುರಿತು ಮಾತನಾಡುತ್ತಿದ್ದಾರೆ. ಭಾರತೀಯ ಕೈಗಾರಿಕೋದ್ಯಮವು ಒಂದು ಸಮಿತಿಯನ್ನು ಸ್ಥಾಪಿಸಿ ಅಮೆರಿಕಾದ ಸಕಾರಾತ್ಮಕ ಕ್ರಿಯೆಯನ್ನು ಜಾರಿಯಾಗಿಸುವಂತೆ ಮಾಡಿದೆ. ಅಲ್ಲದೆ ನಮ್ಮ ಚಿಂತನಾಶೀಲ ದಲಿತರು ಬಂಡವಾಳಶಾಹಿ ಖಾಸಗಿ ವಲಯದಲ್ಲಿ ತಮ್ಮ ಪಾಲನ್ನು ಪಡೆಯಲು ಇಚ್ಛಿಸುತ್ತಿದ್ದಾರೆ. ಪ್ರೀತಿ ಅಥವಾ ದ್ವೇಷವಾಗಲೀ ದಲಿತ ಡೈರಿ ನಿಜದ ಹಾದಿಯನ್ನು ತುಳಿಯುತ್ತಿದೆ. ದಲಿತ-ಬ್ರಾಹ್ಮಣ ಹೊಂದಾಣಿಕೆಯು ಪ್ರಜಾಪ್ರಭುತ್ವಕ್ಕೆ ಅಗತ್ಯವಾದುದು. ನನ್ನನ್ನು ನೀವು ಎಷ್ಟೇ ನಿಂದಿಸಿದರೂ ಒಬಿಸಿಗಳು ರಾಜಕೀಯವಾಗಿ ಪ್ರತ್ಯೇಕಗೊಳ್ಳಲಿದ್ದಾರೆ.

ಳ್ಳುತ್ತಿವೆ. ದಲಿತರು-ಒಬಿಸಿಗಳು ರಾಜಕೀಯವಾಗಿ ಒಂದಾಗಿ ಪಯಣಿಸಲು ಸಾಧ್ಯವಿಲ್ಲ. ಇಂದಿನ ನೈಜ ಸ್ಥಿತಿಯೆಂದರೆ ದಲಿತರು ಮತ್ತು ಒಬಿಸಿಗಳು ಪರಸ್ಪರ ತದ್ವಿರುದ್ಧ ದಿಕ್ಕಿನಲ್ಲಿ ನಿಂತಿದ್ದಾರಾದ್ದರಿಂದ ದನಗಾಯಿ ಶ್ರೇಣಿ ಭಾರತದಲ್ಲಿ ದಲಿತ-ಬ್ರಾಹ್ಮಣ ಹೊಂದಾಣಿಕೆ ಮಾತ್ರ ಒಂದು ಹೊಸ ಸಾಮಾಜಿಕ ಹೊಂದಾಣಿಕೆಯಾಗುತ್ತದೆ.

– ಸರ್ಕಾರಿ ಉದ್ಯೋಗಗಳು ಮಾತ್ರ ದಲಿತರ ಸಮಸ್ಯೆಗಳನ್ನು ಬಗೆಹರಿಸುವುದಿಲ್ಲ. ಭಾರತವು ಅಮೆರಿಕಾದ ವೈವಿಧ್ಯತೆಯ ಮಾದರಿಯನ್ನು ಅಥವಾ ಸಕಾರಾತ್ಮಕ ಕ್ರಿಯಾಯೋಜನೆಯನ್ನು ದಲಿತರಿಗಾಗಿ ಜಾರಿಯಾಗಿಸಬೇಕಾಗುತ್ತದೆ ಹಾಗೂ ದಲಿತರು ಖಾಸಗೀ ವಲಯಕ್ಕೂ ಲಗ್ಗೆ ಇಟ್ಟು ಉದ್ಯೋಗ ಮಾತ್ರ ಅರಸದೆ ಉದ್ಯಮಿಗಳಾಗುವತ್ತ ಗಮನಹರಿಸಬೇಕಾಗಿದೆ.

–ದಲಿತರಿಗೆ ಬಂಡವಾಳಶಾಹಿಯೇ ಒಂದು ಸಾಮಾಜಿಕ ವ್ಯವಸ್ಥೆಯಾಗಿ ಪ್ರಯೋಜನಕಾರಿಯಾದುದು ಮತ್ತು ಜಾಗತೀಕರಣ ಭವಿಷ್ಯದಲ್ಲಿ ಭಾರತದಲ್ಲಿನ ಜಾತಿ ವ್ಯವಸ್ಥೆಯನ್ನು ನಾಶಮಾಡುತ್ತದೆ.

– ದಲಿತ ಸಮುದಾಯ ದಲಿತ ಬಂಡವಾಳ ಶಾಹಿಯನ್ನೊಂದನ್ನು ತಯಾರಿಸಬೇಕಾಗಿದೆ. ಆಗಲೇ ಸಮುದಾಯ ಆತ್ಮವಿಶ್ವಾಸದಿಂದ ಬೆಳೆಯುತ್ತದೆ. ಈ ಪ್ರಕ್ರಿಯೆಯಲ್ಲಿ ದಲಿತರು ಸಮಾಜದಲ್ಲಿ ಬೆರೆತುಕೊಳ್ಳುತ್ತಾರೆ. ಆದ್ದರಿಂದ ದಲಿತರು ಭಾರತೀಯ ಭಾಷೆಗಳನ್ನು ಬಿಟ್ಟು ಇಂಗ್ಲಿಷನ್ನು ಅವರ ಕುಲದೇವತೆಯಾಗಿ ಸ್ವೀಕರಿಸಬೇಕಾಗುತ್ತದೆ.

ಇವುಗಳಲ್ಲಿ ಅನೇಕ ವಿಚಾರಗಳು ಮೊದಮೊದಲು ಒಂದು ರೀತಿಯ ಫ್ಯಾಶನ್ ತರಹ ಇದ್ದವು. ಕಾರಣ ನಾನು ಯಾವ ವಿಚಾರವನ್ನು ಶೋಧಿಸತೊಡಗಿದೆನೋ ಪ್ರತಿಯೊಂದು ಹೆಜ್ಜೆಯಲ್ಲು ಸಮುದಾಯದೊಳಗೆ ಅಡಚಣೆಗಳು ಎದುರಾದವು. ನಾನೊಬ್ಬ ಅಲ್ಪ ಸಂಖ್ಯಾತನಂತೆ ತೋರುತ್ತಿತ್ತು.



ದಲಿತ-ಬ್ರಾಹ್ಮಣ ಸಹ ಪ್ರಯಾಣ ಸಿದ್ಧಾಂತವನ್ನು ನಾನು ಆಲೋಚಿಸಿದ ಆಗಸ್ಟ್ ೧೪ ೧೯೯೭ ರ ಮಧ್ಯಾಹ್ನ ನೆನಪಿಗೆ ಬರುತ್ತದೆ. ನನ್ನ ಶ್ರೇಷ್ಠ ಸ್ನೇಹಿತ **ಬೆಳ ಮಾಲಿಕ್**, ನೆಹರು ಮೆಮೋರಿಯಲ್ ವಿನ್ಯಾಸ ನೀಡಲು ಟೀನ್ ಮೂರ್ತಿ ಭವನಕ್ಕೆ ಆಹ್ವಾನಿಸಿದರು. ಅದೊಂದು ನನಗೆ ಮೊದಲ ಬೌದ್ಧಿಕ ವಲಯದ ವೇದಿಕೆಯಾಗಿತ್ತು. ಅಲ್ಲಿ ಮಾತನಾಡಿದ ವಿಷಯ: "ಸ್ವಾತಂತ್ರ್ಯ ನಂತರದ ಸಾಮಾಜಿಕ ಬದಲಾವಣೆಗಳು- ದಲಿತ ದೃಷ್ಟಿಕೋನ". ದಲಿತ-ಬ್ರಾಹ್ಮಣ/ದ್ವಿಜ ಹೊಂದಾ ಣಿಕೆಯು ಭವಿಷ್ಯದ ಉತ್ತರ-ಭಾರತ ದಲ್ಲಿ ಮುಂದಿನ ರಾಜಕೀಯಕ್ಕೆ ಮುಖ್ಯವಾದುದು ಎಂದು ನಾನು ಅಂದು ವಿಶ್ಲೇಷಣೆ ಮಾಡಿ ಮಾತ ನಾಡಿದ್ದೆ.

ಅಲ್ಲಿ ದೊರೆತ ಪ್ರತಿಕ್ರಿಯೆ ಬಹಳಷ್ಟು ವಿಷಯವನ್ನು ನನ್ನ ವಿರುದ್ಧ ಕಕ್ಕಿತ್ತು. ಅಲ್ಲಿ ನೆರೆದಿದ್ದ ಬುದ್ಧಿಜೀವಿಗಳೆನಿಸಿಕೊಂಡವರು ನನ್ನನ್ನು ಬಹಳಷ್ಟು ದೂಷಿಸಿದ್ದರು. ದಿವಂಗತ ಪ್ರೊಫೆಸರ್ ರವಿಂದರ್ ಕುಮಾರ್ ಅಂದು ಅಧ್ಯಕ್ಷತೆಯನ್ನು ವಹಿಸಿದ್ದು ಆಘಾತಕ್ಕೊಳಗಾದಂತೆ ಕಂಡರು. ಸಭಿಕರನ್ನು ನಿಯಂತ್ರಿಸಲು ಅವರಿಗೆ ಸಾಧ್ಯವಾಗಿರಲಿಲ್ಲ. ನನಗೆ ನೆನಪಿರುವಂತೆ ಪ್ರೊ. ನಸೀರ್ ತ್ಯಾಬ್ಜಿ ಮಾತ್ರ ನನ್ನ ಬೆಂಬಲಕ್ಕೆ ನಿಂತು, "ಆತ ಹೇಳಿದ ವಿಚಾರವನ್ನು ನಾವು ಹೊಸದಾಗಿ ಯೋಚಿಸಬೇಕಾಗಿದೆ" ಎಂದಿದ್ದರು.

ಎರಡು ವರ್ಷಗಳ ಅನಂತ ರದಲ್ಲಿ ದಲಿತ ಡೈರಿ ಅಸ್ತಿತ್ವಕ್ಕೆ ಬಂದಿತು. ನಾನು ಆ ವೇದಿಕೆಯನ್ನು ಬಳಸಿ ನನ್ನ ವಾದವನ್ನು ಮತ್ತಷ್ಟು ಪ್ರತಿಪಾದಿಸತೊಡಗಿದೆ. ಬಿಎಸ್‌ಪಿಯನ್ನು ಬೆಂಬಲಿಸುತ್ತಿದ್ದ ಬಹುಜನ ಬುದ್ಧಿಜೀವಿಗಳು ಆ ಸಂದರ್ಭದಲ್ಲಿ ಬಹಿರಂಗವಾಗಿಯೇ ನನ್ನನ್ನು ದೂಷಿಸತೊಡಗಿದ್ದರು.

ಅದೃಷ್ಟವಶಾತ್ ಹಿರಿಯ ಪತ್ರಕರ್ತನಾದ ಪ್ರಭಾ ಜಗನಾಥನ್ ನನ್ನ ತೀನ್ ಮೂರ್ತಿ ಭವನದ ವಿಚಾರಗಳ ಬಗ್ಗೆ "ಹೊಸ ಸಾಮಾಜಿಕ-ರಾಜಕೀಯ ಹೊಂದಾಣಿಕೆಯತ್ತ ದಲಿತರು" ಎಂಬ ಶಿರ್ಷಿಕೆಯಡಿ ಆಗಸ್ಟ್ ೧೬ ೧೯೯೭ ರಲ್ಲಿ ಎಕಾನೊಮಿಕ್ ಟೈಮ್ಸ್‌ನಲ್ಲಿ ಬರೆದಿದ್ದರು. ಅದೊಂದು ಬರವಣಿಗೆ ನನ್ನ ಸಿದ್ಧಾಂತಕ್ಕೆ ಸಾಕ್ಷಿಯಾಗಿ ನಿಂತದ್ದು.

ಈಗ ಹತ್ತು ವರ್ಷಗಳೇ ಕಳೆದಿದೆ. ನಾನು ಕೇಳುವ ಪ್ರಶ್ನೆಯೆಂದರೆ- "ಉತ್ತರ ಪ್ರದೇಶದಲ್ಲಿ ಈಗ ಬಿಎಸ್‌ಪಿ ಮಾಡು ತ್ತಿರುವುದಾದರು ಏನು?"

ಹಾಗೆಯೇ ನಾನು ಮೊದಲ ಬಾರಿ ವೈವಿಧ್ಯತೆಯ/ಸಕರಾತ್ಮಕ ನೀತಿಯ ಬಗ್ಗೆ ಮಾತನಾಡಿದಾಗ ಜನ ನನ್ನನ್ನು ತೀವ್ರವಾಗಿ ಅಣಕಿಸಿದ್ದರು. ಇದಾದ ಮೂರ ವರ್ಷಗಳ ನಂತರ ದಲಿತ ಡೈರಿ ಆರಂಭವಾಗಿತ್ತು. ಮಧ್ಯಪ್ರದೇಶದಲ್ಲಿ ದಿಗ್ವಿಜಯ್ ಸಿಂಗ್‌ನ ನೇತೃತ್ವದಲ್ಲಿ ಸರ್ಕಾರ ಭೋಪಾಲ್ ಸಮ್ಮೇಳನವನ್ನು ಅದೇ ವಿಷಯದ ಕುರಿತು ಏರ್ಪಡಿಸಿತು.

ಸಮ್ಮೇಳನದ ಮೊದಲನೇ ದಿನವೇ ದಲಿತ ಕಾರ್ಯಕರ್ತೆಯೊಬ್ಬಳು ವೇದಿಕೆಗೆ ನುಗ್ಗಿ ಬಂದು "ಅಮೆರಿಕಾದ ಮಾದರಿ ಭಾರತದಲ್ಲಿ ಸಾಧ್ಯವಾಗದು" ಎಂದು ಘೋಷಿಸಿದ್ದಳು. ಇಂದು ಪ್ರಧಾನ ಮಂತ್ರಿಗಳು ಆ ಮಾದರಿಯನ್ನು ಕುರಿತು ಮಾತನಾಡುತ್ತಿದ್ದಾರೆ. ಭಾರತೀಯ ಕೈಗಾರಿಕೋದ್ಯಮವು ಒಂದು ಸಮಿತಿಯನ್ನು ಸ್ಥಾಪಿಸಿ ಅಮೆರಿಕಾದ ಸಕಾರಾತ್ಮಕ ಕ್ರಿಯೆಯನ್ನು ಜಾರಿಯಾಗಿಸುವಂತೆ ಮಾಡಿದೆ. ಅಲ್ಲದೆ ನಮ್ಮ ಚಿಂತನಾಶೀಲ ದಲಿತರು ಬಂಡವಾಳಶಾಹಿ ಖಾಸಗಿ ವಲಯದಲ್ಲಿ ತಮ್ಮ ಪಾಲನ್ನು ಪಡೆಯಲು ಇಚ್ಛಿಸುತ್ತಿದ್ದಾರೆ.

ಪ್ರೀತಿ ಅಥವಾ ದ್ವೇಷವಾಗಲೀ ದಲಿತ ಡೈರಿ ನಿಜದ ಹಾದಿಯನ್ನು ತುಳಿಯುತ್ತಿದೆ. ದಲಿತ-ಬ್ರಾಹ್ಮಣ ಹೊಂದಾಣಿಕೆಯು ಪ್ರಜಾಪ್ರಭುತ್ವಕ್ಕೆ ಅಗತ್ಯವಾದುದು. ನನ್ನನ್ನು ನೀವು ಎಷ್ಟೇ ನಿಂದಿಸಿದರೂ ಒಬಿಸಿಗಳು ರಾಜಕೀಯವಾಗಿ ಪ್ರತ್ಯೇಕಗೊಳ್ಳಲಿದ್ದಾರೆ.

ದಲಿತ-ಬ್ರಾಹ್ಮಣ ಸಿದ್ಧಾಂತದಂತೆ ಒಬಿಸಿಗಳ ಪ್ರತ್ಯೇಕೀಕರಣ ತತ್ವವೂ ಸಹ ನನ್ನ ಇಚ್ಛೆಯಲ್ಲ.

ದೇಶ ಯಾವ ದಿಕ್ಕಿನತ್ತ ನಾಳೆ ನಡೆಯುತ್ತದೆ ಎನ್ನುವುದರ ಬಗ್ಗೆಯಷ್ಟೇ ನಾನು ಹೇಳುತ್ತಿದ್ದೇನೆ. ದಲಿತ ಡೈರಿಯನ್ನು ಅನುಸರಿಸಿ ಮತ್ತು ನಿಜದ ಮಾರ್ಗವನ್ನು ಹಿಡಿಯಿರಿ. □

ಬುದ್ಧಾಯಣ

೨೧

ಕೇಡಿನಿಂದ ಮುಕ್ತನಾದವ ಭಿಕ್ಷುವಿಗೆ ಸಮ

ಸಿ. ಎಚ್. ರಾಜಶೇಖರ್

‘ಗುರುವೇ, ಸಾಮಾನ್ಯನೊಬ್ಬ ಕಾಯಿಲೆ ಬಿದ್ದಾಗ ಆತ ನೋವಿನಿಂದ ಅತೀವವಾಗಿ ನರಳುತ್ತಿದ್ದಾಗ. ಮತ್ತೊಬ್ಬ ವಿವೇಚನೆ ಯುಳ್ಳ ಸಹೋದರರು ಆ ರೋಗಿಯನ್ನು ಸಂತೈಸುವುದು ಕರ್ತವ್ಯ ಹೌದೋ ಅಥವಾ ಅಲ್ಲವೋ?’ ‘ಗೆಳೆಯ ಮಹಾನಾಮ. ಹೌದು ಅದು ಅವನ ಕರ್ತವ್ಯವೂ ಹೌದು. ನೈತಿಕತೆಯು ಹೌದು’ ‘ಗುರುವೆ, ಆ ಸಮಯದಲ್ಲಿ ಅವನನ್ನು ಹೇಗೆ ಸಂತೈಸಬೇಕು’ ‘ಗೆಳೆಯಾ, ಸಮಾಧಾನ ಹುಟ್ಟಿಸುವ ನಾಲ್ಕು ಭರವಸೆಯ ಮಾತುಗಳನ್ನು ರೋಗಿಗೆ ಹೇಳಬೇಕು’ ‘ಗುರುವೇ, ಆ ಮಾತು ಯಾವ ವಿಷಯದಿಂದ ಕೂಡಿ ರಬೇಕು?’

ಒಮ್ಮೆ ಬುದ್ಧನ ಕಪಿಲವಸ್ತುವಿನಲ್ಲಿ ಶಾಕ್ಯರ ಜೊತೆ ಅಂಜೂರ ವೃಕ್ಷಗಳ ವನದಲ್ಲಿ ತನ್ನ ಭಿಕ್ಷು ಸಹೋದರರೊಂದಿಗೆ ತಂಗಿದ್ದ. ಅಂತಹ ಸಮಯದಲ್ಲಿ ಮಹಾನಾಮವೆಂಬ ಶಾಕ್ಯನು ಬುದ್ಧನ ಬಳಿ ಬಂದು ಅವನಿಗೆ ವಂದಿಸಿ ಪಕ್ಕದಲ್ಲಿ ಕುಳಿತು ಈ ರೀತಿ ಪ್ರಶ್ನೆಯನ್ನು ಪ್ರಾರಂಭಿಸಿದ;

‘ಗುರುವೇ, ಸಾಮಾನ್ಯನೊಬ್ಬ ಕಾಯಿಲೆ ಬಿದ್ದಾಗ ಆತ ನೋವಿನಿಂದ ಅತೀವವಾಗಿ ನರಳುತ್ತಿದ್ದಾಗ. ಮತ್ತೊಬ್ಬ ವಿವೇಚನೆ ಯುಳ್ಳ ಸಹೋದರರು ಆ ರೋಗಿಯನ್ನು ಸಂತೈಸುವುದು ಕರ್ತವ್ಯ ಹೌದೋ ಅಥವಾ ಅಲ್ಲವೋ?’

‘ಗೆಳೆಯ ಮಹಾನಾಮ. ಹೌದು ಅದು ಅವನ ಕರ್ತವ್ಯವೂ ಹೌದು. ನೈತಿಕತೆಯು ಹೌದು’

‘ಗುರುವೆ, ಆ ಸಮಯದಲ್ಲಿ ಅವನನ್ನು ಹೇಗೆ ಸಂತೈಸಬೇಕು’

‘ಗೆಳೆಯಾ, ಸಮಾಧಾನ ಹುಟ್ಟಿಸುವ ನಾಲ್ಕು ಭರವಸೆಯ ಮಾತುಗಳನ್ನು ರೋಗಿಗೆ ಹೇಳಬೇಕು’

‘ಗುರುವೇ, ಆ ಮಾತು ಯಾವ ವಿಷಯದಿಂದ ಕೂಡಿ ರಬೇಕು?’

‘ಗೆಳೆಯ, ಧರ್ಮದಿಂದ ಮತ್ತು ಭಿಕ್ಷುಗಳ ಸಂಘದಿಂದ ನೆಮ್ಮದಿಯನ್ನು ಪಡೆ. ಅಂತೆಯೇ ಧರ್ಮಕ್ಕೆ ಅತೀ ಪ್ರಿಯವಾದ ಸದ್ಗುಣ ಗಳನ್ನು ಚಾಚೂ ತಪ್ಪದೇ ಶುದ್ಧವಾಗಿ ಪಾಲಿಸು. ಅದರಿಂದ ನಿನ್ನ ಮಾತಿನ ಸಮತೋಲನ ಉಳಿಯುತ್ತದೆ. ಮತ್ತು ನೀನು ರೋಗ ದಿಂದ ಮುಕ್ತನಾಗುವೆ ಎನ್ನಬೇಕು.’

‘ಗುರುವೆ ಒಂದು ಪಕ್ಷ ರೋಗಿಯೂ ಸಾವಿನ ಹಂಚಿನಲ್ಲಿದ್ದು ಆ ಕ್ಷಣದಲ್ಲಿ ಅವನಿಗೆ ತನ್ನ ತಂದೆ ತಾಯಿಗಳ ನೆನಪಾಗಿ ಅವರನ್ನು ನೋಡ ಬಯಸಿದರೆ?’

ಗೆಳೆಯಾ. ಎಲೈ ಪ್ರಿಯನೇ. ನೀನು ಸಾಯಲೇಬೇಕು, ನಿನ್ನ ತಂದೆ ತಾಯಿಯರಿಗಾಗಿ ಹಂಬಲಿಸು ಅಥವಾ ಹಂಬಲಿಸದಿರು. ನೀನು ಸಾಯುತ್ತೀಯೆ. ಹಾಗಾಗಿ ಅವರಿಗಾಗಿ ಹಂಬಲಿಸುವುದು ಥರವಲ್ಲ ಎನ್ನಬೇಕು.’

‘ಗುರುವೆ. ಆಗ ಆ ರೋಗಿಯು ಮಿತ್ರ, ನಾನು ನನ್ನ ಮಕ್ಕಳಿಗಾಗಿ ಹಂಬಲಿಸುತ್ತಿದ್ದೇನೆ ಎಂದರೆ?’

‘ಗೆಳೆಯಾ. ನೀನು ಸಾಯುವುದು ಖಚಿತ. ಅವರಿಗಾಗಿ ಹಂಬಲಿಸಿ ಪ್ರಯೋಜನವಿಲ್ಲ ಎನ್ನಬೇಕು.’

‘ಗುರುವೆ. ಆಗ ಆ ರೋಗಿಯು ಮಿತ್ರ ನನಗೆ ಇಂದ್ರೀಯ ಸುಖಗಳ ಬಗ್ಗೆ ಇನ್ನು ಹಂಬಲ ಉಳಿದಿದೆ. ಎಂದರೆ?’

‘ಗೆಳೆಯಾ ಕಾಮವನ್ನು ಶೀಲದಿಂದ ಗೆದಿ ಎನ್ನಬೇಕು. ದೈಹಿಕ ಸುಖಕ್ಕಿಂತ ಮಾನಸಿಕ ಉನ್ನತಿಯೇ ಮುಖ್ಯ. ಆದ್ದರಿಂದ ಆ ಪ್ರಾಪಂಚಿಕ ಸುಖಗಳ ಆಸೆಯನ್ನು ಬಿಟ್ಟು ಮನಸ್ಸನ್ನು ಲೋಕ ಕಲ್ಯಾಣದತ್ತ ಕೇಂದ್ರಿಕರಿಸುವುದೇ ಶ್ರೇಷ್ಠ ಎನ್ನಬೇಕು’

‘ಗುರುವೇ. ಆಗ ಆ ರೋಗಿಯೂ. ಪ್ರಿಯನೇ, ನನ್ನ ಮನಸ್ಸು ಈಗ ಸ್ಥಿರವಾಗಿದೆ. ಮನಸ್ಸು ಬ್ರಹ್ಮಲೋಕದ ಮೇಲೆ ಕೇಂದ್ರಿಕರಿಸಿದ್ದೇನೆ ಎಂದರೆ?’

‘ಗೆಳೆಯಾ, ಆಗ ಆ ರೋಗಿಗೆ ಹೀಗೆ ಹೇಳು ಬ್ರಹ್ಮಲೋಕವೂ ನಶ್ವರ ಬದಲಾವಣೆ ಹೊಂದುವಂತದ್ದು. ಅದೂ ಕೂಡ ಮಿತಿಗೆ ಒಳಪಟ್ಟಿದೆ. ಆದ್ದರಿಂದ ಪರಲೋಕದ ಚಿಂತೆಯಿಂದ ಮುಕ್ತವಾಗಿ ಇಹ ಲೋಕದ ಕಡೆಗೆ ಗಮನಹರಿಸು. ನಿನ್ನಲ್ಲಿಯೇ ಅಡಗಿರುವ ಸ್ವಾರ್ಥ ವನ್ನು ನೀಗಿಸಿಕೋ ಎನ್ನಬೇಕು’

‘ಗುರುವೆ ಅವನು ನಾನು ಸ್ವಾರ್ಥವನ್ನು ನೀಗಿಕೊಂಡಿದ್ದೇನೆ. ಸಕಲ ಉಪಾದಿಯಿಂದ ಮುಕ್ತನಾಗಿದ್ದೇನೆ ಎಂದರೆ?’

‘ಗೆಳೆಯಾ, ಆಗ ಹೀಗೆ ಅಚಲವಾದ ಸಾಮಾನ್ಯ ಮನುಷ್ಯನಿಗೂ ಮತ್ತು ಅಸವಗಳಿಂದ ಮುಕ್ತನಾಗಿದ್ದೇನೆ ಎಂದರೆ?’

‘ಗುರುವೇ, ಆ ರೋಗಿ ಬೇರೆ ಯಾರು ಅಲ್ಲ ನಾನೇ ಆಗಿದ್ದೆ...! ನಿನ್ನ ಕಂಡು ಮಾತನಾಡಿದ ನಾನು ರೋಗವನ್ನು ಕಳೆದು ಕೊಂಡು ನಿರೋಗಿಯಾದೆ...! ಹೌದು ಗುರುವೆ ನೀನು ರಕ್ಷಕನೇ ಸರಿ. ನಿನಗೆ ವಂದನೆ...! ಎಂದ. □



ಒಮ್ಮೆಲೇ ಒಪ್ಪದಿರು; ತಾಳ್ಮೆಯೇ ತರ!

ಯಾವ ಸಿದ್ಧಾರ್ಥ ಗೌತಮ ಈ ಜಗತ್ತೆಲ್ಲ ಆಸೆ, ದುಃಖ, ಸ್ವಾರ್ಥ ಮತ್ತು ಮೌಢ್ಯದಿಂದ ಕೂಡಿದೆ ಎಂದು ಅರಿತು, ರಾಜ್ಯ, ಅರಮನೆ, ಮಡದಿ, ಮಗ, ತಂದೆ ತಾಯಿ, ಬಂಧು ಬಾಂಧವರು, ಸ್ನೇಹಿತರು ಹಾಗೂ ಅಪಾರ ಪ್ರಜೆಯನ್ನು ತೊರೆದು ಸಂಸಾರ ತ್ಯಾಗ ಮಾಡಿ ಭಿಕ್ಷು ದೀಕ್ಷೆಯನ್ನು ಪಡೆದು ಕಪಿಲವಸ್ತುವಿನಿಂದ ತೊರೆದು ಏಕಾಂಗಿಯಾಗಿ ಹೊರಟಾಗ ಆತನಿಗೆ ಕೇವಲ ಇಪ್ಪತ್ತೆಂಟರ ಹದಿಹರೆಯ.

ಈ ಹದಿ ಹರೆಯದ ತನ್ನ ಸ್ನೇಹಿತನ ಮಗನಾದ ಸಿದ್ಧಾರ್ಥ ಗೌತಮ ತನ್ನ ರಾಜಧಾನಿಯ ಬೀದಿಯಲ್ಲಿ ಭಿಕ್ಷೆ ಬೇಡುವ ದೃಶ್ಯ ಕಂಡು ಮಮ್ಮಲ ಮರುಗಿದ ಬಿಂಬಸಾರ.

'ಸಿದ್ಧಾರ್ಥ ನಿನಗಿದು ತರವಲ್ಲ ಕತ್ತಿ ಹಿಡಿದ ಕೈಯಲ್ಲಿ ಭಿಕ್ಷಾಪಾತ್ರೆಯೇ...? ಬೇಡ... ಬೇಡ... ನೋಡಲಾರೆ...! ನೀನು ಹಿಂದಿರುಗಿ ನಿನ್ನ ರಾಜ್ಯಕ್ಕೆ ಹೋಗುವುದು ಅವಮಾನಕರವಾದರೆ ನನ್ನ ರಾಜ್ಯದ ಅರ್ಧ ಭಾಗವನ್ನು ನಿನಗೆ ಧಾರೆ ಎರೆದು ಕೊಡುತ್ತೇನೆ. ಸ್ವೀಕರಿಸಿ, ಈ ಕಾವಿ ಬಟ್ಟೆ ಸಂನ್ಯಾಸತ್ವ ಮತ್ತು ಭಿಕ್ಷಾಪಾತ್ರೆಯನ್ನು ತೊರೆ' ಎಂದಾಗ

'ಕ್ಷಮಿಸು ದೊರೆಯೆ, ನೀನು ನನ್ನ ಕುಟುಂಬದ ಹಿತೈಷಿ ಎಂಬ ಕಾರಣಕ್ಕಾಗಿ ನನ್ನ ಭಿಕ್ಷಾಪಾತ್ರೆಯನ್ನು ಕಂಡು ತಲ್ಲಣಿಸಬೇಡ. ಅಪಮಾನಕರವೆಂದು ಬಗೆಯಬೇಡ. ವಾಸ್ತವವೆಂದರೆ ಈ ಭಿಕ್ಷಾಪಾತ್ರೆಯೇ ನನ್ನ ಅಹಂಕಾರವನ್ನು ನೀಗಿದ್ದು. ನನ್ನ ಸ್ವಾರ್ಥವನ್ನು ತೊಲಗಿಸಿದ್ದು. ನಾನು ಯಾರ ಮೇಲಿನ ದ್ವೇಷಕ್ಕಾಗಿ, ಅಸಡ್ಡೆಗಾಗಿ ಸಂಸಾರ ತ್ಯಾಗ ಮಾಡಲಿಲ್ಲ. ಇಡೀ ಬದುಕನ್ನೇ ಆವರಿಸಿಕೊಂಡಿರುವ ಕಗ್ಗತ್ತಲೆಗೆ ಬೆಳಕು ತರುವ ಸಲುವಾಗಿ ನಾನು ಪರಿವ್ರಾಜಕ ದೀಕ್ಷೆತೊಟ್ಟಿದ್ದು, ದೊರೆಯೇ ನನ್ನನು ಹರಸು ಎಂದಾಗ ಬುದ್ಧನ ಕಣ್ ಮುಂದೆ ಇದ್ದದ್ದು ಮಹಾತ್ವಾಕಾಂಕ್ಷೆ.

ಇದೇ ಸಿದ್ಧಾರ್ಥ ಗೌತಮ ಮುಂದಿನ ಏಳು ವರ್ಷಗಳು ಕಠಿಣ ಅಧ್ಯಯನ. ಯೋಗ ಮತ್ತು ತಪಸ್ಸಿನ ಫಲವಾಗಿ ಜ್ಞಾನೋದಯಗೊಂಡು ಗೌತಮ ಬುದ್ಧನಾದಾಗ ಕೇವಲ ಮೂವತ್ತೈದರ ಹರೆಯ.

ದೊರೆ ಬಿಂಬಸಾರ ಜ್ಞಾನೋದಯಗೊಂಡ ಬುದ್ಧನನ್ನು ತನ್ನ ಮಗಧ ರಾಜ್ಯಕ್ಕೆ ಸ್ವಾಗತಿಸಿ ಸತ್ಕರಿಸಿದೆ. ಬುದ್ಧನ ಅನುಪಮ ಬೋಧನೆಯಿಂದ ತನ್ನಲ್ಲಿದ್ದ ಅಜ್ಞಾನ ಮತ್ತು ಅಲ್ಪತನವನ್ನು ನೀಗಿಸಿಕೊಂಡು ಹೀಗೆಂದ:

'ಕ್ಷಮಿಸು ಗುರುದೇವಾ, ನನ್ನದು ಮಹಾದಪರಾಧವಾಗಿದೆ. ನಾನಂದು ತಮ್ಮನ್ನು ಕಂಡು ಒಳಗೊಳಗೆ ದುಃಖಪಟ್ಟೆ ಚುಚ್ಚು ಮಾತಾಡಿ ದಿಕ್ಕನ್ನು ತಪ್ಪಿಸಲು ಪ್ರಯತ್ನಿಸಿದೆ. ಆದರೆ ತಾವಿಂದು ಯಾರೂ ಏರಲಾಗದ ಜ್ಞಾನ ಪರ್ವತವನ್ನೇ ತಮ್ಮದನ್ನಾಗಿಸಿಕೊಂಡು ನನ್ನೆದುರು ಆಕಾಶವಾಗಿ ನಿಂತಿದ್ದೀರಿ' ಎಂದಾಗ ಬುದ್ಧನು ದೊರೆ ಬಿಂಬಸಾರನನ್ನುದ್ದೇಶಿಸಿ;

'ದೊರೆಯೆ, ಬಹುದೊಡ್ಡ ಮಾತನಾಡುತ್ತಾ ನನ್ನನ್ನು ಚಿಕ್ಕವನನ್ನಾಗಿಸಬೇಡಿ. ಕ್ಷಮಿಸಬೇಕಾದವರು ನೀವೇ ಹೊರತು ನಾನಲ್ಲ. ಏಕೆಂದರೆ ನೀವೆ ನನ್ನ ಮಾರ್ಗ



ಸೂಚಕರು' ಎನ್ನುತ್ತಾನೆ.

ಈ ಹೃದಯ ವೈಶಾಲ್ಯತೆ ಮತ್ತು ನಮ್ರತೆಗೆ ಶರಣಾದ ದೊರೆ ಬಿಂಬಸಾರ ತಲೆಬಾಗಿ ತನ್ನೆರಡು ಕೈಗಳನ್ನು ಜೋಡಿಸಿ ಬುದ್ಧನಿಗೆ ನಮಿಸುತ್ತಾನೆ.

ಈ ಹೃದಯಸ್ಪರ್ಶಿ ಘಟನೆ ಸಂಭವಿಸಿದ್ದು ಇಂದು ನೆನ್ನೆಯಲ್ಲ, ಸುಮಾರು ಎರಡು ಸಾವಿರದ ಐದು ನೂರು ವರ್ಷಗಳ ಹಿಂದಿನ ಮಹತ್ವಪೂರ್ಣ ಐತಿಹಾಸಿಕ ಘಟನೆ. ಬುದ್ಧನ ಬದುಕು ಮತ್ತು ಅವನ ಧರ್ಮದ ಇತಿಹಾಸದ ಪುಟಗಳಲ್ಲಿ ಇದಕ್ಕೊಂದು ಪ್ರತ್ಯೇಕವಾದ ಸುವರ್ಣಾಕ್ಷರವುಳ್ಳ ಅಧ್ಯಾಯವೇ ಮೀಸಲಿದೆ.

ಅಂದು ಬುದ್ಧನ ಎದುರು ಜಗತ್ತಿತ್ತೋ, ಜಗತ್ತಿನ ಎದುರು ಬುದ್ಧನಿದ್ದನೋ? ಅಥವಾ ಬುದ್ಧನಿಗೆ ಎದುರಾದ ಸಮಸ್ಯೆಗಳೇನು? ಸಮಕಾಲೀನ ವ್ಯಕ್ತಿಗಳ್ಯಾರ್ಯಾರು? ಧರ್ಮದ ಧ್ರುವೀಕರಣ ಒಂದೆಡೆ ಆದರೆ ಮತ್ತೊಂದೆಡೆ ಧರ್ಮದ ವಿಕೇಂದ್ರೀಕರಣಕ್ಕೆ ವೇದಿಕೆ ನಿರ್ಮಾಣವಾಗುತ್ತಿತ್ತು ಒಂದು ಕಡೆ ಎರಡು ಸಾವಿರದ ಐನೂರು ವರ್ಷಗಳಿಂದ ಬೇರು ಬಿಟ್ಟು ಬೃಹದಾಕಾರಾವಾಗಿ ಬೆಳೆದು ನಿಂತ ವೈದಿಕ ಧರ್ಮ ಅದಕ್ಕೆ ಎದುರಾಗಿ ಸೆಡ್ಡು ಹೊಡೆದ ಮಹಾವೀರ ಜೈನಧರ್ಮವನ್ನು ಹರಡಿ ಉತ್ತುಂಗ ಸ್ಥಿತಿಯಲ್ಲಿದ್ದ, ಇನ್ನೂ ದೇಶದ ಗಡಿಯ ಹೊರಗೆ ಬುದ್ಧನಷ್ಟೇ ಪ್ರಬಲರಾದ ಝರಾಷ್ಟ್ರ, ಕನ್‌ಫ್ಯೂಷಿಯಸ್, ಲಾವೊತ್ಸೆ ಮುಂತಾದ ಅಪ್ರತಿಮ ಮತ ಸಂಸ್ಥಾಪಕರಿದ್ದರು. ತತ್ತ್ವಜ್ಞಾನಿಗಳು, ಋಷಿಮುನಿಗಳು, ಬೋಧಕರ ನಡುವೆ ಬುದ್ಧ ಈಜಿ ದಡ ಸೇರಬೇಕಾಗಿತ್ತು. ಆ ಕಾರಣಕ್ಕಾಗಿಯೇ ಅಂದು ಈ ಪ್ರಶ್ನೆ ಎದುರಾದದ್ದು. ಅದೇನೆಂದರೆ; 'ಬುದ್ಧನೆದುರು ಜಗತ್ತಿತ್ತೋ? ಜಗತ್ತಿನ ಎದುರು ಬುದ್ಧನಿದ್ದನೋ? ಎಂಬುದೇ ಆಗಿತ್ತು. ಇದೇ ಬುದ್ಧ, ಇದೇ ಪ್ರಶ್ನೆಯನ್ನು ಮುಂದಿನ ನಲವತ್ತೈದು ವರ್ಷಗಳ ಪೂರ ಈ ಸಂಘರ್ಷದ ವಿರುದ್ಧವೇ ಈಜಿದ. ಕೊನೆಗೂ ದಡ ಸೇರಿದ. ಹಿಮಾಲಯದ ಎತ್ತರಕ್ಕೆ ಸಮುದ್ರದ ಆಳಕ್ಕೆ ಆಕಾಶದ ವಿಸ್ತರಕ್ಕೆ ಸವಾಲಾಗಿ ನಿಂತ. ಮೇರೆ ಇಲ್ಲದ ಈ ಎತ್ತರಕ್ಕೆ ಬೆಳೆದು ನಿಂತ ಬುದ್ಧ ಎಂದಿಗೂ ಅಹಂಕಾರಕ್ಕೆ ಮರುಳಲಿಲ್ಲ. ಸ್ವಾರ್ಥಕ್ಕೆ ಸ್ಥಳ ಕೊಡಲಿಲ್ಲ. ಅಷ್ಟೇ ಏಕೆ ತಾನೇ ಸ್ಥಾಪಿಸಿದ ತನ್ನ ಧರ್ಮ ದಲ್ಲಿ ವಿಶಿಷ್ಟ ಸ್ಥಾನ ಬಯಸಲಿಲ್ಲ. ಪ್ರತ್ಯೇಕ ಸ್ಥಾನಮಾನ ಗಳನ್ನು ಸ್ವೀಕರಿಸಲಿಲ್ಲ. ಸಾಮಾನ್ಯ ಭಿಕ್ಷುಗಳಲ್ಲಿ ಸಾಮಾ ನ್ಯವಾಗಿದ್ದ. ಇಂತಹ ಅಸಾ ಮಾನ್ಯ ಹಿರಿಮೆವುಳ್ಳ ಬುದ್ಧ ತನ್ನ ಸಮಕಾಲೀನವಾಗಿ ಬೆಳೆದ ಧರ್ಮದ ಬಗ್ಗೆ ಧರ್ಮ ಸಂಸ್ಥಾಪಕರ ಬಗ್ಗೆ ಮತಾಂತರದ ಬಗ್ಗೆ ಅದೆಷ್ಟು ಸ್ಪಷ್ಟತೆ, ವಿವೇಕ, ತಾಳ್ಮೆ ಧರ್ಮಸಹಿಷ್ಣುತೆ ಹಾಗೂ ಪರಧರ್ಮಕ್ಕೆ ಉತ್ತೇಜನ ಕೊಟ್ಟು ಗೌರವಿಸುತ್ತಿದ್ದ ಎಂಬುದಕ್ಕೆ ಈ ಐತಿ ಹಾಸಿಕ ಘಟನೆ ಹೀಗಿದೆ ನೋಡಿ;

ಉಪಾಲಿ ಎಂಬ ಜೈನ ಧರ್ಮದ ಅನುಯಾಯಿ ಒಮ್ಮೆ ಬುದ್ಧನ ಬೋಧನೆಯನ್ನು ಕೇಳಿ ಆಕರ್ಷತನಾದ. ನನ್ನ ಇಲ್ಲಿಯ ತನಕದ ಶ್ರಮ ಮತ್ತು ಸಮಯ ವ್ಯರ್ಥವಾಯಿತೆಂದು ಮರು ಗಿದ ಅವನು ಬೌದ್ಧಧರ್ಮವೇ ನಿಜಧರ್ಮವೆಂದು ಅರಿತ. ಅದೇ ಸಮಯದಲ್ಲಿ ತನ್ನ ಹಿಂದಿನ ಧರ್ಮವಾದ ಜೈನ ಧರ್ಮವನ್ನು ತೊರೆಯುವುದಾಗಿ ದೃಢವಾಗಿ ನಿರ್ಧ ರಿಸಿದ. ಜೈನ ಮುನಿಗಳು ಮತ್ತು ಭಿಕ್ಷುಗಳಿಗೆ ತಾನು ತೋರಿಸುತ್ತಿದ್ದ ಇದುವರೆಗಿನ ಅದೇ ಭಕ್ತಿ ಮತ್ತು ಶ್ರದ್ಧೆ ಯನ್ನು ಬುದ್ಧ ಮತ್ತು ಅವನ ಭಿಕ್ಷುಗಳಿಗೆ ಸಲ್ಲಿಸುವುದೆಂದು ತೀರ್ಮಾನಿಸಿ ಬುದ್ಧನ ಬಳಿ ಬಂದು ತನ್ನ ಅಭಿಪ್ರಾಯವನ್ನು ತಿಳಿಸಿ ಹೀಗೆ ಬೇಡಿಕೊಳ್ಳುತ್ತಾನೆ;

'ಗುರುದೇವಾ, ನಾನು ನಿಮ್ಮಲ್ಲಿ ಶರಣಾಗಿದ್ದೇನೆ. ನಿಮ್ಮ ಧರ್ಮಕ್ಕೆ ಶರಣಾಗಿದ್ದೇನೆ, ನಿಮ್ಮ ಸಂಘಕ್ಕೆ ಶರಣಾಗಿದ್ದೇನೆ. ನನ್ನನ್ನು ಸ್ವೀಕರಿಸಿ ದೀಕ್ಷೆ ಕರುಣಿಸಿ ಪ್ರಭುವೆ' ಎಂದಾಗ ಉಪಾಲಿಯನ್ನು ಉದ್ದೇಶಿಸಿದ ಬುದ್ಧ;

'ಸಹೋದರ ಉಪಾಲಿಯೇ, ಮತ್ತೊಮ್ಮೆ ಯೋಚಿಸಿ ನೋಡು, ನಿನ್ನ ದಿಢೀರ್ ನಿರ್ಧಾರದ ಹಿಂದೆ ಆತುರವಿದೆಯೇ ಹೊರತು ವಿವೇಕವಿಲ್ಲ. ಶಾಂತಚಿತ್ತತೆ ಇಲ್ಲ. ತಾಳ್ಮೆಯಿಂದ ಯೋಚಿಸಿ ನೋಡು, ಒಮ್ಮೆಲೆ ನಿನ್ನ ನಿರ್ಧಾರ ಬದಲಿಸುವುದು ಸರಿಯಲ್ಲ. ಬಹು ದಿನಗಳಿಂದ ಜೈನ ಮುನಿ ಮತ್ತು ಭಿಕ್ಷುಗಳಿಗೆ ನೀನು ಸಲ್ಲಿಸುತ್ತಾ ಬಂದಿರುವ ಗೌರವ, ಆತಿಥ್ಯ ಭಕ್ತಿ ಮತ್ತು ಪ್ರೀತಿಯನ್ನು ಒಮ್ಮೆಲೆ ಸಡಲಿಸುವುದು ಒಳಿತಲ್ಲ. ತಾಳ್ಮೆ ಮತ್ತು ಸಹಿಷ್ಣುತೆಯನ್ನು ಉಳಿಸಿಕೊಂಡು ಯೋಚಿಸಿ ನೋಡು, ನಿನ್ನ ಯೋಚನೆಯ ಹಿಂದೆ ಯಾವುದೇ ಪೂರ್ವಾಗ್ರಹ ಬೇಡ. ನಿನ್ನ ವಿವೇಕ, ನಿನ್ನ ನಿರ್ಧಾರವನ್ನು ಪ್ರಜ್ಞಾಪೂರ್ವಕವಾಗಿ ಸರಿ ಎಂದು ಒಪ್ಪಿದ್ದೇ ಆದರೆ, ಬಳಿಕ ನನ್ನ ಬಳಿಗೆ ಬಾ' ಎನ್ನುತ್ತಾನೆ. ಹಲವು ತಿಂಗಳ ನಂತರ ಮತ್ತೆ ಬುದ್ಧನನ್ನು ಸಂಧಿಸಿದ ಉಪಾಲಿ;

'ಗುರುದೇವಾ. ನಿನ್ನ ಹಿರಿಮೆಗೆ ಸರಿಸಾಟಿ ಇಲ್ಲ! ನಿನ್ನ ತಾಳ್ಮೆ ಮತ್ತು ಸಹಿಷ್ಣುತೆಗೆ ತಲೆ ಬಾಗದವರಿಲ್ಲ!! ನಿನ್ನ ವಿಚಾರ ಸ್ವಾತಂತ್ರ್ಯಕ್ಕೆ ಅನ್ಯಧರ್ಮ ಸಂಸ್ಥಾಪಕರು ಸರಿಸಾಟಿ ಅಲ್ಲವೇ ಅಲ್ಲ!!!' ಎಂದ. □

'**SAMVADA**' Kannada Monthly, May 2007 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಮೈತ್ರಿ ಸರ್ಕಾರದ ಸಾಧನೆಗಳು

ರಾಜ್ಯದ ಸರ್ವತೋಮುಖ ಪ್ರಗತಿಗೆ ಪಣತೊಟ್ಟು ಫೆಬ್ರವರಿ ೩, ೨೦೦೬ ರಂದು ಶ್ರೀ ಹೆಚ್.ಡಿ ಕುಮಾರಸ್ವಾಮಿರವರ ನೇತೃತ್ವದಲ್ಲಿ ಆಡಳಿತದ ಚುಕ್ಕಾಣಿ ಹಿಡಿದ ಮೈತ್ರಿ ಕೂಟ ಸರ್ಕಾರವು ಗ್ರಾಮೀಣ ಮತ್ತು ನಗರ ಪ್ರದೇಶಗಳ ಅಭಿವೃದ್ಧಿಗೆ ಸಮಾನ ಆದ್ಯತೆ ನೀಡಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಈ ದಿಕ್ಕಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಹಗಲು-ಇರುಳು ಎನ್ನದೆ, ಹಳ್ಳಿ-ಹಳ್ಳಿಗೆ ಭೇಟಿ ನೀಡಿ ಅಲ್ಲಿಯೇ ವಾಸ್ತವ್ಯ ಹೂಡಿ, ಹಳ್ಳಿಗರ ಮನದಾಳಕ್ಕೆ ಇಳಿದು ಅವರ ಕುಂದು-ಕೊರತೆಗಳಿಗೆ ಸ್ಪಂದಿಸುತ್ತಿರುವುದು. ಜನತೆಯಲ್ಲಿ ಹೊಸ ಭರವಸೆ ಮೂಡಿಸಿದೆ. ಮೈತ್ರಿಕೂಟ ಸರ್ಕಾರದ ಪರಿಶ್ರಮದ ಫಲವಾಗಿ ಕರ್ನಾಟಕ ಇಂದು ದೇಶದ ಹಲವಾರು ರಂಗಗಳಲ್ಲಿ ಪ್ರಥಮ ಸ್ಥಾನದಲ್ಲಿದೆ.

ಐತಿಹಾಸಿಕ ಪ್ರಥಮಗಳು:

* ಮುಖ್ಯಮಂತ್ರಿಯೊಬ್ಬರು ಹೆಚ್.ಐ.ವಿ. ಪೀಡಿತರ ಮನೆಯಲ್ಲಿ ವಾಸ್ತವ್ಯ ಹೂಡಿ ಹೆಚ್.ಐ.ವಿ. ಸೋಂಕಿತರೊಂದಿಗೆ ಸಹಬಾಳ್ವೆಯ ನೂತನ ಸಂದೇಶ
* ಹೆಣ್ಣು ಮಕ್ಕಳ ಭವಿಷ್ಯಕ್ಕೊಂದು ಭದ್ರಬುನಾದಿ-ಭಾಗ್ಯಲಕ್ಷ್ಮಿ ಯೋಜನೆ
* ೧,೭೫,೦೦೦ ವಿದ್ಯಾರ್ಥಿನಿಯರಿಗೆ ಬೈಸಿಕಲ್ ಕೊಡುಗೆ, ಈ ಸೌಲಭ್ಯ ವಿದ್ಯಾರ್ಥಿಗಳಿಗೂ ವಿಸ್ತರಿಸುವ ಸಂಕಲ್ಪ
* ಬೆಳಗಾವಿಯಲ್ಲಿ ವಿಧಾನಸಭಾ ವಿಶೇಷ ಅಧಿವೇಶನ-ಕರ್ನಾಟಕ ಸಮಗ್ರತೆಗೆ ಹೊಸ ಬಲ, ಕ್ಷೀಣಿಸಿದ ಗಡಿವಿವಾದ ಸಮಸ್ಯೆ
* ಬೆಳಗಾವಿಯಲ್ಲಿ ವಿಶ್ವಕನ್ನಡ ಸಮ್ಮೇಳನ, ಕನ್ನಡಕ್ಕೆ ವಿಶ್ವಮಾನ್ಯತೆಯ ದಿಕ್ಸೂಚಿ
* ನಲ್ಮೆಯ ಕವಿ ಡಾ॥ ಜಿ.ಎಸ್. ಶಿವರುದ್ರಪ್ಪನವರಿಗೆ ರಾಷ್ಟ್ರಕವಿ ಪ್ರಶಸ್ತಿ ಪುರಸ್ಕಾರ
* ಸುವರ್ಣ ಕನ್ನಡ ಭವನಗಳ ನಿರ್ಮಾಣ
* ಕನ್ನಡದ ೧೧೦ ಶ್ರೇಷ್ಠ ಗ್ರಂಥಗಳ ಪುನರ್ ಮುದ್ರಣ
* ಕರ್ನಾಟಕದ ಏಕೀಕರಣಕ್ಕಾಗಿ ದುಡಿದ ೫೦ ಹಿರಿಯರಿಗೆ ಸುವರ್ಣ ಏಕೀಕರಣ ಪ್ರಶಸ್ತಿ
* ತಲಾ ಒಂದು ಕೋಟಿ ರೂ. ವೆಚ್ಚದಲ್ಲಿ ೧೦೭೫ ಹಳ್ಳಿಗಳ ಪುನರ್ ನಿರ್ಮಾಣಕ್ಕೆ ಸುವರ್ಣ ಗ್ರಾಮೋದಯ ಯೋಜನೆ
* ವಿತ್ತೀಯ ನಿರ್ವಹಣೆಯಲ್ಲಿ ರಾಜ್ಯದ ಸಾಧನೆಗೆ ಕೇಂದ್ರದಿಂದ ಪುರಸ್ಕಾರ

ಕರ್ನಾಟಕ ವಾರ್ತೆ
Karnataka Information